# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ನಾಲ್ಕನೆಯ ಅಧಿವೇಶನ

**9ನೇ ಡಿಸೆಂಬರ್ 2024**
**ಸೋಮವಾರ**

## ವಿಷಯಾನುಕ್ರಮಣಿಕೆ (INDEX)

01. ಭಾರತದ ಸಂವಿಧಾನ ಪ್ರಸ್ತಾವನೆಯ ಬೋಧನೆ

02. ಸಂತಾಪ ಸೂಚನೆಗಳು

"ವಿಧಾನ ಪರಿಷತ್ತಿನ ಮಾಜಿ ಶಾಸಕರುಗಳಾದ ಶ್ರೀ ಕೆ.ಎಚ್.ಶ್ರೀನಿವಾಸ್, ಶ್ರೀಮತಿ ಶುಭಲತಾ ವಸಂತ್ ಅಸ್ನೋಟಿಕರ್, ಶ್ರೀ ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್, ಶ್ರೀ ನರೇಂದ್ರ ಖೇಣಿ, ಶ್ರೀ ಕೆ.ನಿರಂಜನ ನಾಯ್ಡು, ಶ್ರೀಮತಿ ಸಾವಿತ್ರಮ್ಮ ಎಂ ಗುಂಡಿ, ಶ್ರೀ ಮನೋಹರ್ ತಹಸೀಲ್ದಾರ್, ಹಾಗೂ ಶ್ರೀ ರತನ್ ನಾವಲ್ ಟಾಟಾ, ಡಾ:ಸೈಯದ್ ಶಹಾ ಖುಸ್ರೋ ಹುಸೇನಿ ಹಾಗೂ ಶ್ರೀ ರಾಜಶೇಖರ ನೀರಮಾನ್ವಿ ಅವರುಗಳ ನಿಧನದ ಬಗ್ಗೆ."

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)
ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

03. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**66- ಅತಿಥಿ ಶಿಕ್ಷಕರ/ಉಪನ್ಯಾಸಕರ ವೇತನ ಪರಿಷ್ಕರಣೆ ಮಾಡುವ ಕುರಿತು.**

ಡಾ|| ಧನಂಜಯ ಸರ್ಜಿ
ಶ್ರೀ ಎಸ್. ಮಧುಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**125- ಪಡಿತರ ಸಾಮಾಗ್ರಿ ವಿತರಣೆ ವ್ಯವಸ್ಥೆಯ ಬಗ್ಗೆ.**

ಶ್ರೀ ಕೆ.ಎ.ತಿಪ್ಪೇಸ್ವಾಮಿ

ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು)

**118- ಆಯುರ್ವೇದ ವಿಶ್ವವಿದ್ಯಾಲಯಗಳ ನಿರ್ಮಾಣದ ಬಗ್ಗೆ.**

ಶ್ರೀ ಡಿ.ಎಸ್. ಅರುಣ್
ಶ್ರೀ ದಿನೇಶ್ ಗುಂಡೂರಾವ್( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**39- ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ನೀಡುವ ಯುವ ಶಕ್ತಿ ಯೋಜನೆಯ ಬಗ್ಗೆ.**

ಶ್ರೀ ಕೆ.ಎಸ್. ನವೀನ್
ಡಾ॥ಶರಣಪ್ರಕಾಶ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು.)

**04- ಬೆಳಗಾವಿಯ ಹಿರೇಬಾಗೇವಾಡಿ ಹತ್ತಿರ ಮಲ್ಲಪ್ಪನ ಗುಡ್ಡದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕಟ್ಟಡಗಳ ಕಳಪೆ ಕಾಮಗಾರಿ ಬಗ್ಗೆ.**

ಡಾ॥ ತಳವಾರ್ ಸಾಬಣ್ಣ
ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು)

**74- ಬೆಂಗಳೂರು ಮೆಡಿಕಲ್ ಕಾಲೇಜಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಶುಲ್ಕ ಹೆಚ್ಚಿಸುವುದರ ಕುರಿತು.**

ಶ್ರೀ ಟಿ.ಎ.ಶರವಣ
ಡಾ॥ಶರಣಪ್ರಕಾಶ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು.)

**63- ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿಪೂರ್ವ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಕುರಿತು.**

ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಎಸ್. ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**92- ಪ್ರಾಥಮಿಕ, ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳ ಕುರಿತು.**

ಶ್ರೀ ಕೇಶವ ಪ್ರಸಾದ್ ಎಸ್
ಶ್ರೀ ಎಸ್. ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**13+16+28+73+131- ರಾಜ್ಯದಲ್ಲಿ ಅನರ್ಹರಿಗೆ ನೀಡಿದ ಬಿ.ಪಿ.ಎಲ್ ಕಾರ್ಡುಗಳನ್ನು ರದ್ದುಪಡಿಸಿರುವ ಬಗ್ಗೆ.**

ಶ್ರೀ ಟಿ.ಎನ್.ಜವರಾಯಿಗೌಡ

ಶ್ರೀ ಐವನ್ ಡಿ'ಸೋಜಾ
ಶ್ರೀ ಸಿ.ಟಿ.ರವಿ
ಶ್ರೀ ಟಿ.ಎ.ಶರವಣ
ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಶ್ರೀ ಕೆ.ಹೆಚ್.ಮುನಿಯಪ್ಪ(ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಸಚಿವರು)

**57- ಅರಣ್ಯ ಭೂಮಿಯನ್ನು ಗುತ್ತಿಗೆ ಪಡೆದು ಗುತ್ತಿಗೆ ಹಣ ಮತ್ತು ಬಡ್ಡಿಯನ್ನು ಪಾವತಿಸದೆ ವಂಚಿಸಿರುವ ಕುರಿತು.**

ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)
ಶ್ರೀ ಈಶ್ವರ್ ಖಂಡ್ರೆ(ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು)

**123- ರಾಜ್ಯದಲ್ಲಿ ಬಡ ರೈತರ ಜಮೀನಿಗೆ ನೀಡುತ್ತಿದ್ದ ಉಚಿತ ವಿದ್ಯುತ್ ಬಗ್ಗೆ.**

ಶ್ರೀ ಪಿ.ಹೆಚ್.ಪೂಜಾರ್
ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**115- ಆಕ್ಸಿಜನ್ ಪ್ಲಾಂಟ್ ವೆಂಟಿಲೇಟರ್‌ಗಳನ್ನು ಹೆಚ್ಚಿಸುವ ಕುರಿತು.**

ಡಾ॥ ಯತೀಂದ್ರ ಎಸ್
ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**80- ಖಾಸಗಿ ಔಷಧಾಲಯಗಳನ್ನು ತೆರೆಯಲು ಇರುವ ಮಾನದಂಡಗಳ ಬಗ್ಗೆ.**

ಶ್ರೀ ಗೋವಿಂದರಾಜು
ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**50- ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತುರ್ತು ಅಗತ್ಯ ಔಷಧಿಗಳ ಲಭ್ಯತೆಯ ಬಗ್ಗೆ.**

ಶ್ರೀ ಹೆಚ್.ಎಸ್.ಗೋಪಿನಾಥ್
ಶ್ರೀ ದಿನೇಶ್ ಗುಂಡೂರಾವ್( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

**ಅ) ಶಿಕ್ಷಕರ ಜೇಬು ಸುಡುತ್ತಿರುವ ಮೊಟ್ಟೆ ಭಾಗ್ಯ ಯೋಜನೆ ಕುರಿತು.**

ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಎಸ್.ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ಆ) ಶಾಸಕರ ನಿಧಿ ಸಮರ್ಪಕವಾಗಿ ಬಳಕೆಯಾಗುತ್ತಿರುವ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಬಗ್ಗೆ.**

ಶ್ರೀ ಎಂ.ನಾಗರಾಜು
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ಬಗ್ಗೆ.**

ಶ್ರೀಮತಿ ಹೇಮಲತಾ ನಾಯಕ್
ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಈ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಮತ್ತು ನವಜಾತ ಶಿಶುಗಳ ಮರಣ ಪ್ರಮಾಣ ದಿನೇ ದಿನೇ ಹೆಚ್ಚುತ್ತಿರುವ ಕುರಿತು ತನಿಖೆ ನಡೆಸುವ ಬಗ್ಗೆ.**

ಶ್ರೀ ಎನ್.ರವಿಕುಮಾರ್
ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಉ) ತೊಗರಿ ಬೆಳೆಗೆ 'ಬೇರು ಕೊಳೆ ರೋಗ' ಮತ್ತು 'ಮಚ್ಚೆ ರೋಗ' ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಕುರಿತು.**

ಡಾ॥ ತಳವಾರ್ ಸಾಬಣ್ಣ
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಕುರಿತು.**

ಶ್ರೀ ನವೀನ್ ಕೆ.ಎಸ್
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವ ಬಗ್ಗೆ.**

ಶ್ರೀ ಮಂಜುನಾಥ ಭಂಡಾರಿ
ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐ.ಟಿ.ಬಿ.ಟಿ ಸಚಿವರು)

**ಎ) ಬಳ್ಳಾರಿ ನಗರದಲ್ಲಿ ನಿರ್ಮಿಸುತ್ತಿರುವ ಸಾಂಸ್ಕೃತಿಕ ಸಮುಚ್ಛಯಕ್ಕೆ ದಿ॥ ಶ್ರೀ ಎಂ.ಪಿ.ಪ್ರಕಾಶ್‌ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ.**

ಶ್ರೀ ಬಿ.ಕೆ.ಹರಿಪ್ರಸಾದ್
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ಮಾಜಿ ಸೈನಿಕರುಗಳ ಹಲವು ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಶೇಕಡಾ 50 ರಷ್ಟು ಕಂದಾಯ ರಿಯಾಯಿತಿ ನೀಡುವ ಬಗ್ಗೆ.**

ಶ್ರೀ ಪಿ.ಹೆಚ್. ಪೂಜಾರ್
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ 200 ನೌಕರರಿಗೆ 4 ವರ್ಷಗಳಿಂದ ನಿವೃತ್ತಿ ವೇತನ ಮತ್ತು ಉಪದಾನ ನೀಡದಿರುವ ಬಗ್ಗೆ.**

ಶ್ರೀ ಐವಾನ್ ಡಿ'ಸೋಜಾ
ಡಾ॥ ಎಂ.ಸಿ.ಸುಧಾಕರ(ಉನ್ನತ ಶಿಕ್ಷಣ ಸಚಿವರು)

**05. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**06. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ರಾಜ್ಯದಲ್ಲಿ ವಕ್ಫ್ ವಿವಾದದಿಂದ ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು**

ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**07. ಕಾರ್ಯದರ್ಶಿಯವರ ವರದಿ.**

**08. ನೂತನ ಸದಸ್ಯರ ಪರಿಚಯ**

**09. ಪ್ರಕಟಣೆ**

**10. ಗಮನ ಸೆಳೆಯುವ ಸೂಚನೆ**

**ವಿಷಯ: ಕಲಬುರಗಿ ಜಿಲ್ಲೆಯ 30 ಲಕ್ಷ ರೈತರಿಗೆ ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ GI- ಟ್ಯಾಗ್ ಕ್ಲಾಸ್-31 ಪ್ರಮಾಣಪತ್ರ 2017 ರಿಂದ 2019 ರಲ್ಲಿ ದೊರೆತಿದ್ದು ಅದರ ಗುಣಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಬೆಂಬಲ ಬೆಲೆ ಇನ್ನೂ ಘೋಷಿಸದೆ ಇರುವುದರಿಂದ ಕಲಬುರಗಿ ಜಿಲ್ಲೆಯ ರೈತರಿಗೆ ನಷ್ಟ ಉಂಟಾಗುತ್ತಿರುವುದರ ಬಗ್ಗೆ.**

ಶ್ರೀ ತಿಪ್ಪಣ್ಣಪ್ಪ ಕಮಕನೂರ
ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಕುರಿತು ಚರ್ಚೆ**

**ವಿಷಯ: ರಾಜ್ಯದಲ್ಲಿ ವಕ್ಫ್ ವಿವಾದದಿಂದ ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು**

ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)

ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐ.ಟಿ.ಬಿ.ಟಿ ಸಚಿವರು)

ಶ್ರೀ ಬಿ.ಕೆ.ಹರಿಪ್ರಸಾದ್
ಶ್ರೀ ಸಿ.ಟಿ.ರವಿ
ಶ್ರೀ ಅಬ್ದುಲ್ ಜಬ್ಬಾರ್
ಶ್ರೀ ಟಿ.ಎ.ಶರವಣ
ಶ್ರೀ ನಸೀರ್ ಅಹಮದ್
ಶ್ರೀ ಕೆ.ರಹೀಂ ಖಾನ್(ಪೌರಾಡಳಿತ ಸಚಿವರು)
ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)
ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)
ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)
ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
ಶ್ರೀ ಎಂ.ನಾಗರಾಜು
ಡಾ॥ಶರಣಪ್ರಕಾಶ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)
ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

~~~~~
~~~~~

(697) 09.12.2024 11.00 ಕೆಜಿ-ಕೆಎಸ್

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, ದಿನಾಂಕ 9ನೇ ಡಿಸೆಂಬರ್ 2024**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಸದನವು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು**

**1. ಭಾರತದ ಸಂವಿಧಾನ ಪ್ರಸ್ತಾವನೆಯ ಬೋಧನೆ:**

(ಸನ್ಮಾನ್ಯ ಸಭಾಪತಿಯವರು ಸದನದಲ್ಲಿ ಈ ಕೆಳಕಂಡಂತೆ ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು)

**ಭಾರತದ ಜನಗಳಾದ ನಾವು**

ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ

ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ

ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:**

**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು**

**ಉಪಾಸನಾ ಸ್ವಾತಂತ್ರ್ಯ:**

**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು

ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ

**ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು

ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ**

1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,**

**ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

(ಮುಂದು)

(698) 09-12-2024 (11.10) ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**2. ಸಂತಾಪ ಸೂಚನೆಗಳು**

**ವಿಷಯ:-** ವಿಧಾನ ಪರಿಷತ್ತಿನ ಮಾಜಿ ಶಾಸಕರುಗಳಾದ ಶ್ರೀ ಕೆ.ಎಚ್.ಶ್ರೀನಿವಾಸ್, ಶ್ರೀಮತಿ ಶುಭಲತಾ ವಸಂತ್ ಅಸ್ನೋಟಿಕರ್, ಶ್ರೀ ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್, ಶ್ರೀ ನರೇಂದ್ರ ಖೇಣಿ, ಶ್ರೀ ಕೆ.ನಿರಂಜನ ನಾಯ್ಡು, ಶ್ರೀಮತಿ ಸಾವಿತ್ರಮ್ಮ ಎಂ ಗುಂಡಿ, ಶ್ರೀ ಮನೋಹರ್ ತಹಸೀಲ್ದಾರ್, ಶ್ರೀ ರತನ್ ನಾವಲ್ ಟಾಟಾ, ಡಾ:ಸೈಯದ್ ಶಹಾ ಖುಸ್ರೋ ಹುಸೇನಿ ಹಾಗೂ ಶ್ರೀ ರಾಜಶೇಖರ ನೀರಮಾನ್ವಿ ಅವರುಗಳ ನಿಧನದ ಬಗ್ಗೆ.

---

**ಮಾನ್ಯ ಸಭಾಪತಿಯವರು:**

ವಿಧಾನ ಪರಿಷತ್ತಿನ ಮಾಜಿ ಶಾಸಕರುಗಳಾದ ಶ್ರೀ ಕೆ.ಎಚ್.ಶ್ರೀನಿವಾಸ್, ಶ್ರೀಮತಿ ಶುಭಲತಾ ವಸಂತ್ ಅಸ್ನೋಟಿಕರ್, ಶ್ರೀ ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್, ಶ್ರೀ ನರೇಂದ್ರ ಖೇಣಿ, ಶ್ರೀ ಕೆ.ನಿರಂಜನ ನಾಯ್ಡು, ಶ್ರೀಮತಿ ಸಾವಿತ್ರಮ್ಮ ಎಂ ಗುಂಡಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಮನೋಹರ್ ತಹಸೀಲ್ದಾರ್, ರಾಷ್ಟ್ರ ಕಂಡ ಶ್ರೇಷ್ಠ ಕೈಗಾರಿಕೋದ್ಯಮಿ ಮತ್ತು ಮಾನವತಾವಾದಿ ಶ್ರೀ ರತನ್ ನಾವಲ್ ಟಾಟಾ, ಕಲಬುರಗಿ ಜಿಲ್ಲೆಯ ಖಾಜಾ ಬಂದಾ ನವಾಜ್ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಶಿಕ್ಷಣ ತಜ್ಞರಾದ ಡಾ:ಸೈಯದ್ ಶಹಾ ಖುಸ್ರೋ ಹುಸೇನಿ ಹಾಗೂ ಖ್ಯಾತ ಸಾಹಿತಿಗಳಾದ ಶ್ರೀ ರಾಜಶೇಖರ ನೀರಮಾನ್ವಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

**1. ಕೆ.ಎಚ್. ಶ್ರೀನಿವಾಸ್**

ಮಾಜಿ ಸಚಿವರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ಕೆ.ಎಚ್.ಶ್ರೀನಿವಾಸ್ ಅವರು ದಿನಾಂಕ: 30.08.2024ರಂದು ನಿಧನ ಹೊಂದಿರುತ್ತಾರೆ.

1938ರ ಫೆಬ್ರವರಿ 15ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ. ಹಾಗೂ ಕಾನೂನು ಪದವಿ ಪಡೆದು, ವೃತ್ತಿಯಲ್ಲಿ ವಕೀಲರಾಗಿ, ಕೃಷಿಕರಾಗಿದ್ದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಶ್ರೀಯುತರು 6, 7 ಮತ್ತು 8ನೇ ವಿಧಾನ ಸಭೆಯ ಸದಸ್ಯರಾಗಿ ದಿವಂಗತ ಶ್ರೀ ದೇವರಾಜ ಅರಸು ಅವರ ಸಂಪುಟದಲ್ಲಿ ಇಂಧನ, ವಾರ್ತಾ, ಯುವಜನ ಸೇವೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯೋಜನಾ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಅಲ್ಲದೆ 1998 ರಿಂದ 2004ರವರೆಗೆ ವಿಧಾನ ಪರಿಷತ್ತಿನ ಶಾಸಕರಾಗಿ ಹಾಗೂ ವಿರೋಧ ಪಕ್ಷದ ನಾಯಕರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ.

ಸಾಗರ ತಾಲ್ಲೂಕು ಮತ್ತು ಸುತ್ತಮುತ್ತ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದಲ್ಲಿ ಅಧ್ಯಕ್ಷರಾಗಿ ಹಾಗೂ ಶಿವಮೊಗ್ಗದ ಸಹ್ಯಾದ್ರಿ ಶಿಕ್ಷಣ ಟ್ರಸ್ಟ್‌ನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಸಾಗರದ ಲಾಲ್ ಬಹದ್ದೂರ್ ಕಾಲೇಜಿನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶ್ರೀಯುತರು ಉತ್ತಮ ಸಾಹಿತಿ, ಬರಹಗಾರ, ಸಂಗೀತ ಪ್ರೇಮಿ, ಓದುಗ ಹಾಗೂ ಉತ್ತಮ ವಾಗ್ಮಿಯಾಗಿದ್ದರು. ಅವರ ಕಾನುಗೋಡು ಮನೆ ಕವನ ಸಂಕಲನ ಸೇರಿದಂತೆ ಐದು ಪುಸ್ತಕಗಳು ಬಿಡುಗಡೆಯಾಗಿವೆ. ಬಹುಮುಖ ಪ್ರತಿಭೆಯ ಶ್ರೀಯುತರು ಯಕ್ಷಗಾನ ತಾಳಮದ್ದಳೆ ಅರ್ಥಧಾರಿಯಾಗಿಯೂ ಸೈ ಎನಿಸಿಕೊಂಡಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಬಹುಮುಖ ಪ್ರತಿಭೆಯ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 2. ಶುಭಲತಾ ವಸಂತ್ ಅಸ್ನೋಟಿಕರ್

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಶುಭಲತಾ ವಸಂತ್ ಅಸ್ನೋಟಿಕರ್ ಅವರು ದಿನಾಂಕ:25.09.2024ರಂದು ನಿಧನ ಹೊಂದಿರುತ್ತಾರೆ.

1957ರ ಜನವರಿ 06ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಪದವೀಧರರಾಗಿದ್ದು, ವೃತ್ತಿಯಲ್ಲಿ ವ್ಯಾಪಾರ ಮತ್ತು ಸಮಾಜ ಸೇವಕರಾಗಿದ್ದರು. 2004 ರಿಂದ 2010ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಪೋರ್ಟ್ ಅಂಡ್ ಡಾಕ್ ಲೇಬರ್ ಕೋ-ಆಪರೇಟಿವ್ ಸೊಸೈಟಿ, ಕಾರವಾರ ಹಾಗೂ ನವೋದಯ ಪ್ರೌಢಶಾಲೆ, ಕಿನ್ನರ, ಕಾರವಾರ ಇವುಗಳ ಅಧ್ಯಕ್ಷರಾಗಿ, ಕಾರವಾರ ತಾಲ್ಲೂಕು ಕೂಲಿ ಕಾರ್ಮಿಕರ ಸಂಘದ ಖಜಾಂಚಿ ಹಾಗೂ ಸಲಹೆಗಾರರಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿ ಹಾಗೂ ಸಮಾಜ ಸೇವಕಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 3. ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್ ಅವರು ದಿನಾಂಕ:14.10.2024ರಂದು ನಿಧನ ಹೊಂದಿರುತ್ತಾರೆ.

1937ರ ನವೆಂಬರ್ 23ರಂದು ಹುಬ್ಬಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. 1998-2004ರ ಅವಧಿಗೆ ವಿಧಾನಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಹುಬ್ಬಳ್ಳಿಯ ಅಂಜುಮನ್-ಇ-ಇಸ್ಲಾಂ ಸಂಸ್ಥೆಯ ಅಧ್ಯಕ್ಷರಾಗಿ, ಅಂಜುಮನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಹುಬ್ಬಳ್ಳಿಯ ಈದ್ಗಾ ಮೈದಾನದ ಧ್ವಜಾರೋಹಣ ಶಾಂತಿ ಸಮಿತಿಯ

ಖಾಯಂ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಿ ಕೋಮು ಸೌಹಾರ್ದತೆಯನ್ನು ಉತ್ತೇಜಿಸಿದ್ದಕ್ಕಾಗಿ ಅವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**4. ನರೇಂದ್ರ ಖೇಣಿ**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ನರೇಂದ್ರ ಖೇಣಿ ಅವರು ದಿನಾಂಕ:08.10.2024ರಂದು ನಿಧನ ಹೊಂದಿರುತ್ತಾರೆ.

1937ರ ಸೆಪ್ಟಂಬರ್ 1ರಂದು ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು 1968-1974 ಹಾಗೂ 1974-1980ರ ಅವಧಿಗೆ ಬೀದರ್ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಎರಡು ಬಾರಿ ಕರ್ನಾಟಕ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಹುಮನಾಬಾದ್ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**5. ಕೆ. ನಿರಂಜನ ನಾಯ್ಡು**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ನಿರಂಜನ ನಾಯ್ಡು ಅವರು ದಿನಾಂಕ:10.11.2024ರಂದು ನಿಧನ ಹೊಂದಿರುತ್ತಾರೆ.

1951ರ ಮಾರ್ಚ್ 8ರಂದು ಬಳ್ಳಾರಿಯಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. 1985ರಲ್ಲಿ ಡಿಸಿಸಿ ಬ್ಯಾಂಕ್‌ನ ಸದಸ್ಯರು, 1990ರಲ್ಲಿ ಬಳ್ಳಾರಿ ನಗರ ಪುರಸಭೆಯ ಕೌನ್ಸಿಲರ್ ಹಾಗೂ ಉಪಾಧ್ಯಕ್ಷರಾಗಿ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಬಳ್ಳಾರಿ ತೆಲುಗು-ಬಲಿಜ ಸಂಘದ ಅಧ್ಯಕ್ಷರಾಗಿ ಹಾಗೂ 1993ರಲ್ಲಿ ಬಳ್ಳಾರಿ ಯುವ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 2001-2004ರ ಅವಧಿಗೆ ಕರ್ನಾಟಕ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**6. ಸಾವಿತ್ರಮ್ಮ ಎಂ. ಗುಂಡಿ**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸಾವಿತ್ರಮ್ಮ ಎಂ. ಗುಂಡಿ ಅವರು ದಿನಾಂಕ:15.11.2024ರಂದು ನಿಧನ ಹೊಂದಿರುತ್ತಾರೆ.

1942ರ ಆಗಸ್ಟ್ 9ರಂದು ದಾವಣಗೆರೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಎಲ್.ಎಲ್.ಬಿ ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಮಹಿಳಾ ಸಂಘಟಕರಾಗಿ ಸಮಾಜ ಸೇವೆಯ ಜೊತೆಗೆ ಹುಬ್ಬಳ್ಳಿಯ ಕೊಳಗೇರಿ ನಿವಾಸಿಗಳ ಪುನರ್ವಸತಿಗಾಗಿ ಅವಿರತವಾಗಿ ಶ್ರಮಿಸಿದ್ದರು. 1985-1986 ಮತ್ತು 1986-1992ರ ಅವಧಿಗೆ

ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಎರಡು ಬಾರಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಮಹಿಳಾ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**7. ಮನೋಹರ್ ತಹಸೀಲ್ದಾರ್**

ಮಾಜಿ ಸಚಿವರು, ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ಶ್ರೀ ಮನೋಹರ್ ತಹಸೀಲ್ದಾರ್ ಅವರು ದಿನಾಂಕ: 20.11.2024ರಂದು ನಿಧನ ಹೊಂದಿರುತ್ತಾರೆ.

1946ರ ಜುಲೈ 21ರಂದು ಹರಿಹರದಲ್ಲಿ ಜನಿಸಿದ್ದ ಶ್ರೀಯುತರು ಬಿ.ಇ. ಮೆಕ್ಯಾನಿಕಲ್ ಪದವೀಧರರಾಗಿದ್ದರು. ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ವಿಧಾನ ಸಭೆಯ ಉಪ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1978, 1989, 1999, 2013ರ ಅವಧಿಗೆ ಒಟ್ಟು 4 ಬಾರಿ ವಿಧಾನ ಸಭೆಯ ಶಾಸಕರಾಗಿ, 2015 ಮತ್ತು 2016ರ ಅವಧಿಯಲ್ಲಿ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಅಬಕಾರಿ ಮತ್ತು ಮುಜರಾಯಿ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**8. ರತನ್ ನಾವಲ್ ಟಾಟಾ**

ಭಾರತೀಯ ಕೈಗಾರಿಕೋದ್ಯಮಿ, ಟಾಟಾ ಸಮೂಹದ ಪ್ರೇರಕ ಶಕ್ತಿ ಮತ್ತು ಮಹಾನ್ ಮಾನವತಾವಾದಿ ಶ್ರೀ ರತನ್ ನಾವಲ್ ಟಾಟಾ ಅವರು ದಿನಾಂಕ: 9.10.2024ರಂದು ನಿಧನ ಹೊಂದಿರುತ್ತಾರೆ.

1937ರ ಡಿಸೆಂಬರ್ 28ರಂದು ಬಾಂಬೆಯಲ್ಲಿ ಜನಿಸಿದ್ದ ಶ್ರೀಯುತರು ನ್ಯೂಯಾರ್ಕ್‌ನ ಇಥಾಕಾದ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ 1962ರಲ್ಲಿ ವಾಸ್ತುಶಿಲ್ಪದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. 1971ರ ನ್ಯಾಷನಲ್ ರೇಡಿಯೊ ಮತ್ತು ಎಲೆಕ್ಟ್ರಾನಿಕ್ಸ್ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಳ್ಳುವ ಮೊದಲು ಟಾಟಾ ಸಮೂಹದ ಹಲವಾರು ವ್ಯವಹಾರಗಳಲ್ಲಿ ಅನುಭವವನ್ನು ಪಡೆದುಕೊಂಡು, ಟಾಟಾ ಸ್ಟೀಲ್, ಟಾಟಾ ಮೋಟಾರ್ಸ್, ಟಾಟಾ ಪವರ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಟಾಟಾ ಟೀ, ಟಾಟಾ ತಂತ್ರಜ್ಞಾನ, ಟಾಟಾ ಟೆಲಿ ಸರ್ವೀಸಸ್, ಟಾಟಾ ಫೈನಾನ್ಸ್ ಸೇರಿ ಹಲವು ಉದ್ಯಮಗಳನ್ನು ಕಟ್ಟಿ ಬೆಳೆಸಿದ ಕೀರ್ತಿಗೆ ಭಾಜನರಾಗಿದ್ದರು. ಜಾಗತಿಕ ಮಟ್ಟದಲ್ಲಿ ಟಾಟಾ ಹೆಸರಿನೊಂದಿಗೆ ಭಾರತವನ್ನು ಗುರುತಿಸುವಂತೆ ಮಾಡಿದ್ದ ಶ್ರೀಯುತರು ದ್ವಿಚಕ್ರ ವಾಹನದ ದರದಲ್ಲಿ ಕೇವಲ ಒಂದು ಲಕ್ಷ ರೂಪಾಯಿಗಳಿಗೆ ನ್ಯಾನೋ ಕಾರನ್ನು ಸೃಷ್ಟಿಸಿ ಬಡವರ ಕನಸನ್ನು ನನಸು ಮಾಡಿದ್ದು ವಿಶ್ವದ ಮಟ್ಟದಲ್ಲಿ ಗಮನ ಸೆಳೆಯಿತು. ಟಾಟಾ ಸಮೂಹದಿಂದ ಜನೋಪಕಾರಿ ಕೆಲಸಗಳಿಗಾಗಿ ಸ್ಥಾಪನೆಯಾಗಿದ್ದ ಟ್ರಸ್ಟ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಶ್ರೀಯುತರು ಶೈಕ್ಷಣಿಕ ಸಂಸ್ಥೆಗಳಿಗೆ ಅಪಾರವಾದ ದೇಣಿಗೆಯನ್ನು ನೀಡಿರುತ್ತಾರೆ. 100ಕ್ಕೂ ಹೆಚ್ಚು ದೇಶಗಳಲ್ಲಿ 30 ಕಂಪನಿಗಳನ್ನು ಅವರು ನಿಭಾಯಿಸಿದ್ದರು.

ಶ್ರೀಯುತರ ಔದ್ಯಮಿಕ, ಸಾಮಾಜಿಕ ಸೇವೆಗೆ 'ಪದ್ಮಭೂಷಣ', 'ಪದ್ಮವಿಭೂಷಣ' ಹಾಗೂ ಮಹಾರಾಷ್ಟ್ರದ ಸಾರ್ವಜನಿಕ ಆಡಳಿತದಲ್ಲಿನ ಕಾರ್ಯಕ್ಕಾಗಿ 'ಮಹಾರಾಷ್ಟ್ರ ಭೂಷಣ'ಗಳಂತಹ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಶ್ರೇಷ್ಠ ಉದ್ಯಮರತ್ನರೊಬ್ಬರನ್ನು ಕಳೆದುಕೊಂಡಂತಾಗಿದೆ.

**9. ಡಾ: ಸೈಯದ್ ಶಹಾ ಖುಸ್ರೊ ಹುಸೇನಿ**

ಕಲಬುರಗಿ ಜಿಲ್ಲೆಯ ಖಾಜಾ ಬಂದಾ ನವಾಜ್ ವಿಶ್ವವಿದ್ಯಾಲಯದ ವಿದ್ವಾಂಸರು, ಶಿಕ್ಷಣ ತಜ್ಞರಾಗಿದ್ದ ಡಾ:ಸೈಯದ್ ಶಹಾ ಖುಸ್ರೋ ಹುಸೇನಿ ಅವರು ದಿನಾಂಕ:06.11.2024ರಂದು ನಿಧನ ಹೊಂದಿರುತ್ತಾರೆ.

1945ನೇ ಸೆಪ್ಟಂಬರ್ 10ರಂದು ಹೈದರಾಬಾದ್‌ನ ಸೂಫಿ ಮನೆತನದಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹೈದರಾಬಾದ್‌ನ ಗ್ರಾಮರ್ ಸ್ಕೂಲಿನಲ್ಲಿ ಪಡೆದು ಕೆನಡಾದ ಮೆಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಇಸ್ಲಾಮಿಕ್ ಅಧ್ಯಯನದಲ್ಲಿ ಮಾಸ್ಟರ್ ಆಫ್ ಆರ್ಟ್ಸ್ ಮತ್ತು ಪಿ.ಹೆಚ್‌ಡಿ., ಪದವಿಗಳನ್ನು ಪಡೆದಿದ್ದರು. ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡುವುದರ ಜೊತೆಗೆ ವೈದ್ಯಕೀಯ, ಎಂಜಿನಿಯರಿಂಗ್, ಬಿ.ಇಡ್., ಕಾಲೇಜುಗಳನ್ನು, ಮಹಿಳೆಯರಿಗಾಗಿ ಪ್ರೌಢಶಾಲೆ, ಪಿಯುಸಿ, ಪದವಿ ಹಾಗೂ ಅರೇಬಿಕ್ ಭಾಷೆಯ ಕಾಲೇಜುಗಳನ್ನು ತೆರೆದಿದ್ದಾರೆ.

ಪಾಂಡಿತ್ಯಪೂರ್ಣ ತಿಳುವಳಿಕೆಗೆ ಹೆಸರಾಗಿದ್ದ ಶ್ರೀಯುತರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ್ದ ಕೊಡುಗೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಶಿಕ್ಷಣ ತಜ್ಞರನ್ನು ಕಳೆದುಕೊಂಡಂತಾಗಿದೆ.

**10. ರಾಜಶೇಖರ ನೀರಮಾನ್ವಿ**

ಖ್ಯಾತ ಸಾಹಿತಿಗಳಾದ ರಾಜಶೇಖರ ನೀರಮಾನ್ವಿ ಅವರು ದಿನಾಂಕ: 8.8.2024ರಂದು ನಿಧನ ಹೊಂದಿರುತ್ತಾರೆ.

ರಾಯಚೂರು ಜಿಲ್ಲೆಯ ನೀರಮಾನ್ವಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಳ್ಳಾರಿಯ ವೀರಶೈವ ಪದವಿ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಗೋಕಾಕ್ ಚಳುವಳಿ, ಜೆ.ಪಿ.ಚಳುವಳಿ ಮತ್ತು ವಾಟಾಳ್ ಚಳುವಳಿಗಳಲ್ಲಿ ಭಾಗವಹಿಸಿದ್ದು, ಎರಡು ಕಥಾಸಂಕಲನ ಹಾಗೂ 12 ಕತೆಗಳನ್ನು ಬರೆದಿದ್ದಾರೆ. ಇವರ ಕತೆಗಳು ದೇಶದ ಎಂಟು ಭಾಷೆಗಳಿಗೆ ಅನುವಾದಗೊಂಡಿರುತ್ತವೆ. ಶ್ರೀಯುತರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬೆಟಗೇರಿ ಕೃಷ್ಣ ಶರ್ಮ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

(699) 09.12.2024 11.20 ಎಲ್‌ಎಲ್/ಎಂಡಿ (ಕೆಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಪ್ರಸ್ತಾಪ ಮಾಡಿರುವಂತಹ ಸಂತಾಪ ಸೂಚನೆಯಲ್ಲಿ ಸನ್ಮಾನ್ಯ ಶ್ರೀ ಕೆ.ಎಚ್ ಶ್ರೀನಿವಾಸ್‌ರವರು ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ಮಾಜಿ ಸಚಿವರಾಗಿ ಮತ್ತು ವಿರೋಧ ಪಕ್ಷದ ನಾಯಕರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ, ಅವರು ಶ್ರೀ ದೇವರಾಜು ಅರಸುರವರ ಸಚಿವ ಸಂಪುಟದಲ್ಲಿ ಹಲವಾರು ಖಾತೆಗಳನ್ನು ಸಹ ಯಶಸ್ವಿಯಾಗಿ ನಿರ್ವಹಿಸಿ ರಾಜ್ಯದ ಆಡಳಿತ ನಡೆಸಿರುತ್ತಾರೆ. ಅವರು ತಮ್ಮ ಸ್ವಂತ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಅವರು ತಮ್ಮ ಅಪಾರವಾದಂತಹ ಕೊಡುಗೆಗಳನ್ನು ನೀಡಿರುತ್ತಾರೆ. ಅವರು ಕಾಂಗ್ರೆಸ್ ಪಕ್ಷದಲ್ಲಿಯೂ ಸಹ ಪ್ರಧಾನ ಕಾರ್ಯದರ್ಶಿಯವರಾಗಿ ದಿವಂಗತ ಶ್ರೀಮಾನ್ ಕೆ.ಎಚ್. ಪಾಟೀಲ್‌ರವರು ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಕಾಂಗ್ರೆಸ್ ಪಕ್ಷದ ಅನೇಕ Strategy Committee ಗಳಲ್ಲಿ ಮುಖ್ಯ ಪಾತ್ರ ವಹಿಸಿರುವಂತಹ ಶ್ರೀಯುತರು ನಿಧನವಾಗಿರುವುದು ರಾಜ್ಯದ ಬಹುಮುಖ ಪ್ರತಿಭೆ ಮತ್ತು ಒಬ್ಬ ಹಿರಿಯ ರಾಜಕಾರಣಿಯನ್ನು ಈ ರಾಜ್ಯ ಕಳೆದುಕೊಂಡಂತಾಗಿದೆ.

ಶ್ರೀಮತಿ ಶುಭಲತಾ ವಸಂತ್ ಅಸ್ನೋಟಿಕರ್‌ರವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದರು. ಶ್ರೀಯುತರು ಕಾರವಾರ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿಯೂ ಸಹ ಸದಸ್ಯರಾಗಿ ಅವರದ್ದೇ ಆದಂತಹ ತಮ್ಮ ಪ್ರಯತ್ನಗಳನ್ನು ಮಾಡಿ, ಸಹಕಾರ ಇಲಾಖೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ, ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಸಹ ಸ್ಥಾಪಿಸಿ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯದ ಒಬ್ಬ ಹಿರಿಯ ನಾಯಕರನ್ನು ಹಾಗೂ ಸಮಾಜ ಸೇವಕರನ್ನು ಈ ರಾಜ್ಯ ಕಳೆದುಕೊಂಡಂತಾಗಿದೆ.

ಶ್ರೀ ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್‌ರವರು ನಮ್ಮೆಲ್ಲರಿಗೂ ಅತ್ಯಂತ ಪರಿಚಿತರಾಗಿ ವಿಧಾನ ಪರಿಷತ್ತಿನ ಸದಸ್ಯರಾಗಿ, ಹುಬ್ಬಳ್ಳಿಯ ಅಂಜುಮನ್-ಇ-ಇಸ್ಲಾಂ ಸಂಸ್ಥೆಯ ಅಧ್ಯಕ್ಷರಾಗಿ, ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಅನೇಕ ತೊಂದರೆಗಳು ಇದ್ದಂತಹ ಸಂದರ್ಭದಲ್ಲಿ ಅಲ್ಲಿ ಶಾಂತಿ-ಸೌಹಾರ್ದತೆಯನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ಅದಕ್ಕಾಗಿ ಶ್ರೀಯುತರು ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ಸಹ ಪಡೆದಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯ ಒಬ್ಬ ಹಿರಿಯ ಸೆಕ್ಯುಲರ್ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಶ್ರೀ ನರೇಂದ್ರ ಖೇಣಿಯವರು ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿದ್ದು, ಅತ್ಯಂತ ಹಿರಿಯ ನಾಯಕರಾಗಿದ್ದರು. ಆ ಭಾಗದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಜೊತೆಯಲ್ಲಿ ಶಿಕ್ಷಣ ರಂಗದಲ್ಲಿ ಹಾಗೂ ಇತರೆ ಸಹಕಾರ ರಂಗದಲ್ಲಿಯೂ ಸಹ ಉತ್ತಮ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರ ನಿಧನದಿಂದಾಗಿ

ಒಬ್ಬ ಮುತ್ಸದ್ಧಿ ರಾಜಕಾರಣಿಯನ್ನು ನಮ್ಮ ರಾಜ್ಯ ಅದರಲ್ಲಿಯೂ ನಮ್ಮ ಕಲ್ಯಾಣ ಕರ್ನಾಟಕ ಭಾಗ ಕಳೆದುಕೊಂಡಂತಾಗಿದೆ.

ಶ್ರೀ ಕೆ. ನಿರಂಜನ ನಾಯ್ಡು ರವರು ನಮ್ಮ ಯುವ ಕಾಂಗ್ರೆಸ್‌ನಿಂದ ಆರಿಸಿ ಬಂದು, ಜಿಲ್ಲಾ ಮಟ್ಟದ ನಾಯಕರಾಗಿ ಮತ್ತು ಆ ಭಾಗದಲ್ಲಿ ಸ್ಥಳೀಯ ಸಂಸ್ಥೆಗಳಿಂದ ಬಳ್ಳಾರಿ ನಗರ ಪುರಸಭೆಯ ಕೌನ್ಸಿಲರ್ ಹಾಗೂ ಉಪಾಧ್ಯಕ್ಷರಾಗಿ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಧ್ಯಕ್ಷರಾಗಿ, ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ, ಪಕ್ಷದ ಸಂಘಟನೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿರುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಜೊತೆಯಲ್ಲಿ ಕೆಲಸ ಮಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಂಘಟನೆ ಮಾಡಿರುವಂತಹ ಒಬ್ಬ ಮುತ್ಸದ್ಧಿ ರಾಜಕಾರಣಿಯನ್ನು ನಾವು ಕಳೆದುಕೊಂಡಿರುತ್ತೇವೆ.

ಶ್ರೀಮತಿ ಸಾವಿತ್ರಮ್ಮ ಎಂ. ಗುಂಡಿಯವರು ಮಹಿಳಾ ಸಂಘಟಕರಾಗಿ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಶ್ರೀಯುತರು ಎರಡು ಬಾರಿ ವಿಧಾನಸಭೆ ಕ್ಷೇತ್ರದಿಂದ ಚುನಾಯಿತರಾಗಿ ವಿಧಾನ ಪರಿಷತ್ತಿನಲ್ಲ ಸೇವೆ ಸಲ್ಲಿಸಿರುತ್ತಾರೆ. ಹುಬ್ಬಳ್ಳಿಯ ಕೊಳಗೇರಿ ನಿವಾಸಿಗಳ ಪುನರ್ ವಸತಿಗಾಗಿ ಅವಿರತವಾಗಿ ಶ್ರಮಿಸಿದ್ದರು. ಶ್ರೀಯುತರ ನಿಧನದಿಂದಾಗಿ ನಮ್ಮ ರಾಜ್ಯ ಒಬ್ಬ ಹಿರಿಯ ಮಹಿಳಾ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಶ್ರೀ ಮನೋಹರ್ ತಹಸೀಲ್ದಾರ್‌ರವರು ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ವಿಧಾನಸಭಾ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ನಾವು ಸಹ ಶಾಸಕರಾಗಿ ಅವರ ಜೊತೆ ಕಾರ್ಯನಿರ್ವಹಿಸಿರುತ್ತೇವೆ. ಶ್ರೀಯುತರು ಬಹಳ ಸರಳ ವ್ಯಕ್ತಿ. ಶ್ರೀಯುತರು ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಅಬಕಾರಿ ಮತ್ತು ಮುಜರಾಯಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ನಮ್ಮ ರಾಜ್ಯ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಶ್ರೀ ರತನ್ ನಾವಲ್ ಟಾಟಾರವರು ಇಡೀ ದೇಶಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿರುವಂತಹ ಮಹಾನ್ ಮಾನವತಾವಾದಿ ಅವರು. ಹಲವಾರು ವ್ಯವಹಾರಗಳಲ್ಲಿ ನೂರಾರು ಕೈಗಾರಿಕೆಗಳನ್ನು ಸ್ಥಾಪಿಸಿ, ದೇಶದ ಅಭಿವೃದ್ಧಿಗಾಗಿ ಅಪಾರವಾದ ಕೊಡುಗೆಯನ್ನು ನೀಡಿರುತ್ತಾರೆ. ಜೊತೆಗೆ, ನೂರಕ್ಕೂ ಹೆಚ್ಚು ದೇಶಗಳಲ್ಲಿ ಸುಮಾರು 30 ಕ್ಕೂ ಹೆಚ್ಚು ಕಂಪನಿಗಳನ್ನು ಯಶಸ್ವಿಯಾಗಿ ನಿಭಾಯಿಸಿದಂತಹ ಹೆಗ್ಗಳಿಕೆ ಅವರದ್ದು. ಶ್ರೀಯುತರು ತಮ್ಮ ಟ್ರಸ್ಟ್‌ನ ಮುಖಾಂತರ ದೇಶದ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಬಹಳಷ್ಟು ಸಹಾಯ ಮಾಡಿರುತ್ತಾರೆ. ಬಡವರಿಗಾಗಿ ಅವರ ಕಲ್ಪನೆಯ ನ್ಯಾನೋ ಕಾರನ್ನು ಒಂದು ಲಕ್ಷ ರೂಪಾಯಿಗಳಲ್ಲಿ ನಿರ್ಮಾಣ ಮಾಡಿ, ಈ ದೇಶದ ಜನರಿಗೆ ಅವರು ಅಪಾರವಾದ ಕೊಡುಗೆಯನ್ನು ನೀಡಿರುತ್ತಾರೆ. ಆದುದರಿಂದಾಗಿ, ಶ್ರೀಯುತರಿಗೆ ಪದ್ಮವಿಭೂಷಣ, ಪದ್ಮಭೂಷಣ ಹಾಗೂ ಇನ್ನೂ ಅನೇಕ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ. ಶ್ರೀಯುತರ ನಿಧನದಿಂದಾಗಿ ರಾಷ್ಟ್ರದ ಒಬ್ಬ ಶ್ರೇಷ್ಠ ಉದ್ಯಮಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ.

ಡಾ: ಸೈಯದ್ ಶಹಾ ಖುಸ್ರೋ ಹುಸೇನಿಯವರು ನಮ್ಮ ಕಲ್ಯಾಣ ಕರ್ನಾಟಕ ಭಾಗದ ಗುಲ್ಬರ್ಗಾ ಜಿಲ್ಲೆಯವರಾಗಿದ್ದು, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡುವುದರ ಜೊತೆಗೆ, ವೈದ್ಯಕೀಯ, ಇಂಜಿನಿಯರಿಂಗ್ ಬಿ.ಇಡ್. ಕಾಲೇಜುಗಳನ್ನು ಹಾಗೂ ಮಹಿಳೆಯರಿಗಾಗಿ ಪ್ರೌಢಶಾಲೆ, ಪಿಯುಸಿ, ಪದವಿ ಹಾಗೂ ಅರೇಬಿಕ್ ಭಾಷೆಯ ಕಾಲೇಜುಗಳನ್ನು ತೆರೆದು ಆ ಭಾಗದ ಅಭಿವೃದ್ಧಿಗೆ ಕಾರಣರಾಗಿರುತ್ತಾರೆ. ಶ್ರೀಯುತರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಕಷ್ಟು ಗೌರವವನ್ನು ಹೊಂದಿರುವಂತಹವರ ನಿಧನದಿಂದಾಗಿ, ನಮ್ಮ ರಾಜ್ಯ ಒಬ್ಬ ಹಿರಿಯ ಶಿಕ್ಷಣ ತಜ್ಞರನ್ನು ಹಾಗೂ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಶ್ರೀ ರಾಜಶೇಖರ ನೀರಮಾನ್ವಿಯವರು ನಮ್ಮ ರಾಯಚೂರು ಜಿಲ್ಲೆಯ ನೀರಮಾನ್ವಿ ಗ್ರಾಮಕ್ಕೆ ಸೇರಿದವರಾಗಿರುತ್ತಾರೆ. ಶ್ರೀಯುತರು ಬಹಳ ಸರಳ ವ್ಯಕ್ತಿಯಾಗಿ ಇಡೀ ರಾಜ್ಯಕ್ಕೆ ಗೋಕಾಕ ಚಳುವಳಿಯಲ್ಲಿ ಹಾಗೂ ಜೆ.ಪಿ. ಚಳುವಳಿಯಲ್ಲಿ ಮತ್ತು ವಾಟಾಳ್ ಚಳುವಳಿಯಲ್ಲಿ ಭಾಗವಹಿಸುವುದರ ಜೊತೆಯಲ್ಲಿ ಹಲವಾರು ಸಂಕಲನ ಹಾಗೂ ಕಥೆಗಳನ್ನು ರಚಿಸಿದ್ದಾರೆ. ಶ್ರೀಯುತರು ತಮ್ಮ ಕೊನೆಯ ದಿನಗಳಲ್ಲಿ ರೈತರಾಗಿ ತಮ್ಮ ಗ್ರಾಮದಲ್ಲಿ ಹತ್ತಿ ಮತ್ತು ಭತ್ತ ಬೆಳೆಸುವ ಬಗ್ಗೆ ಜನರಿಗೆ ಮಾಹಿತಿಯನ್ನು ಕೊಡುವಂತಹ ರೀತಿಯಾಗಿ ಬಹಳ ಸರಳ ವ್ಯಕ್ತಿಯಾಗಿ ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುತ್ತಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಇನ್ನಿತರ ಪ್ರಶಸ್ತಿಗಳು ಪುನಸ್ಕಾರಗಳಿಗೆ ಭಾಜನರಾಗಿರುತ್ತಾರೆ. ಶ್ರೀಯುತರ ನಿಧನದಿಂದಾಗಿ, ರಾಜ್ಯವು ಒಬ್ಬ ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಈ ಮೇಲ್ಕಂಡ ಮಹನೀಯರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ಕರುಣಿಸಲಿ ಎಂದು ಹಾರೈಸಿ, ತಾವು ಪ್ರಸ್ತಾಪಿಸಿರುವಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನಮೂದು ಮಾಡಿರುವಂತಹ ವಿಧಾನ ಪರಿಷತ್ತಿನ ಮತ್ತು ವಿಧಾನಸಭೆಯಲ್ಲಿಯೂ ಸಹ ಕೆಲಸ ಮಾಡಿದ, ಶ್ರೀ ಕೆ.ಎಚ್. ಶ್ರೀನಿವಾಸ್‌ರವರಿಂದ ಹಿಡಿದು 10 ಜನ ಸಾಧಕರನ್ನು ನಾವು ಕಳೆದುಕೊಂಡಿದ್ದೇವೆ. ಇದರಲ್ಲಿ ಹಲವರು ಸಮಾಜ ಸೇವೆಯಲ್ಲಿ ತೊಡಗಿದ್ದರೆ, ಇನ್ನು ಕೆಲವರು ಶಿಕ್ಷಣ ತಜ್ಞರಾಗಿ ಕೆಲಸ ಮಾಡಿದ್ದಾರೆ. ರಾಷ್ಟ್ರ ಕಂಡ ಶ್ರೇಷ್ಠ ಕೈಗಾರಿಕೋದ್ಯಮಿಯನ್ನು ಸಹ ನಾವು ಕಳೆದುಕೊಂಡಿದ್ದೇವೆ. ಈ 10 ಜನರು ಕೂಡ ತಮ್ಮ-ತಮ್ಮ ಕಾಲಾವಧಿಯಲ್ಲಿ ಅವರು ಯಾವ ಸಂದರ್ಭಗಳಲ್ಲಿ ಕೆಲಸ ಮಾಡಿದ್ದರು, ಆ ಎಲ್ಲಾ ಕಡೆಗಳಲ್ಲಿಯೂ ಸಹ ಶ್ರೇಷ್ಠ ವ್ಯಕ್ತಿಗಳಾಗಿ ಹೊರಹೊಮ್ಮಿದ್ದಾರೆ. ಅವರೆಲ್ಲರೂ ಕೂಡ ಜನಮನ ಗಳಿಸುವುದು ಮಾತ್ರವಲ್ಲದೇ, ಶಿಕ್ಷಣ ತಜ್ಞರಾಗಿದ್ದವರು ಮತ್ತು ಕೈಗಾರಿಕೋದ್ಯಮಿಗಳಾಗಿದ್ದವರೆಲ್ಲರೂ ತಮ್ಮ ತಮ್ಮ ಕಾಲಾವಧಿಯಲ್ಲಿ ಉತ್ತಮ ಸೇವೆ ಮಾಡಿದ್ದಾರೆ, ಜನಮನ್ನಣೆ ಗಳಿಸಿದ್ದಾರೆ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿದ್ದಾರೆ. ಶ್ರೀ ಕೆ.ಎಚ್. ಶ್ರೀನಿವಾಸ್‌ರವರು ಶಾಸಕರಾಗಿ

ಸೇವೆ ಸಲ್ಲಿಸುವಂತಹ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅವರನ್ನು ದಿಟ್ಟಿಸಿ ನೋಡುವ ರೀತಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ಅವರು ಯಾವುದೇ ವಿಚಾರವನ್ನು ತೆಗೆದುಕೊಂಡರೂ ಸಹ, ಜನರು ಏನು ಕೊಡುಗೆಯನ್ನು ಕೊಡುತ್ತಾರೆ ಎನ್ನತಕ್ಕಂತಹ ಒಂದು ಆಶಾಭಾವನೆಯನ್ನು ವ್ಯಕ್ತಪಡಿಸುವಂತಹ ರೀತಿಯಲ್ಲಿ ಅವರು ಕೆಲಸ ಮಾಡಿದ್ದಾರೆ. ಅನೇಕರು ಇಂತಹ ಮುತ್ಸದ್ಧಿಗಳನ್ನು ಕಂಡು ಅವರು ಸಮಾಜ ಸೇವೆಯಲ್ಲಿ ಅಥವಾ ಸಾಮಾಜಿಕ ಜೀವನದಲ್ಲಿ ಇರಬಹುದು ಅಥವಾ ಶಾಸಕರಾಗಿ ಅಥವಾ ಮಂತ್ರಿಗಳಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಇಂತಹ ಶ್ರೇಷ್ಠ ವ್ಯಕ್ತಿಗಳ ಹಿಂಬಾಲಕರಾಗಿ ಕೂಡ ಕೆಲಸ ಮಾಡಿದ ನಿದರ್ಶನಗಳು ಸಹ ಇವೆ. ಹೀಗೆ ನಾವು ಅಂತಹವರನ್ನು ನೋಡಿ ಕಲಿತಿದ್ದು ಕೂಡ ಬಹಳಷ್ಟಿದೆ. ಈ ರೀತಿ ನಾವು ಇವೊತ್ತಿನ ದಿವಸ ಹತ್ತು ಜನರನ್ನು ಕಳೆದುಕೊಂಡಿದ್ದೇವೆ.

(ಮುಂದು)

(700) 09.12.2024 (11.30) ಎಸ್‌ಕೆ-ಎಂಡಿ (ಕೆಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಮಾನ್ಯ ರತನ್ ನಾವಲ್ ಟಾಟಾರವರು ಈ ದೇಶಕ್ಕೆ ದೊಡ್ಡ ಕೊಡುಗೆಯಾಗಿದ್ದವರು. ಅವರು ಟಾಟಾ ಕಂಪನಿಯಲ್ಲಿ ಮಾಡದೇ ಇರದ ಕೆಲಸವಿಲ್ಲ. ಅವರು ಎಷ್ಟೋ ಜನರಿಗೆ ಜೀವದಾತರು ಮತ್ತು ಕೆಲಸಕಾರ್ಯಗಳನ್ನು ಕೂಡ ಕೊಟ್ಟಿದ್ದಾರೆ. ಇವತ್ತು ಈ ದೇಶಕ್ಕಾಗಿ ಕಾರು, ವಿಮಾನ ಇರಬಹುದು ಎಲ್ಲಾ ಸಾಧನಗಳನ್ನು ಕೊಟ್ಟಂತಹವರು ಮತ್ತು ಯಾವುದರಲ್ಲಿ ನೋಡಿದರೂ ಕೂಡ ಅವರ ಸೇವೆ ಬಹಳ ಗಣನೀಯವಾದದ್ದು. ಇಂತಹ ಕಾರ್ಯಗಳನ್ನು ಕೊಟ್ಟು ಇವತ್ತು ಯುವಕರಿಗೆ ಪ್ರೋತ್ಸಾಹದಾಯಕವಾದ ಕೆಲಸ ಮಾಡಿ, ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದವರು. ಅಂತರ್ರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಅವರಿಗೆ ಉತ್ತಮವಾದ ಗೌರವವಿತ್ತು. ರಾಜ್ಯ ಮತ್ತು ರಾಷ್ಟ್ರದಲ್ಲಿಯೂ ಕೂಡ ಅವರಿಗೆ ಉತ್ತಮವಾದ ಗೌರವವನ್ನು ಕೊಡುತ್ತಿದ್ದರು. ಸಾಧಕರಿಗೆ ಪ್ರಶಸ್ತಿಗಳನ್ನು ಕೊಡತಕ್ಕಂತಹದ್ದು ಮತ್ತು ಶಿಕ್ಷಣಕ್ಕೆ ಯಾರು ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವರಿಗೆ ಪ್ರಶಸ್ತಿಗಳನ್ನು ಕೊಡುವಂತಹದ್ದು. ಇದನ್ನೆಲ್ಲವನ್ನು ಮುಡುಗೇರಿಸಿಕೊಂಡಿರುವಂತಹ ಇಂತಹ 10 ಜನ ಮುತ್ಸದ್ಧಿಗಳನ್ನು ನಾವು ಕಳೆದುಕೊಂಡಿದ್ದೇವೆ. ನನಗೆ ಅನಿಸುವುದೇನೆಂದರೆ, ಉತ್ತಮ ಸೇವಕರನ್ನು ರಾಜ್ಯ ಮತ್ತು ರಾಷ್ಟ್ರ ಕಳೆದುಕೊಂಡಿದೆ. ಮೃತರನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಈ ಒಂದು ದುಃಖ ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಮೃತರ ಗೌರವಾರ್ಥವನ್ನು ನೆನೆಯುವಂತಹ ಅವಕಾಶವನ್ನು ಮಾನ್ಯ ಸಭಾಪತಿಯವರು ಮಾಡಿಕೊಟ್ಟಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಮಸ್ಕಾರಗಳು.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಶಾಸಕರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 50**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಗೋಪಿನಾಥ್‌ರವರು ಸದನದಲ್ಲಿ ಗೈರು ಹಾಜರಾಗಿರುತ್ತಾರೆ)**

**ಪ್ರಶ್ನೆ ಸಂಖ್ಯೆ: 66**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಟ್ಟು 48,657 ಅತಿಥಿ ಶಿಕ್ಷಕರು/ಉಪನ್ಯಾಸಕರು ಇದ್ದಾರೆ. ಅವರು ಎರಡು ವರ್ಷ ಪಿ.ಯು.ಸಿ. ಮತ್ತು ಪದವಿ ಕೋರ್ಸ್‌ನ್ನು ಮುಗಿಸಿಕೊಂಡು ಹತ್ತು ವರ್ಷ ಕೆಲಸ ಮಾಡುವುದರ ಬದಲಾಗಿ ಹತ್ತನೇ ತರಗತಿಯನ್ನು ಓದಿ, ಎರಡು ವರ್ಷ ಅರಾಮವಾಗಿದ್ದು, ಗ್ರೂಪ್ "ಡಿ" ಅಥವಾ ಸೆಕ್ಯೂರಿಟಿ ಜಾಬ್ ಹಾಗೂ ಅಟೆಂಡರ್ ಜಾಬ್ ಮಾಡಿದರೆ ರೂ.17,500 ಸಂಬಳ ಬರುತ್ತದೆ. ಅವರು ಗ್ರೂಪ್ "ಡಿ" ಮತ್ತು ಅಟೆಂಡರ್ ಆಗಿ ಹತ್ತು ವರ್ಷ ಕೆಲಸ ಮಾಡಿದರೆ, ಇವರಿಗೂ ಮತ್ತು ಉಪನ್ಯಾಸಕರಿಗೆ ಬರುವಂತಹ ಸಂಬಳದ ವ್ಯತ್ಯಾಸ ನೋಡಿದರೆ, 17.5 ಲಕ್ಷ ರೂಪಾಯಿಗಳು. ಅಂದರೆ ಈ ಸಂಬಳಕ್ಕೆ ಉಪನ್ಯಾಸಕರು ಅವರು ಹದಿನೈದು ವರ್ಷ ಕೆಲಸ ಮಾಡಬೇಕು. ಒಟ್ಟಿನಲ್ಲಿ ಒಬ್ಬ ವ್ಯಕ್ತಿ ಗ್ರೂಪ್ "ಡಿ" ಅಥವಾ ಸೆಕ್ಯೂರಿಟಿ ಜಾಬ್ ಮಾಡಿ ಹತ್ತು ವರ್ಷಗಳಲ್ಲಿ ದುಡಿಯುವಂತಹ ಮೊತ್ತವನ್ನು, ಅತಿಥಿ ಉಪನ್ಯಾಸಕರು ದುಡಿಯಬೇಕೆಂದರೆ ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಬೇಕು. ಈಗ ತಾನೇ ನಾವು ಸಂವಿಧಾನವನ್ನು ಪ್ರಸ್ತಾವನೆಯನ್ನು ಮಾಡಿದ್ದೇವೆ. ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ನ್ಯಾಯ ಎಲ್ಲಿದೆ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಅತಿಥಿ ಉಪನ್ಯಾಸಕರಿಗೆ ಮಾಸಿಕವಾಗಿ ಗೌರವ ಸಂಭಾವನೆ ಏನು ಬರುತ್ತಿದೆಯೋ, ಅದನ್ನು ಜಾಸ್ತಿ ಮಾಡಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಎಸ್. ಮಧುಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, 2022ರಲ್ಲಿ ಅತಿಥಿ ಶಿಕ್ಷಕರು/ಉಪನ್ಯಾಸಕರಿಗೆ ಗೌರವ ಸಂಭಾವನೆಯನ್ನು ಜಾಸ್ತಿ ಮಾಡಲಾಗಿತ್ತು.

ಆದಾದ ನಂತರ ನಾವು ಅರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಆ ಕಡತವು ಆರ್ಥಿಕ ಇಲಾಖೆಯಿಂದ ನಮ್ಮ ಇಲಾಖೆಗೆ ವಾಪಸ್ಸು ಬಂದಿದೆ. ಈ ಗೌರವ ಸಂಭಾವನೆಯನ್ನು ಜಾಸ್ತಿ ಮಾಡಬೇಕೆಂದು ಅರ್ಥಿಕ ಇಲಾಖೆಯ ಸಹಮತವನ್ನು ತೆಗೆದುಕೊಂಡು, ಮುಂದಿನ ದಿನಗಳಲ್ಲಿ ಮಾಡುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ. ಗೌರವ ಸಂಭಾವನೆಯನ್ನು ಹೆಚ್ಚು ಮಾಡುವಂತಹ ಅವಶ್ಯಕತೆ ಇದೆ. ಈ ಗೌರವ ಸಂಭಾವನೆಯನ್ನು ಎರಡು ವರ್ಷದ ಹಿಂದೆ ಮಾಡಿದ್ದರಿಂದ, ಆರ್ಥಿಕ ಇಲಾಖೆಯಿಂದ clearance ತೆಗೆದುಕೊಂಡು, ಆದಷ್ಟು ಬೇಗ ಮಾಡುತ್ತೇನೆ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ಮೂವತ್ತು ನಿಮಿಷಗಳ ಕಾಲ ಕೊಡಬೇಕು. ಅತಿಥಿ ಶಿಕ್ಷಕರು/ಉಪನ್ಯಾಸಕರಿಗೆ ತುಂಬಾ ಅನ್ಯಾಯವಾಗುತ್ತಿದೆ. ಸುಮಾರು 48,000 ಅತಿಥಿ ಶಿಕ್ಷಕರು/ಉಪನ್ಯಾಸಕರಿದ್ದಾರೆ. ಅವರಿಗೆ Minimum Wages Act ಪ್ರಕಾರ ಸಂಬಳ ಬರುತ್ತಿಲ್ಲವೆಂದರೆ, ಏನು ಮಾಡಬೇಕು? ಅವರು ಯಾವ ರೀತಿ ಶಾಲೆಗೆ ಹೋಗಿ ಮಕ್ಕಳಿಗೆ ಪಾಠ ಮಾಡಬೇಕು? ಇದರಿಂದಾಗಿ ತುಂಬಾ ಮಕ್ಕಳಿಗೆ ತೊಂದರೆಯಾಗುತ್ತಿದೆ ಮತ್ತು ಶಿಕ್ಷಕರು ಶಿಕ್ಷಣವನ್ನು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ದಯವಿಟ್ಟು, ಈ ವಿಷಯದ ಕುರಿತಾಗಿ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಮೂವತ್ತು ನಿಮಿಷಗಳ ಕಾಲ ಅವಕಾಶ ಮಾಡಿಕೊಡಬೇಕೆಂದು, ನಾನು ತಮಗೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈ ವಿಷಯದ ಕುರಿತಾಗಿ, ತಾವು ಒಂದು ಪತ್ರವನ್ನು ಬರೆದು ಕಳುಹಿಸಿ. ಮಾನ್ಯ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ: 125**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ರಡಿಯಲ್ಲಿ ಎರಡು ಪಡಿತರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಪ್ರತಿ ಪಡಿತರ ಚೀಟಿಗಳಿಗೆ ತಲಾ 35 ಕೆ.ಜಿ. ಆಹಾರ ಧಾನ್ಯವನ್ನು ಕೊಡುತ್ತಿದ್ದಾರೆ. ಅದೇ ರೀತಿಯಾಗಿ ಆದ್ಯತಾ ಪಡಿತರ ಚೀಟಿಯಲ್ಲಿ ಪ್ರತಿ ಫಲಾನುಭವಿಗೆ 5 ಕೆ.ಜಿ. ಆಹಾರಧಾನ್ಯವನ್ನು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 6 ಕೋಟಿ ಚಿಲ್ಲರೆ ಜನಸಂಖ್ಯೆ ಇದ್ದರೆ, ರಾಜ್ಯದಲ್ಲಿರುವ ಆಹಾರ ಇಲಾಖೆಯಿಂದ ವಿತರಣೆಯಾಗಿರುವುದು ಸುಮಾರು 1.47 ಕೋಟಿ ಪಡಿತರ ಚೀಟಿಗಳು. ಬಡತನ ರೇಖೆಗಿಂತ ಕೆಳಗೆ ಇರುವಂತಹ ಎಷ್ಟು ಜನರಿದ್ದಾರೆ ಎಂದು ಹೇಳಿದರೆ, ಸುಮಾರು 4.67 ಕೋಟಿ ಜನರಿದ್ದಾರೆ. ಬಹುಶಃ 80 ರಷ್ಟು ಜನಸಂಖ್ಯೆ ಕೂಡ ಇದರಲ್ಲಿ cover ಆಗಿದ್ದು, ಎಲ್ಲೋ ಒಂದು ಕಡೆ ಪಡಿತರ ಚೀಟಿಗಳನ್ನು ಹಂಚುವುದರಲ್ಲಿ ಸಾಕಷ್ಟು ರೀತಿಯಾದಂತಹ ಗೊಂದಲವಿದೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ? ಇತ್ತೀಚೆಗೆ ಜನರು ಏನು ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದಾರೆ ಮತ್ತು ಸರ್ಕಾರಿ ನೌಕರರು ಯಾರಿದ್ದಾರೆ? ಯಾರ ಆದಾಯ ಮೀತಿ ಜಾಸ್ತಿ ಇದೆ. ಅವರನ್ನು ರದ್ದು ಮಾಡುತ್ತೇವೆಂದು ಹೇಳಿದ್ದಾರೆ. ಈ ದಿಸೆಯಲ್ಲಿ ಸುಮಾರು 25 ಲಕ್ಷಕ್ಕಿಂತ ಹೆಚ್ಚಾಗಿ ಪಡಿತರ ಚೀಟಿಗಳು ರದ್ದಾಗಿದೆ. ಇದರಿಂದ ಸಾಕಷ್ಟು ರೀತಿಯಲ್ಲಿ ಗೊಂದಲವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಯಾವ ರೀತಿ ಸರ್ಕಾರ ಕ್ರಮ ಕೈಗೊಂಡಿದೆ? ಪಡಿತರ ಚೀಟಿಯನ್ನು ಆಧಾರ್ ಕಾರ್ಡ್‌ನೊಂದಿಗೆ ಶೇಕಡಾ 99.9ರಷ್ಟು ಕೂಡ ನಾವು ಹೊಂದಾಣಿಕೆ ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಈ ರೀತಿ ರದ್ದು ಮಾಡುವುದರಿಂದ ಕೂಡ ಕೇಂದ್ರ ಸರ್ಕಾರದಿಂದ ಬರುವಂತಹ ಹಲವಾರು ಯೋಜನೆಗಳಿಗೆ ಭಾದಕವಾಗುವುದಿಲ್ಲವೇ? ಮತ್ತು ಜನರಿಗೆ ತೊಂದರೆಯಾಗುವುದಿಲ್ಲವೇ? ಇದರ ಬಗ್ಗೆ ಯಾವ ರೀತಿ ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಕೊಳ್ಳುತ್ತೇನೆ.

**ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು):-** ಮಾನ್ಯ ಸಭಾಪತಿಯವರೇ, 2013ರಲ್ಲಿ ಕೇಂದ್ರದಲ್ಲಿ ಯು.ಪಿ.ಎ., ಸರ್ಕಾರ ಅಧಿಕಾರದಲ್ಲಿದ್ದಾಗ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಪ್ರಾರಂಭವಾಯಿತು. 2014ರಲ್ಲಿ ಇದು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂತು. ಇದರಲ್ಲಿ ಬಹಳ ಮುಖ್ಯವಾದಂತಹ ಎರಡು ವಿಷಯಗಳಿವೆ. ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಮಾರ್ಗಸೂಚಿಗಳ ಅನ್ವಯ ಅಂತ್ಯೋದಯ ಅನ್ನ ಯೋಜನೆಯಲ್ಲಿ ಪಡಿತರ ಚೀಟಿಗಳಿಗೆ ತಲಾ 35 ಕೆ.ಜಿಗಳನ್ನು ಕೊಡುವಂಥದ್ದು. ಅದೇ ರೀತಿ ಪ್ರತಿ ಕುಟುಂಬಕ್ಕೆ ಪ್ರತಿ ವ್ಯಕ್ತಿಗೆ 5 ಕೆ.ಜಿ., ಆಹಾರ ಧಾನ್ಯಗಳನ್ನು ಕೊಡುವಂಥದ್ದಾಗಿದೆ.

(701) 09.12.2024, 11.40, TCH-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಹೆಚ್.ಮುನಿಯಪ್ಪ (ಮುಂದು):**

2022ರ ಡಿಸೆಂಬರ್ ಮಾಹೆಯವರೆಗೆ ಪ್ರಸ್ತುತ 3 ಕೆ.ಜಿ ಅಕ್ಕಿ ಮತ್ತು 2 ಕೆ.ಜಿ ರಾಗಿ ಕೊಡುವುದನ್ನು ನಾವು ಮಾಡಿದ್ದೇವೆ. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ ಅಡಿಯಲ್ಲಿ ನಮ್ಮ ರಾಜ್ಯದಲ್ಲಿ 1 ಕೋಟಿ 2 ಲಕ್ಷ ಕಾರ್ಡ್‌ದಾರರಿಗೆ ಪ್ರತಿಯೊಬ್ಬರಿಗೆ ತಿಂಗಳಿಗೆ 5 ಕೆ.ಜಿ ಆಹಾರಧಾನ್ಯಗಳನ್ನು ಕೊಡುವಂತಹ ಕಾರ್ಯಕ್ರಮವನ್ನು ರೂಪಿಸುತ್ತಿದೆ. ಒಟ್ಟಾರೆಯಾಗಿ ಅಂತ್ಯೋದಯ ಪಡಿತರ ಚೀಟಿಗಳು 10,80,648 ಕಾರ್ಡ್‌ದಾರರಿಗೆ ಹಂಚಿಕೆ ಮಾಡುತ್ತಿದ್ದೇವೆ. ಬಿ.ಪಿ.ಎಲ್ 1,02,84,000 ಕಾರ್ಡ್‌ದಾರರಿಗೆ ಹಂಚಿಕೆ ಮಾಡುತ್ತಿದ್ದೇವೆ. ಅದಲ್ಲದೇ ರಾಜ್ಯದಲ್ಲಿ ಹೊಸದಾಗಿ 14,74,582 ಬಿ.ಪಿ.ಎಲ್., ಕಾರ್ಡ್‌ಗಳನ್ನು ಹಂಚಿಕೆ ಮಾಡುತ್ತಿದ್ದೇವೆ. ಅದರ ಜೊತೆಗೆ ಹೊಸದಾಗಿ ಅಂತ್ಯೋದಯ ಅನ್ನ ಪಡಿತರ ಚೀಟಿಗಳು ಒಟ್ಟಿಗೆ ಸೇರಿ 1,28,39,230 ಕಾರ್ಡ್‌ಗಳನ್ನು ನಾವು ಹಂಚಿಕೆ ಮಾಡುತ್ತಿದ್ದೇವೆ. ಅದಲ್ಲದೇ ಎ.ಪಿ.ಎಲ್., 25,25,418 ಕಾರ್ಡ್‌ಗಳನ್ನು ಹಂಚಿಕೆ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ, ಕರ್ನಾಟಕ ರಾಜ್ಯದಲ್ಲಿ 1,53,64,648 ಕಾರ್ಡ್‌ಗಳನ್ನು ನಾವು ಹಂಚಿಕೆ ಮಾಡುತ್ತಿದ್ದೇವೆ. ಸುಮಾರು ಆರೂವರೆ ಕೋಟಿ ಇರುವ ಜನಸಂಖ್ಯೆಯಲ್ಲಿ 5,29,01,752 ಜನರಿಗೆ ಈ ಸೌಲಭ್ಯಗಳನ್ನು ಹಂತ ಹಂತವಾಗಿ ಎ.ಪಿ.ಎಲ್., ಮತ್ತು ಬಿ.ಪಿ.ಎಲ್., ಕಾರ್ಡ್ ಅನುಕೂಲವಾಗುತ್ತಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ, ನನ್ನ ಮುಂದೆ ಇದೆ. ಗೊಂದಲ ಸರಿಪಡಿಸುವುದಕ್ಕೆ ಏನು ಕ್ರಮ ಮಾಡುತ್ತೀರಿ? ಏಕೆಂದರೆ ಇದರಲ್ಲಿ ಸಾಕಷ್ಟು ಗೊಂದಲವಾಗಿದೆ. ಅರ್ಹ ಬಿ.ಪಿ.ಎಲ್., ಕಾರ್ಡ್‌ಗಳನ್ನು ಸರ್ಕಾರ cancel ಮಾಡಬಾರದು.

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ನಾವು ಸಂಪೂರ್ಣವಾಗಿ income tax ಕಟ್ಟುತ್ತಿರುವವರು ವರ್ಷಕ್ಕೆ ರೂ.1,20,000 ಗಳ ಆದಾಯ ಹೊಂದಿರತಕ್ಕಂಥವರನ್ನು ಬಿಟ್ಟು ಉಳಿದ ಎಲ್ಲಾ ಕಾರ್ಡ್‌ದಾರರಿಗೂ ಕೂಡ ಏನೂ ತಕರಾರಿಲ್ಲದೇ ಅಕ್ಕಿಯನ್ನು ಸರಬರಾಜು ಮಾಡುತ್ತಿದ್ದೇವೆ. ಅದು ಯಾವುದೂ ಗೊಂದಲ ಇಲ್ಲವೆಂದು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆಯೆಂದರೆ, ಎಲ್ಲೋ ಒಂದುಕಡೆ ಪ್ರಸ್ತುತ ಎ.ಪಿ.ಎಲ್., ಕಾರ್ಡ್‌ದಾರರಿಗೆ ಆಹಾರಧಾನ್ಯಗಳನ್ನು ಕೊಡುವುದನ್ನೇ ನಿಲ್ಲಿಸಿದ್ದಾರೆ. ತಾವು ಅದನ್ನು admit ಮಾಡುತ್ತಾರೆಯೇ? ಮಾನ್ಯ ಸಚಿವರ ಉತ್ತರದಲ್ಲಿ ಆ ರೀತಿ ಹೇಳಿದ್ದೀರಿ. ಮೊದಲನೆಯದಾಗಿ, ಏನಾಗಿದೆಯೆಂದರೆ weed out ಮಾಡಲು ಹೋಗಿ ಎಲ್ಲೋ ಒಂದುಕಡೆ ಅರ್ಹ ಇರಕತಕ್ಕಂಥವರಿಗೂ ಕೂಡ ಅನ್ಯಾಯವಾಗುತ್ತಿದೆ. ಅದು ಆಗಬಾರದೆಂದು ನನ್ನ ಒಂದು ಕಳಕಳಿ. ಎರಡನೆಯದಾಗಿ, 'One Nation, One Ration Card' ಎಂದು ಆಧಾರ್‌ಕಾರ್ಡ್‌ನೊಂದಿಗೆ ಜೋಡಣೆ ಮಾಡಿ ಪಡಿತರ ಚೀಟಿಗಳನ್ನು ನೋಂದಣಿ ಮಾಡಿದ್ದೀರಿ. 'A' and 'B' ಎಂದು

ವರ್ಗೀಕರಣ ಮಾಡತಕ್ಕಂಥದ್ದು ಆರೋಗ್ಯಕ್ಕಾಗಿ ಬಿ.ಪಿ.ಎಲ್" ಎಂದು ಈ ಹಿಂದೆ ಮಾನ್ಯ ಸಚಿವರು ಎಲ್ಲೋ ಒಂದುಕಡೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಮೇಲೆ ನಾನು ಪ್ರಶ್ನೆ ಕೇಳಿದ್ದೇನೆ. ಅದು ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹುಶಃ ಸರ್ಕಾರ ಮಾಡುವ ಯೋಚನೆ ಇತ್ತು, ಸದ್ಯಕ್ಕೆ ಮಾಡಿಲ್ಲ ಎಂದು ಹೇಳಬಹುದಿತ್ತು. ಇದರ ಬಗ್ಗೆ ಮಾನ್ಯ ಸಚಿವರು clarification ಕೊಡಬೇಕು. ಆಮೇಲೆ ಇಷ್ಟು ರೇಷನ್ ಕಾರ್ಡ್‌ಗಳು ಯಾವ ಕಾರಣಕ್ಕಾಗಿ ಜಾಸ್ತಿ ಆಯಿತು. ನಿಮ್ಮ ಪ್ರಕಾರ 1.43 ಕೋಟಿ ಪಡಿತರ ಚೀಟಿಗಳಿವೆ. ಅಷ್ಟು ಇರುವುದಕ್ಕೆ ಸಾಧ್ಯವೇ? ಯಾವ ರೀತಿಯಾಗಿ ಇದು ಜಾಸ್ತಿ ಆಯಿತು? ರಾಜ್ಯದ ಜನಸಂಖ್ಯೆಯ ಶೇ.80 ಕೂಡ ಇದರಲ್ಲಿ cover ಆಗುತ್ತದೆ. ಇದು ಯಾವ ರೀತಿ ಆಯಿತು ಮತ್ತು ಏತಕ್ಕೋಸ್ಕರ ಆಯಿತು ಎಂದು ಮಾನ್ಯ ಸಚಿವರು ಏನಾದರೂ ತನಿಖೆ ಮಾಡಿದ್ದಾರೆಯೇ? ಏಕೆಂದರೆ, ಕೇಂದ್ರ ಸರ್ಕಾರದಿಂದ ಸಾಕಷ್ಟು ಆಹಾರ ಧಾನ್ಯಗಳು ಬರುತ್ತಿದೆ. ಅಂದರೆ ಕೇವಲ ಕರ್ನಾಟಕ್ಕೆ ಅಷ್ಟೇ ಅಲ್ಲದೇ ಇಡೀ ದೇಶಕ್ಕೆ ಕೊಡತಕ್ಕಂಥ ಒಂದು scheme ಮಾಡಿದ್ದಾರೆ. ಆಹಾರ ಭದ್ರತಾ ಕಾಯ್ದೆ ಇದೆ. ಸಾಕಷ್ಟು ಬರುತ್ತದೆ, ಮಾನ್ಯ ಸಚಿವರು ಬಾಕಿ ಇರುವುದನ್ನು ಕೂಡ ಕೊಡುತ್ತಿದ್ದಾರೆ. ಇದು ಒಳ್ಳೆಯದು. ಅದಕ್ಕೇನು ಅಭ್ಯಂತರವಿಲ್ಲ ಸಂತೋಷ. ಈ ರೀತಿಯ ಗೊಂದಲಕ್ಕೆ ಕಾರಣವೇನು. ಈ ಗೊಂದಲವನ್ನು ಸರಿಪಡಿಸುವುದಕ್ಕೆ ಮಾನ್ಯ ಸಚಿವರು ಏನು ಮಾಡುತ್ತಿದ್ದಾರೆ? ಎನ್ನತಕ್ಕಂಥದ್ದನ್ನು ಈ ಸದನಕ್ಕೆ ತಿಳಿಸಿಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಸುಮಾರು 25 ಲಕ್ಷ ರೇಷನ್ ಕಾರ್ಡ್‌ಗಳನ್ನು ಹೊಂದಿರುವ ಎ.ಪಿ.ಎಲ್.ನವರು ಸುಮಾರು 1 ಲಕ್ಷ ರೇಷನ್ ಕಾರ್ಡ್‌ನವರು ಮಾತ್ರ ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದರು. ಅವರಿಗೂ ಕೂಡ ನಾವು subsidy ದರದಲ್ಲಿ ಕೊಡುತ್ತಿದ್ದೆವು. ಆದ್ದರಿಂದ ಸದ್ಯಕ್ಕೆ ಕೇಂದ್ರ ಸರ್ಕಾರದ ಆದೇಶದಂತೆ ಎ.ಪಿ.ಎಲ್., ಕಾರ್ಡ್ ಕೊಡುವುದನ್ನು ರದ್ದುಪಡಿಸಿದ್ದೇವೆ. ಸುಮಾರು 25 ಲಕ್ಷ ರೇಷನ್ ಕಾರ್ಡ್‌ದಾರರಲ್ಲಿ ಸುಮಾರು 1 ಲಕ್ಷ ಮಾತ್ರ ರೇಷನ್ ಕಾರ್ಡ್‌ನವರು ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದರು. ಇದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ತಾವು ಹೇಳಿದಂತೆ ರಾಜ್ಯ ಸರ್ಕಾರದಲ್ಲಿ ಇಷ್ಟೊಂದು ಜಾಸ್ತಿ ರೇಷನ್ ಕಾರ್ಡ್‌ಗಳಿವೆಯೆಂದು ಹೇಳುವುದಕ್ಕೆ ಕಾರಣವೇನೆಂದರೆ, ಕಾಲಕಾಲಕ್ಕೆ ಬಂದಂತಹ ಸರ್ಕಾರಗಳು ಈ ರೇಷನ್ ಕಾರ್ಡ್‌ಗಳನ್ನು ಹೆಚ್ಚಿಗೆ ಮಾಡಲು ಕಾರಣವಾಗಿದೆ. ಅದನ್ನು ವಿಚಾರ ಮಾಡಿ ಈಗ ಎಷ್ಟು ಜನ ಎ.ಪಿ.ಎಲ್.,ಗೆ ಒಳಪಡುವ ಜನ ಬಿ.ಪಿ.ಎಲ್.ನಲ್ಲಿ ಇದ್ದಾರೋ ಅವರನ್ನು ಎ.ಪಿ.ಎಲ್.,ಗೆ ತರುವಂತಹ ಆ ಪ್ರಯತ್ನದಲ್ಲಿ ಗೊಂದಲವಾಗಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಶೇ.20 ಎ.ಪಿ.ಎಲ್., ಕಾರ್ಡ್‌ನವರು ಬಿ.ಪಿ.ಎಲ್., ಕಾರ್ಡ್‌ನಲ್ಲಿದ್ದಾರೆ. ಇದನ್ನು ತೆಗೆಯುವ ಪ್ರಯತ್ನ ಮಾಡುವುದರಲ್ಲಿ ಸ್ವಲ್ಪ ಗೊಂದಲವಿದೆ. ನಾನು ಅದನ್ನು ಪರಿಷ್ಕರಣೆ ಮಾಡಿ ಒಂದೂ ಬಿ.ಪಿ.ಎಲ್., ಕಾರ್ಡ್‌ನವರಿಗೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಕೊಂಡು, detailed enquiry ಮಾಡಿ ಎ.ಪಿ.ಎಲ್., ಅನರ್ಹರು ಬಿ.ಪಿ.ಎಲ್‌ನಲ್ಲಿ ಎಷ್ಟು ಜನ ಇದ್ದಾರೋ ಅವರನ್ನು ಎ.ಪಿ.ಎಲ್.ಗೆ ಹಾಕುತ್ತೇವೆ. ಎ.ಪಿ.ಎಲ್ ಕಾರ್ಡ್ ರದ್ದುಮಾಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಅವರು ಹೇಳಲಿ.

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಹೇಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ರೇಷನ್ ಕಾರ್ಡ್ ಕೊಡಿ ಎಂದು ಹೇಳುವವರು ನಾವೇ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ನೇರವಾಗಿ ಉತ್ತರ ಹೇಳಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ರೇಷನ್ ಕಾರ್ಡ್ ಕೊಡಿ ಎಂದು ಹೇಳುವವರು ನಾವೇ, ಆ ರೇಷನ್ ಕಾರ್ಡ್ ಕೊಟ್ಟಿದ್ದು ಸರಿಯಿಲ್ಲ ಎಂದು ಹೇಳುವವರು ಕೂಡ ನಾವೇ. ಈಗ ನಾವು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಈ ಗೊಂದಲವನ್ನು ಪರಿಹಾರ ಮಾಡುವುದು ಗೊತ್ತಿದೆ, ಮಾಡುತ್ತೇವೆ. ಯಾವಾಗ ಮಾಡುತ್ತೇವೆಂದರೆ ಪರಿಪಕ್ವವಾಗಿ ಒಬ್ಬರು ಬಿ.ಪಿ.ಎಲ್., ಕಾರ್ಡ್‌ನವರಿಗೂ ತೊಂದರೆ ಇಲ್ಲದಂತೆ ಮಾಡಿದ ಮೇಲೆ ಯಾರು ಅನರ್ಹರು ಇದ್ದಾರೋ, ಅಂದರೆ ಎ.ಪಿ.ಎಲ್.ಗೆ ಹೋಗಬೇಕಾಗಿದ್ದಾರೋ ಅದನ್ನು ಸಂಪೂರ್ಣವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಚಾರ ಮಾಡಿ ಅದನ್ನು ಮಾಡುತ್ತೇವೆ. ಅದಾದ ಮೇಲೆ ಗೊಂದಲ ಬರದಂತೆ ನಾನು ನೋಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಪಡಿತರ ಚೀಟಿ ಕೇವಲ ಆಹಾರ ಧಾನ್ಯವನ್ನು ಪಡೆಯುವುದಕ್ಕೆ ಮಾತ್ರವಲ್ಲ. ಅದು ಒಂದು ಗುರುತಿನ ಚೀಟಿ ಕೂಡ ಆಗಿದೆ. ಆಸ್ಪತ್ರೆ ಇನ್ನಿತರೆ ಕಡೆಗಳಲ್ಲಿ ಕೊಡಲು ಅನುಕೂಲವಾಗಿದೆ. ಇದಕ್ಕೆ ಆಧಾರ್ ಕಾರ್ಡ್‌ನ ಜೋಡಣೆ ಕೂಡ ಮಾಡಿದ್ದೀರಿ. ಅದಕ್ಕೋಸ್ಕರವಾಗಿ ಎ.ಪಿ.ಎಲ್., ಕಾರ್ಡ್‌ಗಳನ್ನು ಕೂಡ ವರ್ಗೀಕರಣ ಮಾಡಿ, ಅದು ಕೂಡ ಒಳ್ಳೆಯದೆ. ಸಾಕಷ್ಟು ರೀತಿಯಲ್ಲಿ ಬೇರೆ ಬೇರೆ ಅನುಕೂಲ ಪಡೆಯುವುದಕ್ಕೆ ಆಗತಕ್ಕಂಥದ್ದನ್ನು ಯಾವ ಕಾಲಮಿತಿಯಲ್ಲಿ ಈ ಗೊಂದಲವನ್ನು ಸರಿಪಡಿಸುತ್ತೀರಿ ಮಾನ್ಯ ಸಚಿವರು ದಯಮಾಡಿ ಈ ಸದನಕ್ಕೆ ತಿಳಿಸಬೇಕೆಂದು ಕೋರಿಕೆ ಮಾಡುತ್ತೇನೆ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಕಳೆದ ಸುಮಾರು 20 ವರ್ಷಗಳಿಂದ ಇಲ್ಲಿಯವರೆಗೂ ಕೂಡ ಯಾವ್ಯಾವಾಗ ಪರಿಷ್ಕರಣೆ ಆಗುತ್ತದೋ ಆ ಗೊಂದಲಗಳಾಗಿ ನಿಂತಿದೆ. ಇದು 2013ರಲ್ಲಿ ಜಾರಿಗೆ ಬಂದಾಗಿನಿಂದಲೂ ಕೂಡ ಇದೇ ರೀತಿ ಆಗಿದೆ. ಎಲ್ಲಾ ರಾಜಕೀಯ ಪಕ್ಷಗಳು ಇದಕ್ಕೆ ಕಾರಣ ಎಂದು ಹೇಳಬಹುದು. ನಾನು ಕಾಂಗ್ರೆಸ್ ಅಥವಾ ಬಿ.ಜೆ.ಪಿ ಎಂದು ಹೇಳುವುದಿಲ್ಲ. ನಾವು ರೇಷನ್ ಕಾರ್ಡ್ ಕೊಡುತ್ತೇವೆ. ನಾವು ಎ.ಪಿ.ಎಲ್., ಕಾರ್ಡ್‌ಅನ್ನು ನಿಲ್ಲಿಸುತ್ತೇವೆ. ನಾವು ಎ.ಪಿ.ಎಲ್.,ಗೆ transfer ಮಾಡಿದ್ದಕ್ಕಾಗಿ ಗೊಂದಲ ಮಾಡಿದ್ದಾರೆ. ಆದ್ದರಿಂದ ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿದ್ದೇನೆ. ಇದಕ್ಕೆ ಸ್ವಲ್ಪ ಸಮಯ ತೆಗೆದುಕೊಂಡು ಬಿ.ಪಿ.ಎಲ್., ನವರಿಗೆ ಒಬ್ಬರಿಗೂ ತೊಂದರೆಯಾಗದಂತೆ ಮಾಡಿದ ನಂತರ ಎ.ಪಿ.ಎಲ್., ಕಾರ್ಡ್‌ಗಳನ್ನೂ ಪರಿಷ್ಕರಣೆ ಮಾಡುತ್ತೇವೆ. ಕೆಲವರು ಬಿ.ಪಿ.ಎಲ್., ಕಾರ್ಡ್ ಹೊಂದಿರುವುದರಿಂದ ಅದನ್ನು ಎ.ಪಿ.ಎಲ್.,ಗೆ ವರ್ಗಾವಣೆ ಮಾಡುತ್ತೇವೆ. ತಾವು ಹೇಳಿದಂತೆ ಭಾರತ ದೇಶದಲ್ಲಿ ಆರ್ಥಿಕವಾಗಿ ಭದ್ರವಾಗಿ ಇರತಕ್ಕಂಥದ್ದು, ಎರಡನೆಯ ರಾಜ್ಯ ಮಹಾರಾಷ್ಟ್ರ. ಮಹಾರಾಷ್ಟ್ರ

ಹೊರತುಪಡಿಸಿದರೆ, ಇಲ್ಲಿ below poverty line ಕಡಿಮೆ ಇದೆ. ಆದರೆ ದಕ್ಷಿಣ ಭಾರತದಲ್ಲಿ ಇರುವಂತಹ ರಾಜ್ಯಗಳಲ್ಲಿ ನೋಡಿದಾಗ ಎಲ್ಲೂ ಕೂಡ ಶೇ.50 ಬಿ.ಪಿ.ಎಲ್., ಕಾರ್ಡ್ ಇಲ್ಲ. ಆಂಧ್ರಪ್ರದೇಶವಾಗಲೀ, ತೆಲಂಗಾಣವಾಗಲೀ, ತಮಿಳುನಾಡು ಆಗಲೀ ಅಥವಾ ಕೇರಳವಾಗಲೀ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಶೇ.65 ರಿಂದ ಶೇ.70 ರವರೆಗೂ ಕೂಡ below poverty line ಇದೆ. ಅದು correct ಇಲ್ಲವೆಂದು ತಮಗೆಲ್ಲರಿಗೂ ಮಾಹಿತಿ ಇದೆ. ಈಗ ಮಾನ್ಯ ಸದಸ್ಯರು ಕೂಡ ಅದನ್ನೇ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ. ಇದನ್ನು ಪರಿಷ್ಕರಣೆ ಮಾಡಬೇಕಾದರೆ ಪಕ್ಷಾತೀತವಾಗಿ ಸಹಕಾರ ಕೊಡಬೇಕು. ಆಗ ಇದನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ಮಾನ್ಯ ಸಭಾಪತಿಯವರೇ, ನಮಸ್ಕಾರ.

**ಪ್ರಶ್ನೆ ಸಂಖ್ಯೆ.118**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಹಳಷ್ಟು ದಿನಗಳಿಂದ ಈ ಕೆಲಸವು ಪ್ರಗತಿ ಹೊಂದದ ಕಾರಣಕ್ಕಾಗಿ ನಾನು ಪದೇಪದೇ ಈ ಒಂದು ಪ್ರಶ್ನೆಯನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಕೇಳುತ್ತಿದ್ದೇನೆ. ಮೊದಲನೆಯದಾಗಿ, ಕರ್ನಾಟಕದಲ್ಲಿ ಆಯುರ್ವೇದಿಕ್ ಕಾಲೇಜ್‌ಗಳಿವೆ. ಆಯುಷ್ ಇಲಾಖೆಯಿಂದ ಒಟ್ಟು 110 ಯು.ಜಿ., ಕಾಲೇಜ್‌ಗಳಿವೆ ಮತ್ತು 25 ಪಿ.ಜಿ., ಕಾಲೇಜ್‌ಗಳಿವೆ. ಅದರಲ್ಲಿ 4 ಸರ್ಕಾರಿ ಕಾಲೇಜ್‌ಗಳು ಮಾತ್ರ ಯು.ಜಿ ಕಾಲೇಜ್ 3 ಪಿ.ಜಿ., ಕಾಲೇಜ್‌ಗಳು. ನಮ್ಮ ರಾಜ್ಯದಲ್ಲಿ ಸರ್ಕಾರದಿಂದ ಆಯುಷ್ ಇಲಾಖೆಯಿಂದ ನಡೆಯತಕ್ಕಂಥ ಆಯುರ್ವೇದಿಕ್ ಕಾಲೇಜ್. 2010ನೇ ಇಸವಿಯಲ್ಲಿ ನನ್ನ ತಂದೆಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ರವರು ಸಭಾಪತಿಯವರಾದಾಗ ಶಿವಮೊಗ್ಗದಲ್ಲಿ ಒಂದು ಆಯುರ್ವೇದಿಕ್ ಕಾಲೇಜ್‌ನ್ನು ಪ್ರಾರಂಭ ಮಾಡಬೇಕೆಂದು ಪ್ರಸ್ತಾಪವನ್ನು ಇಟ್ಟರು. ಅದಾದ ನಂತರ 2020ರಲ್ಲಿ ಶಿವಮೊಗ್ಗದಲ್ಲಿ ಆಯುರ್ವೇದಿಕ್ ಕಾಲೇಜ್ ಕೂಡ ಪ್ರಾರಂಭವಾಯಿತು. ಅದೇ ವರ್ಷ ಮತ್ತೆ ಆಯುರ್ವೇದಿಕ್ ಒಂದು ಯೂನಿವರ್ಸಿಟಿ ಕರ್ನಾಟಕದಲ್ಲಿ ಆಗಬೇಕು ಅದು ಶಿವಮೊಗ್ಗದಲ್ಲೇ ಆಗಬೇಕೆಂದು ಕೂಡ ಪ್ರಯುತ್ನ ಆಯಿತು. ಅದು 2011 ನೇ ಇಸವಿಯಲ್ಲಿ sanction ಕೂಡ ಆಯಿತು. ಸನ್ಮಾನ್ಯ ಯಡಿಯೂರಪ್ಪನವರು 2011ನೇ ಇಸವಿಯಲ್ಲಿ ಶಿವಮೊಗ್ಗದಲ್ಲಿ ಆಯುರ್ವೇದಿಕ್ ಯೂನಿವರ್ಸಿಟಿ ಆಗಬೇಕೆಂದು ಅದಕ್ಕೆ 100 ಎಕರೆ ಜಾಗವನ್ನು ಕೂಡ ಸೋಗಾನೆ ಗ್ರಾಮದ ಸರ್ವೇ ನಂಬರ್‌ನಲ್ಲಿ ಕೊಟ್ಟಿದ್ದಾರೆ.

(ಮುಂದು)

(702)09.12.2024/11.50/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಮುಂದು):**

ಅದಾದ ಮೇಲೆ 14 ವರ್ಷವಾಯಿತು, ನಾವು 15ನೇ ವರ್ಷಕ್ಕೆ ಬರುತ್ತಿದ್ದೇವೆ. ಈಗಲೂ ಕೂಡ 100 ಎಕರೆ ಜಾಗದಲ್ಲಿ ಅನಧಿಕೃತವಾಗಿದ್ದಂತಹ ಒಂದಷ್ಟು ಬಗರ್‌ಹುಕುಂ ಸಾಗುವಳಿದಾರರಿಗೆ ಪರಿಹಾರವನ್ನೂ ಕೊಟ್ಟಿದೆ. ಈಗ ಇವರು ಉತ್ತರದಲ್ಲಿ ಹೊಸ ಆಯುರ್ವೇದ ವಿಶ್ವವಿದ್ಯಾಲಯ ಸ್ಥಾಪಿಸಲು 8 ಎಕರೆ 10 ಗುಂಟೆ ಜಮೀನು ಲಭ್ಯವಿರುತ್ತದೆ ಎಂದು ಹೇಳಿದ್ದಾರೆ. 33 ಜನ ಬಗರ್‌ಹುಕುಂ ಸಾಗುವಳಿದಾರರಿಗೆ ಪರಿಹಾರವನ್ನು ಕೊಟ್ಟಾಗಿದೆ. ಆದರೆ ಇವರು ನಮ್ಮ ಹತ್ತಿರ 8 ಎಕರೆ 10 ಗುಂಟೆ ಜಮೀನಿದೆ ಎಂದು ಉತ್ತರ ಕೊಡುತ್ತಾರೆ. ಇಲ್ಲಿಯವರೆಗೂ ಅಲ್ಲಿ ಒಬ್ಬ ವಿಶೇಷಾಧಿಕಾರಿಯ ನೇಮಕವಾಗಿಲ್ಲ. ಜಾಗವನ್ನು ತೆಗೆದುಕೊಂಡು ಅಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಆಗುತ್ತಿಲ್ಲ. ಸುಮ್ಮನೇ ನಾವು ಆಯುರ್ವೇದಿಕ್ ಬಗ್ಗೆ ಭಾಷಣ ಮಾಡುತ್ತೇವೆ. ಇಡೀ ದೇಶದಲ್ಲಿ NCISM (National Commission for Indian System of Medicine) ಪ್ರಕಾರ ಇರುವಂತಹ ಕಾಲೇಜುಗಳಲ್ಲಿ ಉತ್ತಮವಾದ ಹತ್ತು ಕಾಲೇಜುಗಳು

ಕರ್ನಾಟಕದಲ್ಲಿದೆ. ಭಾರತದಲ್ಲಿರುವಂತಹ ಹತ್ತು ಉತ್ತಮವಾದ ಕಾಲೇಜುಗಳಲ್ಲಿ ಮೂರು ಕಾಲೇಜುಗಳು ಕರ್ನಾಟಕದಲ್ಲಿದೆ. ಅವುಗಳ ಸ್ಥಿತಿ ಏನಾಗಿದೆ ಎಂದರೆ, ಮೊದಲನೇ ವರ್ಷಕ್ಕೆ intake 60 ಇತ್ತು, ಇವತ್ತು ಶಿಕ್ಷಕರುಗಳ ನೇಮಕಾತಿಯಾಗಿಲ್ಲ. ಶಿಕ್ಷಕರ ನೇಮಕಾತಿಯಾಗದಿದ್ದ ಕಾರಣಕ್ಕೆ 32ಕ್ಕೆ ಬಂದಿದೆ. ಆದ್ದರಿಂದ ಆಯುಷ್ ಇಲಾಖೆಗೆ ಅದರದ್ದೇ ಆದ ವಿಶ್ವವಿದ್ಯಾಲಯವನ್ನು ಮಾಡಿದರೆ ಮಾತ್ರ ಅದಕ್ಕೆ ಶಕ್ತಿ ಕೊಡುವುದಾಗುತ್ತದೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ್‌ರವರು ಶಿವಮೊಗ್ಗದಲ್ಲಿ ಆಯುರ್ವೇದ ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ಶಿವಮೊಗ್ಗದಲ್ಲಿ ಆಯುರ್ವೇದ ವಿಶ್ವವಿದ್ಯಾಲಯವನ್ನು 100 ಎಕರೆ ಜಾಗದಲ್ಲಿ ಮಾಡಬೇಕೆಂದು ತೀರ್ಮಾನವಾಗಿತ್ತು. ಅದಕ್ಕೆ ಸುಮಾರು 200 ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿತ್ತು. ತದನಂತರ 2021ನೇ ಇಸವಿಯಲ್ಲಿ 20 ಕೋಟಿ ರೂಪಾಯಿಗಳಿಗೆ ಅಲ್ಲಿ Administrative Block ನಿರ್ಮಾಣ ಮಾಡುವುದಕ್ಕೆ ಆಡಳಿತಾತ್ಮಕ ಅನುಮೋದನೆಯಾಗಿತ್ತು. ಆದರೆ ಅಲ್ಲಿರುವ ಜಾಗ ಬೇರೆ ಬೇರೆ ಉಪಯೋಗಕ್ಕೆ ಹೋಗಿದೆ. ಅವರು ಹೇಳಿದಂತೆ ಬಗರ್‌ಹುಕುಂ ವಿಚಾರ ಇರಬಹುದು, ವಸತಿ ಇಲಾಖೆಯವರಿಗೂ ಕೂಡ ಕೊಡಬೇಕೆಂದು ಮಾಡಿದ್ದಾರೆ. ಇವೆಲ್ಲವನ್ನೂ ಕಳೆದು ಉಳಿದಿರುವುದು 8 ಎಕರೆ ಎಂಬುದು ನಮಗಿರುವ ಮಾಹಿತಿ. ಜಿಲ್ಲಾಧಿಕಾರಿಯವರ ಜೊತೆ ಕೂಡ ಮಾತನಾಡಿದ್ದೇವೆ. ಅವರು ಕೂಡ ಇದನ್ನು ನೋಡಿಕೊಂಡು ಇನ್ನೂ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಅವರು ಸಹ ಹೇಳಿದ್ದಾರೆ. ಆದರೆ 8 ಎಕರೆಯಲ್ಲಿ ವಿಶ್ವವಿದ್ಯಾಲಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಕೇವಲ Administrative Block ಕಟ್ಟಿಬಿಟ್ಟು, ಒಂದು ವಿಶ್ವವಿದ್ಯಾಲಯ ಎಂದು ಹೇಳಿದರೆ ಸುಮಾರು 50 ಎಕರೆ ಇದಕ್ಕೇ ಬೇಕಾಗುತ್ತದೆ. ಅಲ್ಲಿ ಔಷಧೀಯ ಸಸ್ಯಗಳನ್ನು ಬೆಳೆಸುವುದಕ್ಕೆ ಜಾಗ ಬೇಕು. ಸಂಶೋಧನೆ ಮತ್ತು ಅಧ್ಯಯನ ಮಾಡುವುದಕ್ಕೆ ಕಟ್ಟಡ ಬೇಕು, ಜೊತೆಗೆ ಹಾಸ್ಟೆಲ್ ಬೇಕಾಗುತ್ತದೆ. 8 ಎಕರೆ ಜಾಗದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಗೈಡ್‌ಲೈನ್ಸ್ ಪ್ರಕಾರ ಇವತ್ತು ಒಂದು ಆಯುರ್ವೇದ ಕಾಲೇಜನ್ನು ನಿರ್ಮಾಣ ಮಾಡುವುದಕ್ಕೆ 10 ಎಕರೆ ಜಾಗ ಬೇಕೆಂದು ಹೇಳುತ್ತಾರೆ. ಈಗಿರುವ ಪರಿಸ್ಥಿತಿಯಲ್ಲಿ ಅಲ್ಲಿ ವಿಶ್ವವಿದ್ಯಾಲಯವನ್ನು ಮಾಡುವುದಕ್ಕಾಗುವುದಿಲ್ಲ. ಮುಂದೆ ಏನಾದರೂ ಬದಲಾವಣೆಯಾದರೆ, ಹೆಚ್ಚು ಜಾಗ ಸಿಕ್ಕಿದರೆ ಮುಂದೆ ನೋಡಬಹುದು. ಸದ್ಯದಲ್ಲಿ 8 ಎಕರೆ ಜಾಗದಲ್ಲಿ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೇ, ನಾನು ಸಹ ಆ ಜಾಗಕ್ಕೆ ಹೋಗಿದ್ದೇನೆ. ಸರ್ಕಾರದ ಇಚ್ಛಾಶಕ್ತಿ ಕೊರತೆಯಿಂದ; 8 ಎಕರೆ ಒಂದು ಜಾಗದಲ್ಲಿದೆ, ನಮ್ಮ ಕೈಗೆ ಅಲ್ಲಿ 35 ಎಕರೆ ಜಾಗ ಮಧ್ಯ ಮಧ್ಯ ಇದೆ. ವಸತಿ ಇಲಾಖೆಯು 2021ರಲ್ಲಿ ಹಿಂಪಡೆದಿದೆ. ವಸತಿ ಇಲಾಖೆಗೆ 38 ಎಕರೆ ಕೊಡಬೇಕೆಂದು ಏನು ತೀರ್ಮಾನವಾಯಿತು ಅದು ಸಹ withdraw ಆಗಿದೆ. ಟಿಪ್ಪಣಿಯಲ್ಲಿ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಅದನ್ನು ನೋಡಿ. 38 ಎಕರೆ ಜಾಗ ಏನು ಕೊಟ್ಟಿತ್ತು ಅದು ಸರ್ಕಾರಕ್ಕೆ withdraw ಮಾಡುವುದಕ್ಕೆ ಬರೆದಾಗಿದೆ. ಅಲ್ಲಿ ವಸತಿ

ಇಲಾಖೆಯ ಯಾವುದೇ ಕಾಮಗಾರಿ ಆಗಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಇತ್ತೀಚೆಗೆ ಇದರ ಬಗ್ಗೆ ಒಂದು ಮೀಟಿಂಗ್ ಮಾಡಿದ್ದರು. ದಯಮಾಡಿ, ಆಯುರ್ವೇದ ಕಾಲೇಜುಗಳಲ್ಲಿ ಶಿಕ್ಷಕರ ನೇಮಕಾತಿ ಆಗುತ್ತಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ನೇಮಕಾತಿ ಮಾಡುವುದಕ್ಕೋಸ್ಕರ ಕಾಲೇಜುಗಳನ್ನು ನಿರ್ಮಾಣ ಮಾಡುವುದಕ್ಕೆ ಹೋದರೆ ಅದು ಸರಿಯಾದಂತಹ ಉದ್ದೇಶವಾಗುವುದಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ನಾವು ಇರುವಂತಹ ವ್ಯವಸ್ಥೆಗಳನ್ನು ಸುಧಾರಣೆ ಮಾಡಿಕೊಳ್ಳುವುದನ್ನು ನೋಡಬೇಕು. ಕೇವಲ ವಿಶ್ವವಿದ್ಯಾನಿಲಯ ಮಾಡುತ್ತೇವೆ, ಅದಕ್ಕೆ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಮಾಡಿದರೆ ಅದೊಂದು ಬಿಳಿಯಾನೆಯಾಗಬಾರದು. ಸರ್ಕಾರದ ಸಂಪನ್ಮೂಲವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕೇ ಹೊರತು ಯಾವುದೋ ಪ್ರತಿಷ್ಠೆಗಳಿಗೆ ಉಪಯೋಗ ಮಾಡುವುದಕ್ಕೆ ಹೋಗಬಾರದು. ನಿಜವಾದಂತಹ ಉಪಯೋಗವಿದ್ದರೆ, ವಿಶ್ವವಿದ್ಯಾಲಯ ನಿರ್ಮಾಣ ಮಾಡಿ ಇಡೀ ವ್ಯವಸ್ಥೆಗೆ ಬಹಳ ಅನುಕೂಲವಾಗುತ್ತದೆ, ಅದರ ಅವಶ್ಯಕತೆ ಏನು, ಬೇಡಿಕೆ ಏನು ಎಂಬುದನ್ನೆಲ್ಲಾ ವೈಜ್ಞಾನಿಕವಾಗಿ ಚರ್ಚೆ ಮಾಡಿ ತದನಂತರ ಮುಂದೆ ಯಾವ ಹೆಜ್ಜೆಯನ್ನಿಡಬೇಕೆಂದು ತೀರ್ಮಾನ ಮಾಡೋಣ. ಹಿಂದೆ ಒಂದು ತೀರ್ಮಾನವಾಗಿತ್ತು ಅದನ್ನು ಈಗ ಮಾಡಲೇಬೇಕೆಂದು ಹಠ ಹಿಡಿಯುವುದು ಬೇಕಾಗಿಲ್ಲ. ಉಪಯೋಗವಾಗುವುದಿದ್ದರೆ ಯಾವುದಾದರೂ ದಾರಿಯನ್ನು ಹುಡುಕೋಣ. ಇದರಿಂದ ಇಡೀ ವ್ಯವಸ್ಥೆಗೆ ಅನುಕೂಲವಾಗುತ್ತದೆ, ಒಂದು ಕ್ಷೇತ್ರಕ್ಕೆ ಅನುಕೂಲವಾಗುತ್ತದೆಂದರೆ ಖಂಡಿತವಾಗಿಯೂ ಮಾಡೋಣ. ಆದರೆ ಸುಮ್ಮನೇ ನಾವು ಯಾವುದೋ ಒಂದು ಕಾರಣಕ್ಕೆ ಮಾಡಿ; ಈಗ ನಮ್ಮ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾಲಯಗಳು ಏನೂ ಉಪಯೋಗ ಇಲ್ಲದೇ ಬಿದ್ದಿವೆ ಎಂಬುದು ತಮಗೇ ಗೊತ್ತಿದೆ. ಅಲ್ಲಿ ಸಿಬ್ಬಂದಿಗಳಿಲ್ಲ, ಅಗತ್ಯವಾಗಿರುವ ಸೌಲಭ್ಯಗಳಿಲ್ಲ. ಹೀಗೆ ಅನೇಕ ಸಮಸ್ಯೆಗಳಿವೆ. ಈಗ ಇನ್ನೊಂದು ವಿಶ್ವವಿದ್ಯಾಲಯವನ್ನು ರಚನೆ ಮಾಡಿ ಅದನ್ನು ಕೂಡ ಹಾಗೇ ಬಿಟ್ಟರೆ ಹೇಗೆ? ಅದಕ್ಕೋಸ್ಕರ ನಾನು ಖಂಡಿತವಾಗಿಯೂ ಮಾನ್ಯ ಸದಸ್ಯರಾದ ಅರುಣ್‌ರವರಿಗೆ ಹೇಳುತ್ತೇನೆ, ಬೇಕಾದರೆ ಇನ್ನೊಮ್ಮೆ ಕುಳಿತು ಚರ್ಚೆ ಮಾಡೋಣ. ಇದರ ಅಗತ್ಯತೆ, ಅವಶ್ಯಕತೆ ಎಲ್ಲವನ್ನು ಕೂಡ ನೋಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ.

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಇದರ ಬಗ್ಗೆ ಮಾನ್ಯ ಸಚಿವರು ನಿಮ್ಮ ಜೊತೆ ಮಾತನಾಡುತ್ತಾರೆ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಚಿವರೇ, ವಿಶ್ವವಿದ್ಯಾಲಯದ ವಿಚಾರ ಆಮೇಲೆ. ಈಗಿರುವಂತಹ ಕಾಲೇಜುಗಳಿಗೆ ನಮ್ಮದು 60 intake ಇತ್ತು, ಶಿಕ್ಷಕರು ಇದ್ದರು. ಇಡೀ ಕರ್ನಾಟಕದಲ್ಲಿರುವಂತಹ 4 ಸರ್ಕಾರಿ ಯು.ಜಿ. ಕಾಲೇಜುಗಳಲ್ಲಿ ಇದೇ ಸಮಸ್ಯೆ ಇದೆ. 60 intake ಇದ್ದದ್ದು ಈ ವರ್ಷ ಅಂದರೆ 2024-25ರಲ್ಲಿ 32 ಆಗಿದೆ. ಏಕೆಂದರೆ, ನಮ್ಮ ಹತ್ತಿರ ಶಿಕ್ಷಕರಿಲ್ಲ. ಅತಿಥಿ ಶಿಕ್ಷಕರಿಗೆ ಏನು ಸಾಮಾಜಿಕ ಭದ್ರತೆಯನ್ನು ಕೊಡಬೇಕು ಅದನ್ನು ಮಾಡುವುದಕ್ಕಾಗುತ್ತಿಲ್ಲ. 11 ತಿಂಗಳಿಗೂ ಅವರನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಹೀಗೆ ಅತಿಥಿ ಶಿಕ್ಷಕರಿಲ್ಲ, ಖಾಯಂ ಸಿಬ್ಬಂದಿಗಳಿಲ್ಲ. ಖಾಲಿಯಿರುವ ಹುದ್ದೆಗಳಿಗೆ ಪರಿಹಾರ ಮಾಡಲಿಲ್ಲವೆಂದರೆ. . . .

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಖಂಡಿತವಾಗಿಯೂ ನೋಡುತ್ತೇವೆ. ಅವರು ಬೇರೆ ವಿಚಾರಗಳನ್ನು ಹೇಳಿದ್ದಾರೆ, ಖಂಡಿತವಾಗಿಯೂ ಅದರ ಬಗ್ಗೆ ಗಮನಹರಿಸಿ anyway ಈ ಸದನ ಮುಗಿದ ನಂತರ ಇದರ ಬಗ್ಗೆ ಇನ್ನೊಂದು ಸಲ ಚರ್ಚೆ ಮಾಡೋಣ. ಇದನ್ನು ಹೇಗೆ ಸುಧಾರಣೆ ಮಾಡುವುದಕ್ಕಾಗುತ್ತದೆ ಎಂಬುದನ್ನು ಕುಳಿತುಕೊಂಡು ಮಾತನಾಡೋಣ.

**ಪ್ರಶ್ನೆ ಸಂಖ್ಯೆ: 39**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಇದ್ದದ್ದು, ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪದವಿಯನ್ನು ಪಡೆದಿದ್ದಾರೆ ಎನ್ನುವ ಮಾಹಿತಿ ಕೇಳಿದ್ದೆ. ಪದವಿ ಪಡೆದಂತಹವರಿಗೆ ಸರ್ಕಾರದ ಯೋಜನೆಯಾದಂತಹ 'ಯುವನಿಧಿ' ಯೋಜನೆಯಲ್ಲಿ ಎಷ್ಟು ಜನರಿಗೆ ಯುವನಿಧಿಯನ್ನು ವಿತರಣೆ ಮಾಡಲಾಗಿದೆ ಎಂದು ಕೇಳಿದ್ದೆ. ಮಾನ್ಯ ಸಚಿವರು ಉತ್ತರದಲ್ಲಿ ಬರೀ ಪದವಿಯನ್ನು ಪಡೆದಂತಹವರು ಡಿಪ್ಲೊಮಾ ಅಭ್ಯರ್ಥಿಗಳು ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದಿರುವವರನ್ನು ಬಿಟ್ಟು ಒಟ್ಟು ಪದವೀಧರರ ಸಂಖ್ಯೆ ಸುಮಾರು 8,87,395 ಎಂದು ಇದೆ. ಅದರಲ್ಲಿ ಯುವನಿಧಿಯನ್ನು 1,81,690 ಜನ ಪದವೀಧರರು ಅದಕ್ಕೆ ನೋಂದಣಿ ಮಾಡಿದ್ದರೂ ಕೂಡ 1,45,978 ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರಲ್ಲಿ ನನ್ನದು ಎರಡು ಪ್ರಶ್ನೆಗಳಿವೆ. ಡಿಪ್ಲೊಮಾ ಮತ್ತು ಸ್ನಾತಕೋತ್ತರ ಪದವಿ ಎರಡೂ ಸೇರಿದರೆ ಇದು 12-13 ಲಕ್ಷದ ತನಕ ಹೋಗುತ್ತದೆ. ಅಷ್ಟು ಜನ ಪದವೀಧರರು ಇದ್ದರೂ ಕೂಡ;

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ಏನಾಗಬೇಕೆಂದು ಹೇಳಿ, ಭಾಷಣ ಮಾಡಬೇಡಿ.

**ಶ್ರೀ ಕೆ.ಎಸ್. ನವೀನ್:-** ಈಗ ಕೊಟ್ಟಿರುವುದು ಕೇವಲ 10-12% ಮಾತ್ರ ನೋಂದಣಿಯಾಗಿದೆ. ಅವರಿಗೆ ಇದು ಪ್ರತಿ ತಿಂಗಳೂ ಹೋಗುತ್ತಿದೆ. ಪತ್ರಿಕಾ ವರದಿಯಲ್ಲಿ ಬಂದಂತೆ ಜುಲೈ ತಿಂಗಳಿನಲ್ಲಿ 1,20,000 ಪದವೀಧರರಿಗೆ ರೂ. 38.50 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ತಾವು ಪ್ರತಿ ತಿಂಗಳೂ ಕೊಡುತ್ತಿದ್ದೀರಿ. ನೋಂದಣಿ ಏಕಿಷ್ಟು ಕಡಿಮೆಯಾಗುತ್ತಿದೆ? ಇಡೀ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಸರಾಸರಿ ಶೇ.20ಕ್ಕಿಂತ ಹೆಚ್ಚಿದೆ.

**ಡಾ: ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನವೀನ್‌ರವರು ಕೇಳಿರುವ ಪ್ರಶ್ನೆಗೆ ಬಹಳ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ರಾಜ್ಯದಲ್ಲಿ 2022-23 ಮತ್ತು 2023-24ನೇ ಸಾಲಿನಲ್ಲಿ ಎಷ್ಟು ಜನ ಪದವೀಧರರಿದ್ದಾರೆ ಎಂಬ ಪ್ರಶ್ನೆಗೆ ಸುಮಾರು 8,87,395 ಎಂದು ಉತ್ತರ ಕೊಟ್ಟಿದ್ದೇನೆ.

(ಮುಂದು)

(703) 9.12.2024/12.00/ಹೆಚ್‌ವಿ:ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ|| ಶರಣಪ್ರಕಾಶ್ ಪಾಟೀಲ್ (ಮುಂದು):**

ಸನ್ಮಾನ್ಯ ಸಭಾಪತಿಯವರೇ, ಇಷ್ಟು ಜನ ಪದವೀಧರರು ಮತ್ತು ಡಿಪ್ಲೋಮಾ ಅಭ್ಯರ್ಥಿಗಳಲ್ಲಿ ಕೇವಲ 1,81,699 ಜನರು ಮಾತ್ರ "ಯುವ ನಿಧಿ" ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂದು

ಮಾನ್ಯ ಸದಸ್ಯರು ಕೇಳಿದ್ದಾರೆ. ಅವರ ಮತ್ತು ಸದನದ ಮಾಹಿತಿಗಾಗಿ ಹೇಳುವುದಾದರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಪಂಚ ಗ್ಯಾರಂಟಿಗಳನ್ನು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ 2023-24ನೇ ಸಾಲಿನಲ್ಲಿ ಯಾವ ವಿದ್ಯಾರ್ಥಿಗಳು ಪದವಿಯಲ್ಲಿ ತೇರ್ಗಡೆ ಹೊಂದಿ ಆರು ತಿಂಗಳುಗಳಾಗಿರುತ್ತದೆ ಮತ್ತು ಯಾರು ನೌಕರಿ ಸಿಗದೇ ಕೆಲಸಕ್ಕೆ ಹೋಗುತ್ತಿರುವುದಿಲ್ಲ, ಅವರು "ಯುವ ನಿಧಿ" ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಳ್ಳುವುದಕ್ಕೆ ಅರ್ಹರಾಗಿರುತ್ತಾರೆಂದು ಹೇಳಿದ್ದೆವು, ಅದರ ಪ್ರಕಾರವಾಗಿ 2022-23ನೇ ಸಾಲಿನಲ್ಲಿ ಯಾರು ತೇರ್ಗಡೆ ಹೊಂದಿರುತ್ತಾರೆ ಅವರು ಈ ಯೋಜನೆಯಡಿ ನೋಂದಣಿ ಮಾಡಿಕೊಳ್ಳುವುದಕ್ಕೆ ಅರ್ಹರಾಗಿರುವುದಿಲ್ಲ. ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೇ, 2023-24ನೇ ಸಾಲಿನಿಂದ ಪರಿಗಣಿಸುವುದಾದರೇ ಸುಮಾರು 5,26,623 ಜನ ಅಭ್ಯರ್ಥಿಗಳು ಈ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ಅರ್ಹರಿದ್ದಾರೆ. ಇದರಲ್ಲಿ 1,81,699 ಜನ ಅಭ್ಯರ್ಥಿಗಳು ಈಗಾಗಲೇ ನೋಂದಣಿಯನ್ನು ಮಾಡಿಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂತೆ ಇದರ ಸರಾಸರಿ ಶೇಕಡಾ 40ಕ್ಕೂ ಹೆಚ್ಚಾಗಿದೆ. ಉಳಿದಂತೆ "ಯುವ ನಿಧಿ" ಯೋಜನೆ ಎನ್ನುವ one of the Guarantees ಏನಿದೆ, it is a self route claim. ಅಂದರೇ, ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಯಾರ್ಯಾರು ಅರ್ಜಿಯನ್ನು ಹಾಕಿದ್ದಾರೆ ಅವರೆಲ್ಲರಿಗೂ "ಯುವ ನಿಧಿ" ಯೋಜನೆಯಡಿಯಲ್ಲಿ ನೇರ ನಗದು ವರ್ಗಾವಣೆ ಮೂಲಕ ನಿರುದ್ಯೋಗ ಭತ್ಯೆಯನ್ನು ಪಾವತಿಸುವಂತಹ ಪ್ರಯತ್ನ ನಮ್ಮದಾಗಿದೆ. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ ಮೇಲೆ ಕೆಲವೊಂದು ಅಂಶಗಳನ್ನು ಪರಿಶೀಲಿಸಲಾಗುತ್ತದೆ. NAD(National Academic Depository) ಅಡಿಯಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳು ಪದವಿ ಪ್ರಮಾಣ ಪತ್ರವನ್ನು ಅಲ್ಲಿ ಡಿಪಾಸಿಟ್ ಮಾಡಿರುತ್ತಾರೆ. ಇದು ಆಟೋಮೆಟಿಕ್ ಆಗಿದೆ. ಯಾರೂ ಹೋಗಿ ವೈಯಕ್ತಿಕವಾಗಿ ಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಯಾವ ಅಭ್ಯರ್ಥಿ "ಯುವ ನಿಧಿ" ಯೋಜನೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ತಕ್ಷಣ ನಾವು NAD ಯಿಂದ ಅವರ ಪದವಿ ಪ್ರಮಾಣ ಪತ್ರವನ್ನು ತರಿಸಿಕೊಳ್ಳುತ್ತಿದ್ದೇವೆ. ಹೀಗೆ ಸುಮಾರು 1,45,978 ಪದವೀಧರರ ಪದವಿ ಪ್ರಮಾಣ ಪತ್ರಗಳನ್ನು ತರಿಸಿಕೊಂಡು ಅವರೆಲ್ಲರಿಗೂ "ಯುವ ನಿಧಿ" ಯೋಜನೆಯಡಿಯಲ್ಲಿ ನೇರ ನಗದು ವರ್ಗಾವಣೆ ಮೂಲಕ ನಿರುದ್ಯೋಗ ಭತ್ಯೆಯನ್ನು ಪಾವತಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 35,721 ಜನರಿಗೆ ಇಲ್ಲಿಯವರೆಗೆ ಏತಕ್ಕೋಸ್ಕರ "ಯುವ ನಿಧಿ" ಯೋಜನೆಯಡಿಯಲ್ಲಿ ಭತ್ಯೆ ಸಿಕ್ಕಿಲ್ಲ ಎನ್ನುವುದು ಮಾನ್ಯ ಸದಸ್ಯರ ಎರಡನೆಯ ಪ್ರಶ್ನೆಯಾಗಿದೆ. 16,891 ಅಭ್ಯರ್ಥಿಗಳ ಎಸ್.ಎಸ್.ಎಲ್.ಸಿ., ಸರ್ಟಿಫಿಕೇಟ್ SAT (Scholastic Assessment Test) ನಲ್ಲಿ ಡಿಪಾಸಿಟ್ ಆಗದೇ ಹೋಗಿರುವ ಹಿನ್ನೆಲೆಯಲ್ಲಿ ಅದರ ಭೌತಿಕ ಪರಿಶೀಲನೆಗಾಗಿ ಡಿ.ಡಿ.ಪಿ.ಐ., ನವರಿಗೆ ಕಳುಹಿಸಿಕೊಡಲಾಗಿರುತ್ತದೆ. ಡಿ.ಡಿ.ಪಿ.ಐ., ನವರ ಬಳಿ ಸುಮಾರು 2,500 ಅರ್ಜಿಗಳು, ಡಿ.ಡಿ.ಪಿ.ಐ.,ನವರಿಂದ 10,000 ಅರ್ಜಿಗಳು ಮತ್ತು Employment Officers ಬಳಿ ಸುಮಾರು 2500 ಅರ್ಜಿಗಳು ಇವೆ. ಇವರುಗಳು ಅಭ್ಯರ್ಥಿಗಳನ್ನು ನೇರವಾಗಿ ಕರೆದು ಪರಿಶೀಲನೆ ಮಾಡಿ ಅವರಿಗೆ ಅಪ್ರೂವಲ್ ಕೊಡುವಂತಹ ಕೆಲಸವಾಗುತ್ತಿದೆ. ಕೆಲವೊಂದು ಪ್ರಕರಣಗಳಲ್ಲಿ ನಮ್ಮ

ಅಧಿಕಾರಿಗಳು ಕರೆದರೂ ಸಹ ಸಂಬಂಧಪಟ್ಟ ಅಭ್ಯರ್ಥಿಗಳು ಬಂದು ನಮ್ಮ ಅಧಿಕಾರಿಗಳನ್ನು ಸಂಪರ್ಕ ಮಾಡಿಲ್ಲ ಎನ್ನುವುದು ಒಂದು ಅಂಶವಾಗಿದೆ. ಇವರುಗಳ ಪೈಕಿ ಸುಮಾರು 18,238 ಜನರು UUCMS (Unified University & College Management System)ನಲ್ಲಿ ನೋಂದಾಯಿಸಿಕೊಂಡಿದ್ದಾರೆ. UUCMS ನಲ್ಲಿ ನೋಂದಾಯಿಸಿಕೊಂಡಿದ್ದಾರೆಂದರೆ ಅವರು ಉನ್ನತ ಶಿಕ್ಷಣಕ್ಕೆ ಹೋಗಿದ್ದಾರೆಂದು ಅರ್ಥವಾಗುತ್ತದೆ. ಉನ್ನತ ಶಿಕ್ಷಣದ ವ್ಯಾಸಂಗಕ್ಕೆ ಹೋಗಿರುವುದರಿಂದ ಆ 18,238 ಜನರು "ಯುವ ನಿಧಿ" ಯೋಜನೆಯನ್ನು ಪಡೆದುಕೊಳ್ಳುವುದಕ್ಕೆ ಅರ್ಹರಾಗಿರುವುದಿಲ್ಲ. ಇನ್ನುಳಿದಂತೆ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ., ಯಡಿಯಲ್ಲಿ ನೋಂದಾಯಿಸಿಕೊಂಡಿರುವವರು ಈ ಯೋಜನೆಯಡಿ ಭತ್ಯೆಯನ್ನು ಪಡೆದುಕೊಳ್ಳುವುದಕ್ಕೆ ಅರ್ಹರಾಗಿರುವುದಿಲ್ಲ. ಇದರ ಜೊತೆಗೆ ಸ್ವಯಂ ಘೋಷಣೆ ಕೊಟ್ಟಿರುವುದಿಲ್ಲ. ಈ ಯೋಜನೆಯಡಿಯಲ್ಲಿ ಪ್ರತಿ ತಿಂಗಳು ಸ್ವಯಂ ಘೋಷಣೆಯನ್ನು ಕೊಡಬೇಕಾಗಿರುತ್ತದೆ. ಆದರೇ, 318 ಜನರು " NO" ಎಂದು ಕೊಟ್ಟಿರುವುದರಿಂದ ಅವರುಗಳ ನೋಂದಣಿಯಾಗಿಲ್ಲ. ಒಟ್ಟಾರೆಯಾಗಿ ಹೇಳುವುದಾದರೇ, ಸುಮಾರು 1,45,978 ಜನರಿಗೆ "ಯುವ ನಿಧಿ" ಯೋಜನೆಯಡಿಯಲ್ಲಿ ನಿರುದ್ಯೋಗ ಭತ್ಯೆಯನ್ನು ಈಗಾಗಲೇ ನೀಡಲಾಗಿದೆ. ರೆಗ್ಯುಲರ್ ಆಗಿ ಪ್ರತಿ ತಿಂಗಳು ಭತ್ಯೆಯನ್ನು ನೀಡಲಾಗುತ್ತಿದೆ. ಈ ಯೋಜನೆಯ ಫಲಾನುಭವಿಗಳು ಪ್ರತಿ ತಿಂಗಳು ಮುಂದಿನ ತಿಂಗಳು ಭತ್ಯೆ ಬೇಕಾಗಿದೆಯೇ ಇಲ್ಲವೇ ಎನ್ನುವುದನ್ನು ಆನ್‌ಲೈನ್ ಮೂಲಕ " YES " ಅಥವಾ " NO" ಎಂದು ತಿಳಿಸಬೇಕಾಗುತ್ತದೆ. ಏಕೆಂದರೆ, ಅದರ ಆಯ್ಕೆಯನ್ನು ಅವರಿಗೆ ಬಿಡಲಾಗಿದೆ. ಕೆಲವರು " NO" ಎಂದು ತಿಳಿಸಿದ್ದಾರೆ ಅದನ್ನು " YES "ಎಂದು ಬದಲಾವಣೆ ಮಾಡಿಲ್ಲ. ಇದರಿಂದಾಗಿ ಸುಮಾರು 35,000 ಜನ ಅಭ್ಯರ್ಥಿಗಳ ಅರ್ಜಿಗಳು ಪೆಂಡಿಂಗ್‌ನಲ್ಲಿವೆ. ಅವರುಗಳು " YES " ಎಂದು ಬದಲಾವಣೆ ಮಾಡಿದ ಕೂಡಲೇ ಅವರಿಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ.

**ಶ್ರೀ ಕೆ.ಎಸ್.ನವೀನ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಸಹ ನಾನು ಒಂದು ಸ್ಪಷ್ಟೀಕರಣವನ್ನು ತಮ್ಮ ಮೂಲಕ ಕೇಳಲು ಬಯಸುತ್ತಿದ್ದೇನೆ. ಪ್ರತಿ ತಿಂಗಳು ಅರ್ಹ ಅಭ್ಯರ್ಥಿಗಳಿಗೆ ಹಣವನ್ನು ಸಂದಾಯ ಮಾಡಲಾಗುತ್ತಿದೆಯೇ? ಯಾವ ದಿನಾಂಕದಂದು ನೀಡಲಾಗುತ್ತಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಬಯಸುತ್ತಿದ್ದೇನೆ.

**ಡಾ॥ ಶರಣಪ್ರಕಾಶ್ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಪ್ರತಿ ತಿಂಗಳು ಕೊಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಲಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ಬಡ ಮಕ್ಕಳ ಸಹಾಯಕ್ಕೆ ಸರ್ಕಾರ ಬರಬೇಕಾಗುತ್ತದೆ. ಅವರಿಗೂ ಯುವನಿಧಿ ಯೋಜನೆಯನ್ನು ವಿಸ್ತರಿಸಬೇಕಾಗುತ್ತದೆ.

**ಡಾ॥ ಶರಣಪ್ರಕಾಶ್ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರುಗಳ ಉನ್ನತ ಶಿಕ್ಷಣ ಪೂರ್ಣಗೊಂಡ ನಂತರ ಅವರಿಗೂ ನೀಡಲಾಗುತ್ತದೆ.

**ಸಭಾಪತಿಯವರು:-** ಇದು ಪ್ರಶ್ನೋತ್ತರ ಸಮಯ, ಚರ್ಚೆಗೆ ಅವಕಾಶವಿಲ್ಲ. ಮುಂದಿನ ಪ್ರಶ್ನೆ ಮಾನ್ಯ ತಳವಾರ್ ಸಾಬಣ್ಣನವರದ್ದು.

**ಪ್ರಶ್ನೆ ಸಂಖ್ಯೆ 04**

**(ಉತ್ತರವನ್ನು ಲಗತ್ತಿಸಲಾಗಿದೆ)**

ಡಾ॥ **ತಳವಾರ್ ಸಾಬಣ್ಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾಗಿರುವ ಉತ್ತರವನ್ನು ನೀಡಿದ್ದಾರೆ ಅವರು ನೀಡಿರುವ ಉತ್ತರ ಸುಳ್ಳು ಎಂದು ನಾನು ಹೇಳುತ್ತಿಲ್ಲ ಆದರೆ, ಸತ್ಯಕ್ಕೆ ದೂರವಾಗಿರುವ ಉತ್ತರವನ್ನು ನೀಡಿದ್ದಾರೆ. ಈ ದಿನ ಬೆಳಗಾವಿ ನಗರದಲ್ಲಿ ಅಧಿವೇಶನ ನಡೆಯುತ್ತಿದೆ. ಬೆಳಗಾವಿ ನಗರದಲ್ಲಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ನಗರದಲ್ಲಿರುವ ಪ್ರಮುಖ ವಿಶ್ವವಿದ್ಯಾಲಯವಾಗಿದೆ. ಈ ವಿಶ್ವವಿದ್ಯಾಲಯ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿರುವ ರಾಣಿ ಚೆನ್ನಮ್ಮನ ಹೆಸರಿನಲ್ಲಿದೆ. ಇದು ಪ್ರಾರಂಭವಾಗಿ ಸುಮಾರು 15 ವರ್ಷಗಳಾದರೂ ಇನ್ನೂ ಸ್ವಂತ ಕಟ್ಟಡವನ್ನು ಹೊಂದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ನಾನು ಸದರಿ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಭೇಟಿ ನೀಡಿ, ಅಲ್ಲಿನ ವಾಸ್ತವಾಂಶಗಳನ್ನು ಪರಿಶೀಲನೆ ಮಾಡಿದ ನಂತರ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದ್ದರಿಂದಲೇ ಮಾನ್ಯ ಸಚಿವರು ನೀಡಿರುವ ಉತ್ತರ ಸತ್ಯಕ್ಕೆ ದೂರವಾಗಿದೆ ಎಂದು ಹೇಳಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ನಡೆದಿರುವ ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುತ್ತದೆ ಮತ್ತು ಈಗ ನಿರ್ಮಾಣ ಹಂತದಲ್ಲಿರುವ 10-12 ಕಟ್ಟಡಗಳು ಸೋರುತ್ತಿವೆ. ಇದರ ಕಾಮಗಾರಿಗಳು ಇನ್ನೂ ಮುಕ್ತಾಯಗೊಂಡಿಲ್ಲ. ಈ ಕಟ್ಟಡಗಳನ್ನು ಅವೈಜ್ಞಾನಿಕವಾಗಿ ರಚನೆ ಮಾಡಲಾಗಿದೆ. ಅಡ್ಮಿನಿಸ್ಟ್ರೇಷನ್ ಬಿಲ್ಡಿಂಗ್ ಅನ್ನು ಕೊನೆಗೆ ಹಾಕಿದ್ದಾರೆ ಮತ್ತು ಕ್ಯಾಂಪಸ್ ಅನ್ನು ಮೇನ್‌ರೋಡ್‌ಗೆ ಹತ್ತಿರದಲ್ಲಿ ಹಾಕಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

**ಡಾ॥ ಎಂ.ಸಿ.ಸುಧಾಕರ:-** ಸನ್ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾಲಯದ ಕಟ್ಟಡ ಕಾಮಗಾರಿಯನ್ನು ಸುಮಾರು 110 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭ ಮಾಡಲಾಗಿದೆ. ಹಿಂದೆ ಒಬ್ಬರು ವಿನ್ಯಾಸಗಾರರು ಈ ಕಟ್ಟಡ ರಚನೆಯನ್ನು ಮಾಡಿದ್ದರು ಅವರು ಕೈಬಿಟ್ಟ ನಂತರ ಬೇರೆ ವಿನ್ಯಾಸಗಾರರಿಂದ ಅದನ್ನು ಪೂರ್ಣಗೊಳಿಸಲಾಯಿತು.

ಕಳೆದ ವರ್ಷ ದಿನಾಂಕ:27.10.20223ರಂದು ನಾನು, ಸ್ಥಳೀಯ ಶಾಸಕರು ಮತ್ತು ಈ ಭಾಗದ ಮಂತ್ರಿಗಳಾಗಿರುವ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್‌ರವರು ಅಲ್ಲಿಗೆ ಭೇಟಿ ನೀಡಿದ್ದೆವು. ಆಗ ಒಂದು ಹಂತದ ಕೆಲಸ ಮುಗಿದಿತ್ತು. Expansion Joint ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಸುಮಾರು 40 ಮೀಟರ್‌ಗಿಂತ ಹೆಚ್ಚು ಉದ್ದದ ಸ್ಪ್ಯಾನ್ ಇರುವಂತಹ ಸಂದರ್ಭದಲ್ಲಿ Expansion Joint ಮಾಡಲಾಗುತ್ತದೆ ಮತ್ತು ಪಕ್ಕಪಕ್ಕದಲ್ಲಿಯೇ ಕಾಲಂಗಳನ್ನು ಹಾಕಲಾಗುತ್ತದೆ. ಪಕ್ಕಪಕ್ಕದಲ್ಲಿ ಕಾಲಂಗಳನ್ನು ಹಾಕಿದಾಗ, ಅಲ್ಲಿ ಗ್ಯಾಪ್ ಬರುತ್ತದೆ. ಇದರಿಂದ shuttering ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

**ಸಭಾಪತಿಯವರು:-** ಈಗ ಏನು ಮಾಡಬೇಕಾಗಿದೆ ಎನ್ನುವುದರ ಬಗ್ಗೆ ಹೇಳಿ.

**ಡಾ॥ ಎಂ.ಸಿ.ಸುಧಾಕರ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಲ್ಲಿಗೆ ಭೇಟಿ ನೀಡಿದ ವೇಳೆಯಲ್ಲಿ ಮಳೆಯಾಗಿರುತ್ತದೆ. ಆಗ ಸೋರಿಕೆಯಾಗಿರುವುದನ್ನು ನೋಡಿ, "ಕಳಪೆ ಕಾಮಗಾರಿ ನಡೆದಿದೆ" ಎಂದು ಹೇಳುತ್ತಿದ್ದಾರೆ. ಯೋಜನಾ ನಿರ್ವಹಣೆ ಸಲಹೆಗಾರರು ಇದ್ದಾರೆ. ಕಾಮಗಾರಿಯ ಎಲ್ಲ ಹಂತಗಳಲ್ಲಿ ಟೆಸ್ಟಿಂಗ್ ಮಾಡಲಾಗಿದೆ. ಅಲ್ಲಿಯೇ ಕಾಂಕ್ರಿಟ್ ಬ್ಲಾಕ್ ಮಾಡಿರುವುದರ ಟೆಸ್ಟಿಂಗ್ ರಿಪೋರ್ಟ್ ಇದೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವರದಿ ನನ್ನ ಬಳಿ ಇದೆ. ಕಟ್ಟಡ ಕಾಮಗಾರಿ ಪೂರ್ತಿಯಾದ ಸಂದರ್ಭದಲ್ಲಿ Expansion Joint ಅನ್ನು ಕವರ್ ಮಾಡುತ್ತಾರೆ. ಆಗ ಸೋರಿಕೆಗೆ ಅವಕಾಶವಿರುವುದಿಲ್ಲ.

ಮಾನ್ಯ ಸದಸ್ಯರು ಮಾತನಾಡುತ್ತಾ, ಅಡ್ಮಿನಿಸ್ಟ್ರೇಷನ್ ಬಿಲ್ಡಿಂಗ್ ಅನ್ನು ಕೊನೆಗೆ ಹಾಕಿದ್ದಾರೆ ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರ ಸದರಿ ಕಾಮಗಾರಿಗೆ ಚಾಲನೆಯನ್ನು ನೀಡಿದ ಸಂದರ್ಭದಲ್ಲಿ ಅವರು ಈ ವಿನ್ಯಾಸಕ್ಕೆ ಅನುಮೋದನೆಯನ್ನು ಕೊಟ್ಟಿದ್ದಾರೆ. ನಾವು ಅದಕ್ಕೆ ಅನುಮೋದನೆಯನ್ನು ಕೊಟ್ಟಿಲ್ಲ. ವರ್ಟಿಕಲ್ ಹೋಗಬೇಕಾಗಿತ್ತು. ಆದರೆ, ಗ್ರೌಂಡ್ ಮತ್ತು ಫಸ್ಟ್ ಫ್ಲೋರ್‌ಗೆ ಮಾತ್ರ ಡಿಸೈನ್ ಮಾಡಿದ್ದಾರೆ. ಡಿಸೈನ್‌ನಲ್ಲಿಯೇ ಲೋಪವಾಗಿದೆ.

**ಸಭಾಪತಿಯವರು:-** ಹಿಂದೆ ಯಾರಾದರೂ ಡಿಸೈನ್ ಮಾಡಿರಲಿ, ಈಗ ಅದನ್ನು ಸರಿ ಮಾಡುವುದಕ್ಕೆ ಏನು ಮಾಡಬೇಕೆಂದು ಹೇಳಿ.

**ಡಾ॥ಎಂ.ಸಿ.ಸುಧಾಕರ:-** ಸನ್ಮಾನ್ಯ ಸಭಾಪತಿಯವರೇ, ಕಾಮಗಾರಿ ಪೂರ್ಣಗೊಳ್ಳದೇ ಇರುವ ಸಂದರ್ಭದಲ್ಲಿ ಅವರು ಸದರಿ ಕಟ್ಟಡವನ್ನು ನೋಡಿದ್ದಾರೆ. ಆದ್ದರಿಂದ ಅವರಿಗೆ ಸೋರಿಕೆ ಕಂಡು ಬಂದಿದೆ. ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ಸಂದರ್ಭದಲ್ಲಿ ಕಂಡುಬಂದಿರುವ ಲೋಪಗಳನ್ನು ಈಗ ಸರಿಪಡಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ ಸದರಿ ವಿಶ್ವವಿದ್ಯಾಲಯದ ಈಗಿನ ಸ್ಥಿತಿಗತಿಯನ್ನು ನೋಡಿಕೊಂಡು ಬನ್ನಿ.

**ಶ್ರೀ ತಳವಾರ್ ಸಾಬಣ್ಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಲ್ಲಿಗೆ ಭೇಟಿ ನೀಡಿ, "ಅವೈಜ್ಞಾನಿಕವಾಗಿ ರಚನೆಗೊಂಡಿದೆ" ಎಂದು ಅವರೇ ಹೇಳಿದ್ದಾರೆ. ಈ ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣ ಕಾಮಗಾರಿಯ ಒಟ್ಟು ವೆಚ್ಚ 110 ಕೋಟಿ ರೂಪಾಯಿಗಳಾಗಿದೆ.

(ಮುಂದು)

(704) 9.12.2024 12.10 ಪಿಕೆ:ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ: ತಳವಾರ್ ಸಾಬಣ್ಣ (ಮುಂದು):**

ಹಣ ವಿಶ್ವವಿದ್ಯಾಲಯದ್ದಾಗಿದೆ. ಮ್ಯಾನೇಜ್‌ಮೆಂಟ್ ಸಚಿವರದ್ದಾಗಿದೆ. ಕಟ್ಟಡ ಕಟ್ಟಿರುವುದು ಸಹ ಇವರೇ ಆಗಿದ್ದಾರೆ. ಇದರಲ್ಲಿ ಎಷ್ಟು ಜನ ಮಿಕ್ಸ್ ಆಗಿದ್ದಾರೋ ಗೊತ್ತಿಲ್ಲ. ಇಲ್ಲಿ ಭ್ರಷ್ಟಾಚಾರ ಆಗಿದೆ; ಇದು ನ್ಯಾಯಾಂಗ ತನಿಖೆಗೆ ಒಳಪಡಬೇಕು. ನ್ಯಾಯಾಂಗ ತನಿಖೆ ಆಗದಿದ್ದರೆ ಕಿತ್ತೂರು ರಾಣಿ ಚೆನ್ನಮ್ಮನವರಿಗೆ ಕಪ್ಪು ಮಸಿ ಬಳಿದಂತಾಗುತ್ತದೆ ಎಂದು ನಾನು ನೇರವಾಗಿ; ಘಂಟಾಘೋಷವಾಗಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನೀವೆಲ್ಲರೂ ಇದರಲ್ಲಿ ಭಾಗಿಯಾಗಿದ್ದೀರಿ.

**ಡಾ:ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಗಳೆ, ನಮ್ಮ ಇಲಾಖೆಯಲ್ಲಿ ಪ್ರತ್ಯೇಕವಾದ ಇಂಜಿನಿಯರಿಂಗ್ ವಿಭಾಗ ಇಲ್ಲ. ಹಾಗಿದ್ದಾಗ ನಾವು KHB, Health & Family Welfare Department, PWD ಮತ್ತು RITES ಈ ರೀತಿಯ ಹಲವಾರು ಸಂಸ್ಥೆಗಳ ಸಹಕಾರ ತೆಗೆದುಕೊಳ್ಳುತ್ತೇವೆ; ಆ ಮುಖಾಂತರ ಇವೆಲ್ಲವೂ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ Health & Family Welfare Departmentಗೆ ಕೊಟ್ಟಿರುವಂಥದ್ದು ಮಾನ್ಯ ದಿನೇಶ್ ಗುಂಡೂರಾವ್‌ರವರೂ ಅಲ್ಲ ಅಥವಾ ನಾನೂ ಅಲ್ಲ. ಹಿಂದಿನ ಸರ್ಕಾರದ ಮಂತ್ರಿಗಳ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಆಗಿದ್ದು ಅವರು ಏಜೆನ್ಸಿಗಳನ್ನು ಫಿಕ್ಸ್ ಮಾಡಿ ಕೊಟ್ಟಿದ್ದಾರೆ. ಇಲ್ಲಿ ಅವ್ಯವಹಾರವಾಗಿದೆ, ಇನ್ನೊಂದಾಗಿದೆ; ಮತ್ತೊಂದು ಆಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸಭಾಪತಿಯವರು ಹೇಳಿದ ಹಾಗೆ ನಾವೇ ಖುದ್ದಾಗಿ ಹೋಗೋಣ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರೂ ಕೂಡ ಬರುತ್ತಾರೆ. ನಾವು ಮೂವರು ಹೋಗಿ ಅಲ್ಲಿನ ವಸ್ತುಸ್ಥಿತಿ ಏನಿದೆ ಎನ್ನುವುದನ್ನು ನೋಡೋಣ. ಟೆಕ್ನಿಕಲ್ ಡೀಟೈಲ್ಸನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. Expansion joint ಇರುತ್ತದೆ; ಮತ್ತೊಂದು ಇರುತ್ತದೆ. ಮೇಲ್ಭಾಗದಲ್ಲಿ curing ಮಾಡಬೇಕಾಗುತ್ತದೆ. ಇವೆಲ್ಲ ಆದಮೇಲೆ ನಾವು ಭೇಟಿ ಕೊಡಬೇಕಾಗುತ್ತದೆ. ಕಾಮಗಾರಿ ನಡೆಯುವ ಹಂತದಲ್ಲಿ ಹೋಗಿ ನೋಡಿ, ಅಲ್ಲಿ ಸುಮ್ಮನೆ ಕಳಪೆ ಕಾಮಗಾರಿಯಾಗಿದೆ ಎಂದು ಹೇಳುವುದು ಸರಿಯಲ್ಲ.

**ಡಾ:ತಳವಾರ ಸಾಬಣ್ಣ:-** ಮಾನ್ಯ ಸಚಿವರಲ್ಲಿ ನಾನು ಗೌರವದಿಂದ ಕೇಳುವುದೇನೆಂದರೆ, ಮಾನ್ಯ ಸಚಿವರು ಭೇಟಿ ಮಾಡೋಣ ಎಂದು ಹೇಳುತ್ತಿದ್ದಾರೆ, ಆದರೆ ನಾನು ಪ್ರಸ್ತಾಪಿಸಿದ ವಿಷಯದ ಬಗ್ಗೆ ತನಿಖೆ ಆಗಬೇಕು ಅಲ್ಲವೇ? ನ್ಯೂನತೆಗಳನ್ನು ಸರಿಪಡಿಸಬೇಕು ಅಲ್ಲವೇ? ಆ ಭಾಗದ ಜನರ ಭವಿಷ್ಯವನ್ನು ಹಾಳು ಮಾಡುವಂಥದ್ದು ಆಗಬಾರದು.

**ಸಭಾಪತಿಯವರು:-** ನಿಮ್ಮನ್ನು ಜೊತೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಹೋಗಿ ವಿಸಿಟ್ ಮಾಡಿ.

**ಪ್ರಶ್ನೆ ಸಂಖ್ಯೆ 74**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಜನರ ಆರೋಗ್ಯ ಸರಿಯಾಗಿದ್ದರೆ ಮಾತ್ರ ಸಮಾಜ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯ. ಬಲಿಷ್ಠವಾದ ಸಮಾಜ ಕಟ್ಟುವುದಕ್ಕೆ ಎಷ್ಟೆಲ್ಲಾ ಕೆಲಸಗಳನ್ನು ಮಾಡುತೇವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ನಾವು ಯಾವುದಕ್ಕೂ ಕುಗ್ಗಲ್ಲ, ಬಗ್ಗಲ್ಲ, ಜಗ್ಗುವುದಿಲ್ಲ; ನಮ್ಮದು ಬಡವರ ಪರವಾಗಿ ಇರುವ ಸರ್ಕಾರ ಎಂದು ಹೇಳುತ್ತಿರುತ್ತಾರೆ.

**ಶ್ರೀ ಎನ್.ಎಸ್.ಭೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಇದು ಪ್ರಶ್ನೋತ್ತರ ಅವಧಿಯಾಗಿದೆ. ಅನಗತ್ಯವಾಗಿ ಮಾತನಾಡುವುದು ಬೇಡ. ಮಾನ್ಯ ಸದಸ್ಯರು ನೇರವಾಗಿ ತಮ್ಮ ಪ್ರಶ್ನೆಯನ್ನು ಕೇಳಲಿ; ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

**ಶ್ರೀ ಟಿ.ಎ.ಶರವಣ:-** ಈ ಮಾತುಗಳನ್ನು ಮಾನ್ಯ ಸಭಾಪತಿಯವರು ಹೇಳಲಿ. ನೀವೇಕೆ ಮಧ್ಯೆ ಎದ್ದು ಮಾತನಾಡುತ್ತೀರಿ? ನೀವೇಕೆ ಮಧ್ಯೆ ಬಾಯಿ ಹಾಕುತ್ತೀರಿ? **(ಗೊಂದಲ)** ನಾನು ಅಸಂಸದೀಯವಾದುದನ್ನು ಮಾತನಾಡಿದ್ದೇನೆಯೇ?

**(ಗೊಂದಲ)**

**ಶ್ರೀ ಎಸ್.ಎನ್.ಭೋಸ್‌ರಾಜು:-** ನೀವು ಸರ್ಕಾರವನ್ನು ಟೀಕಿಸಿ; ಆದರೆ ಸರಿಯಾದ ಸಮಯದಲ್ಲಿ ಟೀಕಿಸಿ; ಬೇಡ ಎಂದು ಹೇಳುವುದಿಲ್ಲ. ಆದರೆ ಇದು ಪ್ರಶ್ನೋತ್ತರ ವೇಳೆಯಾಗಿದೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ವಿರೋಧ ಪಕ್ಷದವರು ಮಾತನಾಡುವಾಗ ಮಾನ್ಯ ಸಭಾನಾಯಕರು ಸೌಜನ್ಯದಿಂದ ಕುಳಿತುಕೊಂಡು ಕೇಳಿಸಿಕೊಳ್ಳಬೇಕು. ನಂತರ ಉತ್ತರ ಕೊಡಲಿ. ಮಾನ್ಯ ಸಭಾಪತಿಗಳೆ, ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ಮಾತನಾಡುವಾಗ ಸಭಾನಾಯಕರೆ ಎದ್ದು ನಿಂತು ಮಾತನಾಡಿದರೆ ಹೇಗೆ?

ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರದಲ್ಲಿ ಬಡ ರೋಗಿಗಳು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬಹುದು, ನಿಮ್ಹಾನ್ಸ್ ಅಥವಾ ಬೌರಿಂಗ್ ಆಸ್ಪತ್ರೆಗಳಿಗೆ ಏತಕ್ಕೆ ಹೋಗುತ್ತಾರೆ? ದುಡ್ಡಿರುವವರು ಇಂತಹ ಆಸ್ಪತ್ರೆಗಳಿಗೆ ಹೋಗುತ್ತಾರೆಯೇ? ಬಡವರು ಆಸ್ಪತ್ರೆಗಳಿಗೆ ಹೋದರೆ, ಅಲ್ಲಿನ ದರಗಳನ್ನು ಡಬ್ಬಲ್-ತ್ರಿಬ್ಬಲ್ ಮಾಡಿರುವುದಲ್ಲದೇ, ಇದೊಂದು ಮಾಮೂಲಿ ಪ್ರಕ್ರಿಯೆ, ದರಗಳ ಪರಿಷ್ಕರಣೆ 3 ವರ್ಷಗಳಿಗೊಮ್ಮೆ ಆಗುತ್ತಿರುತ್ತದೆ ಎಂದು ಮಾನ್ಯ ವೈದ್ಯಕೀಯ ಸಚಿವರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಗ್ಯಾರಂಟಿಗಳನ್ನು ಕೊಡುತ್ತಿದ್ದೆ; ಅದಕ್ಕೆ ನಮ್ಮ ತಕರಾರೇನೂ ಇಲ್ಲ. ಗ್ಯಾರಂಟಿಗಳನ್ನು ಒಂದು ಕೈಗೆ ಕೊಟ್ಟು, ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಆರೋಗ್ಯಕ್ಕೋಸ್ಕರ ಬಜೆಟ್‌ನಲ್ಲಿ ರೂ.50-60 ಕೋಟಿ ಇಡುತ್ತೀರಿ. ಇದು ದೊಡ್ಡ ಕೆಲಸವೇ? ಇದರಿಂದ ಏನು ಬಂದುಬಿಡುತ್ತದೆ? ನೀವು ಬಡವರಿಗೆ ಸಂಬಂಧಪಟ್ಟಂತೆ ಮಾತ್ರ ದರಗಳನ್ನು ಜಾಸ್ತಿ ಮಾಡಿದ್ದೀರಿ. ಆ ಆಸ್ಪತ್ರೆಗಳಲ್ಲಿ

ವಿಐಪಿ ರೂಮ್‌ಗಳೇನಿವೆ ಅದನ್ನು ಸರ್ಕಾರ ಟಚ್ ಮಾಡುವುದಕ್ಕೆ ಹೋಗಲಿಲ್ಲ. ಅದನ್ನು ಯಥಾಪ್ರಕಾರ ಮುಂದುವರಿಸಿದ್ದೀರಿ. ಬಡವರ ಪರವಾಗಿ ನಿಲ್ಲಬೇಕಾದ ನೀವು ದರಗಳನ್ನು ಜಾಸ್ತಿ ಮಾಡಿದ್ದೀರಿ. ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಿ. ಪರಿಷ್ಕರಣೆ ಮಾಡಿರುವುದನ್ನು ಬಿಟ್ಟು, ಹಳೆಯ ದರಗಳನ್ನೇ ಇಡಿ. ಬಡವರ ಪರವಾಗಿ ನಿಂತುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಡಾ: ಶರಣಪ್ರಕಾಶ್ ಆರ್.ಪಾಟೀಲ(ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಬಡವರ ಕುರಿತಂತೆ ಉತ್ತಮವಾದ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ಮಾತನಾಡುತ್ತಾ, ದರಗಳನ್ನು ಎರಡುಪಟ್ಟು-ಮೂರುಪಟ್ಟು ಜಾಸ್ತಿ ಮಾಡಿದ್ದೀರಿ ಎಂದು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಪರಿಷ್ಕರಣೆ ಆಗಿರುವಂಥದ್ದು ಶೇಕಡ 20 ರಷ್ಟು ಮಾತ್ರ. 2-3 ಪಟ್ಟು ಜಾಸ್ತಿಯಾಗಿದೆ ಎಂದು ಹೇಳಿದರೆ ಅದಕ್ಕೆ ಬೇರೆಯೇ ಅರ್ಥ ಬರುತ್ತದೆ. ಅಂದರೆ ಶೇಕಡ 200-300ರಷ್ಟು ಜಾಸ್ತಿಯಾಗಿದೆ ಎನ್ನುವ ಅರ್ಥ ಬರುತ್ತದೆ. ಅಷ್ಟೊಂದು ಜಾಸ್ತಿ ಮಾಡಿಲ್ಲ. ಆದರೆ ಪರಿಷ್ಕರಣೆ ಆಗಿದೆ ಎನ್ನುವುದು ಒಪ್ಪಿಕೊಳ್ಳುವಂಥದ್ದಾಗಿದೆ. ಇಲ್ಲಿ ಶೇಕಡ 20 ರಷ್ಟು ಪರಿಷ್ಕರಣೆ ಆಗಿದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರು ತಪ್ಪು ಮಾಹಿತಿ ಕೊಡಬಾರದು. ದರ ಪರಿಷ್ಕರಣೆ ಆಗಿರುವುದರ ಪೂರ್ಣ ಮಾಹಿತಿಯ ಪಟ್ಟಿ ನನ್ನ ಹತ್ತಿರ ಇದೆ.

**ಡಾ: ಶರಣಪ್ರಕಾಶ ಆರ್.ಪಾಟಟೀಲ:-** ನಾನು ಮೊದಲು ನನ್ನ ಹತ್ತಿರ ಇರುವ ಮಾಹಿತಿಯನ್ನು ಕೊಡುತ್ತೇನೆ, ನಂತರ ನೀವು ನಿಮ್ಮ ಹತ್ತಿರ ಇರುವ ಮಾಹಿತಿಗಳನ್ನು ಒದಗಿಸಿ ಕೊಡಿ. ನನ್ನ ಹತ್ತಿರ ಇರುವ ಮಾಹಿತಿಯನ್ನು ಸದನಕ್ಕೆ ಒಪ್ಪಿಸುತ್ತೇನೆ. ಅದರಲ್ಲಿ ಏನಾದರೂ ವ್ಯತ್ಯಾಸವಿದ್ದು ಸರಿಪಡಿಸುವುದಿದ್ದರೆ ಅವುಗಳನ್ನು ಸರಿಪಡಿಸೋಣ.

ಶೇಕಡ 20 ರಷ್ಟು ಪರಿಷ್ಕರಣೆ ಮಾಡಿರುವಂಥದ್ದು ನಿಜ. ಇದನ್ನು ಸರ್ಕಾರದ ಮಟ್ಟದಲ್ಲಿ ಮಾಡಿರುವಂಥದ್ದಲ್ಲ. ನಮ್ಮ ಸಂಸ್ಥೆಗಳ ಮಟ್ಟದಲ್ಲಿ, ಅಲ್ಲಿನ ನಿಯಮಗಳ ಪ್ರಕಾರ, ಅಂದರೆ ಪ್ರತಿ ಮೂರು ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಬೇಕು. ಎಲ್ಲಾ ಆಸ್ಪತ್ರೆಗಳಲ್ಲಿ users' charges ಗೆ ಸಂಬಂಧಪಟ್ಟಂತೆ ಆಯಾ ಆಸ್ಪತ್ರೆಗಳವರು ಒಂದು ಸಮಿತಿಯನ್ನು ರಚನೆ ಮಾಡುತ್ತಾರೆ. ಅದರಲ್ಲಿ Directors, Medical Students and all HODs ಇವರೆಲ್ಲರೂ ಇರುತ್ತಾರೆ ಮತ್ತು ಅವರು, ಯಾವುದನ್ನು ಪರಿಷ್ಕರಣೆ ಮಾಡಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಇದು ಸರ್ಕಾರದ ಮಟ್ಟದಲ್ಲಾಗಿರುವ ತೀರ್ಮಾನವಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆಯಾ ಸಂಸ್ಥೆಗಳ ಮಟ್ಟದಲ್ಲಿ ಅವರು ಒಂದು ಸಮಿತಿ ರಚನೆ ಮಾಡಿ ಪರಿಷ್ಕರಣೆ ಮಾಡಿರುವಂಥದ್ದಾಗಿದೆ. ಮೂರು ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಬೇಕಾಗಿತ್ತು; ಆದರೆ ಕೋವಿಡ್ ಬಂದಿದ್ದ ಹಿನ್ನೆಲೆಯಲ್ಲಿ ದರ ಪರಿಷ್ಕರಣೆ ಮಾಡಿರಲಿಲ್ಲ. 2018ರಲ್ಲಿ ಪರಿಷ್ಕರಣೆ ಆಗಿತ್ತು. ಹಾಗಾಗಿ ಈಗ 6 ವರ್ಷದ ನಂತರ ಪರಿಷ್ಕರಣೆಯಾಗುತ್ತಿದೆ. ಇದರಲ್ಲಿ including investigation ಸೇರಿ 2025 ಪ್ರೊಸಿಜರ್‌ಗಳಿವೆ. ಈ ಎಲ್ಲದಕ್ಕೂ ಶೇಕಡ 20 ರಷ್ಟು ಪರಿಷ್ಕರಣೆ ಮಾಡಿದ್ದು, ಇದು ನವಂಬರ್ 5ನೇ

ದಿನಾಂಕದಿಂದ ಜಾರಿಗೆ ಬಂದಿದೆ. ಇದು ರಾಜ್ಯದಲ್ಲೇ ದೊಡ್ಡ ಪ್ರಮಾಣದಲ್ಲಿ ಬಡವರಿಗೆ ಅನ್ಯಾಯವಾಗಿದೆ ಎಂದು ಬಿಂಬಿಸುವುದು ಬೇಡ. ಬಡವರು ಯಾರು ಅಡ್ಮಿಟ್ ಆಗುತ್ತಾರೋ ಅವರಿಗೆ ಎಲ್ಲವೂ ಉಚಿತವಾಗಿದೆ. ಅವರಿಗೆ ಯಾವುದೇ ಚಾರ್ಜಸ್ ಇರುವುದಿಲ್ಲ. ಅಡ್ಮಿಟ್ ಆಗುವವರ ಹತ್ತಿರ ಬಿಪಿಎಲ್ ಕಾರ್ಡ್ ಇದ್ದರೆ ಅವರಿಗೆ ಶೇಕಡ 100 ರಷ್ಟು ಉಚಿತ ಸೇವೆ ಪಡೆಯುತ್ತಾರೆ. ರಾಜ್ಯದಲ್ಲಿ ಶೇಕಡ 80 ಜನರ ಬಳಿ ಈ ಕಾರ್ಡ್ ಇದೆ. ಯಾರ ಹತ್ತಿರ ಎಪಿಎಲ್ ಕಾರ್ಡ್ ಇದೆಯೋ ಅವರಿಗೆ ಶೇಕಡ 30ರಷ್ಟು ರಿಯಾಯಿತಿ ಇರುತ್ತದೆ. ಓಪಿಡಿ ಎಲ್ಲರಿಗೂ ಸಮಾನವಾಗಿದ್ದು, ಇದಕ್ಕೆ ರೂ. 20 ಚಾರ್ಜ್ ಮಾಡಲಾಗುತ್ತದೆ. ಯಾವುದಾದರೂ ಇನ್ವೆಸ್ಟಿಗೇಷನ್ ಮಾಡಿಸಿದರೆ ಎಪಿಎಲ್‌ನವರು ಫುಲ್ ಚಾರ್ಜ್ ಕಟ್ಟಬೇಕು; ಬಿಪಿಎಲ್ ಕಾರ್ಡ್ ಹೊಂದಿರುವವರು ಶೇಕಡ Fifty percent of the charges prescribed ಕಟ್ಟಬೇಕಾಗುತ್ತದೆ.. ದರ ಪರಿಷ್ಕರಣೆ 3 ವರ್ಷಕ್ಕೊಮ್ಮೆ ಆಗಬೇಕು. 6 ವರ್ಷದ ನಂತರ ಪರಿಷ್ಕರಣೆ ಆಗಿರುವುದರಿಂದ ಶೇಕಡ 20ರಷ್ಟು ಪರಿಷ್ಕರಣೆಯಾಗಿದೆ. Normal dictum ಪ್ರಕಾರ every three years ten percent hike ಎಂದು ಕಾಮನ್ ಆಗಿ ಮಾಡಿದ್ದಾರೆ. Is it a huge hike?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರ ಸಮರ್ಥನೆ ತುಂಬಾ ಚೆನ್ನಾಗಿದೆ. ನಮ್ಮ ಸಂವಿಧಾನದ ಪ್ರಕಾರ ಪ್ರತಿಯೊಬ್ಬ ಬಡವ ಆರೋಗ್ಯ ಮತ್ತು ಶಿಕ್ಷಣ ಪಡೆಯುವಂಥದ್ದು ಅವರ ಹಕ್ಕಾಗಿದೆ. ಇದರಲ್ಲೇಕೆ ನೀವು ತಾರತಮ್ಯ ಮಾಡುತ್ತೀರಿ? ವಿಐಪಿ ರೂಮ್‌ಗಳ ದರವನ್ನು ಜಾಸ್ತಿ ಮಾಡುವುದಿಲ್ಲ. ಬಡವರ ವಿಷಯ ಬಂದಾಗ ಜಾಸ್ತಿ ಮಾಡುತ್ತೀರಿ.

(ಮುಂದು . . .)

(705) 9-12-2024 12.20 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):**

ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 10 ರೂಪಾಯಿ ಇರುವುದನ್ನು 20 ರೂಪಾಯಿ ಮಾಡಿದ್ದಾರೆ. 50 ರೂಪಾಯಿ ಇರುವುದನ್ನು 75 ರೂಪಾಯಿ ಮಾಡಿದ್ದಾರೆ. ರಕ್ತ ಪರೀಕ್ಷೆ, ಸ್ಕ್ಯಾನಿಂಗ್, ಎಂ.ಆರ್.ಐ. ಸ್ಕ್ಯಾನ್, ಈ ರೀತಿಯ ಎಲ್ಲಾ ಸ್ಕ್ಯಾನ್‌ಗಳಗೂ ಶೇಕಡ 20 ರಷ್ಟು ಜಾಸ್ತಿ ಮಾಡಿದ್ದೇವೆಂದು ಹೇಳುತ್ತಾರೆ. ಏಕೆ ಈ ರೀತಿ ತಪ್ಪು ಮಾಹಿತಿಯನ್ನು ಕೊಡುತ್ತಾರೆ? ನಾನು full proof ತಂದಿದ್ದೇನೆ. 50 ರೂಪಾಯಿ ಇರುವುದನ್ನು 75 ರೂಪಾಯಿ ಮಾಡಿದ್ದಾರೆ, 10 ರೂಪಾಯಿ ಇರುವುದನ್ನು 20 ರೂಪಾಯಿ ಮಾಡಿದ್ದಾರೆ. ಬಹಳಷ್ಟು ಜನ ಬಡವರು ವಿಕ್ಟೋರಿಯಾ, ಬೌರಿಂಗ್ ಆಸ್ಪತ್ರೆಗೆ ಬರುತ್ತಾರೆ. ಏಕೆ ದರ ಹೆಚ್ಚು ಮಾಡಿದ್ದಾರೆ? ನಾನು ಒಳ್ಳೆಯ ಪ್ರಶ್ನೆ ಕೇಳಿದ್ದೇನೆಂದು ನನಗೆ ಮಾನ್ಯ ಸಚಿವರು ಅಭಿನಂದನೆ ಸಲ್ಲಿಸುವುದು ಬೇಡ. ರಾಜ್ಯದ ಜನರು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸಬೇಕೆಂದರೆ ಈ ಉತ್ತರವನ್ನು ವಾಪಸ್ ತೆಗೆದುಕೊಳ್ಳಬೇಕು. ಈ ಉತ್ತರವನ್ನು ವಾಪಸ್ ತೆಗೆದುಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಸರಿಪಡಿಸಿ.

**ಡಾ||ಶರಣಪ್ರಕಾಶ ಆರ್.ಪಾಟೀಲ:-** ಮಾನ್ಯ ಸಭಾಪತಿಯವರೇ, ಯಾವ್ಯಾವುದನ್ನು ಹೆಚ್ಚಿಗೆ ಮಾಡಿದ್ದೇವೆಂದು ಬೇಕಾದರೆ ನಾನು ಸದನಕ್ಕೆ ಪಟ್ಟಿಯನ್ನು ಕೊಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಸಮಯವನ್ನು ವ್ಯರ್ಥ ಮಾಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೆಲವು ದಾಖಲಾತಿಗಳನ್ನು ಕೊಟ್ಟಿದ್ದಾರೆ.

**ಡಾ||ಶರಣಪ್ರಕಾಶ ಆರ್.ಪಾಟೀಲ:-** ಮಾನ್ಯ ಸಭಾಪತಿಯವರೇ, ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳಿ. ಇದು ರಾಜ್ಯದ ಜ್ವಲಂತ ಸಮಸ್ಯೆಯಾಗಿದೆ.

**ಸಭಾಪತಿಯವರು:-** ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳುವುದಕ್ಕೆ ಪತ್ರ ಬರೆದು ಕೊಡಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಪತ್ರ ಕೊಡುತ್ತೇನೆ. ದಯಮಾಡಿ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಡಾ||ಶರಣಪ್ರಕಾಶ ಆರ್.ಪಾಟೀಲ:-** ಮಾನ್ಯ ಸಭಾಪತಿಯವರೇ, ಈಗಲೇ ಚರ್ಚೆ ಮಾಡಿ. ನಾನು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಲೇ ಉತ್ತರ ಕೊಡಲಿ, ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಅವಕಾಶ ಕೊಡಿ.

**ಸಭಾಪತಿಯವರು:-** ಆಯಿತು, ತಾವು ಪತ್ರ ಕೊಡಿ.

**ಪ್ರಶ್ನೆ ಸಂಖ್ಯೆ: 25**

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್‌ರವರೇ, ಈ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಾನು ಪ್ರತಿ ಸಲ ಪ್ರಶ್ನೆ ಕೇಳಿದಾಗ ಕಂದಾಯ ಇಲಾಖೆಗೆ ಅಥವಾ ಬೇರೆ ಇಲಾಖೆಗೆ ವರ್ಗಾವಣೆಯಾಗುತ್ತಿರುತ್ತದೆ.

**ಸಭಾಪತಿಯವರು:-** ನೀವು ಕೇಳಿರುವ ಪ್ರಶ್ನೆಗೆ ಕಂದಾಯ ಇಲಾಖೆಯವರು ಸರಿಪಡಿಸುತ್ತಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ವರ್ಗಾವಣೆ ಮಾಡುವ ಅವಶ್ಯಕತೆ ಇಲ್ಲ. ಇದು ಜ್ವಲಂತ ಸಮಸ್ಯೆಯಾಗಿದೆ. ಸದನದಲ್ಲಿ ಅರಣ್ಯ ಸಚಿವರು ಇದ್ದಾರೆ. ಅಲ್ಲಿನ ಜನರಿಗೆ ತೊಂದರೆಯಾಗುತ್ತಿದೆ.

**ಸಭಾಪತಿಯವರು:-** ಈ ಪ್ರಶ್ನೆ ಪದೇಪದೇ ಬರುವುದು ಬೇಡ. ಮುಂದಿನ ಸೋಮವಾರ ಮಾನ್ಯ ಸದಸ್ಯರಿಗೆ ಉತ್ತರ ಕೊಡಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ತಾವು ನನ್ನ ಸಹಾಯಕ್ಕೆ ಬರಬೇಕು.

**ಶ್ರೀ ಈಶ್ವರ ಖಂಡ್ರೆ(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಮೂರು ಪ್ರಶ್ನೆಗಳು ಕಂದಾಯ ಇಲಾಖೆಗೆ ಸಂಬಂಧಪಟ್ಟಿದೆ. ನಾವು ಈ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ಕಳುಹಿಸಿದ್ದೇವೆ. ಕಂದಾಯ ಇಲಾಖೆಯ ಪ್ರಶ್ನೆಗಳು ಯಾವ ದಿವಸ ಬರುತ್ತದೆ ಅವತ್ತಿನ ದಿವಸ ಇದಕ್ಕೆ ಉತ್ತರ ಸಿಗುತ್ತದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಸಮಸ್ಯೆಯಿಂದ ಬಳಲುತ್ತಿದ್ದಾರೆ. ಮಾನ್ಯ ಸಚಿವರು ಕೂಡ ಅಲ್ಲಿಗೆ ಹೋಗಿ ಬಂದಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗುತ್ತಿದೆ. ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಈ ಪ್ರಶ್ನೆಯನ್ನು ಏಕೆ ಕಂದಾಯ ಇಲಾಖೆಗೆ ವರ್ಗಾಯಿಸಿದ್ದಾರೆ?

**ಸಭಾಪತಿಯವರು:-** ನೀವು ಕೇಳುವ ಪ್ರಶ್ನೆಗೆ ಉತ್ತರ ಯಾರು ಕೊಡುತ್ತಾರೆ? ಮಾನ್ಯ ಸಭಾನಾಯಕರೇ, ಮುಂದೆ ಕಂದಾಯ ಇಲಾಖೆಯ ದಿವಸ ತೆಗೆದುಕೊಳ್ಳಿ.

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮುಂದಿನ ಸೋಮವಾರ ಕಂದಾಯ ಇಲಾಖೆಯನ್ನು ಹಾಕಿಕೊಳ್ಳುತ್ತೇವೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಅರಣ್ಯ ಇಲಾಖೆಯವರದ್ದು ಸಮಸ್ಯೆ ಇದೆ. ತಾವು ನನಗೆ ದಯವಿಟ್ಟು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:-** ಅವಕಾಶ ಕೊಡುವುದಿಲ್ಲ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಅರಣ್ಯ ಸಚಿವರಿಗೆ ಸಂಬಂಧಪಟ್ಟಿರುವಂತಹ ಒಂದು ಪ್ರಶ್ನೆ ಇದೆ. ನಾನು ಕೇಳಿರುವ ಎಲ್ಲಾ ಪ್ರಶ್ನೆಗಳೂ ಕಂದಾಯ ಇಲಾಖೆಗೆ ಸಂಬಂಧಪಟ್ಟಿಲ್ಲ.

**ಸಭಾಪತಿಯವರು:-** ಅವರು ಮಾತನಾಡಲಿ, ಅದಕ್ಕೆ ಯಾರು ಉತ್ತರ ಕೊಡಬೇಡಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಯಾರು ಉತ್ತರ ಕೊಡಬೇಡಿ ಎಂದರೆ ಇದರ ಅರ್ಥ ಏನು?

**ಸಭಾಪತಿಯವರು:-** ಹಾಗಾದರೆ ಈಗ ಯಾರು ಉತ್ತರ ಕೊಡಬೇಕು?

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವಂತಹ ಒಂದು ಪ್ರಶ್ನೆ ಇದೆ. ನಾನು ಅರಣ್ಯ ಇಲಾಖೆಗೆ ಪ್ರಶ್ನೆಯನ್ನು ಹಾಕಿದ್ದೇನೆ. ಇವರು ಕಂದಾಯ ಇಲಾಖೆಗೆ ಸಂಬಂಧಪಟ್ಟಿದೆ ಎಂದು ವರ್ಗಾವಣೆ ಮಾಡಿದ್ದಾರೆ. ಅದರಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವ ಉಪ ಪ್ರಶ್ನೆ ಇದೆ. ಅದಕ್ಕೆ ಅರಣ್ಯ ಇಲಾಖೆಯ ಸಚಿವರು ಉತ್ತರ ಕೊಡಬಹುದಲ್ಲವೇ? ಅರಣ್ಯ ಇಲಾಖೆಯ ಸಚಿವರು ಸದನದಲ್ಲಿದ್ದಾರೆ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾಲ್ಕು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. 4 ರಲ್ಲಿ 3 ಉಪ ಪ್ರಶ್ನೆಗಳು ಕಂದಾಯ ಇಲಾಖೆಗೆ ಸಂಬಂಧಪಟ್ಟಿದೆ. ಒಂದು ಉಪ ಪ್ರಶ್ನೆ ಅರಣ್ಯ ಇಲಾಖೆಗೆ ಸಂಬಂಧಪಟ್ಟಿದೆ. ಆ ಉತ್ತರವನ್ನು ನಾವು ಕಂದಾಯ ಇಲಾಖೆಗೆ ಕಳುಹಿಸಿದ್ದೇವೆ. ಕ್ರೋಢಿಕರಣ ಮಾಡಿ ಮುಂದೆ ಕಂದಾಯ ಇಲಾಖೆಯ ಪ್ರಶ್ನೆಗಳು ಯಾವತ್ತು ಬರುತ್ತದೆ ಆ ದಿನ ಉತ್ತರ ಕೊಡುತ್ತಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಪ್ರತ್ಯೇಕವಾಗಿ ಅರಣ್ಯ ಇಲಾಖೆಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆ ಪ್ರಶ್ನೆಗೆ ಅರಣ್ಯ ಇಲಾಖೆಯ ಸಚಿವರು ಉತ್ತರ ಕೊಡಬೇಕಲ್ಲವೇ?

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆ ಇಬ್ಬರು ಸಚಿವರಿಗೆ ಬರುತ್ತದೆಯೇ? ಅವರು ಹಿರಿಯ ಸದಸ್ಯರಾಗಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಬುಧವಾರ ದಿವಸ ಅವರಿಗೆ ಉತ್ತರ ಕೊಡಿಸಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯವರು ಏನು ಮಾಡುತ್ತಾರೆ?

**ಸಭಾಪತಿಯವರು:-** ನೀವು ಇನ್ನೇನು ಮಾಡಬೇಕು ಎಂಬುದನ್ನು ಹೇಳಿ. ಬುಧವಾರ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಾದರೂ ಉತ್ತರ ಕೊಡಲಿ. ಸದನದಲ್ಲಿ ಅವರ ನಿರ್ದೇಶನವನ್ನಾದರೂ ನಾವು ಕೇಳಿಕೊಳ್ಳುತ್ತೇವೆ. ಈ ರಾಜ್ಯದ

ಪರಿಶಿಷ್ಟ ಜನಾಂಗದವರಿಗೆ ಒಳ್ಳೆಯದನ್ನು ಮಾಡಿದರೆ ಮಾನ್ಯ ಸಚಿವರ ಪರವಾಗಿಯೇ ಒಳ್ಳೆಯ ಸಂದೇಶ ಹೋಗುತ್ತದೆ, ಅವರ ಸರ್ಕಾರದ ಪರವಾಗಿ ಒಳ್ಳೆಯ ಸಂದೇಶ ಹೋಗುತ್ತದೆ.

**ಸಭಾಪತಿಯವರು:-** ಅವರಿಗೆ ಬುಧವಾರ ದಿವಸ ಉತ್ತರ ಕೊಡಿ ಎಂದು ಹೇಳಿದ್ದೇನೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅವರ ಇಲಾಖೆಯೇ ಒಂದು ಪ್ರಶ್ನೆಗೆ ಉತ್ತರ ಕೊಡಬೇಕಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಸರಿಯಾಗಿ ಪ್ರಶ್ನೆ ಕೇಳಿಲ್ಲ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸರಿಯಿದೆ. ಅವರಾಗಿಯೇ ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಆ ಪ್ರಶ್ನೆ ಸರಿಯಿದೆಯೋ, ತಪ್ಪು ಇದೆಯೋ ಎಂಬುದನ್ನು ನಾನು ಹೇಳುತ್ತೇನೆ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೇ, ನಾವಾಗಿಯೇ ವರ್ಗಾವಣೆ ಮಾಡುವ ಪ್ರಶ್ನೆ ಬರುವುದಿಲ್ಲ. ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನನಗೆ ಸಂಬಂಧಪಟ್ಟಿರುವುದು ಒಂದು ಪ್ರಶ್ನೆ ಮಾತ್ರ ಬರುತ್ತದೆ. ಆದರೆ ಬಹುತೇಕವಾಗಿ ಮೂರು ಪ್ರಶ್ನೆಗಳೇನಿವೆ ಅದು ಕಂದಾಯ ಇಲಾಖೆಗೆ ಬರುತ್ತದೆ. ಅದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಬುಧವಾರ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ಮತ್ತೆ ನಿಮಗೆ ಇನ್ನೇನು ಮಾಡಬೇಕು?

**ಪ್ರಶ್ನೆ ಸಂಖ್ಯೆ 63**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರೌಢ ಶಾಲೆ ವಿಭಾಗದಲ್ಲಿ ಕೆಲಸ ಮಾಡತಕ್ಕಂಥ ಸಹ ಶಿಕ್ಷಕರಿಗೆ ಪದವಿ ಪೂರ್ವ ವಿಭಾಗದಲ್ಲಿರತಕ್ಕಂಥ ಉಪನ್ಯಾಸಕ ಹುದ್ದೆಗೆ ಪದೋನ್ನತಿ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂದು ಕೇಳಿರುವುದಕ್ಕೆ ಹೌದು ಎಂದು ಹೇಳಿದ್ದಾರೆ. ಆ ರೀತಿ ಯಾವ ವರ್ಷದಲ್ಲಿ ನೀವು ಪದೋನ್ನತಿಯನ್ನು ಕೊಟ್ಟಿದ್ದೀರಿ ಎಂದು ಕೇಳಿದಾಗ 2013 ರವರೆಗೆ ಪದೋನ್ನತಿಯನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ 2013ರಿಂದ ಇವತ್ತಿನವರೆವಿಗೂ 12 ವರ್ಷಗಳಾಗಿವೆ. 12 ವರ್ಷಗಳ ಅವಧಿಯಲ್ಲಿ ಪ್ರೌಢ ಶಾಲಾ ಶಿಕ್ಷಕರಿಗೆ ಪಿ.ಯು ಕಾಲೇಜಿಗೆ ಉಪನ್ಯಾಸಕರಾಗಿ ಪದೋನ್ನತಿಯನ್ನು ಕೊಟ್ಟಿಲ್ಲ. ಇದಕ್ಕೆ ಕಾರಣವೇನೆಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಬಹಳ ಆಶ್ಚರ್ಯಕರವಾದ ಉತ್ತರ ಬಂದಿದೆ. ಇದಕ್ಕೆ ಕಾರಣವೇನೆಂದರೆ, ರಾಜ್ಯ ಮಟ್ಟದ ಒಂದು ಸೀನಿಯಾರಿಟಿ ಪಟ್ಟಿಯನ್ನು ಮಾಡಬೇಕಾಗಿದೆ, ಆ ಸೀನಿಯಾರಿಟಿ ಪಟ್ಟಿ ತಯಾರಾದ ನಂತರ ಕೊಡುತ್ತೇವೆ. ಆ ಪ್ರಕ್ರಿಯೆಯನ್ನು ಬೇಗ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ನೇರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ರಾಜ್ಯ ಮಟ್ಟದ ಒಂದು ಸೀನಿಯಾರಿಟಿ ಪಟ್ಟಿಯನ್ನು ಮಾಡಬೇಕೆಂದು 12 ವರ್ಷಗಳ ನಂತರ ಸರ್ಕಾರಕ್ಕೆ ಜ್ಞಾನೋದಯವಾಯಿತೇ? ಯಾವ ಸರ್ಕಾರ ಇತ್ತು ಎಂದು ಪುನಃ ಕೇಳುವುದು ಬೇಡ. ನಿಮ್ಮ ಸರ್ಕಾರ ಇದ್ದುದು ಬೇರೆ ವಿಷಯ. ನಾನು ಇಲಾಖೆಗೆ ಪ್ರಶ್ನೆ ಮಾಡುತ್ತೇನೆ. ರಾಜ್ಯ ಮಟ್ಟದ ಸೀನಿಯಾರಿಟಿ ಪಟ್ಟಿಯನ್ನು ಮಾಡಬೇಕು, ಅದಕ್ಕೆ ವಿಳಂಬವಾಯಿತು ಎಂದು ಹೇಳುವುದಕ್ಕೆ ಅವರಿಗೆ 12 ವರ್ಷಗಳು ಬೇಕಾಯಿತೇ? ಈ ನಿರ್ಣಯವನ್ನು ಬೇಗನೇ ತೆಗೆದುಕೊಳ್ಳಲಿಕ್ಕೆ ಬರುತ್ತಿತ್ತಲ್ಲಾ. ಈ ನಿರ್ಣಯವನ್ನು ಏಕೆ ತೆಗೆದುಕೊಳ್ಳಲಿಲ್ಲ. 12 ವರ್ಷಗಳ ಅವಧಿಯಲ್ಲಿ ಎಷ್ಟು ಜನ ಸಹ ಶಿಕ್ಷಕರು ಪದೋನ್ನತಿ ಆಗದೇ ನಿವೃತ್ತಿಯನ್ನು ಹೊಂದಿದ್ದಾರೆ. ಇದಕ್ಕೆ ಯಾರು ಹೊಣೆ? ಈ ನಿರ್ಣಯವನ್ನು ತೆಗೆದುಕೊಳ್ಳುವಲ್ಲಿ ಯಾವ ಅಧಿಕಾರಿ ವಿಳಂಬವನ್ನು ಮಾಡಿದರು? ಇದೊಂದು ಸಣ್ಣ ನಿರ್ಣಯ. ರಾಜ್ಯ ಮಟ್ಟದಲ್ಲಿ ಸೀನಿಯಾರಿಟಿ ಪಟ್ಟಿಯನ್ನು ಮಾಡಬೇಕಾಗಿತ್ತು. ಬೇಗ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ ಬರುತ್ತಿತ್ತಲ್ಲಾ, ಇದಕ್ಕೆ ಯಾರು ಕಾರಣ ಎಂಬುದಕ್ಕೆ ಉತ್ತರವನ್ನು ಸರ್ಕಾರ ಕೊಡಲಿ.

**ಶ್ರೀ ಎಸ್.ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಹಿಂದಿನ ಸರ್ಕಾರದ್ದೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಎರಡರಿಂದ ಎರಡೂವರೆ ತಿಂಗಳೊಳಗೆ ಅಂತಿಮಗೊಳಿಸಿ ನಾನು ಕಳುಹಿಸತಕ್ಕಂಥ ಜವಾಬ್ದಾರಿಯನ್ನು ನಿರ್ವಹಿಸುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ರಾಜ್ಯದ ಮಟ್ಟದ ಒಂದು ಸೀನಿಯಾರಿಟಿ ಲಿಸ್ಟ್‌ನ್ನು ಮಾಡಲಿಕ್ಕೆ ಇಷ್ಟು ಸಮಯ ಬೇಕಾಯಿತೇ?

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅದು ತಡವಾಗಿದೆ.

**ಸಭಾಪತಿಯವರು:-** ಅದನ್ನು ತಕ್ಷಣವೇ ಮಾಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಅದು ಆ ರೀತಿ ಅಲ್ಲ. ಈ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ 12 ವರ್ಷಗಳು ಬೇಕಾಯಿತೇ? ಮೊದಲೇ ಈ ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿತ್ತಲ್ಲವೇ?

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಎರಡೂವರೆ ತಿಂಗಳಿನಲ್ಲಿ ಆಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸೀನಿಯಾರಿಟಿ ಪಟ್ಟಿ ಈಗಲಾದರೂ ತಯಾರಿದೆಯೇ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯ ಮಟ್ಟದ ಸೀನಿಯಾರಿಟಿ ಪಟ್ಟಿ ಆಗಿಲ್ಲ ಎನ್ನುವ ಒಂದೇ ಕಾರಣ ಇಲ್ಲ. ಬೇರೆ ಕಾರಣಗಳು ಸಹ ಇದ್ದಾವೆ, ಅದನ್ನು ಅವರು ಪ್ರಸ್ತಾಪ ಮಾಡಿಲ್ಲ. ಅದನ್ನು ಏಕೆ ಪ್ರಸ್ತಾಪ ಮಾಡಿಲ್ಲವೋ ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಅದನ್ನು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಬೇರೆ ಕಾರಣಗಳಿವೆ, ಅದನ್ನು ಅವರೇ ಹೇಳಲಿ. ಅದನ್ನು ಅವರು ಹೇಳಲಿಲ್ಲವೆಂದರೆ ನಾನು ಹೇಳುತ್ತೇನೆ.

**ಸಭಾಪತಿಯವರು:-** ಗೊತ್ತಿದ್ದರೆ ನೀವು ಹೇಳಿ, ಅವರನ್ನೇಕೆ ಕೇಳುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆ ಕಮಿಟ್ಮೆಂಟ್ ಕೊಟ್ಟಿರುವುದು ಎರಡೂವರೆ ತಿಂಗಳು ಎಂದು. ಅವರೇನು ಸದನಕ್ಕೆ ಹೇಳಿದ್ದಾರೆಯೋ ಅದನ್ನು ಮಾಡಿಬಿಡಲಿ. ಎರಡೂವರೆ ತಿಂಗಳಲ್ಲಿ ಮಾಡಿಬಿಡಲಿ ಸಾಕು. ಅವರು ನಿಜವಾದ ಕಾರಣ ಹೇಳುತ್ತಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಭೋಜೇಗೌಡರೆ, ಇರಲಿ ಬಿಡಿ. ಮಾನ್ಯ ಸಭಾಪತಿಯವರೇ, ಈಗಾಗಲೇ 12 ವರ್ಷಗಳಾಗಿವೆ. 12 ವರ್ಷಗಳ ಅವಧಿಯಲ್ಲಿ ಬಹಳಷ್ಟು ಜನರು ಪದೋನ್ನತಿ ಇಲ್ಲದೇ ನಿವೃತ್ತಿಯನ್ನು ಹೊಂದಿದ್ದಾರೆ. ಮಾನ್ಯ ಸಚಿವರು ತ್ವರಿತ ಗತಿಯಲ್ಲಿ ಮಾಡುತ್ತೇವೆಂದು ಹೇಳುತ್ತಾರೆ. ನಾನಿದಕ್ಕೆ ಒಪ್ಪುವ ಹಾಗಿಲ್ಲ. ಇದಕ್ಕೊಂದು ಕಾಲಮಿತಿ ಬೇಕು. ಕಾಲಮಿತಿ ಹಾಕಲಿಲ್ಲವೆಂದರೆ, ಈ ಕೆಲಸ ಆಗುವುದಿಲ್ಲ. ಒಂದು ತಿಂಗಳೋ, ಎರಡು ತಿಂಗಳೋ ಎಂಬುದನ್ನು ಅವರು ದಯಮಾಡಿ ಹೇಳಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಯಾವಾಗ ಮಾಡುತ್ತೀರಿ ಎಂದು ಕಾಲಮಿತಿಯನ್ನು ಹೇಳಿ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಎರಡೂವರೆ ತಿಂಗಳಿನಲ್ಲಿ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಎರಡೂವರೆ ತಿಂಗಳು ಏಕೆ ಬೇಕು? ಹನ್ನೆರಡು ವರ್ಷ ಆಗಿರುವುದು ಸಾಕಲ್ಲವೇ?

(ಮುಂದು)

(706) 09/12/2024 12:30 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಇನ್ನೂ ಶೀಘ್ರದಲ್ಲಿ ಆಗುವುದಾದರೆ ನಾನು ಮಾಡಿಕೊಡುತ್ತೇನೆ. ಇಲ್ಲವೆಂದಾದರೆ ಮುಂದಿನ ಎರಡೂವರೆ ತಿಂಗಳಿನಲ್ಲಿ ಪ್ರಕ್ರಿಯೆಯನ್ನು ಮುಗಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:-** ಮುಂದಿನ ಫೆಬ್ರವರಿ ಮಾಹೆಯ 15 ತಾರೀಖಿನೊಳಗಾಗಿ ಅದನ್ನು ಮುಗಿಸಿ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಈ ಹಿಂದೆಯೂ ಸಹ ನಾನು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ.

**ಸಭಾಪತಿಯವರು:-** ಸಚಿವರೇ, ಫೆಬ್ರವರಿ 15 ತಾರೀಖಿನೊಳಗಾಗಿ ಮುಗಿಸಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಸಚಿವರೇ ಒಂದು ನಿಮಿಷ ...,

**ಸಭಾಪತಿಯವರು:-** ಶ್ರೀ ಸಂಕನೂರರವರೇ, ಸಾಕುಮಾಡಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಸಚಿವರು ಈ ಬಗ್ಗೆ ಸ್ಪಷ್ಟೀಕರಣ ...

**ಸಭಾಪತಿಯವರು:-** ಫೆಬ್ರವರಿ ಮಾಹೆಯ 15 ನೇ ತಾರೀಖಿನೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವಂತೆ ನಾನು ಈಗಾಗಲೇ ಸಚಿವರಿಗೆ ಹೇಳಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಬೆಳಗಾವಿಯಲ್ಲಿ ಕಳೆದ ಬಾರಿ ನಡೆದ ಅಧಿವೇಶನದ ಸಂದರ್ಭದಲ್ಲಿ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರನ್ನು ಪದವಿಪೂರ್ವ ಕಾಲೇಜುಗಳಿಗೆ ಪದೋನ್ನತಿ ನೀಡಿರಲಿಲ್ಲ. ಆದರೆ, ಈಗ ಸರ್ಕಾರದಿಂದ 20 ಹುದ್ದೆಗಳಿಗೆ ಮಂಜೂರಾತಿ ದೊರೆತಿದೆ. ಹೀಗಾಗಿ ನಾನು ಸಚಿವರನ್ನು ಅಭಿನಂದಿಸುತ್ತೇನೆ. ಈ ಪೈಕಿ ಈಗಾಗಲೇ 10 ಹುದ್ದೆಗಳಿಗೆ ನೇಮಕಾತಿಯೂ ಸಹ ಆಗಿದೆ; ಈ ಪೈಕಿ ಈಗಾಗಲೇ 6 ಅಭ್ಯರ್ಥಿಗಳು ಸೇವೆಗೆ ಸೇರಿಕೊಂಡಿದ್ದಾರೆ. ಈ ಪ್ರಕ್ರಿಯೆಯು ಬಹಳ ವರ್ಷಗಳಿಂದ ಬಾಕಿ ಇತ್ತು. ಅದೇ ರೀತಿಯಾಗಿ

ಈ ಕೆಲಸವನ್ನು ಸಭಾಪತಿಯವರು ಗಡುವು ನೀಡಿದಂತೆ ಮುಂದಿನ ಫೆಬ್ರವರಿಯ 15 ತಾರೀಖಿನೊಳಗೆ ಪೂರ್ಣಗೊಳಿಸುವ ಕೆಲಸವನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಸಂಖ್ಯೆ: 92 ಅನ್ನು ಶ್ರೀ ಎಸ್.ಕೇಶವ ಪ್ರಸಾದ್ ರವರ ಪರವಾಗಿ ಶ್ರೀ ಎಸ್.ವ್ಹಿ.ಸಂಕನೂರುರವರು ಕೇಳುತ್ತಾರೆ.

**ಪ್ರಶ್ನೆ ಸಂಖ್ಯೆ 92**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ) (ಶ್ರೀ ಎಸ್.ಕೇಶವ ಪ್ರಸಾದ್‌ರವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಕಳೆದ ಎರಡು ವರ್ಷಗಳಿಂದ ಹೊಸದಾಗಿ ಎಷ್ಟು ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ; ಇದರಲ್ಲಿ ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು; ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು; ಹೊಸದಾಗಿ ಪ್ರಾರಂಭಿಸಲಾದ ಸರ್ಕಾರಿ ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸ್ತುತ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎಂಬ ಬಗ್ಗೆ ಪ್ರಶ್ನೆಯನ್ನು ಸದಸ್ಯರು ಕೇಳಿದ್ದಾರೆ. ಈ ಪ್ರಶ್ನೆಗಳಿಗೆ ಸರ್ಕಾರವು ವಿಸ್ತೃತವಾಗಿ ಉತ್ತರಿಸಿದ್ದು, ಅದು ತೃಪ್ತಿಕರವಾಗಿದೆ.

ಮುಂದುವರೆದು, ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ಕಾರಣ ನೀಡಿ ಮುಚ್ಚಲಾದ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು (ಸರ್ಕಾರಿ, ಖಾಸಗಿ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಪ್ರತ್ಯೇಕ ವಿವರಗಳನ್ನು ಜಿಲ್ಲಾವಾರು ನೀಡುವುದು) ಎಂಬುದಾಗಿ ಸದಸ್ಯರು ಕೇಳಿದ್ದರು. ಈ ಅಂಶಗಳ ಬಗ್ಗೆ ಸರ್ಕಾರವು ವಿವರಣೆಯನ್ನು ನೀಡಿಲ್ಲ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಖಾಸಗಿ ಶಾಲಾ ಕಾಲೇಜುಗಳ ವಿವರಗಳನ್ನು ಮಾತ್ರವೇ ನೀಡಲಾಗಿದೆ. ಎಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಮುಚ್ಚಲಾಗಿವೆ ಎಂಬ ವಿವರಗಳನ್ನು ನೀಡಿಲ್ಲ. ಈ ಬಗ್ಗೆ ಏಕೆ ವಿವರಗಳನ್ನು ನೀಡುತ್ತಿಲ್ಲವೆಂದು ನಾನು ಪ್ರಶ್ನಿಸಬಯಸುತ್ತೇನೆ. ಈ ವಿಷಯವನ್ನು ಸರ್ಕಾರವು ಸದನದಲ್ಲಿ ತಿಳಿಸಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೆ, ಎಷ್ಟು ಶಾಲಾ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಮುಚ್ಚಲ್ಪಟ್ಟ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಕಾಲೇಜುಗಳ ಮಾಹಿತಿಯನ್ನು ಕೇಳಲಾಗಿದೆ. ಆದರೆ, ಸರ್ಕಾರವು ಕೇವಲ ಪದವಿ ಪೂರ್ವ ಕಾಲೇಜುಗಳ ಮಾಹಿತಿಯನ್ನು ಮಾತ್ರವೇ ನೀಡಿದೆ. ಇಲಾಖೆಯವರು ಸರಿಯಾದ ಉತ್ತರವನ್ನು ಏಕೆ ತಯಾರಿಸಿಲ್ಲವೆಂದು ನಾನು ಕೇಳಬಯಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೆ, ಮುಚ್ಚಲ್ಪಟ್ಟ ಪ್ರಾಥಮಿಕ ಶಾಲೆಗಳ ಮಾಹಿತಿಯು ನನಗೆ ಬಂದಿರುವುದಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಹೀಗೆ ಮಾಡಿದ್ದಲ್ಲಿ ಅದು ತಪ್ಪಾಗುತ್ತದೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಈಗಲೇ ನೋಡುತ್ತೇನೆ; ಸಾಧ್ಯವಾದರೆ ಮಾಹಿತಿಯನ್ನೂ ಸಹ ಈಗಲೇ ನೀಡುತ್ತೇನೆ. ಯಾವುದೇ ಪದವಿ ಪೂರ್ವ ಕಾಲೇಜನ್ನು ಮುಚ್ಚಿಲ್ಲ. ಈ ಮಾಹಿತಿಯನ್ನು ನೀಡಲಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನನ್ನ ಬಳಿ ಇರುವ ಮಾಹಿತಿಯನ್ವಯ ರಾಜ್ಯದಲ್ಲಿರುವ 1 ರಿಂದ 7 ತರಗತಿಯ ಶಾಲೆಗಳು ಅಂದರೆ, ಪ್ರಾಥಮಿಕ ಶಾಲೆಯಲ್ಲಿ ಕೇವಲ 10 ವಿದ್ಯಾರ್ಥಿಗಳು ಮಾತ್ರವೇ ಇದ್ದಾರೆ. ಈ ರೀತಿಯಾಗಿ ಸುಮಾರು 50-60 ಶಾಲೆಗಳಿವೆ. ಇದೇ ರೀತಿಯಾಗಿ ಕೇವಲ 20 ವಿದ್ಯಾರ್ಥಿಗಳಿರುವ ನೂರಾರು ಶಾಲೆಗಳಿವೆ; ಅಂದರೆ 200 – 300 ಶಾಲೆಗಳಿವೆ. ಅಲ್ಲಿನ ವಸ್ತುಸ್ಥಿತಿಯ ಮಾಹಿತಿಯನ್ನು ದಯಮಾಡಿ ಸದನಕ್ಕೆ ನೀಡಬೇಕು; ಅದನ್ನು ಮುಚ್ಚಿಡಬಾರದು. ಸದಸ್ಯರಾದ ನಾವು ಪ್ರಶ್ನೆಯನ್ನು ಕೇಳುವ ಉದ್ದೇಶವೇನೆಂದರೆ, ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಕೇವಲ 10 ವಿದ್ಯಾರ್ಥಿಗಳು ಮಾತ್ರವೇ ವ್ಯಾಸಂಗ ಮಾಡುತ್ತಿದ್ದಾರೆ. ಅಂದರೆ ಪ್ರತಿಯೊಂದು ವರ್ಗದಲ್ಲಿ ಒಬ್ಬೊಬ್ಬರು ವಿದ್ಯಾರ್ಥಿಗಳಿದ್ದಾರೆ ಎನ್ನುವಂತಾಗಿದೆ. ವಿದ್ಯಾರ್ಥಿಗಳ ಸಂಖ್ಯೆಯು ಏಕೆ ಕಡಿಮೆಯಾಯಿತು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಇದಕ್ಕೆ ಇರುವ ಕಾರಣಗಳ ಬಗ್ಗೆ ಇಲಾಖೆಯು ಅಧ್ಯಯನ ಮಾಡಿದೆಯೇ? ಇದು ಬಹಳ ಮಹತ್ವದ ವಿಷಯವಾಗಿದೆ. ಸರ್ಕಾರವು ಶಿಕ್ಷಕರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತದೆ; ಆದರೆ ಕಲಿಯುವುದಕ್ಕೆ ಅಲ್ಲಿ ವಿದ್ಯಾರ್ಥಿಗಳೇ ಇಲ್ಲವೆಂದಾದರೆ ಹೇಗೆ? ಆದರೆ ಕೆಲವೊಂದು ಶಾಲೆಗಳಲ್ಲಿ ವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳಿದ್ದು, ಶಿಕ್ಷಕರೇ ಇರುವುದಿಲ್ಲ. ಈ ಬಗ್ಗೆ ಸರ್ಕಾರವು ಅಧ್ಯಯನವನ್ನು ನಡೆಸಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಸದಸ್ಯರು ಹೇಳಿರುವ ಅಂಶವು ನಿಜವಾಗಿದೆ. ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡಾಗ, ರಾಜ್ಯದ ಸಾಕಷ್ಟು ಶಾಲೆಗಳಲ್ಲಿ ಅಂದರೆ 4,500 – 5,000 ಶಾಲೆಗಳಲ್ಲಿ ಕೇವಲ 10 ವಿದ್ಯಾರ್ಥಿಗಳು ಮಾತ್ರವೇ ಇದ್ದರು. ಸರ್ಕಾರವು ಇತ್ತೀಚೆಗೆ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಿದೆ. ಈ ರೀತಿಯ ಶಾಲೆಗಳು ಕಲ್ಯಾಣ ಕರ್ನಾಟಕ ಭಾಗದಲ್ಲಿ 1,008 ಸಂಖ್ಯೆಯಲ್ಲಿವೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಸುಮಾರು 1,600 ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನು ಸರ್ಕಾರವು ಪ್ರಾರಂಭಿಸಿದೆ. ಅಂಗನವಾಡಿಗಳಲ್ಲಿ ಕಲಿತ ವಿದ್ಯಾರ್ಥಿಗಳು ಮುಂದಿನ ಅಧ್ಯಯನಕ್ಕಾಗಿ ಖಾಸಗಿ ಅಥವಾ ಅನುದಾನಿತ ಶಾಲೆಗಳಿಗೆ ಹೋಗುತ್ತಿದ್ದರು. ಈಗ ಸರ್ಕಾರಿ ಶಾಲೆಗಳಲ್ಲಿಯೇ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಿದೆ. ನಾವು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಜೊತೆಗೂಡಿ ಎಲ್ಲೆಲ್ಲಿ ಅಂಗನವಾಡಿಗಳಿದ್ದವೋ ಅಲ್ಲೆಲ್ಲಾ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೇವಲ 42 ದಿನಗಳಲ್ಲಿ ಸುಮಾರು 45,000 ಮಕ್ಕಳ ದಾಖಲಾತಿಯಾಗಿದೆ. ಅಂದರೆ, ಈ ಮಕ್ಕಳು ಮುಂದಿನ ದಿನಗಳಲ್ಲಿ 1 ಮತ್ತು 2 ನೇ ತರಗತಿಗೆ ಬರುವ ಅವಕಾಶಗಳಿರುತ್ತವೆ. ಸರ್ಕಾರವು ಮಕ್ಕಳ ಕಲಿಕೆಗೆ, ಪೌಷ್ಟಿಕತೆಗೆ ಸಾಕಷ್ಟು ಸಹಕಾರವನ್ನು ನೀಡುತ್ತಿದೆ.

ಮುಂದುವರೆದು, ಶಿಕ್ಷಕರ ನೇಮಕಾತಿಗೆ ಸಂಬಂಧಪಟ್ಟಂತೆ ಸರ್ಕಾರವು ಕ್ರಮ ವಹಿಸಿದೆ. ಈ ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಅಪೂರ್ಣವಾಗಿದ್ದ ಸುಮಾರು 13,000 ಶಿಕ್ಷಕರ ನೇಮಕಾತಿಗೆ ಪ್ರಕ್ರಿಯೆಯನ್ನು ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿನ ಸುಮಾರು 5,600 ಶಿಕ್ಷಕರ ನೇಮಕಾತಿಯೂ ಸಹ ಇದರಲ್ಲಿ ಒಳಗೊಂಡಿದೆ. ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ಮಂಜೂರಾತಿಯನ್ನು ನೀಡಲಾಗಿದೆ. ಈ ನೇಮಕಾತಿ ಪ್ರಕ್ರಿಯೆಯನ್ನು ನಾವು ನಮ್ಮ ಇಲಾಖಾ ವತಿಯಿಂದ ಪ್ರಾರಂಭಿಸುತ್ತಿದ್ದೇವೆ. ಶಿಕ್ಷಕರ ನೇಮಕಾತಿಯಾದಲ್ಲಿ, ನಿಸ್ಸಂಶಯವಾಗಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ಸಹ ಜಾಸ್ತಿಯಾಗುತ್ತದೆ.

ಇದರ ಜೊತೆಗೆ 74 ಆದರ್ಶ ವಿದ್ಯಾಲಯಗಳನ್ನು ದ್ವಿತೀಯ ಪಿ.ಯು.ಸಿ. ಕಾಲೇಜುಗಳನ್ನಾಗಿ ಪ್ರಾರಂಭ ಮಾಡಿದ್ದೇವೆ. ಆಗ 10ನೇ ತರಗತಿ ಪೂರ್ಣಗೊಳಿಸಿ, ಬೇರೆ ಕಡೆಗೆ ಕಾಲೇಜುಗಳಿಗೆ ಹೋಗುವವರು ಅಲ್ಲಿಯೇ ಮುಂದುವರೆಯುತ್ತಾರೆ. ಈ ಹಿಂದೆ ನಮ್ಮಲ್ಲಿಯೂ ಸಹ ಪಿ.ಯು.ಸಿ. ಕಾಲೇಜುಗಳು ಕಡಿಮೆ ಸಂಖ್ಯೆಯಲ್ಲಿದ್ದವು. ಎಲ್ಲಾ 74 ಆದರ್ಶ ವಿದ್ಯಾಲಯಗಳನ್ನು ಮೇಲ್ದರ್ಜೆಗೆ ಏರಿಸಿದ್ದರಿಂದ ಅದು ಸಹಕಾರಿಯಾಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆಯೂ ಸಹ ಖಂಡಿತವಾಗಿಯೂ ಜಾಸ್ತಿಯಾಗುತ್ತದೆ. ಈ ಬಗ್ಗೆ ಸರ್ಕಾರವು ಗ್ಯಾರಂಟಿಯನ್ನು ನೀಡುತ್ತದೆ. ಈ ಕಾರಣಕ್ಕಾಗಿಯೇ ನಾವು ಕ್ರಮ ಕೈಗೊಂಡಿದ್ದೇವೆ. ಏಕೆಂದರೆ ಈ ಹಿಂದೆ ಕೆಲವು ಶಾಲೆಗಳಲ್ಲಿ ಕೇವಲ 10 ವಿದ್ಯಾರ್ಥಿಗಳು ಮಾತ್ರವೇ ವ್ಯಾಸಂಗ ಮಾಡುತ್ತಿದ್ದರು. ಹಾಲಿ ಇರುವ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಹೀಗಾಗಿ ನಾವು ಶಾಲೆಗಳನ್ನು ಉಳಿಸಿಕೊಳ್ಳಬೇಕಾಗಿದೆ. ಶಾಲಾ ಶಿಕ್ಷಕರ ನೇಮಕಾತಿಯನ್ನೂ ಸಹ ಮಾಡಲಾಗುತ್ತಿದೆ. ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿ, ಖಾಯಂ ಶಿಕ್ಷಕರ ನೇಮಕಾತಿಯ ವ್ಯವಸ್ಥೆಯನ್ನೂ ಸಹ ಮಾಡುತ್ತಿದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗುವ ಅಂಶದ ಬಗ್ಗೆ ನಾವು ಗಮನ ಹರಿಸುತ್ತಿದ್ದೇವೆ. ಸದಸ್ಯರು ಕೋರಿರುವ ಪ್ರಶ್ನೆಯ ಬಗ್ಗೆ ನನಗೆ ಮಾಹಿತಿ ಗೊತ್ತಾಗಿಲ್ಲ. ಈ ಮಾಹಿತಿಯನ್ನು ಮಧ್ಯಾಹ್ನದೊಳಗೆ ಸದಸ್ಯರಿಗೆ ನೀಡುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಸರ್ಕಾರಿ ಶಾಲೆಗೆ ಮಕ್ಕಳು ಬರಬೇಕು ಮತ್ತು ಅಲ್ಲಿಂದಲೇ ಮುಂದಿನ ತರಗತಿಗಳಿಗೆ ಹೋಗುವ ವ್ಯವಸ್ಥೆಯನ್ನು ಸರ್ಕಾರವು ಸಂಪೂರ್ಣವಾಗಿ ಮಾಡುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನನ್ನ ಕೊನೆಯ ಪ್ರಶ್ನೆ ಏನೆಂದರೆ, ಯಾವುದಾದರೂ ಹೊಸ ಪ್ರಾಥಮಿಕ, ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳನ್ನು ಸರ್ಕಾರವು ಮಂಜೂರು ಮಾಡಬೇಕಾದರೆ, ಕನಿಷ್ಠ ಎಷ್ಟು ಕಿಲೋ ಮೀಟರ್‌ಗಳ ಅಂತರವಿರಬೇಕು ಎನ್ನುವ ಮಾಹಿತಿಯನ್ನು ಸಚಿವರು ನನಗೆ ದಯಮಾಡಿ ನೀಡಬೇಕು.

**ಸಭಾಪತಿಯವರು:-** ಇದು ಪ್ರಾಥಮಿಕ ಶಾಲೆಗಳಿಗೆ ಅನ್ವಯಿಸುವುದಿಲ್ಲ. ಸಾಮಾನ್ಯವಾಗಿ 3 ಮತ್ತು 7 ಕಿಲೋ ಮೀಟರ್‌ಗಳ ಅಂತರವಿರಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪ್ರಾರಂಭಿಸಲಾದ ಶಾಲಾ ಕಾಲೇಜುಗಳ ವಿವರವನ್ನು ಲಿಖಿತ ಉತ್ತರದಲ್ಲಿ ನೀಡಲಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, 5 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಇದ್ದರೆ, ಸರ್ಕಾರವು ಹೊಸ ಪ್ರೌಢ ಶಾಲೆಗಳಿಗೆ ಮಂಜೂರಾತಿಯನ್ನು ನೀಡುವುದಿಲ್ಲವೇ?

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಶಾಲೆಯಲ್ಲಿನ ಮಕ್ಕಳ ಸಂಖ್ಯೆ ಹಾಗೂ ಶಾಲೆಯ 5 ಕಿಲೋ ಮೀಟರ್ ವ್ಯಾಪ್ತಿಯನ್ನು ನೋಡಿಕೊಂಡು ನಾವು ಮಂಜೂರಾತಿಯನ್ನು ನೀಡಬೇಕಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನಾನು ಈ ಪ್ರಶ್ನೆಯನ್ನು ಕೇಳುವ ಉದ್ದೇಶವೇನೆಂದರೆ, ಇವತ್ತಿನ ದಿವಸ ಇಲಾಖೆಯವರು ಅವಶ್ಯಕತೆಗೆ ತಕ್ಕಂತೆ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುತ್ತಿಲ್ಲ. ಅವರುಗಳು ಒತ್ತಡದಲ್ಲಿ ಕಾರ್ಯನಿರ್ವಹಿಸುವಂತಾಗಿದೆ. ಸರ್ಕಾರಿ ಪ್ರಾಥಮಿಕ ಶಾಲೆ ನಡೆಯುವ ಸ್ಥಳದ ಪಕ್ಕದಲ್ಲಿಯೇ ಖಾಸಗಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರವು ಅನುಮತಿಯನ್ನು ನೀಡುತ್ತದೆ. ಹೀಗಾಗಿ ಎಲ್ಲಾ ಮಕ್ಕಳು ಖಾಸಗಿ ಶಾಲೆಯಲ್ಲಿ ದಾಖಲಾತಿಯನ್ನು ಪಡೆದುಕೊಳ್ಳುತ್ತಾರೆಯೇ ವಿನಃ ಸರ್ಕಾರಿ ಶಾಲೆಯಲ್ಲಿ ಅಲ್ಲ. ಆಗ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಇಲ್ಲದಂತಾಗುತ್ತಾರೆ. ವಿದ್ಯಾರ್ಥಿಗಳೇ ಇಲ್ಲದ ಶಾಲೆಗಳೂ ಸಹ ನಮ್ಮ ರಾಜ್ಯದಲ್ಲಿವೆ. ಈ ಬಗ್ಗೆ ಸಚಿವರು ಮಾಹಿತಿಯನ್ನು ನೀಡುತ್ತಿಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, 74 ಆದರ್ಶ ವಿದ್ಯಾಲಯಗಳನ್ನು ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ, ಏಕೆಂದರೆ ಸರ್ಕಾರಿ ಶಾಲೆಗಳಿಗೆ ಮಕ್ಕಳು ಬರುವಂತಾಗಬೇಕು. ಈಗ ಸರ್ಕಾರಿ ಶಾಲಾ-ಕಾಲೇಜುಗಳಿಗೆ ಮಕ್ಕಳು ಬರುತ್ತಿದ್ದಾರೆ. ಈ ಬಗ್ಗೆ ಆಯವ್ಯಯದಲ್ಲಿ ಘೋಷಿಸಲಾಗಿತ್ತು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಅವಶ್ಯಕತೆಗೆ ತಕ್ಕಂತೆ ಮಂಜೂರಾತಿ ನೀಡಿ ಎಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಸರ್ಕಾರಿ ಪ್ರೌಢ ಶಾಲೆಯ ಪಕ್ಕದಲ್ಲಿಯೇ ಖಾಸಗಿ ಪ್ರೌಢ ಶಾಲೆಯನ್ನು ತೆರೆಯಲು ಸರ್ಕಾರವು ಮಂಜೂರಾತಿಯನ್ನು ನೀಡುತ್ತದೆ. ಸರ್ಕಾರವು ಇದನ್ನು ನಿಯಂತ್ರಿಸಬೇಕು.

(ಮುಂದು)

(707) 09-12-2024/12-40 bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):**

ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿವೆ. ಅವರು ತಪ್ಪು ಮಾಡಿದ್ದರೂ ಕೊಡುತ್ತಿದ್ದೀರಿ. ಅವರು ಈ ರೂಲ್ಸ್‌ಗಳನ್ನೆಲ್ಲಾ ಬಿಟ್ಟುಬಿಡುತ್ತಿದ್ದಾರೆ.

**ಸಭಾಪತಿಯವರು:-** ಶ್ರೀಯುತ ಸಂಕನೂರ ರವರೆ, ಸಮಯ ಇಲ್ಲ, ಕುಳಿತುಕೊಳ್ಳಿ. ಇಲ್ಲದಿದ್ದರೆ, ನಾನು ಪ್ರಶ್ನೋತ್ತರ ಅವಧಿಯನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ-** ಮಾನ್ಯ ಸಭಾಪತಿಯವರೆ, ನಾನು ಇರುವಂತಹ ವಿಚಾರವನ್ನು ಹೇಳುತ್ತಿದ್ದೇನೆ.

(ಗೊಂದಲ)

**ಪ್ರಶ್ನೆ ಸಂಖ್ಯೆ: 13+16+28+73+131**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎನ್. ಜವರಾಯಿಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಸಂಬಂಧ ನಾನು ಎರಡು-ಮೂರು ಪ್ರಶ್ನೆಗಳನ್ನು ಕೇಳಲಿಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ 1 ಕೋಟಿ 28 ಲಕ್ಷ ಪಡಿತರ ಕಾರ್ಡ್‌ಗಳ ಪೈಕಿ 40 ಲಕ್ಷ ಕಾರ್ಡ್‌ಗಳು ಬೋಗಸ್ ಇವೆ ಎಂದು ಹೇಳಿ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಅಂದರೆ, ಬಹುತೇಕ 30% ಬೋಗಸ್ ಬಿಪಿಎಲ್ ಕಾರ್ಡ್‌ಗಳಿವೆ. ಆ ಬೋಗಸ್ ಬಿಪಿಎಲ್ ಕಾರ್ಡ್‌ಗಳನ್ನು ಯಾವ ಯಾವ ಮಾನದಂಡದ ಮೇರೆಗೆ ವಾಪಸ್ಸು ತೆಗೆದುಕೊಳ್ಳಲಾಗಿದೆ, ಯಾವ ಯಾವ ಅರ್ಹತೆ ಮೇರೆಗೆ ಬಿಪಿಎಲ್ ಕಾರ್ಡ್‌ಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಈ 40 ಲಕ್ಷ ಬೋಗಸ್ ಬಿಪಿಎಲ್ ಕಾರ್ಡ್‌ಗಳನ್ನು ಏನು ಹಂಚಿದ್ದಾರೆ ಮತ್ತು ಯಾವ ಯಾವ ಮಾನದಂಡದ ಮೇರೆಗೆ ವಾಪಸ್ಸು ತೆಗೆದುಕೊಳ್ಳಲಾಗಿದೆ, ಅದರ ಬಗ್ಗೆ ಸರ್ಕಾರ ಹಿಂದೆಯೇ ಏತಕ್ಕೆ ಎಚ್ಚೆತ್ತುಕೊಳ್ಳಲಿಲ್ಲ? ರಾಜ್ಯದ 6 ಕೋಟಿ ಜನಸಂಖ್ಯೆಯಲ್ಲಿ 4 ಕೋಟಿ ಜನ ಸಂಖ್ಯೆಯಷ್ಟು ಬಡವರು ಇದ್ದಾರೆಯೇ ಎನ್ನುವುದರ ಬಗ್ಗೆ ದಯವಿಟ್ಟು ಸರ್ಕಾರ ಸ್ಪಷ್ಟ ಉತ್ತರವನ್ನು ನೀಡಬೇಕು. ಈ ರೀತಿಯಲ್ಲಿ ಬೋಗಸ್ ಬಿಪಿಎಲ್ ಕಾರ್ಡ್‌ಗಳನ್ನು ನೀಡಿದಂತಹ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವಿರುದ್ಧ ಇಲ್ಲಿಯವರೆಗೆ ಸರ್ಕಾರ ಯಾವುದೇ ರೀತಿಯಲ್ಲಿ ಏತಕ್ಕೆ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ನಾನು 2-3 ಕ್ಲಾರಿಫಿಕೇಷನ್ ಕೇಳಲಿಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ ಒಟ್ಟು 3,35,463 ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಕಾರಣಗಳನ್ನು ಕೇಳಿದಾಗ ಇತ್ತೀಚೆಗೆ ಅಂದರೆ ದಿನಾಂಕ 22-11-2024 ರಂದು ಒಂದು ಸುತ್ತೋಲೆಯನ್ನು ಹೊರಡಿಸಿ ನಿರ್ದೇಶನವನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ಯಾರು ಯಾರಿಗೆ ಕಾರ್ಡ್‌ಗಳನ್ನು ರದ್ದು ಮಾಡಬೇಕೆಂದಾಗ ಆದಾಯ ತೆರಿಗೆಯನ್ನು ಪಾವತಿ ಮಾಡುವವರನ್ನು , ಸರ್ಕಾರಿ ನೌಕರರನ್ನು ಹೊರತುಪಡಿಸಿ ಪಡಿತರ ಚೀಟಿಗಳನ್ನು ಹಿಂದಿನಂತೆಯೇ ಆದ್ಯತಾ ಪಡಿತರ ಚೀಟಿಗಳನ್ನು ಮರು ಸ್ಥಾಪಿಸಲಾಗುವುದು ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಕ್ಲಾರಿಫಿಕೇಷನ್ ಕೇಳುವುದೇನೆಂದರೆ, ತಾವು 4 ಕಾರಣಗಳನ್ನು ಕೊಟ್ಟು, ಇಂತಹವರಿಗೆ ಕಟ್ ಮಾಡಿ ಎಂದು ಹೇಳಿದ್ದೀರಿ. ಅದರಲ್ಲಿ 3ನೇ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇದರಲ್ಲಿ ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ, ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು ಎಂದು ಹೇಳಿದ್ದಾರೆ. ತಾವು ಹೇಳಿದಂದತಹ 3 ವಾಣಿಜ್ಯ ವಾಹನಗಳನ್ನು ಪಡೆಯಬೇಕಾದರೆ ಯಾರಾದರೂ ಬ್ಯಾಂಕಿಗೆ ಸಾಲವನ್ನು ಕೇಳಲಿಕ್ಕೆ ಹೋದಾಗ ಅವರು ಏನು ಹೇಳುತ್ತಾರೆಂದರೆ ನಿಮ್ಮ income proof

ಅನ್ನು ತೆಗೆದುಕೊಂಡು ಬನ್ನಿ ಎಂದು ಕೇಳುತ್ತಾರೆ. ಅವರಿಗೆ ಒಂದು ವಾರಕ್ಕೆ 6-10 ಲಕ್ಷ ರೂಪಾಯಿಗಳು ಇರುತ್ತದೆ. ಅದು ಸಹ ವಾಣಿಜ್ಯ ವಾಹನ ಇರುತ್ತದೆ. ಆಗ ಅವರು ಲೆಕ್ಕ ಪರಿಶೋಧಕರ ಹತ್ತಿರ ಹೋದಾಗ ಅದಕ್ಕೆ ಪಾನ್ ಕಾರ್ಡ್ ಮಾಡಿ ಅಲ್ಲಿ 2-3 ಲಕ್ಷ ರೂಪಾಯಿಗಳ ಆದಾಯ ಇದೆ ಎಂದವರು ತೋರಿಸುತ್ತಾರೆ. ಆಗ ಇದು automatically ಆಧಾರ್‌ಗೆ ಲಿಂಕ್ ಆಗುತ್ತದೆ. ಹೀಗಾಗಿ, ಬಿಪಿಎಲ್ ಕಾರ್ಡ್ ರದ್ದಾಗುತ್ತದೆ. ನಾವು ಇದರ ಬಗ್ಗೆ ಕೇಳಲಿಕ್ಕೆ ಹೋದರೆ, ಆದಾಯ ತೆರಿಗೆ ಇಲಾಖೆಯವರು ಏನು ಹೇಳುತ್ತಾರೆಂದರೆ ನೋಡಿ, ರೂ. 3 ಲಕ್ಷದವರೆಗೆ ಆದಾಯ ತೆರಿಗೆಯನ್ನು ಕಟ್ಟುವಂತಹ ಅವಶ್ಯಕತೆ ಇರುವುದಿಲ್ಲ, ನಾನು ನಿಮಗೆ ನೋಟಿಸ್ ಕೊಟ್ಟಿರುವುದಿಲ್ಲ. ನೀವು ನನ್ನ ಹತ್ತಿರ ಬಂದು ನೋಟೀಸ್ ಕೊಡಲಿಲ್ಲವೆಂದು ಹೇಳಿ, ಈ ಬಗ್ಗೆ ಕ್ಲಾರಿಫಿಕೇಷನ್ ಕೊಡುತ್ತಾ, ನಾನು ಆದಾಯ ತೆರಿಗೆಯನ್ನು ಕಟ್ಟುವುದಿಲ್ಲವೆಂದು ಹೇಳಿ endorsement ಅನ್ನು ಕೊಡಿ ಎಂದು ಹೇಳಿದರೆ ನಾನು ಏತಕ್ಕೆ ಕೊಡಬೇಕೆಂದು ಹೇಳುತ್ತಾರೆ. ಹೀಗಾಗಿ, ನಿಮ್ಮ ಇಲಾಖೆ ಹಾಗೂ ಆದಾಯ ತೆರಿಗೆ ಇಲಾಖೆಯಲ್ಲಿ ಹೊಂದಾಣಿಕೆ ಬೇಕು. ಆದಾಯ ತೆರಿಗೆ ಇಲಾಖೆಯಲ್ಲಿ most of the ration cards ಇವತ್ತು ರದ್ದಾಗಿದ್ದರೆ, that is just because, they have paid Income Tax, ಎಂದು ಹೇಳುವಂತಹ ಕಾರಣಕ್ಕಾಗಿ ಆಗಿದೆ. ಆದಾಯ ತೆರಿಗೆ ಜಾಸ್ತಿ ಇಲ್ಲ, ಕಟ್ಟುವುದೂ ಸಹ ಇಲ್ಲ. ಆದರೆ, ಕಟ್ಟದೇ ಇದ್ದಾಗ ಕುಟುಂಬಕ್ಕೆ ನಷ್ಟವಾಗುತ್ತದೆ ಅಲ್ಲವೇ? ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಮತ್ತೆ 200 ಯೂನಿಟ್ ಉಚಿತ ವಿದ್ಯುತ್ ಬಗ್ಗೆ ಹೇಳಿದ್ದಾರೆ. 150 ಯೂನಿಟ್ ಯೂನಿಟ್ ವಿದ್ಯುತ್ ಎಂದರೆ ನಾವು ಗ್ಯಾರಂಟಿಯಲ್ಲಿ 200 ಯೂನಿಟ್ ಯೂನಿಟ್ ವಿದ್ಯುತ್ ಅನ್ನು ಬಳಕೆ ಮಾಡುವಲ್ಲಿ ಅವಕಾಶವನ್ನು ಕೊಡಲಾಗಿದೆ. ಹೀಗಿರುವಾಗ 150 ಯೂನಿಟ್‌ಗಿಂತ ಜಾಸ್ತಿ ಇರಬಾರದು ಎಂದು ಹೇಳಿದರೆ ಬಿಪಿಎಲ್ ಕಾರ್ಡ್ ಹೇಗೆ ಇರುತ್ತದೆ?

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಸದಸ್ಯರಿಬ್ಬರು ಕೇಳಿರುವ ಪ್ರಶ್ನೆಯನ್ನು ನಾನು ಅನುಮೋದಿಸುತ್ತಾ, ನಾನು ಕೆಲವು ಹೆಚ್ಚುವರಿಯಾಗಿ ಪ್ರಶ್ನೆಗಳನ್ನು ಕೇಳಬಯಸುವುದೇನೆಂದರೆ ಅರ್ಹ ಮತ್ತು ಅನರ್ಹ ನಡುವೆ ಬರುವ ಮಾನದಂಡವನ್ನು ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಅಂದರೆ, ಸರ್ಕಾರದ ಲೆಕ್ಕದಲ್ಲಿ 5 ಕೋಟಿ, 29 ಲಕ್ಷ ಜನ ಅರ್ಹರು ಇದ್ದಾರೆಯೇ? ನೀವು ಹೇಳಿದ ಮಾನದಂಡದ ವ್ಯಾಪ್ತಿಯಲ್ಲಿ ಇವರು ಬರುತ್ತಾರೆಯೇ? ಬರುವುದಾದರೆ, ನಮ್ಮದು **"ಸಮೃದ್ಧ ಕರ್ನಾಟಕ"** ಎನ್ನುವುದಕ್ಕೆ ಅರ್ಥ ಇದೆಯೇ? ಇಷ್ಟೊಂದು ಬಡವರು ಇರುವಂತಹ ರಾಜ್ಯ ಸಮೃದ್ಧ ಕರ್ನಾಟಕ ಎಂದು ಹೇಳಿ ನಾವು ಹೇಗೆ ನಮ್ಮ ಬೆನ್ನನ್ನು ತಟ್ಟಿಕೊಳ್ಳುವುದಕ್ಕೆ ಸಾಧ್ಯವಿದೆ? ಇದನ್ನು ಇಷ್ಟೊಂದು ಜನ ಅರ್ಹರು ಇದನ್ನು ಉಪಯೋಗಿಸಿಕೊಳ್ಳುವುದಾದರೆ ಪ್ರತಿನಿತ್ಯ ಕಾಳಸಂತೆಯಲ್ಲಿ **"ಅನ್ನಭಾಗ್ಯ ಅಕ್ಕಿ ಮಾರಾಟ"** ಎಂದು ಹೇಳಿ ಏನು ಸುದ್ದಿಯಾಗುತ್ತದೆ. ಕಾಳಸಂತೆಗೆ ಆ ಅಕ್ಕಿಯನ್ನು ಯಾರು ಕೊಡುತ್ತಾರೆ? ಅದು ಎಲ್ಲಿಂದ ಬರುತ್ತದೆ? ಅಂದರೆ ಅರ್ಹ ಮತ್ತು ಅನರ್ಹ ಎನ್ನುವುದರ ನಡುವಿನ ಮಾನದಂಡವನ್ನು ನಾವು ನಮ್ಮ ರಾಜಕೀಯ ಅನುಕೂಲಕ್ಕೆ ಬಳಕೆ

ಮಾಡಿಕೊಳ್ಳುತ್ತಿದ್ದೇವೆನ್ನುವುದು ನನ್ನ ಅಪಾದನೆಯಾಗಿದೆ. ಹೀಗಾಗಿ, ಒಬ್ಬ ಅರ್ಹರಿಗೂ ಇದು ತಪ್ಪಿ ಹೋಗಬಾರದು, ಅನರ್ಹರಿಗೆ ಅನಾವಶ್ಯಕವಾಗಿ ಈ ಸೌಲಭ್ಯ ಸಿಗುವುದು ಕಾಳಸಂತೆಗೆ ನಾವು ಪ್ರೋತ್ಸಾಹ ಕೊಟ್ಟಂತಾಗುತ್ತಿದೆ. ಇದನ್ನು ನಿಯಂತ್ರಿಸುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಬಹಳಷ್ಟು ಲೋಪದೋಷಗಳಿವೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಇವತ್ತು ಬಿಪಿಎಲ್ ಕಾರ್ಡ್‌ಗಳನ್ನು ವಿತರಣೆ ಮಾಡುವಾಗ ಇವರು ಅರ್ಹರೇ ಅಥವಾ ಅನರ್ಹರೇ ಎಂದು ಹೇಳಿ ಇದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೇ ಅದನ್ನು ಕೊಟ್ಟಿರತಕ್ಕಂತಹ ಅಧಿಕಾರಿಗಳ ವಿರುದ್ಧ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇವತ್ತು ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತದೆ ಎಂದು ಹೇಳಿ ನಾವು ಇಷ್ಟೊಂದು ಕಾರ್ಡ್‌ಗಳನ್ನು ರದ್ದು ಮಾಡುತ್ತೇವೆ, ಕೆಲವರಿಗೆ ಮಾತ್ರ ಮುಂದುವರಿಸುತ್ತೇವೆಂದು ಹೇಳುವಂತಹ ರೀತಿಯಲ್ಲಿ ಇವತ್ತು ನಮಗೆ ಅನಿಸುತ್ತಿದೆ. ಬಹುಶಃ ನಾನು ಕೇಳುವುದಿಷ್ಟೆ. ಬಿಪಿಎಲ್ ಕಾರ್ಡ್ ವಿತರಣೆ ಮಾಡುವಾಗ ಅದೆಲ್ಲವೂ ಸಹ ಪರಿಶೀಲನೆಯಾಗಿರುತ್ತದೆ ಎಂದು ನಾನು ಭಾವಿಸಿರುತ್ತೇನೆ. ಅಂದರೆ, ಇವತ್ತು ಸರ್ಕಾರ ಮನಸ್ಸಿಗೆ ಬಂದ ಹಾಗೆ ನಾವು ಇವುಗಳನ್ನು ರದ್ದು ಮಾಡುತ್ತೇವೆ, ಇಷ್ಟೊಂದು ಆದಾಯ ತೆರಿಗೆ, ಮತ್ತೊಂದು ಮಗದೊಂದು ಎಂದು ಹೇಳುತ್ತಿದ್ದೀರಿ. ಅದಕ್ಕೆ ನೀವು ಸ್ಪಷ್ಟೀಕರಣ ಕೊಡಬೇಕು. ನೀವು ಅರ್ಹರು, ಮತ್ತು ಅನರ್ಹರು ಎನ್ನುವುದಕ್ಕೆ ನಿಮ್ಮ ಮಾನದಂಡ ಏನು? ಅದನ್ನು ಸ್ಪಷ್ಟವಾಗಿ ಹೇಳಬೇಕು. ಅದು ಜನರಿಗೆ ಗೊತ್ತಾಗಬೇಕು. ಈ ಬಗ್ಗೆ ಒಂದೊಂದು ಬಾರಿ ಒಂದೊಂದು ಹೇಳಿಕೆ ನಿಮ್ಮ ಸರ್ಕಾರದಿಂದ ಬರುತ್ತಿದೆ. ಅದರ ಬಗ್ಗೆ ನೀವು ಸ್ಪಷ್ಟನೆ ಕೊಡಬೇಕು. ಬೆಂಗಳೂರಿನಲ್ಲಿ ಪ್ರತಿಯೊಂದು ರೇಷನ್ ಕಾರ್ಡ್ ಮೇಲೆ ಪ್ರತಿ ಕಾರ್ಡ್‌ಗೆ ಪಡಿತರ ಅಂಗಡಿಗಳಲ್ಲಿ ಯಾರು ಸಿಬ್ಬಂದಿ ಇರುತ್ತಾರೆ, ಅವರು 20 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಏತಕ್ಕೆ ಅವರು ಈ ಹಣವನ್ನು ತೆಗೆದುಕೊಳ್ಳುತ್ತಾರೆಂದು ನೀವು ಎಂದಾದರೂ ನೋಡಿದ್ದೀರಾ? ಅಧಿಕಾರಿಗಳು ಏತಕ್ಕೆ ಹಣವನ್ನು ವಸೂಲಿ ಮಾಡುತ್ತಾರೆ? ಹಣವನ್ನು ವಸೂಲಿ ಮಾಡಿಕೊಡಿ ಎಂದು ಹೇಳಿ ಸರ್ಕಾರದಿಂದ ಏನಾದರೂ ಆದೇಶ ಆಗಿದೆಯೇ? ಏತಕ್ಕೋಸ್ಕರ ಅವರು ಈ ರೀತಿ ಮಾಡುತ್ತಿದ್ದಾರೆ, ಅವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ನೋಡಿ. ಸುಮಾರು ಒಂದೂವರೆ ಕೋಟಿ ಕಾರ್ಡ್‌ಗಳು ಇವತ್ತು ಬಿಪಿಎಲ್ ಪಡಿತರ ಅಕ್ಕಿ ಪಡೆಯುವವರಿಗೆ ಕಡಿಮೆ ಅಕ್ಕಿಯನ್ನು ಕೊಟ್ಟು ಉಳಿದ ಅಕ್ಕಿಯನ್ನು ಮಾರುಕಟ್ಟೆಯಲ್ಲಿ ದುಬಾರಿ ಹಣಕ್ಕೆ ಮಾರಾಟವಾಗುತ್ತಿದೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ? ಅದನ್ನು ಎಲ್ಲೋ ಒಂದು ಕಡೆ ಲಂಚದ ರೂಪದಲ್ಲಿ ಪಡೆಯುತ್ತಿದ್ದಾರೆ. ಅದರ ಕಡೆಯು ಸಹ ತಾವು ಗಮನಹರಿಸಬೇಕೆಂದು ನಾನು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ಈ ವಿಷಯದ ಬಗ್ಗೆ ಈಗಾಗಲೇ ಮಾತನಾಡಿರುವಂತಹ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ನಾನು

ಸಹಮತವನ್ನು ವ್ಯಕ್ತ ಮಾಡಿ, ಬಿಪಿಎಲ್ ಪಡಿತರ ಚೀಟಿಗಾಗಿ ಸಲ್ಲಿಕೆಯಾಗಿರುವ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವ ಒಂದು ಕಾರಣಕ್ಕೆ ಉಳಿದಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಈಗಾಗಲೇ ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2,34,631 ಅರ್ಜಿಗಳ ಪೈಕಿ 1,69,630 ಅರ್ಜಿಗಳು ವಿಲೇವಾರಿಯಾಗಿವೆ. ಇನ್ನೂ ಸಹ 59,520 ಅರ್ಜಿಗಳು ತಿರಸ್ಕೃತಗೊಂಡಿದ್ದು, ಪೆಂಡಿಂಗ್ ಇವೆ ಎಂದು ತಿಳಿಸಿದ್ದೀರಿ. ಅವುಗಳು ಯಾವ ಯಾವ ಕಾರಣಕ್ಕೆ ಪೆಂಡಿಂಗ್ ಉಳಿದಿವೆ, ಅವುಗಳನ್ನು ಯಾವ ಕಾಲಮಿತಿಯಲ್ಲಿ ವಿತರಿಸುತ್ತೀರಿ ಎನ್ನುವುದನ್ನು ತಿಳಿಸಬೇಕು. ಹಾಗೆಯೇ ಇವತ್ತು ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಿ 3,35,463 ಅನರ್ಹರ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದೀರಿ. ಆ ಅವಧಿಯಲ್ಲಿ ಅನರ್ಹರಿಗೆ ಕೊಟ್ಟಿರತಕ್ಕಂತಹ ಆಹಾರಧಾನ್ಯಗಳ ಮೊತ್ತ 13, 51,30,858/- ರೂಪಾಯಿಗಳು.

(ಮುಂದು)

(708) 09.12.2024 12.50 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಮುಂದು):**

ಇಷ್ಟು ಮೊತ್ತದ ಆಹಾರ ಧಾನ್ಯಗಳನ್ನು ಅನರ್ಹರಿಗೆ ವಿತರಿಸಿದಾಗ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಇದರ ಮರು ವಸೂಲಿ ಯಾವ ರೀತಿಯಾಗಿ ಆಗುತ್ತದೆ ಎಂಬುದನ್ನು ತಿಳಿಸಬೇಕು. Single person ಇದ್ದರೆ ಪಡಿತರ ಚೀಟಿಯನ್ನು ಕೊಡುವುದಿಲ್ಲ. ಪತಿ-ಪತ್ನಿ ಇಬ್ಬರೇ ಇರುವ ಕುಟುಂಬಗಳಲ್ಲಿ ಒಬ್ಬರು ಮೃತ ಪಟ್ಟಿದ್ದು, ಏಕವ್ಯಕ್ತಿ ಇರುವ ಕುಟುಂಬಗಳಲ್ಲಿ ಪಡಿತರ ಚೀಟಿಯನ್ನು ಕೊಡುತ್ತಿಲ್ಲ. ಅಂತಹವರಿಗೂ ಪಡಿತರ ಚೀಟಿಯನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಎಲ್ಲರಿಗೂ ಸೇರಿಸಿ ಒಮ್ಮೆ ಉತ್ತರವನ್ನು ಹೇಳಿ ಬಿಡಿ.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಟಿ.ಎನ್.ಜವರಾಯಿಗೌಡರು, ಮಾನ್ಯ ಐವನ್ ಡಿಸೋಜಾರವರು, ಮಾನ್ಯ ಸಿ.ಟಿ.ರವಿಯವರು, ಮಾನ್ಯ ಶರವಣ ಅವರು, ಮಾನ್ಯ ನಿರಾಣಿ ಹಣಮಂತ ರುದ್ರಪ್ಪ ಅವರು..ಹೀಗೆ ಮೂರೂ ಪಕ್ಷದ ಸದಸ್ಯರು ಸೇರಿ ಪ್ರಶ್ನೆಯನ್ನು ಕೇಳಿದ್ದಾರೆ. ಮೂರು ತಿಂಗಳ ಸಮಯವನ್ನು ಕೊಟ್ಟರೆ ಇದನ್ನು ಪೂರ್ಣವಾಗಿ ಸಮರ್ಪಕವಾಗಿ ಮಾಡಬಹುದಾಗಿದೆ. Subject to condition that... ಯಾವುದಾದರೊಂದು ಕಾರ್ಡ್ ಸ್ಥಗಿತಗೊಂಡಿದೆಯೆಂದರೆ ವಿರೋಧ ಪಕ್ಷದವರು ಮಾಧ್ಯಮಗಳ ಮುಂದೆ ಹೋಗುತ್ತಾರೆ. ಇತ್ತೀಚೆಗೆ 13 ಲಕ್ಷ ಕಾರ್ಡ್‌ಗಳನ್ನು ಪರಿಷ್ಕರಣೆ ಮಾಡಿದಾಗ 3,35,000 ಕಾರ್ಡ್‌ಗಳು ಅನರ್ಹ ಎಂದು ಬಂದಿತು. ಅದನ್ನು ಪಟ್ಟಿ ಮಾಡಿ ನೋಡಿದಾಗ ನೂರಕ್ಕೆ ಒಂದೋ ಎರಡೋ ಬಿ.ಪಿ.ಎಲ್ ಕಾರ್ಡ್ ತೊಂದರೆಯಾಗಿತ್ತು. ಅದನ್ನು open ಮಾಡಿದೆವು. ಬಿ.ಪಿ.ಎಲ್ ಕಾರ್ಡ್ ಹೊಂದಿರುವವರು ಯಾರೇ ಇದ್ದರೂ ತಕ್ಷಣವೇ ಬಂದು PDS (Public Distribution System) ನಲ್ಲಿ ತೆಗೆದುಕೊಳ್ಳಬಹುದು ಎಂದು ಹೇಳಿದ್ದೆವು.

ಮಾನ್ಯ ಜವರಾಯಿಗೌಡರು ಹೇಳದಂತೆ 40%, 30% ಇಲ್ಲ. ಸರಾಸರಿ 20% ಕಾರ್ಡ್‌ಗಳು ಇವೆ. ಎಪಿಎಲ್ ಕಾರ್ಡ್ ಹೊಂದಿರಬೇಕಾದವರೂ ಬಿಪಿಎಲ್ ಕಾರ್ಡ್ ಅನ್ನು ಹೊಂದಿದ್ದಾರೆ. ಅದನ್ನು ಲೆಕ್ಕಾಚಾರ ಮಾಡಿ ದಂಡವನ್ನೂ ವಿಧಿಸಲಾಗಿದೆ. ಈ ರೀತಿಯ ತಾರತಮ್ಯಗಳನ್ನು ಪತ್ತೆ ಹಚ್ಚಿ ಮೂರು ತಿಂಗಳನಿಂದ ಅಧಿಕಾರಿಗಳನ್ನು ನೇಮಕ ಮಾಡಿ ನಾವು ಶೋಧನೆಯನ್ನು ಮಾಡಿದ್ದೇವೆ, ಇಷ್ಟು ಹಣ ದುರುಪಯೋಗವಾಗುತ್ತಿದೆ, ಇದನ್ನು ತಡೆಗಟ್ಟಬೇಕು ಎಂದು ಕಾರ್ಡ್ ಪಡೆದುಕೊಂಡಿರುವ ಅನರ್ಹರಿಗೆ ದಂಡವನ್ನೂ ವಿಧಿಸಲಾಯಿತು. ಇಷ್ಟೆಲ್ಲಾ ಮಾಡಿದರೂ ಕೂಡ ಸಹಕಾರವಿಲ್ಲದೆ ಹೋಯಿತು. ಸಂಬಂಧವಿಲ್ಲದ ಮಾಧ್ಯಮಗಳ ಮುಂದೆ ಹೋಗಿ ಪುನಃ ನಾನು ಕಾರ್ಡ್ ವಾಪಸ್ ತರುವಂತಹ ವಾತಾವರಣ ನಿರ್ಮಾಣವಾಯಿತು. ಇದನ್ನು ಸರಿಪಡಿಸುವುದಕ್ಕೆ ಇಲ್ಲಿಯವರೆಗೆ ಯಾವ ಮಂತ್ರಿಗಳು ಪ್ರಯತ್ನ ಮಾಡಿದರೂ ಸಹಕಾರ ಕೊಟ್ಟಿಲ್ಲ. ಸಹಕಾರ ಕೊಟ್ಟರೆ ಇದನ್ನು ಮಾಡುವುದಕ್ಕೆ ಸಾಧ್ಯ.

ಮಾನ್ಯ ಡಿಸೋಜಾರವರು conditions ಬಗ್ಗೆ ಕೇಳದರು. ಇದೆಲ್ಲವನ್ನೂ ನಿಮಗೆ ವರದಿಯ ಮೂಲಕ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ 5 condition ಗಳನ್ನು ಹೇಳದ್ದೇವೆ. ಆ condition ಗಳನ್ನು ಓದಬೇಕೆಂದರೆ ಓದಿ ಹೇಳುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರೆ, ರೂ.20 ತೆಗೆದುಕೊಳ್ಳುವುದಕ್ಕೆ ಸಹಕಾರ ಕೊಡಬೇಕೋ ಹೇಗೆ?

**ಶ್ರೀ ಕೆ.ಹೆಚ್.ಮುನಿಯಪ್ಪ:-** ರೂ.20 ಕೊಟ್ಟಿದ್ದಾರೆ ಎಂದು ಯಾರಾದರೂ ಲಿಖಿತ ಅರ್ಜಿ ಸಲ್ಲಿಸಿದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರ ರೂ. 10 ಆಗಲೀ ಅಥವಾ ರೂ.20 ಆಗಲೀ ವಸೂಲಿ ಮಾಡುತ್ತಿಲ್ಲ. ಅಂತಹ ಅಧಿಕಾರಿಗಳೇನಾದರೂ ಇದ್ದಲ್ಲಿ ಅರ್ಜಿಯನ್ನು ಕೊಟ್ಟರೆ ಕ್ರಮ ತೆಗೆದುಕೊಳ್ಳಲಾಗುವುದು.

**ಶ್ರೀ ಐವನ್ ಡಿಸೋಜಾ:-** ಮೂರುವರೆ ವರ್ಷಗಳಿಂದ ಇದ್ದ ಕಾರ್ಡನ್ನು ರದ್ದುಗೊಳಿಸುತ್ತಾರೆ. ಅವರಿಂದ ದಂಡ ವಸೂಲಿ ಮಾಡುತ್ತಾರೆ. ಇದಕ್ಕೆ ಹೊಣೆಗಾರರು ಯಾರು? ಕಾರ್ಡ್ ಕೊಟ್ಟಂತಹ ಅಧಿಕಾರಿಗಳ ಮೇಲೆ ನಿಮ್ಮ ಕ್ರಮವೇನು ಎಂಬುದನ್ನು ತಾವು ಹೇಳುವುದಿಲ್ಲ. Who is accountable?

**ಶ್ರೀ ಕೆ.ಹೆಚ್.ಮುನಿಯಪ್ಪ:-** ಅಧಿಕಾರಿಗಳು ಎಲ್ಲಾ ಕ್ರಮಬದ್ಧವಾಗಿ ಮಾಡಿದ್ದಾರೆ. 13-14 ಲಕ್ಷ ಕಾರ್ಡ್‌ಗಳಲ್ಲಿ 3.5 ಲಕ್ಷ ಕಾರ್ಡ್‌ಗಳು ಎ.ಪಿ.ಎಲ್ ಕಾರ್ಡ್‌ಗಳಾಗಿವೆ. ಅವುಗಳನ್ನು ನಾವು ರದ್ದು ಮಾಡದೆ ಎಪಿಎಲ್ ಕಾರ್ಡ್‌ಗಳಲ್ಲಿಟ್ಟಿದ್ದೇವೆ. ಬೇರೆ ಬೇರೆ ವಿಷಯಗಳಲ್ಲಿ ಅವರಿಗೆ ಅನುಕೂಲವಾಗಬೇಕೆಂದು ನಾವು ರದ್ದು ಮಾಡಲಿಲ್ಲ. ಬಿಪಿಎಲ್ ಕಾರ್ಡ್‌ನಲ್ಲಿದ್ದವರನ್ನು ತಂದು ಎಪಿಎಲ್ ಕಾರ್ಡ್‌ನಲ್ಲಿಟ್ಟಿದ್ದೇವೆ. ಅವರ ಕಾರ್ಡ್‌ಗಳು ಊರ್ಜಿತವಾಗಿವೆ. ಆದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನಾನುಕೂಲವಾಗಿದ್ದು, ನಾನು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಚಿವರೆ, ಮೂರೂ ಪಕ್ಷಗಳು ಈ ಪ್ರಶ್ನೆಯನ್ನು ಮುಂದಿಟ್ಟಿವೆ. ನೀವು ಜಗ್ಗುವುದಿಲ್ಲ, ಬಗ್ಗುವುದಿಲ್ಲ ಎನ್ನುವವರು ಯಾರಿಗೆ ಹೆದರುತ್ತಿದ್ದೀರಿ? ಏಕೆ ಹೆದರಬೇಕು? ನಿರ್ದಾಕ್ಷಿಣ್ಯವಾಗಿ ಅನರ್ಹರನ್ನು ರದ್ದುಪಡಿಸಿ. ಅರ್ಹರಿಗೆ ಅನ್ಯಾಯವಾಗದಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದಾಗಿದೆ. ಅನರ್ಹ ಪಡಿತರ ಚೀಟಿಗಳನ್ನು

ರದ್ದುಪಡಿಸುವುದು ಕೂಡ ಸರ್ಕಾರದ ಕರ್ತವ್ಯವಾಗಿದೆ. ತಾವು ಯಾರಿಗೆ ಹೆದರುತ್ತಿದ್ದೀರಿ? ಅಂದರೆ ಅಕ್ರಮಕ್ಕೆ ತಾವು ಪ್ರೋತ್ಸಾಹ ಕೊಡುತ್ತಿದ್ದೀರಾ?

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ರವಿಯವರು ಹೇಳಿರುವುದು ಸ್ವಾಗತಾರ್ಹವಾದುದು. ಆದರೆ ಇವರು ಮಾಧ್ಯಮಗಳ ಮುಂದೆ ಹೋಗದೆ....

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾಧ್ಯಮದ ಹೆಸರನ್ನೇಕೆ ಹೇಳುತ್ತೀರಿ?

**ಶ್ರೀ ಸಿ.ಟಿ.ರವಿ:-** ನೀವು ಕೂಲಿ ಮಾಡುವವರ ಪಡಿತರ ಚೀಟಿಯನ್ನು ರದ್ದು ಪಡಿಸಿದರೆ ನಾವು ಮಾಧ್ಯಮದ ಮುಂದೆ ಹೋಗುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಇವು ಯಾವುದೂ ಕಡತಕ್ಕೆ ಹೋಗಬಾರದು. ಮುಂದಿನ ಪ್ರಶ್ನೆ ಮಾನ್ಯ ಸುಜಾ ಕುಶಾಲಪ್ಪನವರದು.

ಮಾನ್ಯ ಮುನಿಯಪ್ಪನವರೆ, ನೀವು ಎಲ್ಲರನ್ನೂ ಕರೆದು ಮಾತನಾಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಪಕ್ಷಾತೀತವಾಗಿ ಎಂದಾಗ ಕಾಂಗ್ರೆಸ್, ಬಿ.ಜೆ.ಪಿ ಮತ್ತು ಜನತಾ ದಳ ಮೂರು ಪಕ್ಷಗಳೂ ಸೇರುತ್ತವೆ. ಯಾರಿಗೆ ಬಿಪಿಎಲ್ ಕಾರ್ಡ್ ಬೇಕೋ ಅವರು PDS ಗೆ ಹೋದರೆ ಸಿಗುವಂತೆ open ಇಟ್ಟಿದ್ದೇವೆ. ಎಪಿಎಲ್ ಕಾರ್ಡ್‌ಗಳು ಜಾಸ್ತಿಯಿದ್ದು, ಅದನ್ನು ತಡೆಯುವುದಕ್ಕೆ ನಿಮ್ಮ ಸಹಕಾರವನ್ನು ಕೋರಿದ್ದೇನೆ. ನಾನು ನಿಮ್ಮದು ಎಂದು ಮಾತನಾಡಿರುವುದಿಲ್ಲ. ಎಲ್ಲರಿಗೂ ಅನ್ವಯಿಸುತ್ತದೆ.

**ಪ್ರಶ್ನೆ ಸಂಖ್ಯೆ 57**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ಇದು 24 ವರ್ಷಗಳ ಹಳೆಯ ಪ್ರಕರಣವಾಗಿದ್ದು, ಮಾನ್ಯ ಸಚಿವರು ಬಂದ ನಂತರ ದಿನಾಂಕ 23.01.2024ರಂದು ಈ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಗೊಳಸಬೇಕೆಂದು ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಬ್ರಿಟಿಷರ ಕಾಲದಲ್ಲಿ ಕೊಟ್ಟಂತಹ ಲೀಸ್ ಹಣ ಎಕರೆಗೆ ರೂ.2-ರೂ.7 ರಂತೆ ರೂ.1492 ಕೋಟಿಗಳಷ್ಟು ಹಣ ಬಾಕಿಯಿದೆ. ಆ ಹಳೆಯ ಬಾಕಿಯನ್ನು ಕಳೆದ 24 ವರ್ಷಗಳಿಂದಲೂ ಏಕೆ ನಮ್ಮ ಅಧಿಕಾರಿಗಳು ವಸೂಲು ಮಾಡಿರುವುದಿಲ್ಲ. 1997ರ ನಂತರ ಹೆಕ್ಟೇರ್‌ಗೆ ರೂ.5000ಗಳಂತೆ ಸರ್ಕಾರ ನಿಗದಿ ಪಡಿಸಿದೆ. ನಂತರ ಲೀಸ್‌ಗೆ ಕೊಟ್ಟವರು ಕೋರ್ಟ್‌ಗೆ ಹೋಗುತ್ತಾರೆ. ಅದಕ್ಕೆ ನನ್ನ ತಕರಾರಿಲ್ಲ. ಆದರೆ ಹಳೆಯ ಬಾಕಿಯನ್ನು ವಸೂಲು ಮಾಡಬೇಕು. ಇಲ್ಲವಾದರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಕಳೆದ 24 ವರ್ಷಗಳಿಂದ ನಮ್ಮ ಸರ್ಕಾರಿ ವಕೀಲರು ಏನು ಮಾಡುತ್ತಿದ್ದಾರೆ? ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು):-** ಮಾನ್ಯ ಸಭಾಪತಿಯವರೆ, ಅರಣ್ಯ ಭೂಮಿಯನ್ನು ಗುತ್ತಿಗೆ ಪಡೆದಿರುವ ಕಂಪನಿಗಳ ವಿವರಗಳನ್ನು ಮಾನ್ಯ ಸದಸ್ಯರು ಕೇಳಿದ್ದರು. ರಾಜ್ಯದಲ್ಲಿ ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸುಮಾರು 9 ಕಂಪನಿಗಳಿಗೆ 5125.7 ಎಕರೆ ಭೂಮಿ ಲೀಸ್ ಆಧಾರದ ಮೇಲೆ ಕೊಡಲಾಗಿದೆ. ಅದನ್ನು ಬ್ರಿಟಿಷರ ಕಾಲದಲ್ಲಿ ಕೊಟ್ಟಿರುವುದು. 1912ರಿಂದ ಪ್ರಾರಂಭವಾಗಿ ಸುಮಾರು ವರ್ಷಗಳವರೆಗೆ ಲೀಸ್ ಕೊಡಲಾಗಿದೆ. ಲೀಸ್ ಕೊಟ್ಟ ಮೇಲೆ ಅರಣ್ಯ ಇಲಾಖೆಯ ವತಿಯಿಂದ 1999-2000ನೇ ಇಸವಿಯಲ್ಲಿ ಇದು ಮೀಸಲು ಅರಣ್ಯ ಪ್ರದೇಶದ ಮಧ್ಯಭಾಗದಲ್ಲಿರುವ ಜಮೀನು ಇದೆ.

(ಮುಂದು)

(709) 09-12-2024 (1.00) ಕೆಜಿ:ಕೆಎಸ್(ಎಂಡಿ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ ಬಿ ಖಂಡ್ರೆ (ಮುಂದು):**

ಇದು lease ಗೆ ಕೊಟ್ಟಿದ್ದು ಎನ್ನುವಂತಹದ್ದು ಗಮನಕ್ಕೆ ಬಂದಿದೆ. ಇದು ಅಲ್ಲಿಯವರೆಗೂ ಗಮನಕ್ಕೆ ಬಂದಿರಲಿಲ್ಲ. ಇದರ ಬಗ್ಗೆ ಯಾರು ವಿಚಾರಣೆ ಮಾಡಿರಲಿಲ್ಲ. ಆದಾದ ಮೇಲೆ 2015 ರಲ್ಲಿ ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಮೊದಲು ಒಂದು ಎಕರೆಗೆ 2 ರೂಪಾಯಿ ಇತ್ತು. ಆಮೇಲೆ lease amount ಒಂದು ಎಕರೆಗೆ 5 ರೂಪಾಯಿ ಆಯಿತು. ನಂತರ 5 ಸಾವಿರ ರೂಪಾಯಿಗಳವರೆಗೆ ಆಯಿತು. Lease ಗೆ ಕೊಟ್ಟಿರುವಂತಹದ್ದಕ್ಕೆ ಯಾವುದು ದಾಖಲೆಗಳು ಇಲ್ಲ.

ಈಗಾಗಲೇ ಅರಣ್ಯ ಇಲಾಖೆಯ ವತಿಯಿಂದ ಅವರಿಗೆ ನೋಟಿಸ್ ಕೊಟ್ಟ ಮೇಲೆ, ಆ 9 ಕಂಪನಿಗಳವರು ಉಚ್ಛ ನ್ಯಾಯಾಲಯಕ್ಕೆ ಹೋಗಿ ನಾವು ಕೇಳಿರುವಂತಹ lease amount ಕೊಡುವುದರ ಬಗ್ಗೆ ತಡೆಯಾಜ್ಞೆ ತಂದಿದ್ದಾರೆ. ಮತ್ತೆ ಅದರ ಜೊತೆಯಲ್ಲಿ ಅರಣ್ಯ ಭೂಮಿಯನ್ನು ಈ ಹಿಂದೆ lease ಗೆ ಕೊಡುವಂತಹ ಸಂದರ್ಭದಲ್ಲಿ 999 ವರ್ಷಗಳಿಗೆ lease ಗೆ ಎಂದು ಕೊಡಲಾಗಿತ್ತು. 999 ವರ್ಷಗಳಿಗೆ lease ಗೆ ಕೊಟ್ಟಿದ್ದು ಸರಿಯಲ್ಲವೆಂದು 2012 ರಲ್ಲಿ 99 ವರ್ಷಗಳಿಗೆ lease ಎಂದು ಸರ್ಕಾರ ಮಾಡಿದೆ. ಅದರ ವಿರುದ್ಧ ಅವರು ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಈ ಪ್ರಕರಣ ನ್ಯಾಯಾಲಯದಲ್ಲಿದ್ದ ಕಾರಣ, ನಮ್ಮ ಸರ್ಕಾರ ಬಂದ ಮೇಲೆ ಇದರ ಬಗ್ಗೆ ಬಹಳ ಗಂಭೀರತೆಯಿಂದ ಪರಿಗಣಿಸಿ ನಮ್ಮ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ನೇತೃತ್ವದಲ್ಲಿ 5 ಜನರ ಒಂದು ಕಾರ್ಯಪಡೆಯ ತಂಡವನ್ನು ರಚನೆ ಮಾಡಲಾಗಿದೆ. ಈ ಕಾರ್ಯಪಡೆಗೆ ಕಾಲಕಾಲಕ್ಕೆ ಎ.ಜಿ.,ಯವರ ಹಾಗೂ ಕಾನೂನು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ follow-up ಮಾಡಿದ್ದೇವೆ. ಕೆಲವೊಂದು ಪ್ರಕರಣಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿವೆ. ಈ ಪ್ರಕರಣಗಳು ಆದಷ್ಟು ಬೇಗ ನಮ್ಮ ಪರವಾಗಿ ಆಗುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳಲಾಗಿದೆ. ಉಚ್ಛ ನ್ಯಾಯಾಲಯದಲ್ಲಿ ಈ ಪ್ರಕರಣ ಮೊನ್ನೆ ದಿವಸ hearing ಗೆ ಬಂದಿತ್ತು. ಈಗ ಮತ್ತೆ, ದಿನಾಂಕ 12-12-2024 ಕ್ಕೆ hearing ಗೆ ಬರುತ್ತಿದೆ. ಹೀಗಾಗಿ, ಈ ಎಲ್ಲಾ ರೀತಿಯ ಪ್ರಯತ್ನಗಳು ಅರಣ್ಯ ಭೂಮಿಯನ್ನು ಮರುವಶ ಪಡೆದುಕೊಳ್ಳುವುದಕ್ಕೆ ಮತ್ತು lease ಹಣ ಮಸೂಲಿ ಮಾಡುವುದಕ್ಕೆ ಅರಣ್ಯ ಇಲಾಖೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತಿದೆ. ಈಗಾಗಲೇ 20.59 ಕೋಟಿ ರೂಪಾಯಿಗಳು ಗುತ್ತಿಗೆ ಮೊತ್ತವಾಗಿದ್ದು, ಇದಕ್ಕೆ ಬಡ್ಡಿ ಮತ್ತು ಚಕ್ರ ಬಡ್ಡಿ ಒಟ್ಟು 1,471.58 ಕೋಟಿ ರೂಪಾಯಿಗಳಾಗಿದೆ. Lease ಹಣ ಹಾಗೂ ಬಡ್ಡಿ ಮತ್ತು ಚಕ್ರ ಬಡ್ಡಿ ಸೇರಿ ಒಟ್ಟು 1,492.18 ಕೋಟಿ ರೂಪಾಯಿಗಳು ಬರಬೇಕೆಂದು ಅರಣ್ಯ ಇಲಾಖೆಯಿಂದ claim ಮಾಡುತ್ತಿದ್ದೇವೆ. ಈ ವಿಷಯದ ಬಗ್ಗೆ ನಿರಂತರವಾಗಿ ನಿಗಾ ವಹಿಸಿದ್ದೇವೆ. ಯಾವುದೇ ಪರಿಸ್ಥಿತಿಯಲ್ಲಿಯೂ ಅರಣ್ಯ ಇಲಾಖೆಯ ಭೂಮಿಯನ್ನು lease ಗೆ ಕೊಟ್ಟಿರುವುದು ಏನಿದೆ, ಇದನ್ನು ನ್ಯಾಯಾಲಯದಲ್ಲಿ ಸಮರ್ಪಕವಾಗಿ ಎಲ್ಲಾ ದಾಖಲೆಗಳನ್ನು ಕೊಟ್ಟು ಮತ್ತೆ ಅದನ್ನು ಮರುವಶಪಡಿಸಿಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ):-** ಮಾನ್ಯ ಸಭಾಪತಿಯವರೇ, ಈಗಾಗಲೇ 24 ವರ್ಷಗಳು ಆಗಿದೆ. ಸರ್ಕಾರಿ ವಕೀಲರು ಯಾರು ಇದ್ದಾರೆ, ಅವರಿಗೆ ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ರೀತಿಯಲ್ಲಿ ಮಾನ್ಯ ಸಚಿವರು ಇಷ್ಟು ಕಾಲಮಿತಿಯಲ್ಲಿ ಮಾಡಬೇಕೆಂದು ಹೇಳಬೇಕು. ಇದು 24 ವರ್ಷಗಳ ಹಳೆಯ ಪ್ರಕರಣವಾಗಿದೆ.

**ಶ್ರೀ ಈಶ್ವರ ಬಿ. ಖಂಡ್ರೆ:-** ಮಾನ್ಯ ಸಭಾಪತಿಯವರೇ, ಈ ಕಾರಣಕ್ಕಾಗಿಯೇ ನಮ್ಮ ಸರ್ಕಾರ ಬಂದ ಮೇಲೆ ಕಾರ್ಯಪಡೆಯನ್ನು ರಚನೆ ಮಾಡಿದ್ದೇವೆ. ಅದರ ಬಗ್ಗೆ ನಿರಂತರವಾಗಿ ಮೇಲ್ವಿಚಾರಣೆ ನಡೆಯುತ್ತಿದೆ. ಅದರ ಬಗ್ಗೆ ನಿಗಾವಹಿಸಿದ್ದಾರೆ. ಆದಷ್ಟು ಶೀಘ್ರದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ತೀರ್ಪು ಬರಬೇಕೆಂದು ಹೇಳಿ ನಾವು early hearing ಗೆ ಹಾಕಿದ ನಂತರವೇ ಮೊನ್ನೆ ದಿವಸ ಬಂದಿದೆ. ಇದನ್ನು 10 ವರ್ಷಗಳಿಂದ ಯಾರು High

Court ನಲ್ಲಿ move ಮಾಡಿರಲಿಲ್ಲ. ಈ ಹಿಂದಿನವರ ಯಾರ ಬಗ್ಗೆಯೂ ಸಹ ನಾನು ಟೀಕೆ, ಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಅರಣ್ಯ ಸಚಿವನಾದ ಮೇಲೆ ಈ ಪ್ರಕರಣ ಗಮನಕ್ಕೆ ಬಂದಿದ್ದು, ನಂತರ ಇದರ ಬಗ್ಗೆ ಒಂದು ಕಾರ್ಯಪಡೆಯನ್ನು ರಚನೆ ಮಾಡಿ ತ್ವರಿತಗತಿಯಲ್ಲಿ ಈ ಭೂಮಿಯನ್ನು ಮರುವಶಪಡಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಆದಷ್ಟು ಬೇಗ ನಮ್ಮ ಪರವಾಗಿ ತೀರ್ಪು ಬರುತ್ತದೆ ಎನ್ನುವಂತಹ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ.

**ಪ್ರಶ್ನೆ ಸಂಖ್ಯೆ 123**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರು ಅವಶ್ಯಕವಾದ ನನ್ನ 2ನೇ ಉಪ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಕಳೆದ 30-31 ವರ್ಷಗಳಿಂದ ಅಕ್ರಮ-ಸಕ್ರಮ ವಿದ್ಯುತ್ ಸಂಪರ್ಕಗಳ ವ್ಯವಸ್ಥೆ ರೈತರಿಗೆ ಬಂದತಹದ್ದು. ಆ ಸರ್ಕಾರ, ಈ ಸರ್ಕಾರ ಎನ್ನುವಂತಹದ್ದಲ್ಲ. ಇದು ರೈತರಿಗೆ ಪುಕ್ಕಟೆಯಾಗಿ ವಿದ್ಯುತ್ ಕೊಟ್ಟು ರೈತರು ನೀರಾವರಿ ಮಾಡಿಕೊಳ್ಳುವಂತಹ ಒಂದು ವ್ಯವಸ್ಥೆ. ಕನಿಷ್ಠ ವ್ಯವಸ್ಥೆ ಮಾಡಿದಂತಹದ್ದು ಹಿಂದಿನ ಸರ್ಕಾರವನ್ನು appreciate ಮಾಡಲೇಬೇಕಾಗುತ್ತದೆ. ಇತ್ತೀಚೆಗೆ ದಿನಾಂಕ 22-09-2023 ರಂದು ಈ ಅಕ್ರಮ-ಸಕ್ರಮ ಯೋಜನೆಯನ್ನು ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನಿಲ್ಲಿಸಿ ಬಿಟ್ಟಿದೆ. ಮಾನ್ಯ ಸಚಿವರು ಇದನ್ನು ಏಕೆ ನಿಲ್ಲಿಸಲಾಗಿದೆ ಎನ್ನುವುದರ ಬಗ್ಗೆ ಹೇಳಿಲ್ಲ. ಮಾನ್ಯ ಸಚಿವರು ಉತ್ತರ ಕೊಡುತ್ತಾ ಹೋಗಿದ್ದಾರೆ. ಅದಕ್ಕಿಂತ ಪೂರ್ವದಲ್ಲಿ ಇದ್ದಂತಹ ಪಂಪ್‌ಸೆಟ್‌ಗಳಿಗೆ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಬೇಕು, ನೈಸರ್ಗಿಕವಾದಂತಹ ಸಂಪನೂಲ್ಮವನ್ನು ಬಳಸಿಕೊಳ್ಳಬೇಕು ಎನ್ನುವ ಉದ್ದೇಶದ ಬಗ್ಗೆ ವಿವರಣೆಯನ್ನು ಕೊಟ್ಟಿಲ್ಲ. ಇದು ಕಾಕತಾಳೀಯ. ಕೇಂದ್ರ ಸರ್ಕಾರದ ಮಾನ್ಯ ಪ್ರಧಾನಿ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಲು ಸೋಲಾರ್ ಅಳವಡಿಸಿಕೊಳ್ಳಲು ವಿಶೇಷವಾದ ಒತ್ತನ್ನು ಕೊಡುತ್ತಿದ್ದಾರೆ. ಇದಕ್ಕೆ 30% ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ 30% ಸಬ್ಸಿಡಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿವೆ. ಈಗ ರಾಜ್ಯ ಸರ್ಕಾರದ 30% ಸಬ್ಸಿಡಿಯನ್ನು ಹೆಚ್ಚಿಗೆ ಮಾಡಿ 50% ಕೊಡುವಂತಹದ್ದನ್ನು ರಾಜ್ಯ ಸರ್ಕಾರ ಹೇಳಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ವಾಸ್ತಾವವಾಗಿ ಒಬ್ಬ ರೈತ ಬೋರ್‌ವೆಲ್ ಹಾಕಿಸಿ ಆ ಪಂಪ್‌ಸೆಟ್‌ಗೆ ವಿದ್ಯುತ್ ವ್ಯವಸ್ಥೆ ಮುಖಾಂತರ.,

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರಿಯವರೇ, ಸರ್ಕಾರ ಏನು ಮಾಡಬೇಕು ಅದರ ಬಗ್ಗೆ ಕೇಳಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳುತ್ತೇನೆ. ಸೋಲಾರ್ ಪಂಪ್‌ಸೆಟ್ ವ್ಯವಸ್ಥೆ ಮಾಡಬೇಕೆಂದರೆ, ಬಹಳ ಖರ್ಚುದಾಯಕ ಎನಿಸುತ್ತದೆ. ರೈತರು 20% ಹಣ ಹಾಕಬೇಕಾಗಿದೆ. ಇದು ರೈತರಿಗೆ ಕಷ್ಟವಾಗುತ್ತದೆ. ಹಿಂದಿನ 10 ಹೆಚ್.ಪಿ.ವರೆಗಿನ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ವ್ಯವಸ್ಥೆಯನ್ನು ಏಕೆ ನಿಲ್ಲಿಸಲಾಗಿದೆ ಎಂಬುದರ ಉದ್ದೇಶವನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಕಾರ, ಅಕ್ರಮ-ಸಕ್ರಮದ ಬಗ್ಗೆ ರಾಜ್ಯ ಸರ್ಕಾರ ವಿದ್ಯುತ್ ಒದಗಿಸುವ ನಿಟ್ಟಿನಲ್ಲಿ, ಎನರ್ಜಿ/ವಿಎಸ್‌ಸಿ/214/2003, ದಿನಾಂಕ 7.10.2023

ರಂದು ಆದೇಶವನ್ನು ಹೊರಡಿಸಿದೆ. ಅದರಲ್ಲಿ regularise ಮಾಡಲು ಕೆಲವೊಂದು ಷರತ್ತುಗಳನ್ನು ಹಾಕಿದ್ದು, ಅದನ್ನು ಲಿಖಿತ ಉತ್ತರದಲ್ಲಿ ಒದಗಿಸಲಾಗಿದೆ. ಅದಕ್ಕೆ ಕಾರಣ ಏನೆಂದರೆ, ನನಗೆ ಗೊತ್ತಿರುವಂತೆ ಯಾವ ರೈತರು electricity connection ಗೆ ಅರ್ಜಿ ಹಾಕಿಕೊಂಡಿದ್ದರು, ಅದಕ್ಕೆ ಸುಮಾರು ವರ್ಷಗಳಿಂದ ವಿದ್ಯುತ್ ಕಂಪನಿಗಳಿಂದ ತಡ ಮಾಡಿದರು. ಆ ರೈತರಿಗೆ ನೀರು ಬರದೇ ತೊಂದರೆಯಾದಾಗ ಅವರು ನೇರವಾಗಿ ವಿದ್ಯುತ್ ಲೈನ್‌ಗೆ hook ಹಾಕಿಕೊಂಡು electricity connection ಅನ್ನು ತೆಗೆದುಕೊಂಡರು. ಇದನ್ನು ವರ್ಷ, ವರ್ಷ ಬೇರೆ ಬೇರೆ ರೀತಿಯಲ್ಲಿ ವಿಸ್ತರಣೆ ಮಾಡಿಕೊಂಡು ಹೋದರು. ಇದನ್ನು ಯಾವಾಗ ವಿಸ್ತರಣೆ ಮಾಡಿದರೂ ಸಹ, ಅದನ್ನು ಇನ್ನೂ ಮುಂದೆ disconnect ಮಾಡುತ್ತೇವೆಂದು ಹೇಳಿದರು. ಈ ರೀತಿ ಸಾಕಷ್ಟು ಮಾಡಲಾಗಿದೆ. ನಮ್ಮ ಸರ್ಕಾರ 2023 ರಲ್ಲಿ ಅಧಿಕಾರಕ್ಕೆ ಬಂದಾಗ, ಈ ವಿಚಾರವನ್ನು ಚರ್ಚೆ ಮಾಡಿದ್ದೇವೆ. ಇದಕ್ಕೆ 2011ರ ತನಕ ಸರ್ಕಾರದ cabinet decision ಗಳು ಇದ್ದವು. 2011 ರಿಂದ ಯಾವುದೇ cabinet decision ಇಲ್ಲದೇ 2023ರವರೆಗೆ ಅನಧಿಕೃತ ವಿದ್ಯುತ್ ಸಂಪರ್ಕ ನಡೆದಿದೆ. ಈಗ ಸುಮಾರು 4.50 ಲಕ್ಷ ಪಂಪ್‌ಸೆಟ್‌ಗಳು ಅಕ್ರಮವಾಗಿ ನಡೆಯುತ್ತಿವೆ. ಅದಕ್ಕೆ ನಾವು ಕ್ಯಾಬಿನೇಟ್‌ನಲ್ಲಿ ಅದನ್ನು regularize ಮಾಡಿ. ಈ ರೀತಿ ಹೋದರೆ ಕಷ್ಟವಾಗುತ್ತದೆ ಎಂದು, ನಾನು 1991 ರಲ್ಲಿ ಆಗ ಮಂತ್ರಿಮಂಡಲದಲ್ಲಿ ಇದ್ದೆ. ಆಗ ಮುಖ್ಯ ಮಂತ್ರಿಯಾಗಿದ್ದ ಮಾನ್ಯ ಎಸ್.ಬಂಗಾರಪ್ಪನವರು 10 HP ವರೆಗೂ ಉಚಿತವಾಗಿ ವಿದ್ಯುತ್ ಸಂಪರ್ಕ ಕೊಡಬೇಕೆಂದು ಆದೇಶ ಮಾಡಿದರು. ನಾವು ಅದಕ್ಕೆ ಈಗಲೂ ಸಹ ಬದ್ಧರಾಗಿದ್ದೇವೆ. ನಾವು ಅದನ್ನು ಈಗಲೂ ಕೊಡುತ್ತಿದ್ದೇವೆ. ಒಂದು ವರ್ಷಕ್ಕೆ ಸುಮಾರು 13 ಸಾವಿರ ಕೋಟಿ ರೂಪಾಯಿಗಳ subsidy ಅನ್ನು ರಾಜ್ಯ ಸರ್ಕಾರ ಕೊಡುತ್ತಿದೆ. ಇದು ಅದಕ್ಕೂ ಇದಕ್ಕೂ ಯಾವುದೇ ಸಂಬಂಧ ಇಲ್ಲ. ಈಗಲೂ ಅದನ್ನು ಕೊಡುತ್ತೇವೆ. ನಾಳೆಯೂ ಕೊಡುತೇವೆ, ಅದು ನಮ್ಮ ಸರ್ಕಾರದ್ದು. ಈ ಅಕ್ರಮ ಸಕ್ರಮವನ್ನು ನಿಲ್ಲಿಸಬೇಕಾದರೆ, ಅದು continue ಆಗಿ ಹೋಗುತ್ತಿದೆ. ಅದಕ್ಕೆ ನಾವು ಯಾವ ರೈತರದ್ದು disconnect ಮಾಡುವುದಕ್ಕೆ ಆಗುವುದಿಲ್ಲವೆಂದು ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಯಾವ ರೀತಿ ಸಕ್ರಮಗೊಳಿಸುವುದು ಎಂದು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ವಿದ್ಯುತ್ ಜಾಲ ಏನಿದೆ, ಅದರ 500 ಮೀಟರ್ ಒಳಗಡೆ ಇರುವಂತಹದಕ್ಕೆ ನಾವೇ ವಿದ್ಯುತ್ ಸಂಪರ್ಕ ಕೊಡುತ್ತೇವೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದನ್ನು ಈಗಾಗಲೇ ಜಾರಿ ಮಾಡುತ್ತಿದ್ದೇವೆ. ಈಗಾಗಲೇ ಸುಮಾರು 1.20 ಲಕ್ಷ ಪಂಪ್‌ಸೆಟ್‌ಗಳಿಗೆ ಸಂಪರ್ಕವನ್ನು ಕೊಟ್ಟಿದ್ದೇವೆ. ವಿದ್ಯುತ್ ಜಾಲದಿಂದ 500 ಮೀಟರ್‌ಗಿಂತ ಹೆಚ್ಚಿಗೆ ಇದ್ದರೆ ತಾವು ಹೇಳಿದಂತೆ, KUSUM Component-B (*Kisan Urja Suraksha evam Utthaan Mahabhiyan)* ಅನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜೊತೆಗೂಡಿ ಮಾಡುವಂತಹದ್ದಾಗಿದೆ. ಇದಕ್ಕೆ ಕೇಂದ್ರ ಸರ್ಕಾರ 30% ಹಾಗೂ ರಾಜ್ಯ ಸರ್ಕಾರ 30% ಕೊಡುತ್ತದೆ. ಈಗ ನಾವು 13 ಸಾವಿರ ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದೇವೆಂದು cabinet ನಲ್ಲಿ discuss ಮಾಡಿದ್ದು, KUSUM Component-B ಸೋಲಾರ್ ಬೋರ್‌ವೆಲ್‌ನಲ್ಲಿ ಬರುತ್ತದೆ. ಇದನ್ನು ಕಡಿಮೆ ಮಾಡಿದರೆ, ನಮಗೆ ಸಬ್ಸಿಡಿ ಕೊಡುವುದರಲ್ಲಿಯೂ ಸಹ ಕಡಿಮೆಯಾಗುತ್ತದೆ ಎಂದು ತಿಳಿದುಕೊಂಡು ಈಗಾಗಲೇ 30% ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ 50%

ಸಬ್ಸಿಡಿಯನ್ನು ಅಕ್ರಮ ಸಕ್ರಮ ಆಗುವುದಕ್ಕೆ ಯಾವುದು ಬಾಕಿ ಇತ್ತು ಅದಕ್ಕೆ ಕೊಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಈಗಾಗಲೇ 12 ಜನ ಗುತ್ತಿಗೆದಾರರ ಸಮೇತ ನಾವು finalize ಮಾಡಿದ್ದು, ಇವರು ನೇರವಾಗಿ ಕೊಟ್ಟರೆ ಸಾಕು ಆ ತರಹದ ವ್ಯವಸ್ಥೆ ಮಾಡುತ್ತಿದ್ದೇವೆ. ಈಗ ಒಂದು ಅಥವಾ ಒಂದೂವರೆ ವರ್ಷದೊಳಗೆ ಈ ಹಿಂದೆ backlog ಏನಿತ್ತು, ಅದನ್ನು ಪೂರ್ಣಗೊಳಿಸುವುದಕ್ಕೆ ಹಣ ಕೊಡುತ್ತಿದ್ದೇವೆ. ಅದನ್ನು ಮಾಡುತ್ತಿದ್ದೇವೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಬೆಂಬಲ ಕೊಡುತ್ತಿದ್ದೀರಿ. ಅದನ್ನು ಮಾಡಬೇಕಾಗುತ್ತದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ತಮ್ಮ ಸರ್ಕಾರ ಇದ್ದಾಗ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಇಂಧನ ಸಚಿವರಾಗಿದ್ದರು. ನಾವು ಸ್ವಾಗತ ಮಾಡುತ್ತೇವೆ. ಅವರು "ಶೀಘ್ರ ಸಂಪರ್ಕ" ಯೋಜನೆಯನ್ನು ಹಾಕಿಕೊಂಡಿದ್ದರು. ಅದು ಜಾರಿಯಲ್ಲಿ ಇತ್ತು.

(ಮುಂದು)

(710) 09.12.2024 1.10 ಎಂವಿ- ಕೆಎಸ್ (ಎಂಡಿ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):**

ರೈತರು ಮೂರ್ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬೋರ್‌ವೆಲ್ ಕೊರೆಯಿಸಿ, ನಾಲ್ಕೈದು ಕಂಬಗಳನ್ನು ಹಾಕಿಸಿಕೊಂಡು, ಅದಕ್ಕೆ ಲೈನ್ ಎಳೆಯಿಸಿಕೊಂಡಿರುತ್ತಾರೆ. ಆದರೆ, ಇವರು ಆ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾಕುವಂತಹ ಕೆಲಸವನ್ನು ಮಾತ್ರ ಮಾಡುತ್ತಾರೆ. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ, ಹಳೆಯದಾದ ಎಲ್ಲಾ ಲೈನ್‌ಗಳು ಮತ್ತು ಕಂಡಕ್ಟರ್‌ಗಳು ವೇಸ್ಟ್ ಆಗಿವೆ. ಅವುಗಳು ಸುಮಾರು ನಲವತ್ತು ವರ್ಷಗಳಷ್ಟು ಹಳೆಯದಾಗಿವೆ. ಅವುಗಳಿಗೆ ಜೀವಿತಾವಧಿಯೇ ಇಲ್ಲದಂತಾಗಿದೆ. ಅವುಗಳೆಲ್ಲಾ ಹರಿದು ಬೀಳುತ್ತಿವೆ. ಅಲ್ಲಲ್ಲಿ ಲಕ್ಷಾಂತರ ಜನ ರೈತರು ಮತ್ತು ಲೈನ್‌ಮ್ಯಾನ್‌ಗಳು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅವರು ಅದರ ವ್ಯವಸ್ಥೆಯನ್ನು ಸಹ ಮಾಡಿಲ್ಲ. ಇನ್ನು ಶೀಘ್ರ ಸಂಪರ್ಕ ಯೋಜನೆ ಎನ್ನುವಂಥದ್ದು ರೈತರಿಗೆ ಕನಸಾಗಿ ಉಳಿಯುವಂತಹ ಸ್ಥಿತಿಯಲ್ಲಿ ರೈತರಿಗೆ ತೊಂದರೆಯಾಗುತ್ತಿದೆ. ರೈತರು ಟ್ರಾನ್ಸ್‌ಫಾರ್ಮರ್‌ಗಳನ್ನು ಕೇಳುವುದಕ್ಕೆ ಹೋದರೆ, ನಮಗೆ ಅನುದಾನ ಕೊಟ್ಟಿಲ್ಲ ಎನ್ನುವಂತಹ ವಿಚಾರವನ್ನು ಹೇಳುತ್ತಿದ್ದಾರೆ. ಇದು ಎಲ್ಲಿಯವರೆಗೆ ಎಂದರೆ, ಅವರು ಅದರ ಕನೆಕ್ಷನ್ ಅನ್ನು ಮಾಡುತ್ತೇವೆ ಎನ್ನುವಂಥದ್ದು ಇದೆ. ಈಗ ನನ್ನ ಅಂದಾಜಿನ ಪ್ರಕಾರ ಹೆಸ್ಕಾಂನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಅನಧಿಕೃತ ಪಂಪ್‌ಸೆಟ್‌ಗಳಿವೆ. ಅವುಗಳು ಇನ್ನು regularize ಆಗಿಲ್ಲ. ಅದನ್ನು ಹಾಕುತ್ತೇವೆ ಮತ್ತು ಮಾಡುತ್ತೇವೆ ಎನ್ನುವುದು ಇನ್ನು ಎಷ್ಟು ವರ್ಷ? ಈಗ ಅಲ್ಲಿ ಶೋಷಣೆ ನಡೆಯುತ್ತಿದೆ. ಮಾನ್ಯ ಸಚಿವರು ಹೇಳಿದಂತೆ, ಅವರು hook ಹಾಕಿಕೊಳ್ಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ hook ಹಾಕುವಂಥದ್ದು ಎಂತಹ ಸ್ಥಿತಿ? ಏಕೆಂದರೆ, ಅವರು ಬೋರ್‌ವೆಲ್ ಹಾಕಿದ್ದಾರೆ, ಅದಕ್ಕೆ ಅವರು ಅನಿವಾರ್ಯವಾಗಿ ಅದಕ್ಕೆ ಕರೆಂಟ್ ಅನ್ನು ತೆಗೆದುಕೊಳ್ಳಲೇಬೇಕು. ಆ ರೀತಿ ತೆಗೆದುಕೊಳ್ಳುವಾಗ, ಲೈನ್‌ಮ್ಯಾನ್‌ಗಳು ಮತ್ತು ಕೆಳಮಟ್ಟದ ಅಧಿಕಾರಿಗಳು ಅವರನ್ನು ಶೋಷಣೆ ಮಾಡಿ, ಅವರಿಂದ ಲಕ್ಷದಿಂದ ಎರಡು ಲಕ್ಷ ರೂಪಾಯಿಗಳನ್ನು

ಕೀಳುವಂತಹ ಕೆಲಸ ನಡೆದಿದೆ. ಇದಕ್ಕೆ ಅಲ್ಲಿಯವರೆಗೆ ಈ ಅಕ್ರಮ-ಸಕ್ರಮ ಯೋಜನೆ, ಅಂದರೆ ನಿರಂತರ ಸಂಪರ್ಕ ಯೋಜನೆ continue ಮಾಡಿ. ಅವರಿಗೆ choose ಮಾಡಿಕೊಳ್ಳುವಂತಹ ಅವಕಾಶ ಮಾಡಿಕೊಡಿ. ಅವರು ಸೋಲಾರ್ ಬೇಕಾದರೆ, ಸೋಲಾರ್ ತೆಗೆದುಕೊಳ್ಳಲಿ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ 4.50 ಲಕ್ಷ ಏನು ಅಕ್ರಮ-ಸಕ್ರಮವಿದೆ ಅದನ್ನೆಲ್ಲಾ ಸಕ್ರಮ ಮಾಡುವುದಕ್ಕೆ ಈಗಾಗಲೇ ಕ್ರಮ ಕೈಗೊಳ್ಳುತ್ತಿದ್ದೇವೆ. ಅದು ಯಾವುದನ್ನು ಸಹ cancel ಮಾಡುತ್ತಿಲ್ಲ. ನಾವು ಈಗಲೂ ಅದಕ್ಕೆ ಸಂಬಂಧಪಟ್ಟಂತೆ ಸಭೆ ಮಾಡಿದಾಗ, ಈಗ ಹೆಚ್ಚಿಗೆ ಇರುವುದು ಎಂದರೆ, ಐನೂರು ಮೀಟರ್ ಒಳಗಡೆ ಇರುವಂಥದ್ದು. ಅದನ್ನು ಈಗಾಗಲೇ ಮಾಡುತ್ತಿದ್ದೇವೆ. ನಾವು ಈಗಾಗಲೇ 1.20 ಲಕ್ಷದಷ್ಟನ್ನು ಮಾಡಿದ್ದೇವೆ. ಇನ್ನು ಒಂದು ಮತ್ತು ಎರಡು ವರ್ಷದ ಒಳಗಡೆ ಹಳೆ ಬ್ಯಾಕ್‌ಲಾಗ್‌ಗಳನ್ನು ಮಾಡುತ್ತೇವೆ. ಇದು ತಮಗೆ ಗೊತ್ತಿದೆ. ಮೊದಲಿನಿಂದ ಯಾರಿಗಾದರೂ ಪಂಪ್‌ಸೆಟ್‌ಗಳಿಗೆ ಏನಾದರೂ ಕನೆಕ್ಷನ್ ಬೇಕಾದರೆ ಅರ್ಜಿ ಹಾಕಬೇಕು. ಆಗ ಇಲಾಖೆಯವರು ಅಲ್ಲಿಗೆ ಬಂದು inspect ಮಾಡಿ, ಅಲ್ಲಿಗೆ ಎಷ್ಟು ಟ್ರಾನ್ಸ್‌ಫಾರ್ಮರ್ ಬೇಕು ಎಂದು ಅದನ್ನು ಮಾಡುತ್ತಿದ್ದೇವೆ. ಈಗ ಏನಾಗಿದೆ ಎಂದರೆ, ಈ ಅಕ್ರಮ-ಸಕ್ರಮದಿಂದ ಹೆಚ್ಚಿನ ಪವರ್ ತೆಗೆದುಕೊಳ್ಳುವುದರಿಂದ Transformers burn ಆಗುತ್ತಿವೆ. ಈಗ ನಮ್ಮ ಇಲಾಖೆಗೆ ಅದೇ ದೊಡ್ಡ ಕೆಲಸವಾಗಿದೆ. ನಾವು ಯಾವುದೇ ಟ್ರಾನ್ಸ್‌ಫಾರ್ಮರ್ ಗಳನ್ನು ಬದಲಾವಣೆ ಮಾಡುವುದಿಲ್ಲವೆಂದು ಹೇಳುತ್ತಿಲ್ಲ. ಈಗಲೂ ಸಹ ಅವುಗಳನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದೇವೆ. ಈ ಒಂದು ಸಮಸ್ಯೆ ಪರಿಹಾರವಾಗಬೇಕಾದರೆ, ಬಹುಶಃ ಒಂದು, ಒಂದೂವರೆ ವರ್ಷದಲ್ಲಿ 4.50 ಲಕ್ಷಗಳಿಗೆ ಸೆಟ್‌ಗಳನ್ನು ಮಾಡುತ್ತೇವೆ. ಮತ್ತೆ KUSUM Component-B *(Kisan Urja Suraksha evam Utthaan Mahabhiyan)* ಯೋಜನೆ ಪ್ರಕಾರ ಬಾರಿ ಕಡಿಮೆ ಇದೆ. ಅದರ ಸಮೇತ ಈ ಸಬ್ಸಿಡಿಯನ್ನು ಹೆಚ್ಚಿಗೆ ಮಾಡಿದ್ದೇವೆ. ಅಂದರೆ, ಅದಕ್ಕೆ ಶೇಕಡಾ ೮೦ರಷ್ಟನ್ನು ಕೊಡುತ್ತಿದ್ದೇವೆ. ಅದು ಸಮೇತ ಆಗುತ್ತದೆ. ಈಗ ಹೊಸದಾಗಿ ಬರುವುದಕ್ಕೆ ಅವರಲ್ಲಿ ಯಾರಿಗಾದರೂ ಈ ಹಳೆಯದರಲ್ಲಿ self-execution delay ಆಗುತ್ತಿದ್ದರೆ, ಅವರುಗಳು ನಾವೇ self-execution ಮಾಡುತ್ತೇವೆಂದರೆ, ಅದನ್ನು ಸಹ ಬೇಗ ಮಾಡಿಕೊಡುತ್ತೇವೆ. ಇನ್ನು ಹೊಸದಾಗಿ ಏನಾದರೂ ಪಂಪ್‌ಸೆಟ್‌ಗಳು ಬೇಕಾದರೆ, ಅಂತಹವರು ಅರ್ಜಿ ಹಾಕಬೇಕು. ಅರ್ಜಿ ಹಾಕಿದ ನಂತರ ನಮ್ಮ ಇಲಾಖೆಯ ಕ್ರಮದ ಪ್ರಕಾರ ಅದನ್ನು ಕೊಡುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು regularization ಮಾಡಬೇಕಾದರೆ, ಅದನ್ನು ಸರ್ವೆ ಮಾಡಲಿ. ಅಂದರೆ, ದಯಮಾಡಿ ಈ ಅಕ್ರಮ-ಸಕ್ರಮಗಳ ಕೆಲಸವನ್ನು ಸರಿಯಾಗಿ ಮಾಡುವಂತಹ ಕೆಲಸ ಮಾಡಲಿ. ಈಗ ಸರ್ವೆ ಮಾಡುವಂತಹ ಕೆಲಸವನ್ನು ಮಾಡಲಿ. ಆದರೆ, ಇವತ್ತಿನ ದಿವಸ ಅದನ್ನು ಮಾಡುತ್ತಿಲ್ಲ. ನಿತ್ಯ ರೈತರ ಶೋಷಣೆ ನಡೆಯುತ್ತಿದೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೆ, ತಾವು ಕುಳಿತುಕೊಳ್ಳಿ. ಒಬ್ಬರಿಗೂ ಸಹ ತಾಳ್ಮೆ ಇಲ್ಲ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಸರ್ವೆ ಮಾಡಿದ್ದೇವೆ. ಅದರ details ಅನ್ನು ಕಳುಹಿಸಿಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 115**

**(ಉತ್ತರವನ್ನು ಲಗತ್ತಿಸಿದೆ)**

**ಡಾ: ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ತಮ್ಮ ಉತ್ತರದಲ್ಲಿ ಹೊಸದಾಗಿ ಸುಮಾರು 243 Oxygen Plant ಗಳನ್ನು covid-19 pandemic ನಂತರ ರಾಜ್ಯದಲ್ಲಿ ಸ್ಥಾಪನೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಈ ಹೊಸ Oxygen Plant ಗಳು ಬಹುತೇಕ defunct ಆಗುತ್ತಿವೆ. ಅಂದರೆ, ಪ್ರಯೋಜನಕ್ಕೆ ಬಾರದೆ waste ಆಗುತ್ತಿವೆ ಎಂದು ಹಲವಾರು ಪತ್ರಿಕಾ ವರದಿಯಲ್ಲಿ ಬಂದಿದೆ. ಅಲ್ಲದೆ, ಈ Oxygen Plant ಗಳನ್ನು ನಿರ್ವಹಣೆ ಮಾಡುವುದಕ್ಕೆ ಬೇಕಾದಂತಹ ಸಿಬ್ಬಂದಿಗಳನ್ನು ನೇಮಕ ಮಾಡದೇ ಇರುವಂಥದ್ದು ಇದಕ್ಕೆ ಮುಖ್ಯ ಕಾರಣವೆಂದು ಪತ್ರಿಕೆಗಳು ವರದಿ ಮಾಡಿವೆ. ಹಾಗಾಗಿ ಈ 143 Oxygen Plant ಗಳಲ್ಲಿ ನಿಜವಾಗಿ ಎಷ್ಟು ಕೆಲಸ ಮಾಡುತ್ತಿದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಮತ್ತೆ ಅದಕ್ಕೆ ಸಿಬ್ಬಂದಿಗಳನ್ನು ನೇಮಿಸದೇ ಇದ್ದರೆ, ಅದಕ್ಕೆ ಸೂಕ್ತ ಸಿಬ್ಬಂದಿಗಳನ್ನು ಸಹ ನೇಮಿಸಬೇಕು. ಮತ್ತೆ ಈ Oxygen Plant ಗಳು ಉಪಯೋಗವಾಗುವಂತೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಮತ್ತೆ ವೆಂಟಿಲೇಟರ್‌ಗಳ ಸಂಬಂಧವಾಗಿ KSMSCL (*Karnataka* State Medical Supplies Corporation Ltd) ನವರು ಸುಮಾರು 158 ವೆಂಟಿಲೇಟರ್‌ಗಳನ್ನು PM-CARES ಅಡಿಯಲ್ಲಿ ಖರೀದಿ ಮಾಡಿದ್ದಾರೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಕಳೆದ ತಿಂಗಳು ನವೆಂಬರ್ 21ನೇ ತಾರೀಖಿನ 'ಇಂಡಿಯನ್ ಎಕ್ಸ್‌ಪ್ರೆಸ್' ದಿನ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿದೆ. ಅದರಲ್ಲಿ Justice John Michael D'Cunha ರವರ ವರದಿಯನ್ನು ಆಧರಿಸಿ ಆ ಆರ್ಟಿಕಲ್ ಅನ್ನು ಬರೆದಿದ್ದಾರೆ. ಅದರಲ್ಲಿ KSMSCL records ನಲ್ಲಿ ಸುಮಾರು 3205 ವೆಂಟಿಲೇಟರ್‌ಗಳನ್ನು PM-CARES ಅಡಿಯಲ್ಲಿ ಖರೀದಿ ಮಾಡಿದ್ದಾರೆ ಅಥವಾ ಪಡೆದುಕೊಂಡಿದ್ದಾರೆ ಎಂದು ಆ ವರದಿಯಲ್ಲಿ ಹೇಳಿದ್ದಾರೆ. ಆದರೆ, ಇಲ್ಲಿ ಕೇವಲ 158 ವೆಂಟಿಲೇಟರ್‌ಗಳನ್ನು ಮಾತ್ರ ಖರೀದಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಮತ್ತೆ Justice John Michael D'Cunha ರವರ ಆಯೋಗ ಏನಿದೆ, ಆಯೋಗದವರು ತನಿಖೆ ಮಾಡಲಾಗಿ, KSMSCL ರವರು HLL Lifecare Limited Company ಕೇಂದ್ರದಿಂದ ಮಾನ್ಯತೆ ಪಡೆದಿರುವಂತಹ ಏಜೆನ್ಸಿ. ಆ ಏಜೆನ್ಸಿಯವರು ಸುಮಾರು 1250 ವೆಂಟಿಲೇಟರ್‌ಗಳನ್ನು ದಿನಾಂಕ: 04.03.2020ರಂದು ಮತ್ತೆ ಸುಮಾರು 130 ವೆಂಟಿಲೇಟರ್‌ಗಳನ್ನು ದಿನಾಂಕ: 22.03.2020ರಂದು ಎರಡು ಬಾರಿ supply order ಗಳನ್ನು ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ಈಗ HLL Lifecare Limited Company ನವರನ್ನು ಕರೆದು ತನಿಖೆ ಮಾಡಿದಾಗ, ಆ HLL Lifecare Limited Company ನವರು ತಮ್ಮ ಅಫಿಡವಿಟ್‌ನಲ್ಲಿ ರಾಜ್ಯಕ್ಕೆ ಸುಮಾರು 998 ವೆಂಟಿಲೇಟರ್‌ಗಳನ್ನು ಕೊಟ್ಟಿದ್ದೇವೆ. ಆದರೆ, KSMSCL ಮೂಲಕವಾಗಿ ಅಲ್ಲ. ನಾವು ನೇರವಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, ಆಯೋಗದ ಸಮಿತಿಯವರು ತನಿಖೆ ಮತ್ತು ಪರಿಶೀಲನೆ ಮಾಡಿ, ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ surprise inspection ಮಾಡಿದ್ದಾರೆ. ಮೈಸೂರಿನ ಕೆ.ಆರ್.ಆಸ್ಪತ್ರೆಯ Stock Register ನಲ್ಲಿ ಅಂತಹ ಯಾವುದೇ

ವಿಚಾರಗಳು ಬಂದಿಲ್ಲವೆಂದು ಇದೆ. ಅದೇ ರೀತಿ ಕೊಡಗು ಮೆಡಿಕಲ್ ಕಾಲೇಜಿನಲ್ಲೂ PM-CARES ಅಡಿಯಲ್ಲಿ HLL Lifecare Limited Company ಮೂಲಕ ಯಾವುದೇ ವೆಂಟಿಲೇಟರ್‌ಗಳು ಬಂದಿಲ್ಲವೆಂದು ಸ್ಟಾಕ್ ರಿಜಿಸ್ಟರ್‌ನಲ್ಲಿದೆ. ಈ ವೆಂಟಿಲೇಟರ್‌ಗಳ ಖರೀದಿಯಲ್ಲಿ ದೊಡ್ಡ ಅವ್ಯವಹಾರವಾಗಿದೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ: ಯತೀಂದ್ರ.ಎಸ್‌ರವರು PSA (Pressure Swing Adsorption) Oxygen Generating Plant and Liquid Medical Oxygen Plant ಗಳ ಬಗ್ಗೆಯೂ ಕೂಡ ಪ್ರಶ್ನೆಯನ್ನು ಕೇಳಿದ್ದಾರೆ. ಅದೇ ರೀತಿ ವೆಂಟಿಲೇಟರ್‌ಗಳ ಬಗ್ಗೆಯೂ ಸಹ ಪ್ರಶ್ನೆಯನ್ನು ಹಾಕಿದ್ದಾರೆ. ಮಾನ್ಯ ಸದಸ್ಯರು ಸುಮಾರು 243 PSA Plants ಏನಿವೆ, ಅದರಲ್ಲಿ ಸುಮಾರು 168 ವರ್ಕಿಂಗ್‌ನಲ್ಲಿವೆ. ಉಳಿದಂತಹವುಗಳ ರಿಪೇರಿ ಮತ್ತೆ ಬೇರೆ ಬೇರೆ ಸಮಸ್ಯೆಗಳಿವೆ. ಆದರೆ, ಈ PSA Plants ಏನು ಹಾಕಿದ್ದೇವೆ, ಅದರ maintenance cost ಜಾಸ್ತಿ ಇದೆ. ಬಹುಶಃ ವರ್ಷಕ್ಕೆ ಹೆಚ್ಚು ಕಡಿಮೆ ಸುಮಾರು ಐದು ಲಕ್ಷ ರೂಪಾಯಿಯಷ್ಟು ಹಣ ಅದರ maintenance ಗೆ ಬೇಕಾಗುತ್ತದೆ. ಅದು ಅಷ್ಟು pure oxygen ಕೊಡುವುದಿಲ್ಲ. ಅದರಲ್ಲಿ ಬರುವಂಥದ್ದು ಶೇಕಡಾ 93 ರಿಂದ 94 ರಷ್ಟು purity grade ನಲ್ಲಿ ಕೊಡುತ್ತದೆ. ನಾವು ಆ ಆಕ್ಸಿಜನ್ ಅನ್ನು ICU (Intensive Care Unit) and OT (Operation Theatre) ಗಳಲ್ಲಿ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಆಗ covid-19 ಸಂದರ್ಭದಲ್ಲಿ ಈ PSA Plants ಗಳನ್ನು ಹಾಕಿಸಿದ್ದೇವೆ. ಜನರಲ್ ವಾರ್ಡ್‌ನ ಬೆಡ್‌ಗಳಲ್ಲಿ ಆಕ್ಸಿಜನ್ ಅಗತ್ಯತೆ ಇರುತ್ತದೆ. ಆದರೆ, ಅದರ purity ಯ ಸಮಸ್ಯೆ ಇದೆ. ಈಗ ನಮಗೆ ಹೊರಗಡೆಯಿಂದ ಆಕ್ಸಿಜನ್ ಸಿಲಿಂಡರ್ ಏನು ಸಿಗುತ್ತದೆ, ಅದು ನಮಗೆ ಇದಕ್ಕಿಂತ economically viable ಆಗಿದೆ. ಅವರು ಅದನ್ನು ಖರೀದಿ ಮಾಡಿ, ಅದನ್ನು ಉಪಯೋಗಿಸಿಕೊಳ್ಳುವಂಥದ್ದರಲ್ಲೂ ಕೂಡ PSA Plants ಗಳಿಗಿಂತ ಆಸ್ಪತ್ರೆಗಳಲ್ಲಿ ಅದೇ ಸುಲಭವಾಗಿರುವಂಥದ್ದು. ಅನೇಕ ಕಡೆ ಈ PSA Plants ಅನ್ನು ಸಂಪೂರ್ಣ ಬಳಕೆ ಮಾಡುವುದಕ್ಕೆ ಆಗುತ್ತಿಲ್ಲ. ಅದರ ನಿರ್ವಹಣೆಯ ಸಮಸ್ಯೆ ಕೂಡ ಇದೆ. ನಾವು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ ಬರೆದಿದ್ದೇವೆ. ಇದನ್ನೆಲ್ಲಾ ತಾವು ತಮ್ಮ ಅನುದಾನಗಳಿಂದ ನೀಡಿದ್ದೀರಿ, ಈಗ ಅದರ ನಿರ್ವಹಣೆಗೂ ಕೂಡ ಈ NHM (National Health Mission) fund ನಲ್ಲಿ ಕೊಡಿಸಿ ಎಂದು ನಾನು ಮೊನ್ನೆಯ ದಿವಸ ನವದೆಹಲಿಗೆ ಹೋದಾಗ, ಅವರ ಬಳಿ ಮನವಿ ಮಾಡಿದ್ದೇವೆ. ಏಕೆಂದರೆ, ಇದನ್ನು ಪ್ರತಿವರ್ಷ ನಿರ್ವಹಣೆ ಮಾಡಬೇಕಾಗುತ್ತದೆ. ಮತ್ತೆ ಅದರ purity ಕಡಿಮೆ ಇರುವುದರಿಂದ ಅದನ್ನು ಎಲ್ಲಾ ಕಡೆಗಳಲ್ಲಿ ಉಪಯೋಗಿಸುವುದಕ್ಕೆ ಆಗುವುದಿಲ್ಲ.

ಮತ್ತೊಂದು ವಿಚಾರವೆಂದರೆ Liquid Medical Oxygen ಅನ್ನು ಕೆಲವು ಕಡೆಗಳಲ್ಲಿ ಉಪಯೋಗ ಮಾಡುತ್ತಿದ್ದಾರೆ, ಆದರೆ ಕೆಲವು ಕಡೆಗಳಲ್ಲಿ ಉಪಯೋಗ ಮಾಡುತ್ತಿಲ್ಲ. ಏಕೆಂದರೆ, ನಮ್ಮಲ್ಲಿ ಅಷ್ಟೊಂದು ಬೇಡಿಕೆ ಇಲ್ಲ. ಆದರೆ, ಕೋವಿಡ್-19 ಸಂದರ್ಭದಲ್ಲಿ ಆಕ್ಸಿಜನ್‌ಗೆ ಬಹಳ ಬೇಡಿಕೆ ಇತ್ತು. ಆ ಸಂದರ್ಭದಲ್ಲಿ ಸರ್ಕಾರಗಳು ತೀರ್ಮಾನ ಮಾಡಿ, capacity ಯನ್ನು ಹೆಚ್ಚಿಗೆ ಮಾಡಿಕೊಂಡುಬಿಟ್ಟರು. ಈಗ ನಮಗೆ ಅಷ್ಟೊಂದು ಅವಶ್ಯಕತೆ ಇಲ್ಲ. ಅದಕ್ಕೋಸ್ಕರ

Liquid Oxygen Plant ಗಳಿವೆ. ಆದರೆ, ನಾವು ಅದನ್ನು ಹೆಚ್ಚು ಉಪಯೋಗಿಸುತ್ತಿಲ್ಲ. ಅದೂ ಒಂದು ಸಮಸ್ಯೆ. ಅದರ ಜೊತೆಗೆ ಮಾನ್ಯ ಸದಸ್ಯರು ವೆಂಟಿಲೇಟರ್‌ಗಳ ಬಗ್ಗೆಯೂ ಸಹ ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದ ಹಾಗೆ KSMSCL ವತಿಯಿಂದ ಖರೀದಿ ಮಾಡಿರುವಂಥದ್ದು 158 ವೆಂಟಿಲೇಟರ್‌ಗಳು. PM-CARES ಕಡೆಯಿಂದ, ಒಟ್ಟಾರೆ 2871 ವೆಂಟಿಲೇಟರ್‌ಗಳು ಬಂದಿರುವಂಥದ್ದು. ಮತ್ತೆ HLL Lifecare Limited Company and BEL Company ನವರು ನಮ್ಮ ಆರೋಗ್ಯ ಇಲಾಖೆಗೆ ಸುಮಾರು 478 ವೆಂಟಿಲೇಟರ್‌ಗಳನ್ನು ತಮ್ಮ CSR (Corporate Social Responsibility) fund ನಿಂದ ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. PM-CARES ನವರು ನಮಗೆ ಹಣವನ್ನು ಕೊಡುವುದಿಲ್ಲ. ಅವರು ನೇರವಾಗಿ ವೆಂಟಿಲೇಟರ್‌ಗಳನ್ನು ಸಪ್ಲೈ ಮಾಡಿದ್ದಾರೆ. HLL Lifecare Limited Company and BEL Company ನವರು ವೆಂಟಿಲೇಟರ್‌ಗಳನ್ನು supply ಮಾಡಿದ್ದಾರೆ. ಅದು ಎಲ್ಲಾ ಕಡೆಗಳಲ್ಲೂ ಅದೇ ರೀತಿಯ ಸಮಸ್ಯೆ. ಈಗ ಇರುವಂತಹ ಬೆಡ್‌ಗಳು ಕಡಿಮೆ ಇವೆ. ಆದರೆ, ವೆಂಟಿಲೇಟರ್‌ಗಳು ಜಾಸ್ತಿ ಇವೆ. ಆದುದರಿಂದ, ಅದನ್ನು ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ಅದನ್ನು ಬಳಕೆ ಮಾಡುವುದಕ್ಕೆ ಆಗುತ್ತಿಲ್ಲ.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಈಗ PM-CARES ಕಡೆಯಿಂದ HLL Lifecare Limited Company ಮೂಲಕ 263 ವೆಂಟಿಲೇಟರ್‌ಗಳನ್ನು ನೀಡಿದ್ದಾರೆ. ಆದರೆ, Justice John Michael D'Cunha ರವರ ಆಯೋಗದ ಮುಂದೆ…

(ಮುಂದು)

(711) 09.12.2024 01.20 ಎಲ್‌ಎಲ್/ಎಂಡಿ(ಕೆಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಮಾನ್ಯ ಯತೀಂದ್ರರವರು ಹೇಳಿರುವ ವಿಚಾರವನ್ನು ನಾನು ಮತ್ತೊಮ್ಮೆ ನೋಡುತ್ತೇನೆ. ಇದರಲ್ಲಿ ಇಷ್ಟೊಂದು ವ್ಯತ್ಯಾಸ ಏತಕ್ಕೆ ಬರುತ್ತಿದೆ ಮತ್ತು ಜಸ್ಟೀಸ್ ಮೈಕಲ್ ಡಿ. ಕುನ್ಹಾ ಸಮಿತಿ ವರದಿಯನ್ನು ಸಹ ಪರಿಶೀಲನೆ ಮಾಡಿಕೊಂಡು, ಅಲ್ಲಿನ ವಸ್ತುಸ್ಥಿತಿ ಏನು ಎಂಬುದನ್ನು ತಿಳಿದುಕೊಂಡು, ಇದರಲ್ಲಿ ಯಾವುದಾದರೂ ಅವ್ಯವಹಾರ ಅಥವಾ ತಪ್ಪುಗಳು ಆಗಿದ್ದರೆ, ಖಂಡಿತವಾಗಿಯೂ ಸಹ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಡಾ: ಯತೀಂದ್ರ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, PM CARES (Prime Minister's Citizen Assistance and Relief in Emergency Situations) ನಿಂದ 3,349 ವೆಂಟಿಲೇಟರ್‌ರಗಳನ್ನು ಏನು ಕೊಟ್ಟಿದ್ದಾರೆ, ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ, ಆ ರೀತಿ ಯಾವುದೇ ವೆಂಟಿಲೇಟರ್‌ಗಳು ಬಂದಿಲ್ಲವೆಂದು ಹಾಸ್ಪಿಟಲ್ stock register ಹೇಳುತ್ತಿದೆ.

**ಸಭಾಪತಿಯವರು:-** ಈ ಬಗ್ಗೆ ಒಂದು ತನಿಖೆ ಮಾಡಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಡಾ: ಯತೀಂದ್ರ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಹಾಗಾಗಿ ಈ ವೆಂಟಿಲೇಟರ್‌ಗಳ ಖರೀದಿಯಲ್ಲಿ ಅವ್ಯವಹಾರ ಆಗಿದೆ. ಜೊತೆಗೆ, ಜಸ್ಟೀಸ್ ಮೈಕಲ್ ಡಿ. ಕುನ್ಹಾರವರ ವರದಿ ಏನಿದೆ, ಅದನ್ನು ಚರ್ಚೆ ಮಾಡುವುದಕ್ಕೆ ತಾವು ಕಾಲಾವಕಾಶ ಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೈಸೂರು ಮತ್ತು ಕೊಡಗು ಜಿಲ್ಲೆ ಬಗ್ಗೆ ಹೇಳಿದ್ದಾರೆ. ನಾನು ಅದನ್ನು ಸಹ ಪರಿಶೀಲನೆ ಮಾಡುತ್ತೇನೆ. ಒಂದು ವೇಳೆ ವೆಂಟಿಲೇಟರ್‌ಗಳನ್ನು ಅಲ್ಲಿಗೆ ಸರಬರಾಜು ಮಾಡಿದ್ದು, ಅಲ್ಲಿ ಉಪಯೋಗ ಮಾಡುತ್ತಿಲ್ಲವೋ ಅಥವಾ ಒಂದು ವೇಳೆ ಅಲ್ಲಿಗೆ ಸರಬರಾಜೇ ಆಗಿಲ್ಲವೋ ಅಥವಾ ಅಲ್ಲಿ ಏನಾಗಿದೆ ಎಂಬುದನ್ನು ನಾನು ಪರಿಶೀಲನೆ ಮಾಡಿ ಖಂಡಿತವಾಗಿ ಕೂಡ ನಾನು ಅದನ್ನು ವಿಚಾರಣೆ ಮಾಡಿಸುತ್ತೇನೆ.

**ಪ್ರಶ್ನೆ ಸಂಖ್ಯೆ ೮೦**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ಶ್ರೀ ಗೋವಿಂದರಾಜುರವರ ಪರವಾಗಿ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಒಟ್ಟು ಖಾಸಗಿ ಔಷಧಿ ಮಾರಾಟ ಮಳಿಗೆಗಳು 37,130 ಇದೆ. ಇದರಲ್ಲಿ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ 7 ಜನತಾ ಬಜಾರ್ ಕೇಂದ್ರಗಳು, 23 ಜನಸಂಜೀವಿನಿ ಕೇಂದ್ರಗಳು ಹಾಗೂ 122 ಜನೌಷಧಿ ಕೇಂದ್ರಗಳು ಸಹ ಇರುತ್ತವೆ. ನನ್ನ ಸ್ನೇಹಿತರು ಕೇಳಿರುವಂತಹ ಪ್ರಶ್ನೆ ಏನು ಎಂದರೆ, ಎಷ್ಟು ಔಷಧಿ ಮಾರಾಟ ಮಳಿಗೆಯನ್ನು ತಾವು ತಪಾಸಣೆ ಮಾಡಿದ್ದೀರಿ; ಎಷ್ಟು ಔಷಧಿ ಮಾರಾಟ ಮಳಿಗೆಗಳ ಪರವಾನಗಿಯನ್ನು ರದ್ದು ಮಾಡಿದ್ದೀರಿ; ಅವುಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; ಅವು ಯಾವ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ, 2023-24ನೇ ಸಾಲಿನಲ್ಲಿ 21,694 ಅನ್ನು ಪರಿವೀಕ್ಷಣೆಗಳಾಗಿವೆ. ಅಮಾನತುಗೊಳಿಸಿದಂತಹ ಪರವಾನಗಿಗಳ ಸಂಖ್ಯೆ 1245; ರದ್ದುಪಡಿಸಿದಂತಹ ಪರವಾನಗಿಗಳ ಸಂಖ್ಯೆ 292. ಆದರೆ, ಯಾವ ಕಾರಣಕ್ಕಾಗಿ ರದ್ದುಪಡಿಸಿದ್ದಾರೆ, ಯಾವ ನಿಯಮ ಉಲ್ಲಂಘನೆಯಾಗಿದೆ ಎಂಬುದನ್ನು ಉತ್ತರದಲ್ಲಿ ಕೊಟ್ಟಿರುವುದಿಲ್ಲ. ದಯಮಾಡಿ, ಅದನ್ನು ಒದಗಿಸಿಕೊಡಬೇಕು. ಇನ್ನೊಂದು ಕಡೆಯಲ್ಲಿ ಏನು ಹೇಳಿದ್ದಾರೆಂದರೆ, 23 ಪ್ರಕರಣಗಳಲ್ಲಿ ಮೊಕದ್ದಮೆ ಹೂಡಿದ್ದೇವೆ ಎಂದು ಹೇಳಿದ್ದಾರೆ. ಅದರಲ್ಲಿ Special Court for Economic Offences ಎಂದು ಹಾಕಿದ್ದಾರೆ. ಆದರೆ, ಅದರಲ್ಲಿ ಯಾವ ಸೆಕ್ಷನ್ ಎಂದು ನಮೂದು ಮಾಡಿರುವುದಿಲ್ಲ. ಇದು ನಮಗೆ ಅರ್ಥವಾಗಿರುವುದಿಲ್ಲ. ಅಂದರೆ, ಅವರು ಯಾವ ಆರ್ಥಿಕ ಅಪರಾಧವನ್ನು ಪರವಾನಗಿ ಪಡೆದಂತಹ ಔಷಧಿ ಮಾರಾಟ ಮಳಿಗೆಗಳು ಅಥವಾ ಡೀಲರ್ಸ್‌ಗಳು ಮಾಡಿದ್ದಾರೆ ಎಂಬ ಮಾಹಿತಿ ಕೊಡಬೇಕು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಗಡಿನಾಡು ಜಿಲ್ಲೆಗಳು. ಇವು ಆಂಧ್ರಪ್ರದೇಶ ಮತ್ತು ತಮಿಳುನಾಡು ಜಿಲ್ಲೆಗಳಿಗೆ ಹೊಂದಿಕೊಂಡಿರುವಂತಹ ಜಿಲ್ಲೆಗಳು. ಈ ಜಿಲ್ಲೆಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಜನ ಬರುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಮಾದಕ ಔಷಧಿಗಳ ದುರುಪಯೋಗ ಆಗತಕ್ಕಂತಹದ್ದು ಇದೆ. ಅಂದರೆ, ಯಾವ ಔಷಧಿ ರೋಗಿಗಳಿಗೆ ತಲುಪಬೇಕಾಗಿತ್ತು, ಅದನ್ನು ಯುವಕರು ಮತ್ತು ಬೇರೆಯವರು ಉಪಯೋಗ ಮಾಡುತ್ತಾರೆ ಎನ್ನುವಂತಹ ವಿಷಯ ಮಾನ್ಯ ಸಚಿವರ ಗಮನಕ್ಕೆ ಬಂದಿದೆ ಎಂಬುದನ್ನು ನನ್ನ ಸ್ನೇಹಿತರು ನನಗೆ ತಿಳಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸಚಿವರು ಕೂಡ ಕೋಲಾರ ಜಿಲ್ಲೆಗೆ ಭೇಟಿ ಕೂಡ ನೀಡಿ ಪರಿಶೀಲಿಸಿರುತ್ತಾರೆ. ಜೊತೆಗೆ, ಅಲ್ಲಿನ ಜಿಲ್ಲಾಧಿಕಾರಿಗಳು ಸಹ ಎಲ್ಲಾ ಔಷಧಿ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ, ಎಲ್ಲಾ ಮಳಿಗೆಗಳಲ್ಲಿ ಸಿಸಿಟಿವಿ ಕಡ್ಡಾಯವಾಗಿ ಅಳವಡಿಸಬೇಕೆಂದು, ಇದರಿಂದಾಗಿ ಯಾರು ಯಾವ ಔಷಧಿಗಳನ್ನು ಖರೀದಿ ಮಾಡುತ್ತಾರೆಂಬುದು ತಿಳಿಯುತ್ತದೆ ಎಂದು ಹೇಳಿದ್ದಾರೆ. ದಿನಾಂಕ:28.07.2024 "ಪ್ರಜಾವಾಣಿ ದಿನಪತ್ರಿಕೆ"ಯಲ್ಲಿ, "ಪ್ರವಾಸಿ ಮಂದಿರದ ಆವರಣದಲ್ಲಿ ಕೆಮ್ಮಿನ ಔಷಧಿ ಬಾಟಲಿಗಳು" ಎಂದು ವರದಿಯಾಗಿರುತ್ತದೆ. ಇದು ಎಲ್ಲಿಯೋ ಒಂದು ದುರುಪಯೋಗ ಆಗುವಂಥದ್ದು ಇದೆ. ದಯಮಾಡಿ ಇದರ ಬಗ್ಗೆ ತನಿಖೆ ನಡೆಸಬೇಕು ಮತ್ತು ಜಿಲ್ಲಾಧಿಕಾರಿಯವರಾದ ಶ್ರೀ ಅಕ್ರಂ

ಪಾಷಾರವರು ಕೋಲಾರ ಜಿಲ್ಲೆಯಲ್ಲಿರುವಂತಹ ಎಲ್ಲಾ ಔಷಧಿ ಮಾರಾಟ ಮಳಿಗೆಗಳು ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಬೇಕೆಂದು ಏನು ಹೇಳಿದ್ದಾರೆ. ಆ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಹೇಳುತ್ತೇನೆ. ತದನಂತರ, ನಾನು ಸಿಬ್ಬಂದಿಗಳ ಬಗ್ಗೆ ಮಾತನಾಡುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರದಲ್ಲಿ ಎಲ್ಲಾ ಮಾಹಿತಿಯನ್ನು ಸಹ ಸಂಪೂರ್ಣವಾಗಿ ನೀಡಿದ್ದೇವೆ. ಅಂದರೆ, ಎಷ್ಟು ಪ್ರಕರಣಗಳಲ್ಲಿ ಯಾವ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾಹಿತಿ ನೀಡಿರುತ್ತೇವೆ. ಸುಮಾರು 292 ಔಷಧಾಲಯ ಮಾರಾಟ ಮಳಿಗೆಗಳನ್ನು ರದ್ದು ಮಾಡಿದ್ದೇವೆ ಮತ್ತು ಕೆಲವನ್ನು ಸಸ್ಪೆಂಡ್ ಮಾಡಿದ್ದೇವೆ. ಯಾವ ಕಾರಣಕ್ಕಾಗಿ ಏನೇನು ಮಾಡಿದ್ದಾರೆಂದು ಕೇಳಿದ್ದಾರೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಸೆಕ್ಷನ್‌ಗಳನ್ನು ಹಾಕಿದ್ದು ಅದರ ಬಗ್ಗೆ ವಿವರಣೆ ಇರುವುದಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಯಾವ ಯಾವ ಔಷಧಿ ಮಾರಾಟ ಮಳಿಗೆಗಳು ಯಾವ ಯಾವ ಅಪರಾಧಗಳನ್ನು ಮಾಡಿದ್ದಾರೆ, ಅದನ್ನು ನೋಡಿಕೊಂಡು ಮಾಡಿರುತ್ತಾರೆ. ಅವರು ಕಾನೂನುಬಾಹಿರವಾಗಿ ಔಷಧಿ ಮಾರಾಟ ಮಾಡಿದ್ದಾರೆಯೇ ಅಥವಾ ಔಷಧಿ ಚೀಟಿ ಇಲ್ಲದೇ ಔಷಧಿ ಮಾರಾಟ ಮಾಡಿದ್ದಾರೆಯೇ...

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಂತಹ ಕಾರಣಕ್ಕಾಗಿ ಇಂತಹ ಔಷಧಿ ಮಾರಾಟ ಮಳಿಗೆಯನ್ನು ರದ್ದು ಮಾಡಲಾಗಿದೆ ಎಂಬ ಬಗ್ಗೆ ಸ್ಪಷ್ಟತೆ ಇರುವುದಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಇವೆಲ್ಲವನ್ನೂ ಚೆಕ್ ಮಾಡಿ, ಅದರ ಪ್ರಕಾರ ಸಂಬಂಧಪಟ್ಟ ಔಷಧಿ ಮಾರಾಟ ಮಳಿಗೆಗಳ ವಿರುದ್ಧ ಕಾನೂನಿನಡಿಯಲ್ಲಿ ಏನು ಮಾಡಬೇಕು ಅದನ್ನು ಮಾಡಿ ಕ್ರಮಗಳನ್ನು ಸಹ ತೆಗೆದುಕೊಂಡಿದ್ದಾರೆ. ಪ್ರತಿಯೊಂದು ಮಾಹಿತಿಯನ್ನು ಕೂಡ ನಾನು ಬಹುಶಃ ಬೇರೆ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಪ್ರಸ್ತುತ ಆ ಮಾಹಿತಿ ನನ್ನ ಬಳಿ ಇರುವುದಿಲ್ಲ. ಯಾವ ಯಾವ ಸೆಕ್ಷನ್ ಅಡಿಯಲ್ಲಿ...

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಮಾಹಿತಿಯನ್ನು ನಂತರ ಒದಗಿಸಲಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಆ ಮಾಹಿತಿಯನ್ನು ನಾನು ನಂತರ ಒದಗಿಸುತ್ತೇನೆ. ಅದೇ ರೀತಿಯಾಗಿ ಮಾದಕ ವಸ್ತುಗಳು ಏನು ಇರುತ್ತದೆ, ಅಂದರೆ narcotic ರೀತಿ ಇರುವಂತಹ ಔಷಧಿಗಳ ಬಗ್ಗೆ ಕೂಡ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಸಹ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದು, ಎಷ್ಟು ಪ್ರಕರಣಗಳನ್ನು ದಾಖಲು ಮಾಡಿದ್ದೇವೆಂದು ಸಹ ಹೇಳಿದ್ದೇವೆ. ಈ ವರ್ಷ ಸುಮಾರು 6 ಪ್ರಕರಣಗಳನ್ನು ದಾಖಲಿಸಿದ್ದು, 24 ಸಸ್ಪೆಂಡ್ ಮಾಡಿದ್ದೇವೆ ಮತ್ತು ಈ ವರ್ಷ ಅಂದರೆ, 2023-24 ಪರಿವೀಕ್ಷಣೆಯನ್ನು 205 ಮಾಡಿದ್ದೇವೆ. ಜೊತೆಗೆ, ಔಷಧಿ ಮಾರಾಟ ಮಳಿಗೆಗಳು ಏನೇನು ತಪ್ಪು ಮಾಡಿದ್ದಾರೆ, ಅದರ ವಿರುದ್ಧ ಕ್ರಮ ತೆಗೆದುಕೊಂಡಿರುತ್ತೇವೆ. ಅಲ್ಲದೇ, ನರ್ಸಿಂಗ್ ಹೋಮ್‌ಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿಯೂ ಸಹ ಸ್ಯಾಂಪಲ್‌ಗಳನ್ನು ಡ್ರಾ ಮಾಡಿ, ಒಂದು ವೇಳೆ ಔಷಧಿ ಗುಣಮಟ್ಟ

ಇಲ್ಲದೇ ಇದ್ದರೆ, ಅವರ ವಿರುದ್ಧ ಕೂಡ ನಾವು ಕ್ರಮ ತೆಗೆದುಕೊಂಡಿರುತ್ತೇವೆ. ಸುಮಾರು 177 ಪ್ರಕರಣಗಳಲ್ಲಿ NSQ Report ಆಗಿದ್ದು, 6 conviction ಕೂಡ ಆಗಿದೆ. ಈ ಪ್ರಕರಣಗಳಲ್ಲಿ ಖಾಸಗಿ ವ್ಯಾಪಾರ ಮಾಡುವಂತಹ ಅಂದರೆ, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳು ಎಲ್ಲಾ ಕಡೆ ಅಲ್ಲಿ ಪರಿವೀಕ್ಷಣೆ ಮಾಡಿ, 6 conviction ಆಗಿದೆ, 20 ಕಡೆ prosecution ಅನ್ನು ಫೈಲ್ ಮಾಡಿದ್ದೇವೆ ಮತ್ತು ಈ ವರ್ಷ ಸುಮಾರು 12112 ಸ್ಯಾಂಪಲ್‌ಗಳನ್ನು ಡ್ರಾ ಮಾಡಿದ್ದೇವೆ. ಅದರಿಂದಾಗಿ, ನಮ್ಮ ಇಲಾಖೆ ಈ ಡ್ರಗ್ ಕಂಟ್ರೋಲ್‌ನಿಂದ ಏನೇನು ಮಾಡುವುದಕ್ಕೆ ...

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಎಲ್ಲಾ ಮಾಹಿತಿಯನ್ನು ಉತ್ತರದಲ್ಲಿ ನೀಡಲಾಗಿದೆ. ಆದರೆ, ಆರ್ಥಿಕ ಅಪರಾಧಗಳು ಎಂದರೆ ಏನು ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಆ ಮಾಹಿತಿಯನ್ನು ವಿಸ್ತೃತವಾಗಿ ನಾನು ನಂತರ ಕೊಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯಲ್ಲಿ ಒಟ್ಟು 6 ಹುದ್ದೆಗಳು ಇದ್ದು, ಅಲ್ಲಿ ಕೇವಲ 2 ಹುದ್ದೆಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲಿ ಕೂಡ ಇನ್ಸ್‌ಪೆಕ್ಟರ್‌ಗಳು ಇರುವುದಿಲ್ಲ. ಅಲ್ಲಿ ಖಾಲಿ ಇರುವಂತಹ 4 ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. ಅಲ್ಲಿ ಸಾವಿರಾರು ಔಷಧಿ ಮಾರಾಟ ಮಳಿಗೆಗಳು ಇದ್ದು, ಅವುಗಳನ್ನು ಹೇಗೆ ನಿಯಂತ್ರಣ ಮಾಡಬೇಕು. ಅದೇ ರೀತಿ, ರಾಜ್ಯದಲ್ಲಿಯೂ ಕೂಡ ಇದೇ ರೀತಿಯ ಖಾಲಿ ಹುದ್ದೆಗಳು ಇವೆ. ಅಂದರೆ, ಮಂಜೂರಾದ ಸುಮಾರು 112 ಇನ್ಸ್‌ಪೆಕ್ಟರ್ ಹುದ್ದೆಗಳಿದ್ದು, ಅದರಲ್ಲಿ ಕೇವಲ 8 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿರುತ್ತದೆ. 114 ಹುದ್ದೆಗಳು ಖಾಲಿ ಇರುತ್ತವೆ. ಇದರಿಂದಾಗಿ, ಇಲಾಖೆ ಹೇಗೆ ಕಾರ್ಯನಿರ್ವಹಣೆ ಮಾಡುತ್ತದೆ. ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದಾರೆ ಎಂಬ ಬಗ್ಗೆ ಉತ್ತರ ಹೇಳಬೇಕು. ಇನ್ನು ಎಫ್‌ಡಿಎ ಹುದ್ದೆಗಳು 69 ಇದ್ದು, ಭರ್ತಿ ಮಾಡಿರುವಂತಹದ್ದು 51 ಇದ್ದು, ಖಾಲಿ ಹುದ್ದೆಗಳು ಸಹ ಜಾಸ್ತಿ ಇರುತ್ತವೆ. ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲು ಕೇಳಿದಂತಹ ಎಕನಾಮಿಕ್ ಆಫೆನ್ಸ್‌ಸ್ ಅನ್ನು ನಾವು Special Court for Economic Offences ಕೋರ್ಟ್‌ನಲ್ಲಿಯೇ ಫೈಲ್ ಮಾಡಬೇಕೆಂದು ನಮ್ಮ ನಿಯಮಾವಳಿಗಳಲ್ಲಿ ಇರುತ್ತದೆ. ಅಂದರೆ, ಎಕನಾಮಿಕ್ ಆಫೆನ್ಸ್ ಎಂದು ಹೇಳಿದರೆ, ಅದನ್ನು ಸದರಿ ಕೋರ್ಟ್‌ನಲ್ಲಿ ಫೈಲ್ ಮಾಡಬೇಕು, ಅದು drug related offences ಆಗಿರಬೇಕು. ಅದಕ್ಕೋಸ್ಕರ ಆ ಕೋರ್ಟ್ ಹೆಸರು ಎಕನಾಮಿಕ್ ಆಫೆನ್ಸ್ ಎಂದು. ಆದರೆ, ಅಲ್ಲಿ ಎಕನಾಮಿಕ್ ಆಫೆನ್ಸ್ ಆಗಿದೆ ಎಂದು ಹೇಳುವಂಥದ್ದಲ್ಲ. ಅಂದರೆ, ಬೇರೆ ರೀತಿಯ ಪ್ರಕರಣಗಳಿಗೆ ಏನು ಹೋಲಿಕೆ ಮಾಡುತ್ತೇವೆ, ಅದಕ್ಕೆ ಈ ಪ್ರಕರಣ ಬರುವುದಿಲ್ಲ. ಆದರೆ, any drug related offences ಅಥವಾ ತಪ್ಪು ಕಂಡುಬಂದರೆ, ಎಕನಾಮಿಕ್ ಆಫೆನ್ಸ್ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಬೇಕೆಂದು ಇರುವಂತಹ ನಿಯಮವಾಗಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಹುಶಃ ಅದು ಕೇಂದ್ರ ಸರ್ಕಾರದ ನಿಯಮ ಇರಬಹುದು. ಅದು ಉತ್ಪಾದಕರ ವಿರುದ್ಧ ಹಾಕುವಂತಹ ಪ್ರಕರಣ ಇರಬಹುದು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಅದನ್ನು ಕಾಯಿದೆ ಪ್ರಕಾರ ಮಾಡಿರುತ್ತಾರೆ. ಎರಡನೆಯದಾಗಿ, ಡ್ರಗ್ ಇನ್ಸ್‌ಪೆಕ್ಟರ್ 112 ಹುದ್ದೆಗಳಲ್ಲಿ ಕೇವಲ 8 ಹುದ್ದೆಗಳು ಮಾತ್ರ ನಮ್ಮಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಅದರಲ್ಲಿ 83 ಹುದ್ದೆಗಳಿಗೆ ಈಗಾಗಲೇ ನೇಮಕಾತಿಯಾಗಿದೆ. ಆದರೆ, ನೇಮಕಾತಿ ಸಂದರ್ಭದಲ್ಲಿ ಈ ವಿಚಾರ ಕೋರ್ಟ್-ಕಛೇರಿಗೆ ಹೋಗಿ ಸ್ವಲ್ಪ ವಿಳಂಬವಾಗಿರುತ್ತದೆ. ಈ ವಿಚಾರದಲ್ಲಿ ಮಾನ್ಯ ಹೈಕೋರ್ಟ್ ಏನು ಮಾಡಿದೆಯೆಂದರೆ, ಡ್ರಗ್ಸ್ ಇನ್ಸ್‌ಪೆಕ್ಟರ್ ಹುದ್ದೆಗೆ ಅನುಭವ ಇರುವಂತಹವರನ್ನು ನೇಮಕ ಮಾಡಿಕೊಳ್ಳಬೇಕೆಂದು ಒಂದು criteria ಇತ್ತು. ಆದರೆ, ಮಾನ್ಯ ಹೈಕೋರ್ಟ್, "ಅದು ಬೇಕಾಗಿರುವುದಿಲ್ಲ, freshers ಕೂಡ ನೇಮಕ ಮಾಡಿಕೊಳ್ಳಿ" ಎಂದು ಹೇಳಿರುತ್ತದೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ಯಾರಿಗೆ ನೇಮಕಾತಿ ಸಿಕ್ಕಿಲ್ಲ ಅವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಆ ಪ್ರಕರಣ ಜನವರಿ 29ನೇ ತಾರೀಖಿನಂದು ವಿಚಾರಣೆಗೆ ಬರುತ್ತಿದೆ. ನಾವು ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ implead ಮಾಡಿ, ಈ ಒಂದು ನೇಮಕಾತಿ ಪಟ್ಟಿಯನ್ನು conditionally approve ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಇದಕ್ಕೆ approval ಸಿಗುತ್ತದೆ ಎಂದು ನಮಗೆ ಭರವಸೆ ಇದೆ. ಆಗ ಈ ಎಲ್ಲಾ ಹುದ್ದೆಗಳು ಸಹ ಭರ್ತಿಯಾಗುತ್ತವೆ.

**ಪ್ರಶ್ನೆ ಸಂಖ್ಯೆ 50**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಸ್ಪಷ್ಟೀಕರಣ ಬೇಕಾಗಿರುವುದೇನೆಂದರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, "2023-24ನೇ ಸಾಲಿನ ವಿವಿಧ ಹಂತದ ಆರೋಗ್ಯ ಸಂಸ್ಥೆಗಳ ಬೇಡಿಕೆಯ ಟೆಂಡರ್ ಅನ್ನು ಕರೆದಿದ್ದಾರೆ" ಎಂದು ಹೇಳಿರುತ್ತಾರೆ. ಆದರೆ, ಈಗ 2024-25 ಆಗಿದೆ. ಅಂದರೆ, 09 ತಿಂಗಳು ಆಗಿದೆ. ಇವೊತ್ತು ಕೂಡ ಪ್ರಕ್ರಿಯೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ, ಔಷಧಿಗಳ ಕೊರತೆಯಾಗಿರುವುದಿಲ್ಲವೇ? 2024-25ನೇ ಸಾಲಿನ ಬೇಡಿಕೆಯನ್ನು ಯಾವಾಗ ತೀರಿಸುತ್ತಾರೆ. ಅದೇ ರೀತಿ ಮುಂದಿನ ವರ್ಷದ ಬೇಡಿಕೆಗಳನ್ನು ಯಾವಾಗ ತೀರಿಸುತ್ತಾರೆ?

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆಯೆಂದರೆ ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು ಹಿಂದಿನ ವರ್ಷದ ಇಂಡೆಂಟ್ ಅನ್ನು ಈ ವರ್ಷ ಖರೀದಿ ಮಾಡುವ ಪ್ರಕ್ರಿಯೆಯಲ್ಲಿ ನಮ್ಮ KSMSCL (Karnataka State Medical Supplies Corporation Limited) ನಲ್ಲಿ ನಡೆದುಕೊಂಡು ಬರುತ್ತಿದೆ. ಅದಕ್ಕೆ ಈ ವರ್ಷ ನಾವು ಏನು ಮಾಡಿದ್ದೇವೆಂದರೆ, ಈ ವರ್ಷದಿಂದ ನಮ್ಮ ಕಾನೂನುಗಳನ್ನು ಬದಲಾವಣೆ ಮಾಡಿಕೊಂಡಿದ್ದೇವೆ. ಈ ವರ್ಷದಲ್ಲಿ ಬರುವ ವರ್ಷದ ಇಂಡೆಂಟ್ ಏನಿದೆ, ಅಂದರೆ, 2025-26 ನೇ ಸಾಲಿನ ಇಂಡೆಂಟ್ ಏನಿದೆ, ಡ್ರಗ್ಸ್ ಕೂಡ ನಾವು ಹೆಚ್ಚು ಮಾಡಿದ್ದೇವೆ. ಇದಕ್ಕೆ ಮೊದಲು 732 ಇತ್ತು. ಈ ವರ್ಷ ಬರುವ ವರ್ಷದ ಟೆಂಡರ್ ಏನು ಕರೆಯುತ್ತೇವೆ ಅಂದರೆ, ಡಿಸೆಂಬರ್-ಜನವರಿ ತಿಂಗಳಿನಲ್ಲಿ ಏನು ಟೆಂಡರ್ ಕರೆಯುತ್ತೇವೆ ಅದರಲ್ಲಿ ಡ್ರಗ್ಸ್ ಲಿಸ್ಟ್ ಮತ್ತು ಟೆಸ್ಟ್ ಮಾಡಬೇಕಾಗಿರುವಂತಹದ್ದನ್ನು 1126 ಕ್ಕೆ ಏರಿಸಿದ್ದೇವೆ. ಜೊತೆಗೆ, ಮುಂದಿನ 2 ವರ್ಷಕ್ಕೆ ನಾವು ಈಗಲೇ ಟೆಂಡರ್ ಕರೆಯುತ್ತಿದ್ದೇವೆ.

(ಮುಂದು...)

(712) 09.12.2024 (1.30) ಎಸ್‌ಕೆ-ಎಂಡಿ (ಕೆಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್ (ಮುಂದು):**

ನಮ್ಮ ಇಲಾಖೆಯ ಟೆಂಡರ್ ಪ್ರೋಸೆಸ್‌ನಲ್ಲಿ ಸರಿಯಾದ ಸಮಯಕ್ಕೆ drugs procurement ಆಗುತ್ತಿರಲಿಲ್ಲ. ಅದರ ಬಗ್ಗೆ ಪ್ರತಿ ವರ್ಷ ಟೆಂಡರ್ ಕರೆಯುವುದು. ಜನರು ಬಿಡ್ ಮಾಡದೇ ಇರುವುದು. ಅದರಲ್ಲಿ ಕೆಲವೊಂದು ನ್ಯೂನತೆಗಳು ಇತ್ತು. ಅದನ್ನು ಕೂಡ ಸರಿಪಡಿಸಿಕೊಂಡು, ಈಗ ಅದನ್ನು ಟೆಂಡರ್ ಮಾಡುತ್ತಿದ್ದೇವೆ. ಆದರೆ ಈಗ ನಾವು ಮುಂದಿನ ಎರಡು ವರ್ಷಕ್ಕೆ ಟೆಂಡರ್ ಕರೆದು ಬಿಡುತ್ತಿದ್ದೇವೆ. ಇದುವರೆವಿಗೂ ಸಿಸ್ಟಂ ಏನಿತ್ತು ಎಂದರೆ, ಕಳೆದ ವರ್ಷದ್ದನ್ನು ಈ ವರ್ಷ ಟೆಂಡರ್ ಕರೆಯುವುದರಿಂದ ಒಂದು ವರ್ಷ drugs supply delay ಆಗುತ್ತಿತ್ತು. ಅದೇ ಅವರ indent...

ನಮ್ಮಲ್ಲಿ ಔಷಧಿ ಇಲ್ಲವಂತೇನಿಲ್ಲ. ನಮ್ಮ ಲಿಸ್ಟ್ ಪ್ರಕಾರ ಡ್ರಗ್ಸ್ ಏನಿದೆಯೋ, ಅದು ಇದೆ. ಈ ಡ್ರಗ್ಸ್ ಲಿಸ್ಟ್‌ನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆ ಅಂದರೆ ಅದನ್ನು 1000 ರಿಂದ 1100ಕ್ಕೆ ಏರಿಸುತ್ತಿದ್ದೇವೆ. ಇದು ಬರುವ ವರ್ಷದಿಂದ ಎಲ್ಲವೂ ಪೂರ್ತಿ ಸರಿ ಹೋಗುತ್ತದೆ. ನಮ್ಮ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಲಭ್ಯತೆ ಇದೆ. ಎಲ್ಲಿಯೂ ಔಷಧಿಗಳ ಲಭ್ಯತೆ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ನಮ್ಮ ಲಿಸ್ಟ್‌ನಲ್ಲಿ ಇಲ್ಲದೇ ಇರುವಂತಹ ಡ್ರಗ್ ಬೇಕೆಂದು ಹೇಳಿದಾಗ ಅಥವಾ ನಾವು ಏನು ಟೆಸ್ಟ್ ಗಳನ್ನು ಮಾಡಿ prescribe ಮಾಡುತ್ತೇವೆ, ಅವುಗಳು ನಮ್ಮಲ್ಲಿ ಇಲ್ಲದೇ ಇರುವಂತಹ ಸಂದರ್ಭಗಳಲ್ಲಿ ಮಾತ್ರ ಅದನ್ನು ನೀವು ಹೊರಗಡೆ ತೆಗೆದುಕೊಳ್ಳಿ ಎಂದು ಹೇಳುತ್ತೇವೆ. ಮಾನ್ಯ ಸಭಾಪತಿಯವರೇ, ಅದು ಆ ಪ್ರಕಾರ ನಡೆಯುತ್ತಿದೆ. ನಮ್ಮ ಇಲಾಖೆಯಲ್ಲಿ ಯಾವ ಔಷಧಿ ಸರಬರಾಜು ಮಾಡುವುದಕ್ಕಾಗಿಲ್ಲ. ಅದನ್ನು ತೆಗೆದುಕೊಳ್ಳವುದಕ್ಕೆ ಆಸ್ಪತ್ರೆಗಳಲ್ಲಿಯೇ ದುಡ್ಡು ಇದೆ. ನಿಮ್ಮ ಆಸ್ಪತ್ರೆಗಳಲ್ಲಿಯೇ ಔಷಧಿಗಳನ್ನು ಖರೀದಿ ಮಾಡುವುದಕ್ಕೆ ಹೇಳುತ್ತೇವೆ. ARS (Arogya Raksha Samithi) and ABArK (Ayushman Bharat Arogya Karnataka) funds ನಲ್ಲಿ ಸಾಕಷ್ಟು ದುಡ್ಡು ಇದೆ. ಯಾವುದೇ ರೀತಿಯ ಸಮಸ್ಯೆ ಇಲ್ಲ. ಔಷಧಿಗಳನ್ನು ಖರೀದಿ ಮಾಡುವುದಕ್ಕೆ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ದುಡ್ಡು ಇದೆ. ಆರೋಗ್ಯ ಕೇಂದ್ರಗಳಲ್ಲಿ ಯಾವುದಾದರೂ ಔಷಧಿ shortage ಆಗಿದ್ದರೆ, ಅಲ್ಲಿ ತೆಗೆದುಕೊಳ್ಳುವುದಕ್ಕೆ ಮುಕ್ತವಾದ ಅವಕಾಶವಿದೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 9ನೇ ಡಿಸೆಂಬರ್, 2024, ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 113 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರಿಗೂ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ, ಸದನ ಪ್ರಾರಂಭವಾಗಿ ಈಗಾಗಲೇ two hours ಆಗಿದೆ. ಸದನವು ಹನ್ನೊಂದೂವರೆ ಗಂಟೆಗೆ ಪ್ರಾರಂಭವಾಗಿದೆ. ಈ ರೀತಿ ಮಾಡಿದರೆ, ನಾನು ಖಂಡಿತವಾಗಿ ಒಪ್ಪುವುದಿಲ್ಲ. ನಾನು ಹೇಳುವುದೇನೆಂದರೆ, ಯಾರಾದರೂ ಇಪ್ಪತ್ತೈದು ನಿಮಿಷಕ್ಕಿಂತ ಹೆಚ್ಚಿಗೆ ಮಾತನಾಡಿದರೆ, ನಾನು ಅವರ ಉಳಿದ ಸಮಯವನ್ನು ಕಟ್ ಮಾಡಿಬಿಡುತ್ತೇನೆ. ನಾನು ಬೆಲ್ ಮಾಡಿದಾಗ ಸುಮ್ಮನೆ ಕುಳಿತುಕೊಂಡರೆ ಸರಿ. ಪದೇ ಪದೇ ಎದ್ದು ನಿಂತು ಮಾತನಾಡಿದರೆ, ನನಗೆ ಸದನ ನಡೆಸುವುದು ಕಷ್ಟವಾಗುತ್ತದೆ. ಈ ರೀತಿ ಮಾಡಿದರೆ ನಾನು 75 ನಿಮಿಷಕ್ಕೆ ನಿರ್ದಾಕ್ಷಣ್ಯವಾಗಿ ಕ್ಲೋಸ್ ಮಾಡಿಬಿಡುತ್ತೇನೆ.

## 04. ಮಾನ್ಯ ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### ಅ) ವಿಷಯ:- "ಶಿಕ್ಷಕರ ಜೇಬು ಸುಡುತ್ತಿರುವ ಮೊಟ್ಟೆ ಭಾಗ್ಯ ಯೋಜನೆ" ಕುರಿತು.

---

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇತ್ತೀಚೆಗೆ ಹಲವಾರು ದಿನಪತ್ರಿಕೆಗಳಾದ "ಸಂಯುಕ್ತ ಕರ್ನಾಟಕ", "ಕನ್ನಡಪ್ರಭ", "ವಿಜಯವಾಣಿ" ಮುಂತಾದ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಸರ್ಕಾರ ಮಕ್ಕಳಲ್ಲಿಯ ರಕ್ತಹೀನತೆ ಹಾಗೂ ಪೋಷಕಾಂಶಗಳ ನ್ಯೂನ್ಯತೆಯನ್ನು ಹೋಗಲಾಡಿಸಲು ಅಜೀಂ ಪ್ರೇಮ್ ಜಿ ಫೌಂಡೇಶನ್ ಸಹಯೋಗದಲ್ಲಿ ರೂ.1500 ಕೋಟಿ ದೇಣಿಗೆಯೊಂದಿಗೆ 1ನೇ ತರಗತಿಯಿಂದ 10ನೇ ತರಗತಿ ಮಕ್ಕಳಿಗೆ ವಾರದಲ್ಲಿ 6 ದಿನ ಮೊಟ್ಟೆ ವಿತರಿಸಲು ಹಾಗೂ ತಿನ್ನದೇ ಇರುವವರಿಗೆ ಶೇಂಗಾ ಚಿಕ್ಕಿ ಅಥವಾ ಬಾಳೆ ಹಣ್ಣು ಒದಗಿಸುವ ಯೋಜನೆ ಜಾರಿ ಮಾಡಿರುವುದು ಸಂತೋಷದ ಸಂಗತಿ.

ಈ ಯೋಜನೆ ಪ್ರಥಮ ಬಾರಿಗೆ ಜಾರಿಗೆ ತರುವ ಸಂದರ್ಭದಲ್ಲಿ ಒಂದು ಮೊಟ್ಟೆಯ ಬೆಲೆ ಮಾರ್ಕೆಟ್‌ನಲ್ಲಿ 5 ರೂಪಾಯಿ ಮಾತ್ರ ಇತ್ತು. ಅದನ್ನು ಬೇಯಿಸಲು, ಸಿಪ್ಪೆ ಸುಲಿಯಲು ಎಲ್ಲ ಸೇರಿ 6 ರೂ ಆಗುತ್ತಿತ್ತು. ಅಂದು ಸರ್ಕಾರ ನಿರ್ವಹಣೆಗೆ ನೀಡುತ್ತಿದ್ದು, 6 ರೂ. ಅದಕ್ಕೆ ಸರಿ ಹೋಗುತ್ತಿತ್ತು. ಆದರೆ ಇಂದು ಒಂದು ಮೊಟ್ಟೆಯ ಬೆಲೆ 6.50 ಪೈಸೆ ಆಗಿದ್ದು, ಅದನ್ನು ಬೇಯಿಸಿ, ಸಿಪ್ಪೆ ಸುಲಿದು ಮಕ್ಕಳಿಗೆ ವಿತರಿಸಲು ಹೆಚ್ಚುವರಿಯಾಗಿ ಶಿಕ್ಷಕರ ಜೇಬಿನಿಂದ ಪ್ರತಿ ಮೊಟ್ಟೆಗೆ ರೂ.1 ರಿಂದ 1.50 ಪೈಸೆ ಹೆಚ್ಚು ಖರ್ಚು ಆಗುತ್ತದೆ. ಇದರಿಂದ ಶಿಕ್ಷಕರಿಗೆ ಆರ್ಥಿಕ ಹೊರೆ ಆಗಿದೆ.

ಈ ಒಂದು ಯೋಜನೆಯಲ್ಲಿ ಶಿಕ್ಷಕರು ಮೊಟ್ಟೆ ಖರೀದಿಯಿಂದ ಹಿಡಿದು ವಿತರಣೆವರೆಗೆ 15 ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ. ಇದಕ್ಕಾಗಿ ಸುಮಾರು ಸಮಯ ವ್ಯರ್ಥವಾಗುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ ಈ ಒಂದು ಕಾರಣದಿಂದ ಬಿಸಿಯೂಟ, ಮೊಟ್ಟೆ ವಿತರಣೆ, ಕ್ಷೀರಭಾಗ್ಯ ಮುಂತಾದ

ಕಾರ್ಯಕ್ರಮಗಳನ್ನು ಜಾರಿ ಮಾಡಲು ದಾಖಲೆಗಳನ್ನು ನಿರ್ವಹಣೆ ಮಾಡಲು ಪ್ರತ್ಯೇಕ ಸಿಬ್ಬಂದಿಯನ್ನು ನಿರ್ವಹಿಸಲು ನೇಮಿಸಬೇಕೆಂದು ಒತ್ತಾಯಿಸುತ್ತೇನೆ. ಇತ್ತೀಚೆಗೆ ಅಜೀಂ ಪ್ರೇಮ್ ಜಿ ಫೌಂಡೇಶನ್‌ರವರು ಮೊಟ್ಟೆ ವಿತರಣೆ ಕಾರ್ಯಕ್ರಮ ಅನುಷ್ಠಾನ ಕುರಿತು ತಪಾಸಣೆ ಮಾಡಲು ತಮ್ಮದೆ ಬೇರೆ ಬೇರೆ ತಂಡವನ್ನು ನೇಮಕ ಮಾಡಿದ್ದು, ಅವರ ವರದಿ ಆಧರಿಸಿ ಸಣ್ಣಪುಟ್ಟ ಲೋಪದೋಷ ಇದ್ದಾಗ್ಯೂ ಕೆಲವೊಂದು ಬಿ.ಇ.ಓ. ಹಾಗೂ ಅಕ್ಷರದಾಸೋಹ ಯೋಜನೆ ಅಧಿಕಾರಿಗಳಿಗೆ ಸಂಬಂಧಪಟ್ಟ ಆಯುಕ್ತರು ನೋಟಿಸ್ ಕೂಡ ಜಾರಿ ಮಾಡಿದ್ದುಂಟು.

ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಇಲಾಖೆಯವರು ಪ್ರತಿ ಮೊಟ್ಟೆಗೆ ಸದ್ಯ ನೀಡುತ್ತಿರುವ ರೂ.6 ನ್ನು ರೂ.7.50 ಪೈಸೆವರೆಗೂ ಹೆಚ್ಚಿಸಿ ಮತ್ತು ಈ ಕಾರ್ಯಕ್ರಮ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿ ನೇಮಿಸುವಂತೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎಸ್. ಮಧುಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರ ಒದಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರವನ್ನು ಆನಂತರ ಕೊಡಿ. ಮಾನ್ಯ ಎಂ. ನಾಗರಾಜುರವರೇ, ಶೂನ್ಯವೇಳೆಯನ್ನು ಓದಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಕುಳಿತುಕೊಳ್ಳಿ. ತಮಗೆ ಬೇಕಾದಾಗೇ ಮಾಡುತ್ತೀರಿ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ದಯವಿಟ್ಟು ಕುಳಿತುಕೊಳ್ಳಿ. ಇದು ಶೂನ್ಯವೇಳೆ. ತಾವು ನಿಯಮವನ್ನು ಓದಿದ್ದೀರಾ ಅಥವಾ ಇಲ್ಲವೇ? ತಾವು ನಿಯಮಗಳಲ್ಲಿ ಏನಿದೆ ಎಂಬುದನ್ನು ಓದಿಕೊಳ್ಳಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಅದು ಹಾಗಲ್ಲ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಶೂನ್ಯವೇಳೆಯಲ್ಲಿ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಬರುವುದಿಲ್ಲ.

**ಆ) ವಿಷಯ:- ಶಾಸಕರ ನಿಧಿ ಸಮರ್ಪಕವಾಗಿ ಬಳಕೆಯಾಗುತ್ತಿರುವ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಬಗ್ಗೆ.**

---

**ಶ್ರೀ ಎಂ ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ದಿನಾಂಕ 07.12.2024 ರಂದು "ಬಳಕೆಯಾಗುತ್ತಿಲ್ಲ ಶಾಸಕರ ನಿಧಿ" ಎಂದು "ಕನ್ನಡಪ್ರಭ" ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಶಾಸಕರು ತಮ್ಮ ಕ್ಷೇತ್ರದ ಜನರ ನಿರೀಕ್ಷೆ ಹಾಗೂ ತುರ್ತು ಆದ್ಯತೆಗಳನ್ನು ಗುರುತಿಸಿ ಸಮುದಾಯದ ಹಿತಾಸಕ್ತಿಗೆ ಪೂರಕವಾಗಿ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಎಂ.ಎಲ್.ಎ., ಲಾಡ್ (ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ) ಉತ್ತಮ ಅವಕಾಶವಿದ್ದರೂ ಪ್ರಸಕ್ತ ಸಾಲಿನಲ್ಲೂ ಅದು ನಿರೀಕ್ಷೆಯಂತೆ ಟೇಕಾಫ್ ಆಗಿಲ್ಲ. ವಿಧಾನಸಭೆ ಮತ್ತು ಮೇಲ್ಮನೆ ಸದಸ್ಯರಿಗೆ ನಿಗದಿಯಾಗಿರುವ 2 ಕೋಟಿ ರೂಪಾಯಿ ಪೈಕಿ ಸರ್ಕಾರ ಪ್ರಸಕ್ತ ತಲಾ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಜೊತೆಗೆ 2023-24ನೇ ಸಾಲಿನಲ್ಲಿ ಒಟ್ಟು 1,038 ಕೋಟಿ ರೂಪಾಯಿಗಳ ಬಾಕಿಯು ಲಭ್ಯವಿದೆ. ಆದರೆ, ಪ್ರಸಕ್ತ ವರ್ಷದ ಕೊನೆಯ ಅಂದರೆ 2024-25 ರ ತ್ರೈಮಾಸಿಕ ಸಮೀಪಿಸಿದರೂ ರೂ 121.40 ಕೋಟಿ ಅಂದಾಜು ಮೊತ್ತದ 2,468 ಕಾಮಗಾರಿಗಳಷ್ಟೇ ಅನುಮೋದನೆಗೊಂಡಿದ್ದು, ಇದುವರೆವಿಗೂ 2.49 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ ಎಂದು ವರದಿಯಾಗಿದೆ

ಶಾಸಕರ ಸ್ಥಳೀಯ ಕ್ಷೇತ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಶಾಸಕರು ತಮ್ಮ ಕ್ಷೇತ್ರಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಜೂನ್ ತಿಂಗಳಲ್ಲೇ ಆಯಾಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು. ಶಾಸಕರಿಂದ ಪ್ರಸ್ತಾವನೆ ಹೋಗಿದ್ದರೂ ಬಹಳಷ್ಟು ಕ್ರಿಯಾ ಯೋಜನೆಗಳಿಗೆ ಇನ್ನೂ ಜಿಲ್ಲಾಧಿಕಾರಿಗಳಿಂದ ಅನುಮೋದನೆ ದೊರಕಿಲ್ಲ. ಪ್ರಸಕ್ತ, ಸಾರ್ವಜನಿಕರ ಹಿತದೃಷ್ಟಿಯ ಕಾಮಗಾರಿಗಳಿಗೆ ಶಾಸಕರು ಪ್ರಸ್ತಾವನೆ ಸಲ್ಲಿಸಿದ್ದರೂ ಜಿಲ್ಲಾಧಿಕಾರಿಗಳಿಂದ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಅಭಿವೃದ್ಧಿ ಕುಂಠಿತವಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ ಹಾಗೂ ವಿಧಾನಸಭೆಯಿಂದ ಚುನಾಯಿತರಾಗಿರುವ ಶಾಸಕರು ಮತ್ತು ವಿಧಾನ ಪರಿಷತ್ತಿನ ಶಾಸಕರು ನೋಡಲ್ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಮತ್ತೊಂದು ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಾಗಿ ಅನುದಾನ ಬಿಡುಗಡೆ ಮಾಡಲು ಅನುಮೋದನೆ ನೀಡಿದರೂ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಯಾವುದೇ ಮಾಹಿತಿ ನೋಡಲ್ ಜಿಲ್ಲಾಧಿಕಾರಿಗಳ ಕಛೇರಿಗಾಗಲೀ ಅಥವಾ ಶಾಸಕರಿಗಾಗಲೀ ಜಿಲ್ಲಾಧಿಕಾರಿಗಳ ಕಛೇರಿಯಿಂದ ನೀಡಿರುವುದಿಲ್ಲ. ಆದ್ದರಿಂದ, ಈ ಯೋಜನೆಗಳು/ಕಾಮಗಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ಬಹು ಮುಖ್ಯವಾಗಿದ್ದು, ಈ ಕಾಮಗಾರಿಗಳ ಅನುಮೋದನೆ, ಕ್ರಿಯಾ ಯೋಜನೆಗಳು, ಅನುದಾನ ಬಿಡುಗಡೆ ಅನುಷ್ಠಾನ ಮತ್ತು ಕಾಮಗಾರಿಗಳ ಪ್ರಸ್ತುತ ಹಂತದ ಬಗ್ಗೆ ಮಾಹಿತಿ ಪಡೆಯಲು ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಿಂದ

ಜಾಲತಾಣ/ಪೋರ್ಟಲ್‌ಅನ್ನು ಪ್ರತ್ಯೇಕವಾಗಿ ರಚಿಸುವಂತೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಹಣಮಂತ ರುದ್ರಪ್ಪ ನಿರಾಣಿ ಮತ್ತು ಶ್ರೀಮತಿ ಹೇಮಲತಾ ನಾಯಕ್ ಇವರಿಬ್ಬರ ಶೂನ್ಯ ವೇಳೆ ಒಂದೇ ವಿಷಯವಾಗಿರುವುದರಿಂದ, ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು ಶೂನ್ಯವೇಳೆಯನ್ನು ಓದಿ.

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವಿಬ್ಬರು ಸಹ ಶೂನ್ಯವೇಳೆಯನ್ನು ಓದುತ್ತೇವೆ. ಇದು ಉತ್ತರ ಕರ್ನಾಟಕ ಮಹತ್ವಕಾಂಕ್ಷೆಯಾಗಿದೆ.

**ಸಭಾಪತಿಯವರು:-** ನಿಮ್ಮಿಬ್ಬರ ಶೂನ್ಯ ವೇಳೆ ಒಂದೇ ವಿಷಯವಾಗಿದೆ. ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು ಶೂನ್ಯವೇಳೆಯನ್ನು ಓದಿ.

**ಇ) ವಿಷಯ:-ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ಬಗ್ಗೆ.**

---

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಕರ್ನಾಟಕದ ಬರದ ಸಮಸ್ಯೆ ನೀಗಿಸುವ ಸಾಮರ್ಥ್ಯ ಹೊಂದಿರುವ ಕೃಷ್ಣಾ ಮೇಲ್ದಂಡೆ ಯೋಜನೆ-3 (ಯುಕೆಪಿ-3) ಕ್ಕೆ ಸಂಪೂರ್ಣ ಗ್ರಹಣ ಹಿಡಿದಿದ್ದು, ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು 2010ರಲ್ಲಿ ಪ್ರಕಟವಾದಾಗ ಕಾರ್ಮೋಡ ಕರಗಿ ನೀರು ಹರಿಯಲಿದೆ ಎಂದು ಹರ್ಷಿಸಲಾಗಿತ್ತು. ಬಳಿಕ 2013ರಲ್ಲಿ ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಸ್ಪಷ್ಟತಾ ತೀರ್ಪು ಕೂಡ ಬಂದಿತ್ತು. ಅದಕ್ಕೆ ತಕ್ಕಂತೆ ಆಗಿನ ಸರ್ಕಾರ ಕೃಷ್ಣಾ ನದಿಯ ನೀರಾವರಿ ಯೋಜನೆಗಳ ಬಗ್ಗೆ ಲಕ್ಷ್ಯ ಕೊಟ್ಟಿತ್ತು. ತೀರ್ಪು ಪ್ರಕಟವಾಗುವಾಗ ಜಲ ಸಂಪನ್ಮೂಲ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಕಾನೂನು ತಂಡವನ್ನು ಸಮರ್ಥವಾಗಿ ಮುನ್ನಡೆಸಿದ್ದರು ನಂತರ ಸರ್ಕಾರ ಬದಲಾಗಿ ಮುಂದಿನ 5 ವರ್ಷಗಳ ಕಾಲ ಜಲ ಸಂಪನ್ಮೂಲವನ್ನು ಮುನ್ನಡೆಸಿದ ಮಾನ್ಯ ಎಂ.ಬಿ. ಪಾಟೀಲ ಅವರು ಕೃಷ್ಣಾದ ಯೋಜನೆಗಳಿಗೆ ವೇಗ ನೀಡಿದ್ದರು. ಆದರೆ ಈ ಖುಷಿ ಬಹಳ ದಿನ ಉಳಿಯಲಿಲ್ಲ. 2018ರ ಬಳಿಕ ಕೃಷ್ಣಾ ಕೊಳ್ಳದ ಯೋಜನೆ ಬಾರಿ ಹಿನ್ನಡೆಯಾಗಿದೆ. ಯು.ಕೆ.ಪಿ-3 ಪೂರ್ಣಗೊಂಡರೆ ರಾಜ್ಯದ ಸುಮಾರು 20 ಜಿಲ್ಲೆಗಳಿಗೆ ನೀರಾವರಿ ವ್ಯವಸ್ಥೆಯಾಗಲಿದೆ. ಉತ್ತರ ಕರ್ನಾಟಕದ ಬರ ಸಮಸ್ಯೆ ನೀಗಲಿದೆ ಪರ್ಯಾಯವಾಗಿ ಇದರಿಂದ ಲಾಭವಾಗುವುದು ಅಖಂಡ ಕರ್ನಾಟಕಕ್ಕೆ ಕೃಷ್ಣ ನ್ಯಾಯಾಧೀಕರಣ-2 ರ ತೀರ್ಪಿನಂತೆ ರಾಜ್ಯಕ್ಕೆ 173 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಈ ನೀರಿನ ಸಂಗ್ರಹ ಮತ್ತು ಬಳಕೆಗೆ ಆಲಮಟ್ಟಿ ಅಣೆಕಟ್ಟೆಯ

ಎತ್ತರವನ್ನು 519 ಮೀಟರ್‌ನಿಂದ 524, 526 ಮೀಟರ್‌ಗೆ ಹೆಚ್ಚಿಸಬೇಕು. ಅಧಿಸೂಚನೆ ಪ್ರಕಟವಾಗದೇ ಇರುವುದರಿಂದ ಈ ಕೆಲಸ ಕೈಗೆತ್ತಿಕೊಳ್ಳುವಂತಿಲ್ಲ. ಹಾಗಾಗಿ ರಾಜ್ಯದ ಪಾಲಿನ ನೀರು ಅಚಿದ್ರದತ್ತ ಹರಿದು ಹೋಗುತ್ತಿದೆ. ಆದ್ದರಿಂದ ಕೃಷ್ಣದ ಅಂತಿಮ ತೀರ್ಪು ಬಂದು 14 ವರ್ಷವಾದರೂ, ಇದರ ನೈಜ ಲಾಭ ದೊರಕುತ್ತಿಲ್ಲ.

ಆಂಧ್ರ-ತೆಲಂಗಾಣದ ವ್ಯಾಜ್ಯ ನ್ಯಾಯ ಬ್ರಿಜಿತ್‌ಕುಮಾರ್ ನೇತೃತ್ವದಲ್ಲಿ ಕೃಷ್ಣ ನ್ಯಾಯಾಧೀಕರಣ-2 ರ ತೀರ್ಪು ಬರುವಾಗ ಆಂಧ್ರಪ್ರದೇಶದ ವಿಭಜನೆಯಾಗಿರಲಿಲ್ಲ. ಬಳಿಕ ತೆಲಂಗಾಣ ರಚನೆಯಾಗುತ್ತಿದ್ದಂತೆ ತೀರ್ಪನ್ನು ಪುನರ್ ಪರಿಶೀಲಿಸುವಂತೆ ಅಲ್ಲಿನವರು ಸುಪ್ರೀಂ ಕೋರ್ಟ್‌ಗೆ ಮೊರೆ ಹೋದರು. ವಾಸ್ತವಿಕವಾಗಿ ಇದು ಈಗ ಆಂಧ್ರ-ತೆಲಾಂಗಣದ ನಡುವೆ ನೀರು ಹಂಚಿಕೆಯ ವ್ಯಾಜ್ಯ. ಆದರೆ ಸಂತ್ರಸ್ಥವಾಗಿರುವುದು ಮಾತ್ರ ಕರ್ನಾಟಕ.

ಕೃಷ್ಣೆ ಯಾವತ್ತು ಕೊರತೆ ಕಣಿವೆಯಲ್ಲ, ಕೃಷ್ಣ ಕೊಳ್ಳದಲ್ಲಿ ಬರಪೂರ ಮಳೆಯಾಗುತಿದೆ. ಹಾಗಾಗಿ ವಾರ್ಷಿಕ 173 ಟಿ.ಎಂ.ಸಿ. ಯಂತೆ ಲೆಕ್ಕ ಹಾಕಿಕೊಂಡರು, ಈ 14 ವರ್ಷಗಳಲ್ಲಿ ಎಷ್ಟೊಂದು ನೀರು ವ್ಯರ್ಥವಾಗಿ ಹೋಯಿತು ಎನ್ನುವುದು ಅರ್ಥವಾಗುತ್ತದೆ. ದಶಕಗಳ ಕಾಲ ಕಾನೂನು ಹೋರಾಟ ನಡೆಸಿದ್ದರಿಂದ ಬಂದ ಫಲವನ್ನು ಅನುಭವಿಸುವುದಕ್ಕೆ ಸಾಧ್ಯವಾಗದಂತಹ ವಿಲಕ್ಷಣ ಸ್ಥಿತಿಯಲ್ಲಿ ರಾಜ್ಯವಿದೆ.

ಕೃಷ್ಣ ಕಣಿವೆ ರಾಜ್ಯಗಳ ಪೈಕಿ ಕರ್ನಾಟಕದಂತೆಯೆ ಮಹಾರಾಷ್ಟ್ರಕ್ಕೂ ಆಂದ್ರ ತೆಲಂಗಾಣಗಳ ತಕರಾರಿನಿಂದ ಸಮಸ್ಯೆಯಿದೆ. ಹಾಗಿದ್ದರೂ ಅಧಿಸೂಚನೆಗೆ ಕೇಂದ್ರದ ಮೇಲೆ ಬಲವಾದ ಒತ್ತಡ ತರಲೂ ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡನೆಗೆ ಭೂಮಿಕೆ ರೂಪಿಸಲು ಆಗಿಲ್ಲ. ಈ ವಿಚಾರದಲ್ಲಿ ರಾಜ್ಯ ಎಡವುತ್ತಿರುವುದಕ್ಕೆ ಕೃಷ್ಣ ಕೊಳ್ಳದ ಜನರಲ್ಲಿ ಆಕ್ರೋಶ ಮಡುಗಟ್ಟಿದೆ.

ಭೂಸ್ವಾಧೀನ ಬಾಕಿ: ನ್ಯಾಯಾಧೀಕರಣ ತೀರ್ಪಿನ ಅಧಿಸೂಚನೆಯಾಗದೇ ಇರುವುದರಿಂದ ಒಂದಿಚು ಭಾಗವಾದರೆ ಮತ್ತೊಂದೆಡೆ ಯು.ಕೆ.ಪಿ-3ಕ್ಕೆ ಅಗತ್ಯವಾದ ಭೂಸ್ವಾಧೀನ ಪ್ರಕ್ರಿಯೆಯು ಆಗಿಲ್ಲ. ಆಲಮಟ್ಟಿ ನೀರಿನ ಸಂಗ್ರಹದ ಹಾಲಿ ಸಾಮರ್ಥ್ಯ 123.8 ಟಿ.ಎಂ.ಸಿ. ಡ್ಯಾಂನ ಎತ್ತರ ಹೆಚ್ಚಿಸಿದಾಗ ಹೆಚ್ಚುವರಿ 100 ಟಿ.ಎಂ.ಸಿ. ಸಂಗ್ರಹಿಸಬಹುದು. ಈ ಉದ್ದೇಶಕ್ಕೆ 20 ಹಳ್ಳಿಗಳ ಸ್ಥಳಾಂತರದ 1.33 ಲಕ್ಷ ಎಕರೆ ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಈವರೆಗೆ 28 ಸಾವಿರ ಎಕರೆಯಷ್ಟೆ ಸ್ವಾಧೀನವಾಗಿದೆ ಎನ್ನುವುದು ಇಲಾಖೆಯಿಂದ ಲಭ್ಯ ಇರುವ ಮಾಹಿತಿ.

ಯು.ಕೆ.ಪಿ.-3 ರ ಭೂಸ್ವಾಧೀನ, ಪರಿಹಾರ, ಪುನರ್‌ವಸತಿಗಾಗಿ 51 ಸಾವಿರ ಕೋಟಿ ರೂಪಾಯಿ ಅಂದಾಜು ಪಟ್ಟಿ ತಯಾರಿಸಿ 2018 ರಲ್ಲಿ ಅನುಮೋದಿಸಲಾಗಿದೆ. ಯೋಜನೆ ತೆವಳುತ್ತಿರುವುದರಿಂದ ಈ ಮೊತ್ತವು ಹೆಚ್ಚಲಿದೆ ಒಂದೇ ಬಾರಿಗೆ ಸಾವಿರಾರು ಕೋಟಿ ರೂಪಾಯಿ ವಿನಿಯೋಗಿಸುವ ಸ್ಥಿತಿಯಲ್ಲಿ ಸರ್ಕಾರವು ಇಲ್ಲ. ಇದು ಕೃಷ್ಣ ಯೋಜನೆಯ ಮುಂದಿರುವ ನಿಜವಾದ ಸವಾಲನ್ನು ನಾನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಧನ್ಯವಾದಗಳು.

(ಮುಂದು...)

(713) 09.12.2024, 1.40, TCH-AK (ಸಭಾಪತಿಯವರ ಉಪಸ್ಥಿತಿ)

**ಸಭಾನಾಯಕರು:-** ಮಾನ್ಯ ಸಭಾಪತಿಯವರೇ, . . .

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ subject ಬೇರೆ ಇದೆ.

**ಸಭಾಪತಿಯವರು:-** ಎರಡೂ ವಿಷಯವನ್ನು ಸೇರಿಸಲಾಗಿದೆ. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ನವರೇ, ನಿಮ್ಮ ವಿಷಯಕ್ಕೂ ಕೂಡ ಉತ್ತರ ಕೊಡಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಷಯ ಬೇರೆ ಇದೆ. ನಾನು ಓದುತ್ತೇನೆ.

**ಸಭಾಪತಿಯವರು:-** ಎರಡೂ ವಿಷಯ ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆ ಬಗ್ಗೆ ಇದೆ. ಬೇಕಾದರೆ ತಾವೇ ನೋಡಿ. ಎರಡೂ ವಿಷಯವನ್ನು ಸೇರಿಸಿ ಹಾಕಿದ್ದೇವೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಷಯ ಬೇರೆ ಇದೆ. ಆದರೆ ನನಗೂ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಆಯಿತು ಓದಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆಯು ಆಲಮಟ್ಟಿ ಅಣೆಕಟ್ಟೆ ಯೋಜನೆ ಸರ್ಕಾರದ ಮಹಾತ್ವಾಕಾಂಕ್ಷೆಯ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯು ಹಂತ-3ರ ಅನುಷ್ಠಾನದಲ್ಲಿ ಮುಳುಗಡೆ ಹೊಂದುವ ಜಮೀನನ್ನು ಎಫ್.ಆರ್.ಎಲ್. 519.6 ರಿಂದ 522 ಮೀಟರ್‌ವರೆಗೆ ಮತ್ತು ಎಫ್.ಆರ್.ಎಲ್ 522 ಮೀಟರ್‌ನಿಂದ 524.256 ಮೀಟರ್‌ವರೆಗೆ 2 ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಡಿಸುವುದರಿಂದ ಆ ಭಾಗದಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ/ರೈತ ಕುಟುಂಬಗಳಿಗೆ/ಕೂಲಿ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ.

ದಿನಾಂಕ 26.12.2023ರಂದು ಕೆ.ಬಿ.ಜೆ.ಎನ್.ಎಲ್. ನಿಗಮದ ಮಂಡಳಿಯ ಸಭೆಯ 140ನೇ ನಿರ್ದೇಶಕರ ಮಂಡಳಿಯ ಸಭೆಯ ನಡವಳಿಯ ತೀರ್ಮಾನದಿಂದಾಗಿ ಆ ಭಾಗದ ಸಂತ್ರಸ್ತ ರೈತರು ನೋವಿನ ಸಂಗತಿಯಾಗಿದೆ.

ಸದರಿ ನಿರ್ದೇಶಕರ ಮಂಡಳಿಯ ನಡವಳಿಯನ್ನು ಪುನರ್ ಪರಿಶೀಲಿಸಿ, ಏಕಕಾಲದಲ್ಲಿ/ಒಂದೇ ಹಂತದಲ್ಲಿ ಸ್ವಾಧೀನಪಡಿಸಿಕೊಂಡು ಎಫ್.ಆರ್.ಎಲ್. 524.256 ಮೀಟರ್‌ಗೆ ಪರಿಹಾರ ಧನವನ್ನು ವಿತರಿಸಬೇಕೆಂಬುದು ಆ ಭಾಗದ ಸಂತ್ರಸ್ತ ರೈತರ ಬೇಡಿಕೆಯಾಗಿದೆ. ಎರಡು ಹಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟು ಏಕಕಾಲದಲ್ಲಿ ಎಫ್.ಆರ್.ಎಲ್. 524.256 ಮೀಟರ್‌ಗೆ ಎತ್ತರಿಸಿ ಪರಿಹಾರ ಧನವನ್ನು ವಿತರಿಸಬೇಕೆಂದು ಹಾಗೂ ಮುಳುಗಡೆ ಹೊಂದಲಿರುವ ಸುಮಾರು 20 ಗ್ರಾಮಗಳಿಗೆ ಪರಿಹಾರಧನ ವಿತರಿಸಿ ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಬೇಕೆಂದು ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಸಂತ್ರಸ್ತ ಕುಟುಂಬಗಳು ಹೋರಾಟವನ್ನು ಮಾಡುತ್ತಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ದಿನಾಂಕ 03.12.2024ರಿಂದ ಇಲ್ಲಿಯವರೆಗೂ ಕೂಡ ಬಾಗಲಕೋಟೆ

ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದಲ್ಲಿ ಪಕ್ಷಾತೀತವಾಗಿ ಆಹೋರಾತ್ರಿ ಧರಣಿ ಮತ್ತು ಸರದಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿರುತ್ತಾರೆ.

ತಮ್ಮ ಮನೆ-ಮಠ ಆಸ್ತಿ ಅಂತಸ್ತುಗಳನ್ನು ಕಳೆದುಕೊಂಡು ದೇಶಕ್ಕಾಗಿ/ದೇಶದ ಹಿತಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ಶಿವ ಸ್ವರೂಪಿಗಳಾದ ರೈತ ಕುಟುಂಬಗಳ ನೆರವಿಗೆ ಸರ್ಕಾರ ಮುಂದಾಗಬೇಕಾಗಿದೆ. ನಾಗರೀಕ ಸಮಾಜದಲ್ಲಿ ರೈತರ ಕಷ್ಟನಷ್ಟಗಳನ್ನು ಅರಿತು ಅವರ ಬೇಡಿಕೆಗಳನ್ನು ಅತೀ ಶೀಘ್ರದಲ್ಲಿ ಈಡೇರಿಸಿ ಭೂಸ್ವಾಧೀನಪಡಿಸಿಕೊಂಡು ಯೋಗ್ಯವಾದ ಭೂಪರಿಹಾರ ಧನವನ್ನು ಮತ್ತು ಎಫ್.ಆರ್.ಎಲ್. 524.256 ಮೀಟರ್‌ಗೆ ಎತ್ತರಿಸಿ ಸುಮಾರು 130 ಟಿ.ಎಂ.ಸಿ., ನೀರಿನ ಸದ್ಬಳಕೆ ಮಾಡಿಕೊಂಡು ಕೆಳಭಾಗದಲ್ಲಿರುವ ಉತ್ತರ ಕರ್ನಾಟಕ ಭಾಗದ 7 ಜಿಲ್ಲೆಗಳು 15 ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ (ನೀರಾವರಿ ಇಲಾಖೆ) ಕಾರ್ಯನಿರ್ವನಿಸಬೇಕೆಂದು ಸಮಗ್ರ ಉತ್ತರ ಕರ್ನಾಟಕ ಭಾಗದ ಸಂತ್ರಸ್ತ ಕುಟುಂಬಗಳ ಪರವಾಗಿ ಮತ್ತೊಮ್ಮೆ ಸರ್ಕಾರವನ್ನು ಆಗ್ರಹಿಸುತ್ತೇನೆ ಹಾಗೂ ಎಫ್.ಆರ್.ಎಲ್. 524.256 ಮೀಟರ್‌ನಿಂದ 522 ಮೀಟರ್‌ಗೆ ಎತ್ತರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರವು ಅಫಿಡವಿಟ್ ಸಲ್ಲಿಸುವ ಪ್ರಕ್ರಿಯೆಯು ಪ್ರಾರಂಭಿಸಿದೆ ಎಂದು ಸಾರ್ವಜನಿಕರ ವಲಯದಲ್ಲಿ ಸುದ್ದಿ ಹರಿದಾಡುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಉತ್ತರ ಕರ್ನಾಟಕದ ಸಂತ್ರಸ್ತ ರೈತರಿಗೆ ಅನ್ಯಾಯವಾಗುವಂತಹ ಯಾವುದೇ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳದೇ ರೈತರಿಗೆ ನ್ಯಾಯ ಒದಗಿಸಬೇಕೆಂದು ಮತ್ತು ಈ ಕುರಿತು ಸರ್ಕಾರವು ತನ್ನ ಸ್ಪಷ್ಟ ನಿಲುವನ್ನು ಪ್ರಕಟಿಸಿ ಭೂ ಪರಿಹಾರಧನ, ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸುವುದು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಧನ್ಯವಾದಗಳು.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಶ್ರೀ ಸಿ.ಟಿ.ರವಿ, ಶ್ರೀ ಡಿ.ಎಸ್.ಅರುಣ್ ಮತ್ತು ಶ್ರೀ ರವಿಕುಮಾರ್.ಎನ್.ರವರು.

**ಈ) ವಿಷಯ:-** ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಮತ್ತು ನವಜಾತ ಶಿಶುಗಳ ಮರಣ ಪ್ರಮಾಣ ದಿನೇ ದಿನೇ ಹೆಚ್ಚುತ್ತಿರುವ ಕುರಿತು ತನಿಖೆ ನಡೆಸುವ ಬಗ್ಗೆ.

----

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ತುರ್ತು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದಕ್ಕೆ ಧನ್ಯವಾದಗಳು.

ದಿನಾಂಕ 9.12.2024ರಂದು ಹಲವು ದಿನಪತ್ರಿಕೆಗಳಲ್ಲಿ ಬಾಣಂತಿಯರು ಹಾಗೂ ನವಜಾತ ಶಿಶುಗಳ ಸರಣಿ ಸಾವಿನ ಕುರಿತು ವರದಿಯಾಗಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ

ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳೂ ಸೇರಿ ಕಳೆದ 6 ತಿಂಗಳ ಅವಧಿಯಲ್ಲಿ 29 ಬಾಣಂತಿಯರು ಹಾಗೂ 322 ನವಜಾತ ಶಿಶುಗಳ ಸಾವು ವರದಿಯಾಗಿದೆ. ಇದರಲ್ಲಿ 111ಕ್ಕೂ ಹೆಚ್ಚು ಶಿಶುಗಳು ಜಿಲ್ಲಾ ಆಸ್ಪತ್ರೆಯಲ್ಲೇ ಸಾವನ್ನಪ್ಪಿವೆ. ದಾವಣಗೆರೆ ಜಿಲ್ಲೆಯಲ್ಲಿಯೂ ಕೂಡ ಬಾಣಂತಿಯರ ಸಾವು ಸಂಭವಿಸಿದ್ದು, ಬಳ್ಳಾರಿ ಜಿಲ್ಲೆಯಲ್ಲಿಯೂ ಕೂಡ 6 ಜನ ಬಾಣಂತಿಯರ ಸಾವು ಸಂಭವಿಸಿರುವುದು ಹಾಗೂ ಶಿಶುಗಳು ಸಾವನ್ನಪ್ಪಿರುವುದು ಅತ್ಯಂತ ಖಂಡನೀಯ ಸಂಗತಿ.

ಬಾಣಂತಿಯರ ಸಾವಿನ ಕುರಿತು ಆರೋಗ್ಯ ಇಲಾಖೆಯ ಮತ್ತು ಸರ್ಕಾರದ ನಿರ್ಲಕ್ಷ್ಯದ ಸಮಸ್ಯೆ ಬಹಳ ಗಂಭೀರವಾಗಿದೆ. ಕಳಪೆ ದ್ರಾವಣಗಳಿಂದ ಬಾಣಂತಿಯರ ಸಾವು ಸಂಭವಿಸಿರುವುದು ಸಾಮಾನ್ಯವಾಗಿ ಆರೋಗ್ಯ ಸೇವೆಗಳಲ್ಲಿ ಅಸಮರ್ಪಕ ಯೋಜನೆ, ನಿರ್ವಹಣೆ ಮತ್ತು ಅನುಷ್ಠಾನದ ಕಾರಣದಿಂದ ಉಂಟಾಗುತ್ತದೆ. ಈ ಸರ್ಕಾರದಲ್ಲಿ ಸರ್ಕಾರಿ ಆಸ್ಪತ್ರೆಯಿಂದ ಗೃಹಲಕ್ಷ್ಮೀಯರು ಜೀವ ಸಮೇತ ಮರಳಿ ಮನೆಗೆ ಬರುವ ಗ್ಯಾರಂಟಿಯೇ ಇಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ಕಳಪೆ ದ್ರಾವಣಗಳನ್ನು ಪೂರೈಕೆ ಮಾಡಿದವರು ಯಾರು? ಇದರ ಹಿಂದೆ ಯಾವ ಕಾಣದ ಕೈಗಳು ಕೆಲಸ ಮಾಡಿವೆ. ಕಳಪೆ ಔಷಧಿಗಳ ಪೂರೈಕೆ ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೇ? ಮಾನ್ಯ ಆರೋಗ್ಯ ಸಚಿವರಿಗೆ ಈ ಮಾಹಿತಿ ಇರಲಿಲ್ಲವೇ? ವೈದ್ಯ ಕ್ಷೇತ್ರದಲ್ಲಿ ಅಗಾಧ ಮುನ್ನಡೆ ಸಾಧಿಸಿರುವ ಈ ಆಧುನಿಕ ಕಾಲದಲ್ಲಿಯೂ ಮಹಿಳೆಯರು ಆಸ್ಪತ್ರೆಗಳಲ್ಲಿಯೇ ಜೀವ ಚೆಲ್ಲುತ್ತಿರುವುದು ರಾಜ್ಯಕ್ಕೆ ಗೌರವ ತರುವ ವಿಚಾರವಲ್ಲ. ಮಹಿಳೆಯರಿಗೆ ಗೃಹಲಕ್ಷ್ಮಿ ಗ್ಯಾರಂಟಿ ಕೊಟ್ಟು ಅವರನ್ನು ಆರ್ಥಿಕವಾಗಿ ಸಬಲೀಕರಣ ಮಾಡುತ್ತಿದ್ದೇವೆ ಎನ್ನುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಆದರೆ ಆಸ್ಪತ್ರೆಗಳಲ್ಲಿ ಇದೇ ಸರ್ಕಾರದ ಅವಧಿಯಲ್ಲಿ ಗೃಹಲಕ್ಷ್ಮಿಯರ ಮಾರಣಹೋಮ ಆಗುತ್ತಿದೆ. ಮಗುವಿಗೆ ಜನ್ಮ ನೀಡಲು ಸರ್ಕಾರಿ ಆಸ್ಪತ್ರೆಗೆ ವಿಶ್ವಾಸದಿಂದ ತೆರಳುವ ಗೃಹಲಕ್ಷ್ಮಿಯರು ಜೀವ ಸಮೇತ ಮರಳಿ ಮನೆಗೆ ಬರುವ ಗ್ಯಾರಂಟಿಯೇ ಇಲ್ಲ. ಇದೇನಾ ಮಹಿಳೆಯರ ಸಬಲೀಕರಣ? ರಾಜ್ಯದಲ್ಲಿ ಸರ್ಕಾರಿ ಆರೋಗ್ಯ ವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಆಸ್ಪತ್ರೆಗಳು ಸಾವಿನ ಕೂಪಗಳಾಗಿವೆ. ಕಳಪೆ ಗ್ಲೂಕೋಸ್, ಔಷಧಗಳಿಂದ ಗೃಹಲಕ್ಷ್ಮಿ ಯರು ಗಲಿಯಾಗುತ್ತಿದ್ದಾರೆ. ಬಳ್ಳಾರಿ ಆಸ್ಪತ್ರೆಯಲ್ಲಿ I.V ದ್ರಾವಣ ಅಂದರೆ ರಿಂಗರ್ ಲ್ಯಾಕ್ಟೇಟ್ ದ್ರಾವಣ (Ringer lactate infusion) ಪಡೆದ ಎರಡೇ ಗಂಟೆಯಲ್ಲಿ 9 ಬಾಣಂತಿಯರು ಅಸ್ವಸ್ಥರಾಗಿದ್ದಾರೆನ್ನುವುದು ಕಳವಳಕಾರಿ. ಹಾಗಾದರೆ ಈ ದ್ರಾವಣ ಪೂರೈಸಿದ ಕಂಪನಿ ಯಾವುದು? ಅದು ಯಾರದ್ದು? ಅನೇಕ ದಿನಗಳಿಂದ ಕಳಪೆ ಗ್ಲೂಕೋಸ್, ಔಷಧ ಪೂರೈಕೆ ಆಗುತ್ತಿದ್ದರೂ ಸರ್ಕಾರ ಏನು ಮಾಡುತ್ತಿತ್ತು? ಇಷ್ಟು ಸೂಕ್ಷ್ಮ ವಿಚಾರವನ್ನು ಮಾನ್ಯ ಆರೋಗ್ಯ ಸಚಿವರು ಅಲಕ್ಷ್ಯ ಮಾಡಿದ್ದೇಕೆ? ಮಾನ್ಯ ಸಚಿವರಿಗೆ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದು ಗೊತ್ತೇ ಇರಲಿಲ್ಲವೇ? ಈ ಮರಣಗಳಿಂದ ಸರ್ಕಾರ ನುಣಚಿಕೊಳ್ಳಲು ಸಾಧ್ಯವಿಲ್ಲ. ಈ ಪ್ರಕರಣವನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸಿ, ಹದಗೆಟ್ಟ ಆರೋಗ್ಯ ಇಲಾಖೆ ವ್ಯವಸ್ಥೆಯನ್ನು ಹಳಿಗೆ ತರುವ ಕೆಲಸ ತುರ್ತಾಗಿ ಆಗಬೇಕೆಂದು ಸರ್ಕಾರಕ್ಕೆ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ ಹಾಗೂ ಈ ಗಂಭಿರವಾದ ವಿಷಯವನ್ನು ಎರಡು ಗಂಟೆಗಳ ಕಾಲ ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಉತ್ತರ ಕೊಡಿಸುತ್ತೇನೆ. ಮತ್ತೆ ಚರ್ಚೆಗೆ ಅವಕಾಶ ಮಾಡುವುದಾದರೆ ಕಂಡಿತವಾಗಿಯು ಚರ್ಚೆ ಮಾಡಬಹುದು. ಏಕೆಂದರೆ ಇದು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವಂತಹ subject ಏನೂ ಅಲ್ಲ.

(ಮುಂದು)

(714)9.12.2024/1.50/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ:-** ವಿಷಯ ಗಂಭೀರವಾಗಿರುವುದರಿಂದ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಸಹ ಚರ್ಚೆಗೆ ತೆಗೆದುಕೊಳ್ಳಿ ಎಂದೇ ಹೇಳುತ್ತಿದ್ದೇನೆ. ಆದರೆ ಶೂನ್ಯವೇಳೆಯಲ್ಲಿ ಬೇಡ. ಮಾನ್ಯ ಸಭಾಪತಿಗಳು ಚರ್ಚೆಗೆ ಒಂದು ಸಮಯವನ್ನು ನಿಗದಿ ಮಾಡಿದರೆ ಚರ್ಚೆ ಮಾಡೋಣ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಚಿವರು ಕೇಳಿದ್ದಾರೆ, ಅವಕಾಶ ಕೊಡಿ ಸಾಕು.

**ಶ್ರೀ ದಿನೇಶ್ ಗುಂಡೂರಾವ್:-** ಸುಮ್ಮನೇ ಎಲ್ಲರೂ ನಿಂತು ಮಾತನಾಡುವುದು ಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಏತಕ್ಕೆ ಎದ್ದುನಿಂತು ಮಾತನಾಡುತ್ತೀರಿ? ನಾನು ಉತ್ತರ ಹೇಳಬೇಕು. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್:-** ನಾವು ಸಹ ಅದನ್ನೇ ಹೇಳುತ್ತಿದ್ದೇವೆ, ಈಗ ಮಾತನಾಡುವುದು ಬೇಡ, ಒಂದು ಸಮಯವನ್ನು ನಿಗದಿ ಮಾಡಿ, ಚರ್ಚೆ ಮಾಡೋಣ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು**):- ಎಲ್ಲರೂ ಎದ್ದು ನಿಂತುಕೊಂಡರೆ ಅದರಲ್ಲಿ ಅರ್ಥವೇ ಇಲ್ಲ.

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಎಲ್ಲರೂ ಎದ್ದು ನಿಂತರೆ ಹೇಗೆ? ಇದರ ಬಗ್ಗೆ ನಾನು ಸರ್ಕಾರದ ಜೊತೆ ಮಾತನಾಡಿ ಯಾವ ನಿಯಮದಡಿ ತೆಗೆದುಕೊಳ್ಳಬೇಕೆಂದು ಇಂದು ಮಧ್ಯಾಹ್ನ ತಿಳಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮತ್ತೆ ತೀರ್ಮಾನ ಮಾಡುವುದು ಬೇಡ. ಇದು ಗಂಭೀರವಾದ ವಿಚಾರವಾಗಿರುವುದರಿಂದ ಚರ್ಚೆಗೆ ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ನೋಡಿ, ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಬೇರೆ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತಿದ್ದೇನೆ. ಯಾವ ನಿಯಮದಡಿ ಚರ್ಚೆ ಮಾಡಬೇಕೆಂದು ಬೇಕಲ್ಲವೇ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಆಯಿತು, ಸಮಯವನ್ನು ನಿಗದಿ ಮಾಡುತ್ತೇನೆಂದು ಹೇಳಿ ಇದರಲ್ಲಿ ಚರ್ಚೆ ಮಾಡುವ ಅವಶ್ಯಕತೆ ಬೇಡ.

**ಶ್ರೀ ಸಿ.ಟಿ. ರವಿ:-** ತಾವು ಅನುಭವಿಗಳು, ಸುದೀರ್ಘವಾದ ಅನುಭವವಿರುವವರು, . . . ಯಾವ ರೀತಿ ಕನ್ವರ್ಟ್ ಮಾಡುತ್ತೀರಿ ಮಾಡಿಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್:-** ಎಲ್ಲಾ ವಿಷಯವೂ ಹೊರಗೆ ಬರಬೇಕು, ಸತ್ಯಾಂಶ ಎಲ್ಲರಿಗೂ ಕೂಡ ಗೊತ್ತಾಗಬೇಕು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಚರ್ಚೆಗೆ ನೀವೇ ಅವಕಾಶ ಕೇಳಿದ್ದೀರಿ. ಮಾನ್ಯ ಸಭಾಪತಿಗಳು ಅದನ್ನು ಕನ್ವರ್ಟ್ ಮಾಡಿಕೊಂಡರೆ ಆಯಿತು.

**ಶ್ರೀ ದಿನೇಶ್ ಗುಂಡೂರಾವ್:-** ಕನ್ವರ್ಟ್ ಎಂದರೆ ಅವರು ಅದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬರಲಿ.

**(ಗೊಂದಲ)**

**ಸಭಾಪತಿಯವರು:-** ನಾನು ವಿಚಾರ ಮಾಡುತ್ತಿರುವುದೇನೆಂದರೆ ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಯ ನಿಯಮಗಳ ನಿಯಮ 72ರಡಿ ತೆಗೆದುಕೊಳ್ಳಬೇಕೋ ಅಥವಾ ನಿಯಮ 330ರಡಿ ತೆಗೆದುಕೊಳ್ಳಬೇಕೋ ಎಂಬ ಬಗ್ಗೆ ವಿಚಾರ ಮಾಡುತ್ತಿದ್ದೇನೆ. ಅದನ್ನು ಮಧ್ಯಾಹ್ನ ಹೇಳುತ್ತೇನೆ. ಈಗಲೇ ಹೇಳಬೇಕೆಂದರೆ ಆಯಿತು, ಇದನ್ನು ನಿಯಮ 330ಕ್ಕೆ ಕನ್ವರ್ಟ್ ಮಾಡಿದ್ದೇನೆ.

ಈಗ ಡಾ: ತಳವಾರ್ ಸಾಬಣ್ಣನವರು ಪ್ರಸ್ತಾಪಿಸಲಿರುವ ವಿಷಯವನ್ನು ತೆಗೆದುಕೊಳ್ಳೋಣ.

**ಉ) ವಿಷಯ:- ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಕುರಿತು.**

- - - - -

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು**):- ಮಾನ್ಯ ಸಭಾಪತಿಯವರೇ, ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ ಎಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ತೊಗರಿಯ ಕಣಜ ಎಂದೇ ಖ್ಯಾತಿ ಪಡೆದ ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಹೆಚ್ಚಾಗಿ ಬೆಳೆಯಲಾಗುತ್ತದೆ. ತೊಗರಿಗೆ ಹಿಂದೆ ನೆಟೆ ರೋಗ ಬಂದು ರೈತರು ಸಾಕಷ್ಟು ನಷ್ಟ ಅನುಭವಿಸಿದ್ದರು. ಅದೇ ರೀತಿ ತೊಗರಿ ಬೆಳೆ ಒಣಗಿಸುವ ರೋಗ ಬಾಧೆಯಿಂದ ಕಲಬುರಗಿ ಜಿಲ್ಲೆಯಲ್ಲಿ ಲಕ್ಷಾಂತರ ಹೆಕ್ಟೇರ್ ಬೆಳೆಹಾನಿಯಾಗಿದೆ. ತೇವಾಂಶ ಕೊರತೆ ಇರುವ ಹೊಲದಲ್ಲಿ ತೊಗರಿ ರೋಗ ಬಾಧೆಯಿಂದ ನಿಧಾನವಾಗಿ ಒಣಗುತ್ತಿದೆ. ಜಿಲ್ಲೆಯಲ್ಲಿ 6.06 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು, ಅದರಲ್ಲಿ ಎರಡು ಲಕ್ಷ ಹೆಕ್ಟೇರ್‌ವರೆಗೆ ತೊಗರಿ ರೋಗ ಬಾಧೆಗೆ ತುತ್ತಾಗಿದೆ ಎನ್ನಲಾಗುತ್ತಿದೆ. ಖಾಸಗಿಯವರಿಂದ ಖರೀದಿಸಿದ

ತೊಗರಿ ಬಿತ್ತನೆ ಬೀಜ ಕಳಪೆ ಗುಣಮಟ್ಟದಿಂದ ಕೂಡಿದ್ದು, ಈ ಬೀಜಗಳಿಂದ ತೊಗರಿ ಬೆಳೆಗೆ ರೋಗ ಬಾಧೆ ಕಾಡುತ್ತಿದೆ. ಈ ಹಿನ್ನಲೆಯಲ್ಲಿ, ಕೃಷಿ ಇಲಾಖೆ ತಕ್ಷಣವೇ ಜಂಟಿ ಸಮೀಕ್ಷೆಯನ್ನು ಕೈಗೊಳ್ಳಬೇಕು. ತೊಗರಿ ಬೆಳೆಯಿಂದ ನಷ್ಟಗೊಂಡ ರೈತರಿಗೆ ಪರಿಹಾರ ಒದಗಿಸಬೇಕು ಮತ್ತು ಸರಕಾರ ಒಣಗಿದ ತೊಗರಿಗೆ ವಿಶೇಷ ಪ್ಯಾಕೇಜ್ ಒದಗಿಸಿ ರೈತರ ಬೆನ್ನೆಲುಬಾಗಿ ನಿಲ್ಲಬೇಕೆಂದು ಮಾನ್ಯ ಕೃಷಿ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಊ) ವಿಷಯ:- ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ.**

\- - - - -

**ಶ್ರೀ ನವೀನ್ ಕೆ.ಎಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹೊನ್ನೇನಹಳ್ಳಿ ಗ್ರಾಮದ ಚಂದ್ರಪ್ಪ ಎಂಬುವರ ಮೇಲೆ ಅರಣ್ಯ ಇಲಾಖೆಯ ಅಧಿಕಾರಿಗಳು ನಡೆಸಿರುವ ದೌರ್ಜನ್ಯ ಮತ್ತು ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆಯಲಾಗಿದೆ.

ಶ್ರೀಗಂಧ ಬೆಳೆದ ತಪ್ಪಿಗೆ ಓರ್ವ ನಿವೃತ್ತ ಶಿಕ್ಷಕ ಹಾಗೂ ಸಾಮಾನ್ಯ ರೈತ ಎದುರಿಸಬೇಕಾದ ಅಮಾನವೀಯ ಹಾಗೂ ಹೀನಾಯ ಪರಿಸ್ಥಿತಿಯ ಬಗ್ಗೆ ಇಡೀ ಮಾನವ ಸಮೂಹ ತಲೆ ತಗ್ಗಿಸುವಂತಾಗಿದೆ. ಅರಣ್ಯ ಇಲಾಖೆಯ ಕಚೇರಿಗಳಿಗೆ ಶ್ರೀಗಂಧ ಮರಗಳ ಕಟಾವಣೆ ಮಾಡಲು ಅನುಮತಿಗಾಗಿ ಅಲೆದೂ ಅಲೆದೂ ಸಾಕಾಗಿ, ಅವರು ಕಷ್ಟಪಟ್ಟು ಬೆಳೆದಿರುವ ಶ್ರೀಗಂಧದ ಮರಗಳನ್ನು ಕಳ್ಳರಿಂದ ರಕ್ಷಿಸಿಕೊಳ್ಳಲು ಪೂರ್ವಾನುಮತಿಗಾಗಿ ಅನೇಕ ಪತ್ರಗಳನ್ನು ಬರೆದೂ ಬರೆದೂ ಸಾಕಾಗಿ, ಕೊನೆಗೆ ಅಳಿದುಳಿದಿರುವ ಶ್ರೀಗಂಧದ ಮರಗಳನ್ನು ಕಳ್ಳರಿಂದ ಉಳಿಸಿಕೊಳ್ಳಲು ಅರಣ್ಯ ಇಲಾಖೆಗೆ ಲಿಖಿತ ಮೂಲಕ ತಿಳಿಸಿ, ಅವರ ಸ್ವಂತ ಜಮೀನಿನಲ್ಲಿರುವ ಶ್ರೀಗಂಧದ ಮರಗಳನ್ನು ಮತ್ತು ಬೇರುಗಳನ್ನು ಇಲಾಖೆಗೆ ಮಾಹಿತಿ ನೀಡಿ, ಕತ್ತರಿಸಿ ಅವರ ಮನೆಯಲ್ಲಿ ಇಟ್ಟುಕೊಂಡಿದ್ದಕ್ಕಾಗಿ ಅವರ ವಿರುದ್ಧ ಕಾಯಿದೆಯಡಿ ಪ್ರಕರಣ ದಾಖಲಿಸಿರುವುದು ನಿಜಕ್ಕೂ ಅಮಾನವೀಯ.

ಅರಣ್ಯ ಇಲಾಖೆಯ ವೈಫಲ್ಯವನ್ನು ಮುಚ್ಚಿಕೊಳ್ಳಲು ಶ್ರೀಗಂಧ ಮರಗಳ ಕಟಾವಣೆಗಾಗಿ ರೈತರು 2 ಲಕ್ಷ ರೂ. ಲಂಚ ನೀಡಲಿಲ್ಲವೆಂಬ ಕಾರಣಕ್ಕಾಗಿ, ಸುಳ್ಳು ಪ್ರಕರಣ ದಾಖಲಿಸಿ ಧಾರ್ಷ್ಟ್ಯ ಮೆರೆದಿರುವ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಬೇಕೆಂದು ಆಗ್ರಹಿಸುತ್ತ, ಈ ವಿಷಯವಾಗಿ ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಋ) ವಿಷಯ:- ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವ ಕುರಿತು.**

- - - - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ''ಮಳೆಗಾಲ ಮುಗಿದರೂ ಪುನರಾರಂಭವಾಗದ ಕಾಮಗಾರಿ! ಉಭಯ ಜಿಲ್ಲೆಯ ಯಾವ ಭಾಗದಲ್ಲೂ ಮನೆ ನಲ್ಲಿಗೆ ತಲುಪದ ''ಜಲ''. ಜಲಜೀವನ್ ಮಿಷನ್‌ಗೆ ಜೀವ ಬರುವುದು ಯಾವಾಗ?'' ಎಂಬ ಶೀರ್ಷಿಕೆಯಡಿ ದಿನಾಂಕ 07-12-2024ರ 'ಉದಯವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಮಳೆಗಾಲ ಮುಗಿದು ಚಳಿ ಕಾಲಿರಿಸಿದ್ದರೂ ಕರಾವಳಿಯಲ್ಲಿ ಜಲಜೀವನ ಮಿಷನ್ ಕಾಮಗಾರಿ ಮಾತ್ರ ಪುನರಾರಂಭವಾಗಿಲ್ಲ. ಮಳೆಗಾಲಕ್ಕೆ ಪೂರ್ವದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ವಿವಿಧೆಡೆ ಈ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಈವರೆಗೂ ಮರಳಿ ಚಾಲನೆ ಸಿಕ್ಕಿಲ್ಲ. ಒಟ್ಟಿನಲ್ಲಿ ಜಲಜೀವನ್ ಮಿಷನ್‌ಗೆ ಜೀವ ಇಲ್ಲದಂತಾಗಿದೆ.

ಮನೆ ಮನೆಗೆ ಶುದ್ಧ ಕುಡಿಯುವ ನೀರನ್ನು ನಲ್ಲಿಯ ಮೂಲಕ ಪೂರೈಸುವ ಕೇಂದ್ರ ಸರಕಾರದ ಯೋಜನೆ ಇದಾಗಿದ್ದು, ಹಲವು ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆಗಳ ಆವರಣದಲ್ಲಿ ನಲ್ಲಿ ನೀರು ಹಿಡಿಯಲು ಬೇಕಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆದರೆ ನಲ್ಲಿ ಮೂಲಕ ನೀರು ಪೂರೈಸುವ ಪ್ರಕ್ರಿಯೆ ಎಲ್ಲಿಯೂ ಆರಂಭವಾಗಿಲ್ಲ.

ದಾಖಲೆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ 2,94,409 ಮನೆಗಳಿಗೆ ಹಾಗೂ ಉಡುಪಿ ಜಿಲ್ಲೆಯಲ್ಲಿ 2,05,807 ಮನೆಗಳಿಗೆ ನಲ್ಲಿಯ ಸಂಪರ್ಕಗಳನ್ನು ನೀಡಲಾಗಿದೆ.

ಗ್ರಾಮೀಣ ಭಾಗದಲ್ಲಿ ಜಲಜೀವನ್ ಮಿಷನ್ ಕಾಮಗಾರಿಗಾಗಿ ಅಲ್ಲಲ್ಲಿ ಪೈಪ್‌ಲೈನ್ ಅಳವಡಿಸಲು ರಸ್ತೆ ಅಂಚಿನಲ್ಲಿ ಅಗೆಯಲಾಗಿದೆ. ಕೆಲವು ಕಡೆ ಪೈಪ್‌ಲೈನ್ ಅಳವಡಿಸಿ ಅರ್ಧಂಬರ್ಧ ಮಣ್ಣು ತುಂಬಿದ್ದಾರೆ. ಇನ್ನು ಕೆಲವು ಕಡೆ ಪೈಪ್‌ಲೈನ್ ಪೂರ್ತಿಯಾಗಿ ಅಳವಡಿಸಿಯೇ ಇಲ್ಲ. ಹೀಗಾಗಿ ಸಾರ್ವಜನಿಕರಿಗೆ ನಿತ್ಯ ಸಂಚಾರಕ್ಕೂ ಅಡೆತಡೆಯಾಗಿದೆ.

ಅನೇಕ ಗ್ರಾಮಗಳಲ್ಲಿ ಪೈಪ್‌ಲೈನ್ ಅಳವಡಿಸಿಯಾಗಿದೆ. ಆದರೆ ಮನೆ-ಮನೆಗೆ ನೀರು ಪೂರೈಸಲು ಬೇಕಾದಷ್ಟು ನೀರಿನ ಮೂಲ ಇಲ್ಲ. ಇನ್ನು ಕೆಲವೆಡೆ ಓವರ್‌ಹೆಡ್ ಟ್ಯಾಂಕ್‌ಗಳ ನಿರ್ಮಾಣವೂ ಆಗಿದೆ. ಆದರೆ ನೀರಿನ ಮೂಲ ಯಾವುದು ಎಂಬ ಬಗ್ಗೆ ಅಧಿಕಾರಿಗಳಿಗೆ ಸ್ಪಷ್ಟತೆಯಿಲ್ಲ. ದಿನದ 24 ತಾಸು ಕೂಡ ನೀರು ಪೂರೈಸಲು ಬೇಕಾದಷ್ಟು

ನೀರಿನ ಸಂಗ್ರಹವೂ ಅಗತ್ಯವಿದೆ. ಅದಕ್ಕೆ ನೀರಿನ ಮೂಲವೂ ಚೆನ್ನಾಗಿರಬೇಕಾಗುತ್ತದೆ. ಯೋಜನೆಯ ಅನುಷ್ಠಾನದ ಅನಂತರ ಮೂಲ ಹುಡುಕಿದರೆ ಸಮಸ್ಯೆ ಪರಿಹಾರವೂ ಕಷ್ಟವೇ ಎನ್ನುತ್ತಿದ್ದಾರೆ ಗ್ರಾಮ ಪಂಚಾಯತಿಯ ಅಧಿಕಾರಿಗಳು.

ಆದ್ದರಿಂದ ಈ ಯೋಜನೆಗೆ ಸಂಬಂಧಿಸಿದಂತೆ ನೀರಿನ ಮೂಲವನ್ನು ಮೊದಲು ಶೋಧಿಸಿ ಅನುಷ್ಠಾನ ಮಾಡುವ ಜೊತೆಗೆ, ಆದಷ್ಟು ಬೇಗ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರನ್ನು ಈ ಮೂಲಕ ಕೋರುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಾಕಷ್ಟು ವಿವರವಾದ 4-5 ಅಂಶಗಳ ಬಗ್ಗೆ ಕೇಳಿದ್ದಾರೆ. ಮಾನ್ಯ ಸದಸ್ಯರಿಗೆ ವಿವರವಾದ ಉತ್ತರವನ್ನು ತಲುಪಿಸುತ್ತೇವೆ ಮತ್ತು ಪುನರ್ ಆರಂಭಕ್ಕೆ ಕೂಡ ಕ್ರಮ ಕೈಗೊಳ್ಳುತ್ತೇವೆ.

**ಎ) ವಿಷಯ:- ಬಳ್ಳಾರಿ ನಗರದಲ್ಲಿ ನಿರ್ಮಿಸಿರುವ ಸಾಂಸ್ಕೃತಿಕ ಸಮುಚ್ಚಯಕ್ಕೆ ದಿ॥ ಶ್ರೀ ಎಂ.ಪಿ. ಪ್ರಕಾಶ್‌ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ.**

- - - - -

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವೈಜ್ಞಾನಿಕ-ವೈಚಾರಿಕ ದೃಷ್ಟಿಕೋನ, ಸೇವೆಯಲ್ಲಿ ಶ್ರದ್ಧೆ; ಸಾಹಿತ್ಯ, ರಂಗಭೂಮಿ, ಸಂಗೀತ, ಶಿಕ್ಷಣ ಹೀಗೆ ಎಲ್ಲ ವಲಯಗಳಲ್ಲೂ ಅಪಾರ ಆಸಕ್ತಿ ಹೊಂದಿದ್ದ ಸನ್ಮಾನ್ಯ ದಿವಂಗತ ಎಂ.ಪಿ. ಪ್ರಕಾಶ್ ಅವರು ರಾಜಕೀಯವಾಗಿ ಉನ್ನತ ಹುದ್ದೆ ಅಲಂಕರಿಸಿದ್ದರೂ ಸಹಜತೆಯನ್ನು ಹೊಂದಿದವರಾಗಿದ್ದರು. 1967 ರಲ್ಲಿ ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಪ್ರಾರಂಭಕ್ಕೆ ಅಡಿಗಲ್ಲು ಹಾಕಿದ ನಂತರ ಈ ವಿಷಯಕ್ಕೆ ಸರ್ಕಾರದ ಮಟ್ಟದಲ್ಲಿ ಜೀವ ತುಂಬಿ ಖಾಸಗಿ ವಲಯದಲ್ಲಿ ಉದ್ದೇಶಿತ ಉಕ್ಕು ಕಾರ್ಖಾನೆ ಪ್ರಾರಂಭಕ್ಕೆ ಕಾರಣರಾದ ಶ್ರೀಯುತ ಎಂ.ಪಿ. ಪ್ರಕಾಶ್‌ರವರು ವಿಜಯನಗರ ಉಕ್ಕು ಕಾರ್ಖಾನೆಗೆ ಸರ್ಕಾರ ತೋರಣಗಲ್ಲು ಕೃಷಿಕರ ಭೂಮಿಯನ್ನು ಸ್ವಾಧೀನಕ್ಕೆ ಪಡೆದಾಗ ಹೆಚ್ಚಿನ ಪರಿಹಾರ ನೀಡಲು ಪ್ರತ್ಯಕ್ಷವಾಗಿ-ಪರೋಕ್ಷವಾಗಿ ಹೋರಾಟ ನಡೆಸಿದ್ದರು. ಜಿಂದಾಲ್ ಸಂಸ್ಥೆಯು ಕೈಗಾರಿಕೆ ಸ್ಥಾಪಿಸಲು ಮುಂದಾದಾಗ ಸರ್ಕಾರದ ಮಟ್ಟದಲ್ಲಿನ ಎಲ್ಲಾ ಅನುಮತಿಗಳನ್ನು ಕೊಡಿಸಿ ಸ್ಥಳೀಯರ ಉದ್ಯೋಗಕ್ಕಾಗಿ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿದರು.

(ಮುಂದು)

(715) 9.12.2024 2.00 ಹೆಚ್‌ವಿಆರ್.ಎನ್

**ಬಿ.ಕೆ.ಹರಿಪ್ರಸಾದ್(ಮುಂದು):**

ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದಲ್ಲಿ ಹತ್ತು ಹಲವು ಖಾತೆಗಳನ್ನು ನಿರ್ವಹಿಸಿದ್ದ ಮಾನ್ಯ ಎಂ.ಪಿ.ಪ್ರಕಾಶ್‌ರವರು ಉಪ ಮುಖ್ಯಮಂತ್ರಿಗಳಾಗಿಯೂ ಕಾರ್ಯನಿರ್ವಹಿಸಿದ್ದರು. ಇವರು ಗೆಲವು ಸಾಧಿಸಿದಾಗಲೆಲ್ಲ ಪಕ್ಷ ಅಧಿಕಾರದಲ್ಲಿರುತ್ತಿದ್ದುದ್ದು ವಿಶೇಷ. ಜನತಾ ಪರಿವಾರದಲ್ಲಿ ಗುರುತಿಸಿಕೊಂಡಿದ್ದ ಮಾನ್ಯ ಎಂ.ಪಿ.ಪ್ರಕಾಶ್‌ರವರು 2007ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಚುನಾವಣೆ ಕುರಿತು ರಾಜಕಾಣಿಗಳು ಚಿಂತಿಸುತ್ತಿದ್ದರೆ ಹೊಸ ಪೀಳಗೆಯ ಭವಿಷ್ಯ ಕುರಿತು ಮುತ್ಸದ್ದಿಗಳು ಚಿಂತನೆ ನಡೆಸುತ್ತಾರೆ ಎನ್ನುವುದಕ್ಕೆ ಶ್ರೀ ಎಂ.ಪಿ.ಪ್ರಕಾಶ್ ಅವರ ರಾಜಕೀಯ ಜೀವನ ಸಾಕ್ಷೀಕರಿಸುತ್ತದೆ.

ಹತ್ತು ಹಲವು ಮಾನವೀಯ ಗುಣಗಳ ಸಮನ್ವಯತೆ ಸಾಧಿಸಿದ್ದ ಇವರು ಸಾಂಸ್ಕೃತಿಕ ಹಿನ್ನೆಲೆಯವರಾಗಿದ್ದು, "ರಂಗಭಾರತಿ" ಸ್ಥಾಪನೆ ಮೂಲಕ ತಮ್ಮ ರಾಜಕೀಯ ಕರ್ಮಭೂಮಿಯಾದ ಹೂವಿನ ಹಡಗಲಿಯಲ್ಲಿ ರಂಗಭೂಮಿ ಚಟುವಟಿಕೆಗಳನ್ನು ಜೀವಂತವಾಗಿಟ್ಟಿದ್ದರು. ಜಿಲ್ಲಾ ಸಚಿವರಾಗಿದ್ದಾಗ ಬಳ್ಳಾರಿ ನಗರದಲ್ಲಿ ಅದ್ಭುತವಾದ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಾಣ ಮಾಡಿದ್ದು, ಈ ಸಮುಚ್ಚಯಕ್ಕೆ ಶ್ರೀ ಎಂ.ಪಿ.ಪ್ರಕಾಶ್‌ರವರ ಹೆಸರನ್ನು ನಾಮಕರಣಗೊಳಸಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡಿಸಲಾಗುತ್ತದೆ.

**ಏ)ವಿಷಯ: ಮಾಜಿ ಸೈನಿಕರುಗಳ ಹಲವು ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಶೇಕಡಾ 50ರಷ್ಟು ಕಂದಾಯ ರಿಯಾಯಿತಿ ನೀಡುವ ಬಗ್ಗೆ.**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:09.12.2024ರಂದು "ಹೊಸ ದಿಗಂತ" ದಿನಪತ್ರಿಕೆಯಲ್ಲಿ "ಸರ್ಕಾರದ ವಿರುದ್ಧ ಮಾಜಿ ಯೋಧರಿಂದ ಹೋರಾಟ" ಎಂಬ ಶೀರ್ಷಿಕೆಯಡಿ ವರದಿಯಾಗಿರುವುದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಇಡೀ ರಾಜ್ಯದಲ್ಲಿ ರಾಜ್ಯ ಸರ್ಕಾರದಿಂದ ಅಗತ್ಯ ಸೌಲಭ್ಯಗಳು ಸಿಗದೇ ವಂಚಿತರಾಗಿರುವ 1.32 ಲಕ್ಷ ಮಾಜಿ ಯೋಧರು ತಮಗೆ ಆಗಿರುವ ಅನ್ಯಾಯವನ್ನು ಖಂಡಿಸಿ, "ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ(ರಿ)" ಮೂಲಕ

ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ಮುಂದಾಗಿರುವುದು ಅತ್ಯಂತ ನೋವಿನ ಸಂಗತಿ, ಸರ್ಕಾರವು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಮುಂದಾಗಿರುತ್ತಾರೆ.

ರಾಜ್ಯ ಸರ್ಕಾರವು ನಿವೇಶನ ಮತ್ತು ಭೂ ಮಂಜೂರಾತಿ ಮಾಡಲು ಹಲವಾರು ಆದೇಶಗಳನ್ನು ಹೊರಡಿಸಿದ್ದರೂ ಸಹ ಮಾಜಿ ಯೋಧರಿಗೆ ನಿವೇಶನ ನೀಡಲು ಮೀನಾಮೇಷ ಎಣಿಸುತ್ತಿರುವ ಸ್ಥಳೀಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್ ಹಾಗೂ ಅಧಿಕಾರಿಗಳು ನಿವೇಶನ ಮಂಜೂರು ಮಾಡಲು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಅಲ್ಲದೇ ಕಚೇರಿಗಳಿಗೆ ಅಲೆದಾಡಿಸುತ್ತಾರೆ ಎಂದು ಮಾಜಿ ಸೈನಿಕರು ಹಾಗೂ ವೀರನಾರಿಯವರು ಅಳಲು ತೋಡಿಕೊಂಡಿರುವ ಸುದ್ದಿ ವರದಿಯಾಗಿದೆ. ಸರ್ಕಾರಿ ಉದ್ಯೋಗಗಳಲ್ಲಿ ಶೇಕಡಾ 10ರಷ್ಟು ಮೀಸಲಾತಿಯನ್ನು ನೀಡುವುದರ ಜೊತೆಗೆ, ಕೆ.ಪಿ.ಎಸ್.ಸಿ., ಕೆ.ಇ.ಎ., ಹಾಗೂ ಉಳಿದ ನೇಮಕಾತಿ ಪ್ರಾಧಿಕಾರಗಳು ಶೇಕಡಾ ನಡೆಸುವ ನೇಮಕಾತಿಗಳಲ್ಲಿ ಶೇಕಡಾ 10ರಷ್ಟು ಮೀಸಲಾತಿ ನೀಡುವಲ್ಲಿ ನಿರ್ಲಕ್ಷ್ಯ ಮಾಡುತ್ತಿವೆ ಎಂದು ಮಾಜಿ ಯೋಧರ ನೇರ ಆರೋಪವಾಗಿದೆ.

ಮಾಜಿ ಯೋಧರು ತಮ್ಮ ಕೆಲಸಕ್ಕೆ ಕಛೇರಿಗಳಿಗೆ ತೆರಳಿದಾಗ ಅಧಿಕಾರಿಗಳು ಅಲೆದಾಡಿಸುತ್ತಿರುವುದು, ಜಮೀನು ಮಂಜೂರು ಮಾಡುವಾಗ ಅಧಿಕಾರಿಗಳ ಕಿರುಕುಳ ಹಾಗೂ ಭ್ರಷ್ಟಾಚಾರದ(ಹಣದ ಆಮಿಷ) ಮಾಡುತ್ತಿದ್ದಾರೆಂದು ನೇರವಾಗಿ ಆರೋಪಿಸಿದ್ದಾರೆ.

ಈ ಎಲ್ಲಾ ಅಳಲುಗಳ ಜೊತೆಗೆ ಅವರು ಕೆಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುತ್ತಿದ್ದಾರೆ. ಶೇಕಡಾ 50ರಷ್ಟು ಕಂದಾಯ ರಿಯಾಯಿತಿ ನೀಡುವುದು, ದೇಶಕ್ಕಾಗಿ ಬಲಿದಾನ, ತ್ಯಾಗ, ಸೇವೆ ಮಾಡಿರುವುದರಿಂದ ಕೇಂದ್ರ ಸರ್ಕಾರವು ನಿವೇಶನದ ಮೇಲೆ ಜಮೀನಿನ ಮೇಲೆ, ಸಿ.ಎಸ್.ಡಿ., ಕ್ಯಾಂಟೀನ್, ಸಾಮಗ್ರಿಗಳ ಮೇಲೆ ಕಂದಾಯವನ್ನು ಸಂಪೂರ್ಣ ರಿಯಾಯಿತಿ ನೀಡಿದ್ದು ಆದರೆ ರಾಜ್ಯ ಸರ್ಕಾರವು ಶೇಕಡಾ 50ರಷ್ಟು ಕಂದಾಯವನ್ನು ವಸೂಲಿ ಮಾಡುತ್ತಿರುವುದನ್ನು ಸಂಪೂರ್ಣ ರಿಯಾಯಿತಿ ನೀಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸುತ್ತಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಮಾಜಿ ಸೈನಿಕರ ಬೇಡಿಕೆಗಳನ್ನು ಈಡೇರಿಸಿ ನ್ಯಾಯ ಒದಗಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಐ)ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ 200 ನೌಕರರಿಗೆ 4 ವರ್ಷಗಳಿಂದ ನಿವೃತ್ತಿ ವೇತನ ಮತ್ತು ಉಪದಾನ ನೀಡದಿರುವ ಬಗ್ಗೆ.**

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಂಗಳೂರು ವಿಶ್ವವಿದ್ಯಾನಿಲಯವು ಆರ್ಥಿಕ ಸಂಕಷ್ಟಕ್ಕೆ ಒಳಪಟ್ಟು ಕಳೆದ 6 ವರ್ಷಗಳಿಂದ ಸರ್ಕಾರದಿಂದ ಯಾವುದೇ ಅನುದಾನ ದೊರೆಯದೇ ಇರುವುದರಿಂದ ವಿಶ್ವವಿದ್ಯಾನಿಲಯದ ಬೆಳವಣಿಗೆ ಸಂಪೂರ್ಣವಾಗಿ ಕುಂಠಿತಗೊಂಡಿದ್ದು, ವಿಶ್ವವಿದ್ಯಾನಿಲಯ ನಡೆಸುತ್ತಿರುವ ಅಧೀನ ಕಾಲೇಜುಗಳಲ್ಲಿನ ಬೆಳವಣಿಗೆಗೂ ಅನುದಾನವನ್ನು ಒದಗಿಸಲು ಅಸಾಧ್ಯವಾಗಿರುವುದರ ಬಗ್ಗೆ ಇತ್ತೀಚಿಗೆ ಪತ್ರಿಕೆಯಲ್ಲಿ ದೊಡ್ಡ ಸುದ್ದಿಯಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 4 ವರ್ಷಗಳಿಂದ ಒಟ್ಟು 200 ಮಂದಿ ಪ್ರೊಫೆಸರ್(ಪ್ರಾಧ್ಯಾಪಕರು)ಗಳು, ಆಡಳಿತ ವರ್ಗದ ಅಧಿಕಾರಿಗಳು ನಿವೃತ್ತಿ ಹೊಂದಿದ್ದು, ಕಳೆದ 4 ವರ್ಷಗಳಿಂದ ಈ ನಿವೃತ್ತಿ ಹೊಂದಿದ ನೌಕರರಿಗೆ ವೇತನ ಉಪದಾನ ಕೊಡಲಿಲ್ಲವೆಂದು ಸುಮಾರು 40 ರಿಂದ 45 ವರ್ಷಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಮಕ್ಕಳಿಗೆ ಬೋಧಿಸಿದ ಮತ್ತು ಉನ್ನತಿಗೆ ಕಾರಣಕರ್ತರಾದ ಪ್ರೊಫೆಸರ್‌ಗಳು ಇಂದು ನಿವೃತ್ತಿ ಹೊಂದಿ ವೇತನ ಉಪದಾನಕ್ಕಾಗಿ ಚುನಾಯಿತ ಪ್ರತಿನಿಧಿಗಳಲ್ಲಿ ಮತ್ತು ಸರ್ಕಾರದ ಅಧಿಕಾರಿಗಳ ಮುಂದೆ ಅಲೆದಾಡುತ್ತಿರುವ ಪರಿಸ್ಥಿತಿ ಬಂದಿರುವುದು ಅತ್ಯಂತ ದುಃಖಕರ ವಿಚಾರವಾಗಿದೆ. ಪ್ರಸ್ತುತ ನಿವೃತ್ತಿ ವೇತನ ಉಪದಾನ ಮತ್ತು ಪಿಂಚಣಿ ನೀಡಲು 36 ಕೋಟಿ ರೂಪಾಯಿಗಳು ಬೇಕೆಂದು ಮಂಗಳೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಆದುದರಿಂದ ಸದರಿ ಬೇಡಿಕೆಯನ್ನು ಕೂಡಲೇ ಈಡೇರಿಸಲು ಕಳೆದ 4 ವರ್ಷಗಳಿಂದ ನಿವೃತ್ತಿ ಹೊಂದಿದ ಶಿಕ್ಷಕರಿಗೆ ಮತ್ತು ನೌಕರರಿಗೆ ವೇತನ ಉಪದಾನ ನೀಡಲು ಕೂಡಲೇ 36 ಕೋಟಿ ರೂಪಾಯಿಗಳನ್ನು ನೀಡಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಆರ್ಥಿಕ ಇಲಾಖೆ ಕ್ರಮಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತಿದ್ದೇನೆ.

**ಡಾ॥ಎಂ.ಸಿ.ಸುಧಾಕರ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಡಲಾಗುವುದೆಂದು ಹೇಳಿದ್ದಾರೆ. ನಿವೃತರಾದ ಮೇಲೆ ಪಿಂಚಣಿ ಇಲ್ಲದೆ ಆ ಪ್ರಾಧ್ಯಾಪಕರು ಯಾವ ರೀತಿಯಲ್ಲಿ ಜೀವನ ಸಾಗಿಸಬೇಕು?

**ಸಭಾಪತಿಯವರು:-** ಶೂನ್ಯವೇಳೆಯಲ್ಲಿ ಸ್ವೀಕೃತವಾಗಿರುವ ನೋಟೀಸ್‌ಗಳು ಅತ್ಯಂತ ದೀರ್ಘವಾಗಿರುತ್ತವೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 58 ಬಿ ಅನ್ವಯ ಸೂಚನಾ ಪತ್ರಗಳನ್ನು 150 ಪದಗಳಿಗೆ ಸೀಮಿತವಾಗಿ ನೀಡುವುದು, ಅತ್ಯಂತ ದೀರ್ಘವಾಗಿ ನೀಡುವ ಶೂನ್ಯವೇಳೆಯ ಸೂಚನಾ ಪತ್ರಗಳನ್ನು ಸ್ವೀಕರಿಸುವುದಿಲ್ಲವೆಂದು ಈ ಮೂಲಕ ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ.

**೦5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**(ಮೊದಲನೇ ಪಟ್ಟಿ )**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ಭಾರತ ಸಂವಿಧಾನದ 213ರ ಅನುಚ್ಛೇದದ 2(ಎ)ನೇ ಖಂಡದ ಮೇರೆಗೆ:**

1. ದಿನಾಂಕ:24.09.2024ರಂದು ಹೊರಡಿಸಲಾದ, 2020ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ 144ನೇ ಪ್ರಕರಣದ ತಿದ್ದುಪಡಿ ಅಧ್ಯಾದೇಶ ಸಂಖ್ಯೆ 01.

2. ದಿನಾಂಕ:13.11.2024ರಂದು ಹೊರಡಿಸಲಾದ, 2024ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ ಸಂಖ್ಯೆ 02 ಅನ್ನು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು :-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ನಾಗರಿಕ ಸೇವಾ 1978ರ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

1. 1981ರ ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ ನಿಯಮಗಳ ನಿಯಮ 8 ಮತ್ತು 9ನ್ನು ತಿದ್ದುಪಡಿ ಮಾಡಿ, ದಿನಾಂಕ:31.07.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ 18 ಸಾವಿಯೋ 2022.

2. 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮಗಳ ನಿಯಮ 8ನ್ನು ತಿದ್ದುಪಡಿ ಮಾಡಿ ದಿನಾಂಕ:23.10.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ 65 ಕವಿಇ 2024.

ಕರ್ನಾಟಕ ಲೋಕಾಯುಕ್ತ ಅಧಿನಿಯಮದ 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ:4) ಪ್ರಕರಣ 23(3)ರ ಮೇರೆಗೆ:

1985ರ ಕರ್ನಾಟಕ ಲೋಕಾಯುಕ್ತ ನಿಯಮಾವಳಿಗಳ ನಿಯಮ 6-ಎ ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:05.07.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 109 ಸೇಲೋಯು 2019 ಅನ್ನು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು :-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**1988ರ ಮೋಟರು ವಾಹನ ಅಧಿನಿಯಮದ ಪ್ರಕರಣ 212(3)ರ ಮೇರೆಗೆ:**

1. 2024ರ ಕರ್ನಾಟಕ ಮೋಟರು ವಾಹನಗಳ(ಶಾಲಾ ಮಕ್ಕಳ ಸಾರಿಗೆಯಲ್ಲಿ ನಿರತವಾಗಿರುವ ವಾಹನಗಳಿಗೆ ಷರತ್ತುಗಳು) (ತಿದ್ದುಪಡಿ) ನಿಯಮಾವಳಿಗಳ ನಿಯಮ 4ಎ ಹೊಸ ನಿಯಮದ ಸೇರ್ಪಡೆಗೊಳಿಸಿ, ದಿನಾಂಕ:15.06.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಟಿಡಿ 05 ಟಿಡಿಆರ್ 2024.

2. 2012ರ ಕರ್ನಾಟಕ ಮೋಟರು ವಾಹನಗಳ(ಶಾಲಾ ಮಕ್ಕಳ ಸಾರಿಗೆಯಲ್ಲಿ ನಿರತವಾಗಿರುವ ವಾಹನಗಳಿಗೆ ಷರತ್ತುಗಳು) (ತಿದ್ದುಪಡಿ) ನಿಯಮಾವಳಿಗಳ ನಿಯಮ 4ಎ ಹೊಸ ನಿಯಮದ ಅನುಬಂಧದ ಕ್ರಮ ಸಂಖ್ಯೆ: 6 ಮತ್ತು 8ರಲ್ಲಿ "amp" ಅನ್ನು ಹೊರತುಪಡಿಸಿ, ದಿನಾಂಕ:16.07.2024ರಂದು ಹೊರಡಿಸಲಾದ ಅಧಿಸೂಚನೆ (ತಿದ್ದೋಲೆ) ಸಂಖ್ಯೆ: ಟಿಡಿ 05 300 2024 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು :-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಇಂಧನ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 182ರ ಮೇರೆಗೆ:**

1. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪೂರ್ವಪಾವತಿಸಿದ ಸ್ಮಾರ್ಟ್ ಮಾಪಕ ಅಳವಡಿಕೆ) ವಿನಿಯಮಗಳನ್ನು ಅಧಿಸೂಚಿಸಿ, ದಿನಾಂಕ:06.03.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/6/ಡಿಡಿಡಿ/ಎಫ್-1335/2023-24/1458.

2. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನ ಖರೀದಿ) (ಹತ್ತನೇ ತಿದ್ದುಪಡಿ) ವಿನಿಯಮಗಳನ್ನು ಜಾರಿಗೊಳಿಸಿ, 2:19.06.20240 ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಕವಿನಿಆ/ಜಂ.ನಿ.(ತಾಂತ್ರಿಕ)/2024 ಆರ್.ಪಿ.ಓ-ವಿನಿಯಮಗಳು/240 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಆರೈಕೆ ಅಧಿನಿಯಮ 2017ರ ಕಲಂ 124(2)ರ ಮೇರೆಗೆ :**

2017ರ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಆರೈಕೆ ಅಧಿನಿಯಮ,(2017ರ ಕೇಂದ್ರ ಅಧಿನಿಯಮ 10) 121ನೇ ಪ್ರಕರಣದ(2)ನೇ ಉಪಪ್ರಕರಣದ ಮೇರೆಗೆ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ನಿಯಮಗಳು 2021ನ್ನು ರಚಿಸಿ, ದಿನಾಂಕ:18.10.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಕುಕ 97 ಸಿಜಿಇ 2018.

**1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ ಕಲಂ 8(3)ರ ಮೇರೆಗೆ:**

1. 2020ರ ಕರ್ನಾಟಕ ಸಿವಿಲ್ ಸೇವೆಗಳು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಲ್ಲಿ ನೇಮಕಗೊಂಡ ಗುತ್ತಿಗೆ ಅರೆ-ವೈದ್ಯಕೀಯ ಸಿಬ್ಬಂದಿಗಳು ಮತ್ತು ಚಾಲಕರ ವಿಲೀನಗೊಳಿಸುವಿಕೆ)(ವಿಶೇಷ) ತಿದ್ದುಪಡಿ ನಿಯಮಗಳ ನಿಯಮ 3 ಮತ್ತು ಅನುಸೂಚಿಯ ತಿದ್ದುಪಡಿ ಮಾಡಿ, ದಿನಾಂಕ:27.01.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಚ್‌ಎಫ್ ಡಬ್ಲ್ಯೂ 01 ಎಚ್‌ಎಂ 2020.

2. 2020ರ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯ (ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಕೆಲವು ಹುದ್ದೆಗಳಿಗೆ ನೇಮಕಾತಿ)(ವಿಶೇಷ) ನಿಯಮಗಳನ್ನು ರಚಿಸಿ, ದಿನಾಂಕ:17.05.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 709 ಎಚ್‌ಎಸ್‌ಎಂ 2017

3. 2020ರ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯ (ಉಳಿಕೆ ಪೋಷಕ ವೃಂದದಲ್ಲಿ ಕೆಲವು ಹುದ್ದೆಗಳಿಗೆ ನೇಮಕಾತಿ)(ವಿಶೇಷ) ನಿಯಮಗಳನ್ನು ರಚಿಸಿ, ದಿನಾಂಕ 17.05.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 709 ಎಚ್‌ಎಸ್‌ಎಂ 2017.

4. 1960ರ ಕರ್ನಾಟಕ ಸಾರ್ವಜನಿಕ ಆರೋಗ್ಯ ಸೇವೆ (ನೇಮಕಾತಿ) ತಿದ್ದುಪಡಿ ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ, ದಿನಾಂಕ:25.07.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 399 ಎಚ್‌ಎಸ್‌ಎಂ 2021 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕಂದಾಯ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

1. 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ 198ರ ಪ್ರಕರಣದ ಮೇರೆಗೆ:

1966ರ ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 66ನ್ನು ತಿದ್ದುಪಡಿ ಮಾಡಿ, ದಿನಾಂಕ:12.03.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆರ್‌ಡಿ 02 ಎಲ್‌ಜಿಪಿ 2024.

2. 1978ರ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ 10(2)ರ ಪ್ರಕರಣದ ಮೇರೆಗೆ:

1979ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ನಿಯಮಗಳಲ್ಲಿ ಹೊಸ ನಿಯಮ 6 ಮತ್ತು ಹೊಸ ನಮೂನೆ IIIನ್ನು ಸೇರ್ಪಡೆಗೊಳಿಸಿ, ದಿನಾಂಕ:25.06.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆರ್‌ಡಿ 10 ಎಲ್‌ಜಿಪಿ 2024 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಪ್ರಿಯಾಂಕ್ ಖರ್ಗೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

**1978ರ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮದ 8(3)ರ ಪ್ರಕರಣದ ಮೇರೆಗೆ:**

1. 2020ರ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ, ದಿನಾಂಕ:15.03.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 115 ಆರ್‌ಐ 2022.

2. 2024ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು(ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-1 ಮತ್ತು 2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಗಳ ನಿಯಂತ್ರಣ) ನಿಯಮಗಳನ್ನು ರಚಿಸಿ, ದಿನಾಂಕ 16.11.2024ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ:RDPR/80/GPK/2021(E) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

**2014ರ ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರ ನಿಯಂತ್ರಣ) ಅಧಿನಿಯಮ36(4)ರ ಪ್ರಕರಣದ ಮೇರೆಗೆ:**

2019ರ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರ ನಿಯಂತ್ರಣ) ನಿಯಮಗಳ ಅನುಸೂಚಿಯ ತಿದ್ದುಪಡಿ ಮಾಡಿ, ದಿನಾಂಕ:15.02.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೌಉಜೀಇ 41 ಉಜೀಸೇ 2018 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಆರ್.ಬಿ. ತಿಮ್ಮಾಪುರ (ಮಾನ್ಯ ಅಬಕಾರಿ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

**1965ರ ಕರ್ನಾಟಕ ಅಬಕಾರಿ ಅಧಿನಿಯಮದ ಪ್ರಕರಣ 71(4)ರ ಮೇರೆಗೆ:**

1. 1967ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳ ನಿಯಮ 3, 5, 10-ಬಿ, 11, 17-ಎ, 17-ಬಿ ಹಾಗೂ 24ನ್ನು ನಿಯಮದ ತಿದ್ದುಪಡಿ ಮಾಡಿ ದಿನಾಂಕ:16.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ-I ಸಂಖ್ಯೆ: ಆಇ 09 ಪಿಇಎಸ್ 2022.

2. 1968ರ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) 2 2, 3, 4-2, -2, 4, 5, 6, 62, 7, 7, 8, 85, 85, 9, 11, 112, 112, 12, 14, 15, 16, 17 2 18, ಸಿಎಲ್-10, ನಮೂನೆ ಸಿಎಲ್-11ಸಿ, ನಮೂನೆ ಸಿಎಲ್-16 ಹಾಗೂ ನಮೂನೆ ಸಿಎಲ್-17ರ ತಿದ್ದುಪಡಿ ಮಾಡಿ, ದಿನಾಂಕ: 16.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ-II ಸಂಖ್ಯೆ: ಆಇ 9 ಪಿಇಎಸ್ 2022.

3. 1968ರ ಕರ್ನಾಟಕ ಅಬಕಾರಿ(ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ನಿಯಮ 2ನೇ, 2-ಎಎಎ, ಅನುಸೂಚಿ-ಎ, ಅನುಸೂಚಿ-ಡಿ1 ನ್ನು ತಿದ್ದುಪಡಿ ಮಾಡಿ, ದಿನಾಂಕ:16.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ- III ಸಂಖ್ಯೆ: ಆಇ 9 ಪಿಇಎಸ್ 2022.

4. 1967ರ ಕರ್ನಾಟಕ ಅಬಕಾರಿ(ಬ್ರವರಿ) ನಿಯಮಗಳ ನಿಯಮ 2, 27ನೇ ನಿಯಮದ ತಿದ್ದುಪಡಿ ಮತ್ತು ಹೊಸ ನಿಯಮಗಳ 27-ಬಿ ಮತ್ತು 27-ಸಿ ರ ಸೇರ್ಪಡೆಗೊಳಿಸಿ ಹಾಗೂ ನಮೂನೆ 5ರ ತಿದ್ದುಪಡಿ ಮಾಡಿ, ದಿನಾಂಕ:16.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ IV ಸಂಖ್ಯೆ: ಆಇ 9 ಪಿಇಎಸ್ 2022.

5. 1968ರ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ ನಿಯಮ ತಿನ್ನು ತಿದ್ದುಪಡಿ ಮಾಡಿ, ದಿನಾಂಕ:09.07.2024ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 1 ಪಿಇಎಸ್ 2024.

**1965ರ ಕರ್ನಾಟಕ ಅಬಕಾರಿ ಅಧಿನಿಯಮದ ಪ್ರಕರಣ 71(4)ರ ಮೇರೆಗೆ:**

1. 2024ರ ಕರ್ನಾಟಕ ಅಬಕಾರಿ(ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) (ನಾಲ್ಕನೇ ತಿದ್ದುಪಡಿ) ನಿಯಮಗಳ ಅನುಸೂಚಿ-ಡಿ ಯನ್ನು ತಿದ್ದುಪಡಿ ಮಾಡಿ, ದಿನಾಂಕ:23.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 3 ಪಿಇಎಸ್ 2024.

2. 2024ರ ಕರ್ನಾಟಕ ಅಬಕಾರಿ(ಅಬಕಾರಿ ಸುಂಕಗಳು ಮತ್ತು ಶುಲ್ಕಗಳು)(ಮೂರನೇ ತಿದ್ದುಪಡಿ) ನಿಯಮಗಳ ನಿಯಮ 2-ಎಇ, 2-ಎಎಫ್ ಅನ್ನು ತಿದ್ದುಪಡಿಮಾಡಿ, ದಿನಾಂಕ:23.08.2024ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 4 ಪಿಇಎಸ್ 2024 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಎರಡನೇ ಪಟ್ಟಿ)**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 1951 ಪರಿಚ್ಛೇದ 38(3)ಪ್ರಕಾರ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 2023-24ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961ರ 68ಡಿ, 68ಡಿ(2) ಮತ್ತು 68-ಸಿ(4) ರನ್ವಯ

1. ಜಮಖಂಡಿ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

2. ಕುಣಿಗಲ್ ಯೋಜನಾ ಪ್ರಾಧಿಕಾರದ 2018-19, 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಹುಣಸೂರು ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

4. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನೆ ಪ್ರಾಧಿಕಾರದ (ಬೈಯಪ್ಪ) 2023-24ನೇ ಸಾಲಿನ ವಾರ್ಷಿಕ ವರದಿ.

5. ಕೃಷ್ಣರಾಜನಗರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2016-17 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

6. ಶಿರಾ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಹೊಸಕೋಟೆ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

8. ಶಿಡ್ಲಘಟ್ಟ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

9. ನೆಲಮಂಗಲ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

10. ಇಲಕಲ್ಲ ಯೋಜನಾ ಪ್ರಾಧಿಕಾರದ 2021-22 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

11. ತಿಪಟೂರು ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

12. ಮಳವಳ್ಳಿ ಯೋಜನಾ ಪ್ರಾಧಿಕಾರದ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

13. ರಾಣೆಬೆನ್ನೂರು ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳು.

14. ಕನಕಪುರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

15. ಮಾಲೂರು ಯೋಜನಾ ಪ್ರಾಧಿಕಾರದ 2019-20, 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

16. ಮಾಗಡಿ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

17. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

18. ನಿಪ್ಪಾಣಿ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು 2020-21, 2021-22 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

19. ಗೌರಿಬಿದನೂರು ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

20. ಬೇಲೂರು-ಹಳೇಬೀಡು ಯೋಜನಾ ಪ್ರಾಧಿಕಾರದ 2019-20, 2020-21 2021-22 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

21. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ 2023-24ಸಾಲಿನ ವಾರ್ಷಿಕ ವರದಿ

22. ಅರಸೀಕೆರೆ ಯೋಜನಾ ಪ್ರಾಧಿಕಾರದ 2023-24ಸಾಲಿನ ವಾರ್ಷಿಕ ವರದಿ

23. ಮೂಡಬಿದ್ರೆ ಯೋಜನಾ ಪ್ರಾಧಿಕಾರದ 2023-24ಸಾಲಿನ ವಾರ್ಷಿಕ ವರದಿ

24. ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು (ಬಳ್ಳಾರಿ) 2023-24ನೇ ಸಾಲಿನ ವಾರ್ಷಿಕ ವರದಿ.

25. ಬೆಂಗಳೂರು-ಮೈಸೂರು ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ 2023-24ನೇ ಸಾಲಿನ ವಾರ್ಷಿಕ ವರದಿ.

26. ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕರ (ಎಸ್.ಟಿ.ಆರ್.ಆರ್) 2022-23 ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.

27. ಚಿಂತಾಮಣಿ ಯೋಜನಾ ಪ್ರಾಧಿಕಾರದ 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು.

28. ರಬಕವಿ-ಬನಹಟ್ಟಿ ನಗರ ಯೋಜನಾ ಪ್ರಾಧಿಕಾರದ 2015-16 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2015-16 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

29. ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(2)ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1973ರ ಕಲಂ 39ರನ್ವಯ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 2021-22 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

(3) ಕಂಪನಿ ಅಧಿನಿಯಮ 2013ರ ಸೆಕ್ಷನ್ 394 (2) ರನ್ವಯ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

(4) ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಅನುಸೂಚಿತ 09ರ ಭಾಗ-2ರಲ್ಲಿ ನಿಯಮ 12ರಂತೆ ಲೆಕ್ಕಪತ್ರಗಳ ಸ್ಥಾಯಿ ಸಮಿತಿ ಸಮಿತಿಗೂ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ರ ಅನುಚ್ಛೇದ 2009(4)ರಂತೆ ಮತ್ತು ಕಂಪನಿ ಕಾಯ್ದೆ 2013ರ ಸೆಕ್ಷನ್ 394(2)ರನ್ವಯ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರನ್ವಯ

1. ವಿಜಯಪುರ ಮಹಾನಗರ ಪಾಲಿಕೆ 2013-14, 2016-17 ರಿಂದ 2022-23ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2013-14 ರಿಂದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

2. ಮಂಗಳೂರು ಮಹಾನಗರ ಪಾಲಿಕೆ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2013-14 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

3. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 2009-10 ರಿಂದ 2022-23ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2009-10 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

4. ತುಮಕೂರು ಮಹಾನಗರ ಪಾಲಿಕೆ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

5. ದಾವಣಗೆರೆ ಮಹಾನಗರ ಪಾಲಿಕೆ 2023-24ನೇ ಸಾಲಿನ ವಾರ್ಷಿಕ ವರದಿ 2018-19 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(5) ಕಂಪನಿ ಅಧಿನಿಯಮ-2013ರ ಕಲಂ 394(2) ರನ್ವಯ (

ಕರ್ನಾಟಕ ನಗರ ಮತ್ತು ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು 2022-23ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(6) ಕಾಡಾ ಅಧಿನಿಯಮ 1980ರ ಕಲಂ 24 ಮತ್ತು 25 ರನ್ವಯ

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆ ಮುನಿರಾಬಾದ್ 2023-24ನೇ ಸಾಲಿನ ವಾರ್ಷಿಕ ವರದಿ.

2. ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕೃಷ್ಣಾ ಮೇಲ್ದಾಂಡೆ ಯೋಜನೆ ಭೀಮರಾಯನಗುಡಿ ಯಾದಗಿರಿ ಇದರ 2023-24ನೇ ಸಾಲಿನ ವಾರ್ಷಿಕ ವರದಿ.

3. ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನೀರಾವರಿ ಯೋಜನೆಗಳ ವಲಯ ಕಲಬುರಗಿ ಇದರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

4. ಕಾಡಾ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳ ಮೈಸೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

5. ಕಾಡಾ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ ಇದರ 2023-24ನೇ ಸಾಲಿನ ವಾರ್ಷಿಕ ವರದಿ.

6. ಕಾಡಾ ಭದ್ರಾ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ 2023-24ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕಾನೂನು, ಸಂಸದೀಯ ವಹಾರಗಳು ಮತ್ತು ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಸೆಕ್ಷನ್ 395(1)(ಬಿ) ರನ್ವಯ**

ಕರ್ನಾಟಕ ರಾಜ್ಯ ಪ್ರವಾಸೊದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ ಪರಿಚ್ಛೇದ 33(4)ರಲ್ಲಿ**

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕಲಬುರಗಿ) ಲೆಕ್ಕಪರಿಶೋಧನಾ ವರದಿ. 2022-23ನೇ ಸಾಲಿನ

3. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಹುಬ್ಬಳ್ಳಿ) 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 394ರನ್ವಯ**

1. ಕೊಂಕಣ ರೈಲ್ವೆ ಕಾರ್ಪೋರೇಷನ್ ನಿಯಮಿತದ 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಹಾಸನ-ಮಂಗಳೂರು ರೈಲ್ ಡೆವೆಲಪ್‌ಮೆಂಟ್ ಕಂಪನಿ ಲಿಮಿಟೆಡ್ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

3. ಕ-ರೈಡ್ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕರ್ನಾಟಕ) ನಿಯಮಿತ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

4. ಬಿ-ರೈಡ್ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ 2021-22ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಇಂಧನ ಸಚಿವರ ಪರವಾಗಿ) :-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಸೆಕ್ಷನ್ 395(1) ರನ್ವಯ ಮತ್ತು ವಿದ್ಯುಚ್ಛಕ್ತಿ ಕಾಯ್ದೆ 2003 ಪರಿಚ್ಛೇದ 104(4) ಅಡಿಯಲ್ಲಿ;**

1. ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

3. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

4. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ 2023-24ನೇ ಸಾಲಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು, ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ನಿಯಮ 394(2) (1)ರನ್ವಯ ಹಾಗೂ ನಿಯಮಗಳ 2017ರ ಕಾಯ್ದೆ ಕಲಂ 26ರಂತೆ**

1. ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ 2021-22ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ಅನುಸೂಚಿತ ಜಾತಿ ಮತ್ತು ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013(ತಿದ್ದುಪಡಿ ಅಧಿನಿಯಮ 2017 & 2023 ಮತ್ತು ನಿಯಮಗಳ 2017ರ ಕಾಯ್ದೆ ಕಲಂ 26ರಂತೆ 2023-24ನೇ ಸಾಲಿನ ವಾರ್ಷಿಕ ವರದಿ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕಂದಾಯ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

ಕರ್ನಾಟಕ ಆರ್ಯ ವೈಶ್ಯ ಸಮುದಾಯ ಕಾಯ್ದೆ ಕಂಪನಿ ಕಾಯ್ದೆ 2013 ರನ್ವಯ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 262(3) ರನ್ವಯ ಹಾಗೂ 253ರಂತೆ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 300ರ ಉಪಪ್ರಕರಣ (5)ರನ್ವಯ.

1. ಮೈಸೂರು ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ವಿಜಯಪುರ (ಬೀಜಾಪುರ)ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

4. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ವರದಿ.

5. ರಾಮನಗರ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

7. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕತಪಸಣಾ ವರದಿ.

8. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

10. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ವರದಿ.

11. ಹಾಸನ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ವರದಿ.

12. ಕೊಡಗು ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

13. ಕೋಲಾರ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

14. ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

15. ಉಡುಪಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

16. ಹಾವೇರಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

17. ಕರ್ನಾಟಕ ರಾಜ್ಯದಲ್ಲಿನ ತಾಲ್ಲೂಕು ಪಂಚಾಯತಿಗಳ(ಕ್ರೋಢಿಕೃತ)2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

18. ತುಮಕೂರು ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

19. ಧಾರವಾಡ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

20. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

21. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

22. ಗದಗ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

23. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

24. ಮಂಡ್ಯ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

(2) ಕಂಪನಿ ಕಾಯ್ದೆ-2013ರ ಸೆಕ್ಷನ್ 394(2)ರ ಪ್ರಕಾರ ಮತ್ತು ವಿನಿಮಯಗಳು, 2018ರ ಪ್ರಕರಣ 3 (2) ರನ್ವಯ

1. ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ವರದಿ ಮತ್ತು (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ, ಗದಗ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

(1) ಕೊಳಚೆ ಮಂಡಳಿ ಕಾಯ್ದೆ 1962ನೇ ಸಾಲಿನ ಅಧಿನಿಯಮದ ಪ್ರಕರಣ 55(3)ಮೇರೆಗೆ ಅನ್ವಯ ಮತ್ತು ಕರ್ನಾಟಕ ಗೃಹಮಂಡಳಿ ಕಾಯ್ದೆ 1962, ಪರಿಚ್ಛೇದ 55(3)ರನ್ವಯ

1. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇದರ 2022-23ನೇ ಸಾಲಿನ ವಾರ್ಷಿಕ ವರದಿ.

2. ಕರ್ನಾಟಕ ಗೃಹಮಂಡಳಿಯ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಲೆಕ್ಕ ತಪಾಸಣಾ ವರದಿ.

(2) ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳ 2016ರ ಕಲಂ 77(4) ಮತ್ತು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳ 2017ರ ನಿಯಮ 48(4)ರಂತೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(3) ಕಂಪನಿಗಳ ಕಾಯ್ದೆ ಸೆಕ್ಷನ್ 135 ಮತ್ತು ಷೆಡ್ಯೂಲ್ VII ಅನ್ವಯ ಕಂಪನಿಗಳ ನಿಬಂಧನೆಗಳ (ಕಾರ್ಪೋರೇಟ್ ಸಮಾಜಿಕ ಹೊಣೆಗಾರಿಕೆ ನೀತಿ) ನಿಯಮಗಳ, 2014(ಸಿ.ಆರ್.ಎಸ್. ರೂಲ್ಸ್)

ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 394 ಮತ್ತು 395ರ ಪ್ರಕಾರ**

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ **ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 395(1)(ಬಿ) ರಡಿ**

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**(1) ಕಂಪನಿ ಕಾಯ್ದೆ 2013ರ ಕಲಂ 394(2) ರನ್ವಯ**

1. ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ ಕಲಬುರಗಿ ಇದರ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ 2023-24 ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(2) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 2009ರ ಕಲಂ 57ರಂತೆ

1. ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗ ಇದರ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸಾರಣಾ ವರದಿ.

2. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ(ಜಿ.ಕೆ.ವಿ.ಕೆ)ಬೆಂಗಳೂರು ಇದರ 2021-22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 395ರ ಪ್ರಕಾರ**

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಕಾರ್ಮಿಕ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳ 1968ರ ನಿಯಮ 28ರನ್ವಯ**

ಕರ್ನಾಟಕ ಕಾರ್ಮಿಕರ ಕಲ್ಯಾಣ ಮಂಡಳಿ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2018-19 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2004ರ ಸೆಕ್ಷನ್ 43(3)ರನ್ವಯ ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದರ 2023-24ನೇ ಸಾಲಿನ ವಾರ್ಷಿಕ ವರದಿ.

(2) ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 394ರನ್ವಯ

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 395(1)(ಬಿ) ರನ್ವಯ**

1. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಕೆ.ಎನ್. ರಾಜಣ್ಣ (ಸಹಕಾರ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(11) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29(ಡಿ)ರನ್ವಯ

1. ಕರ್ನಾಟಕ ರಾಜ್ಯ ಸೌಹರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

2. ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ (ಕಾವೇರಿ ಹ್ಯಾಂಡ್ ಲೂಮ್ಸ್) ಬೆಂಗಳೂರು ಇದರ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

3. ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ ನಿಯಮಿತ, ಬೆಂಗಳುರು ಇದರ 2016-17, 2017-18, 2021-22 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

4. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2016-17, 2017-18, 2018-19 ಮತ್ತು 2021-22ನೇ ಸಾಲಿನ ವರದಿಗಳು.

5. ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ ನಿಯಮಿತ ಮೈಸೂರು ಇದರ 2016-17, 2018-19 ಮತ್ತು 2021-22, 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

6. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಕರ್ನಾಟಕ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಳ ನಿಯಮಿತ ಬೆಂಗಳೂರು ಜಿಆ 2016-17, 2017-18, 2021-22, 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

8. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2016-17, 2017-18, 2018-19, 2021-22, 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

9. ಕರ್ನಾಟಕ ಸೌಹರ್ದ ಒಕ್ಕೂಟ ಸಹಕಾರಿ ನಿಯಮಿತ, ಬೆಂಗಳೂರು ಇದರ 2016-17, 2018-19 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

10. ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳ ನಿಯಮಿತ, ಬೆಂಗಳೂರು ಇದರ 2016-17, 2018-19, 2021-22 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

11. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

12. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

13. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳ ನಿಯಮಿತ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

14. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

15. ಕರ್ನಾಟಕ ರಾಜ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳು ಮಹಾಮಂಡಳ ನಿಯಮಿತದ 2021-22 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

16. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

17. ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

18. ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

19. ಕರ್ನಾಟಕ ರಾಜ್ಯ ದರ್ಜಿಗಳ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2019-20 ರಿಂದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48(5) ಮತ್ತು 49 ರನ್ವಯ**

1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

2. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

3. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22 ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

5. ಗದಗ-ಬೇಟಿಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

8. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ವಿಜಯಪುರ (ಬಿಜಾಪುರ) ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

10. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

11. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

12. ಹೊಸಪೇಟೆ ಅನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

13. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

14. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

15. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.

16. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

17. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2019-20, 2020-21 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

18. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

19. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ 2021-22ನೇ ಸಾಲಿನ ಲೆಕ್ಕತಪಾಸಣಾ ವರದಿ.

20. ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

21. ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2021-22 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

22. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ವಾರ್ಷಿಕ ವರದಿ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮಾನ್ಯ ಮಹಿಳಾ ಮತ್ತು ಮಕ್ಕಳಾಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ 1995 ಸಂಖ್ಯೆ:ಲಾ 55 ಎಲ್‌ಜಿಎನ್, 94 ಬೆಂಗಳೂರು ದಿ:24.05.1995 (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 17) ಅಧ್ಯಾಯ- 4ರ ಕಂಡಿಕೆ 12, 13, 14, 15ರನ್ವಯ

ಕರ್ನಾಟಕ ರಾಜ್ಯ ಮಹಿಳಾ ಆಯೋಗ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಡಾ. ಎಂ.ಸಿ. ಸುಧಾಕರ (ಉನ್ನತ ಶಿಕ್ಷಣ ಸಚಿವರು) :-** ಸನ್ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 50 (I) & (II) ಮತ್ತು 47(4)ರನ್ವಯ

1. ತುಮಕೂರು ವಿಶ್ವವಿದ್ಯಾಲಯದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇದರ 2022-23ನೇ ಸಾಲಿನ ವಾರ್ಷಿಕ ವರದಿ.

3. ಕುವೆಂಪು ವಿಶ್ವವಿದ್ಯಾಲಯದ 2017-18 ಮತ್ತು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿಗಳು.

4. ಕಲಬುರಗಿ (ಗುಲಬರ್ಗಾ) ವಿಶ್ವವಿದ್ಯಾಲಯದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.

5. ಮಂಗಳೂರು ವಿಶ್ವವಿದ್ಯಾಲಯದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ.

6. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ (ಕೋಲಾರ) 2022-23ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

7. ಬೆಂಗಳೂರು ವಿಶ್ವವಿದ್ಯಾಲಯದ (ಜ್ಞಾನಭಾರತಿ) ಬೆಂಗಳೂರು ಇದರ 2022-23ನೇ ಸಾಲಿನ ವಾರ್ಷಿಕ ವರದಿ ಹಾಗೂ 2017-18 ಮತ್ತು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

8. ಬೆಂಗಳೂರು ನಗರ ವಿಶ್ವವಿದ್ಯಾಲಯ (ಸೆಂಟ್ರಲ್ ಕಾಲೇಜು) ಬೆಂಗಳೂರು ಇದರ 2022-23ನೇ ಸಾಲಿನ ವಾರ್ಷಿಕ ವರದಿ ಹಾಗೂ 2016-17 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

9. ದಾವಣಗೆರೆ ವಿಶ್ವವಿದ್ಯಾಲಯದ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸಾರಣಾ ವರದಿ.

(2) ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ 1991, ಅಧ್ಯಾಯ 4, ಪ್ರಕರಣ 26ರನ್ವಯ.

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.

(3) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕಾಯ್ದೆ 1994ರ ನಿಯಮ 28ರ ಉಪನಿಯಮ (1), (2) ಮತ್ತು (3)ರನ್ವಯ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

****

(ಮುಂದು)

(716) 9.12.2024 2.10 ಪಿಕೆ:ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**೦6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ರಾಜ್ಯದಲ್ಲಿ ವಕ್ಫ್ ವಿವಾದದಿಂದ ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 59ನೇ ನಿಯಮದ ಮೇರೆಗೆ ಮುಂಬರುವ ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತೇನೆ.

ವಕ್ಫ್ ಆಸ್ತಿ ವಿವಾದ ರಾಜ್ಯಾದ್ಯಂತ ಹರಡಿದ್ದು ರೈತರ ಜಮೀನು, ಮಠ-ಮಂದಿರಗಳ ಜಾಗ, ಸಾರ್ವಜನಿಕರ ಆಸ್ತಿ, ಸರ್ಕಾರಿ ಕಟ್ಟಡಗಳ ಪಹಣಿಗಳಲ್ಲಿ ಏಕಾಏಕಿ ವಕ್ಫ್ ಆಸ್ತಿ ಎಂದು ನಮೂದಾಗಿರುವುದು ಜನರಲ್ಲಿ ಆಕ್ರೋಶ ಸೃಷ್ಟಿಸಿದೆ. ಭೂಸುಧಾರಣೆ ಕಾಯ್ದೆ ಅಡಿ ಬಂದ ಜಮೀನುಗಳಲ್ಲಿ ತಲತಲಾಂತರಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ರೈತರು ಆತಂಕದಿಂದ ದಿನ ದೂಡುವಂತಾಗಿದೆ. ಸಂಬಂಧಪಟ್ಟವರಿಗೆ ಯಾವುದೇ ನೋಟಿಸ್ ನೀಡದೆ ಅವರ ಗಮನಕ್ಕೂ ತಾರದೆ ಆಸ್ತಿಗಳ ಪಹಣಿಗಳಲ್ಲಿ ವಕ್ಫ್ ಎಂದು ಹೆಸರು ನಮೂದಿಸಲಾಗುತ್ತಿದೆ. ಈಗಾಗಲೇ 21

ಸಾವಿರಕ್ಕೂ ಹೆಚ್ಚು ಆಸ್ತಿಗಳನ್ನು ವಕ್ಫ್ ತನ್ನ ಆಸ್ತಿ ಎಂದು ಘೋಷಿಸಿ ಹಕ್ಕು ಚಲಾಯಿಸುತ್ತಿರುವುದು ರಾಜ್ಯದಲ್ಲಿ ಅಶಾಂತಿಗೆ ಕಾರಣವಾಗಿದೆ. ಇಲಾಖಾ ಸಚಿವರು ವಕ್ಫ್ ಅದಾಲತ್‌ನಲ್ಲಿ ನೀಡಿದ ಕಟ್ಟುನಿಟ್ಟಿನ ಸೂಚನೆಯನ್ನು ಅಧಿಕಾರಿಗಳು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದೇ ಈ ಸಮಸ್ಯೆಗೆ ಕಾರಣವಾಗಿದೆ. ಬೌದ್ಧರು, ಕ್ರೈಸ್ತರಿಗಿಲ್ಲದ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಿರುವ ಪರಿಣಾಮವೇ ಈ ಎಲ್ಲಾ ಅವಾಂತರಗಳು ಸಂಭವಿಸುತ್ತಿದ್ದು, ಅಕ್ರಮವಾಗಿ ಆಸ್ತಿಗಳನ್ನು ಕಬಳಿಸಲು ಹೊರಟಿರುವ ವಕ್ಫ್ ಮಂಡಳಿಗೆ ನೀಡಿರುವ ಪರಮಾಧಿಕಾರದ ಅಧಿಸೂಚನೆಯನ್ನು ರದ್ದುಪಡಿಸುವ ಮೂಲಕ ರೈತರು/ಸಾರ್ವಜನಿಕರಲ್ಲಿ ಮೂಡಿರುವ ಆತಂಕವನ್ನು ದೂರ ಮಾಡಬೇಕು. ಈ ವಿಷಯವನ್ನು ದಿನಾಂಕ 9.12.2024ರಂದು ನಿಲುವಳಿ ಸೂಚನೆ ಮೂಲಕ ಚರ್ಚಿಸಲು ಅವಕಾಶ ನೀಡಬೇಕಾಗಿ ಕೋರುತ್ತೇನೆ.

**ಸಭಾಪತಿಯವರು:-** ಈ ನಿಲುವಳಿ ಸೂಚನೆಯನ್ನು ನಿಯಮ 68ರ ಅಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಮತ್ತು ಅದಕ್ಕೆ ಸಮಯವನ್ನು ನಿಗದಿ ಮಾಡಿ ತಿಳಿಸುತ್ತೇನೆ.

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

## 07. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ.:-** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ:

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನಾಲ್ಕನೆಯ ಅಧಿವೇಶನ**
ಕಾರ್ಯದರ್ಶಿಯವರ ವರದಿ
ಘನತೆವೆತ್ತ ರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **1.** | ಕರ್ನಾಟಕ ಧನವಿನಿಯೋಗ (ಸಂಖ್ಯೆ-4) ವಿಧೇಯಕ, 2024 (ವಿ.ಸಂ.33)<br>THE KARNATAKA APPROPRIATION (NO.4) BILL, 2024 | 06.08.2024 | **ರಾಜ್ಯಪಾಲರು** |
| **2.** | ಕರ್ನಾಟಕ ವೈದ್ಯಕೀಯ ನೋಂದಣಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2024 (ವಿ.ಸಂ.37) | 15.08.2024 | **ರಾಜ್ಯಪಾಲರು** |

| | | | |
|---|---|---|---|
| | THE KARNATAKA MEDICAL REGISTRATION AND CERTAIN OTHER LAW (AMENDMENT) BILL, 2024 | | |
| **3.** | ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.32)<br>THE KARNATAKA IRRIGATION (AMENDMENT) BILL, 2024 | 15.08.2024 | **ರಾಜ್ಯಪಾಲರು** |
| **4.** | ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 2024 (ವಿ.ಸಂ.39)<br>THE KARNATAKA SCHEDULED CASTES, SCHEDULED TRIBES AND OTHER BACKWARD CLASSES (RESERVATION OF APPOINTMENTS ETC.,) (AMENDMENT) BILL, 2024 | 15.08.2024 | **ರಾಜ್ಯಪಾಲರು** |
| **5.** | ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2024 (ವಿ.ಸಂ.40)<br>THE KARNATAKA GOVERNMENT PARKS (PRESERVATION (AMENDMENT) BILL, 2024 | 15.08.2024 | **ರಾಜ್ಯಪಾಲರು** |
| **6.** | ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.35)<br>THE KARNATAKA LAND REVENUE (SECOND AMENDMENT) | 15.08.2024 | **ರಾಜ್ಯಪಾಲರು** |

…2/-

-2-

| | | | |
|---|---|---|---|
| 7 | ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.36)<br>THE KARNATAKA ANCIENT AND HISTORICAL MONUMENTS AND ARCHEOLOGICAL SITES AND REMAINS (AMENDMENT) BILL, 2024 | 08.08.2024 | **ರಾಜ್ಯಪಾಲರು** |
| 8 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2023 (ಬಿಲ್ ಸಂಖ್ಯೆ-24)<br>THE BRUHAT BENGALURU MAHANAGARA PALIKE AND CERTAIN OTHER LAW (AMENDMENT) BILL, 2023 | 15.08.2024 | **ರಾಜ್ಯಪಾಲರು** |

| | | | |
|---|---|---|---|
| 9 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.29)<br>THE KARNATAKA GOODS AND SERVICES TAX (AMENDMENT) BILL, 2024 | 07.08.2024 | **ರಾಜ್ಯಪಾಲರು** |
| 10 | ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ವಿಧೇಯಕ, 2023 (ಬಿಲ್ ಸಂಖ್ಯೆ-21)<br>THE KARNATAKA PUBLIC EXAMINATION (MEASURES FOR PREVENTION OF CORRUPTION AND UNFAIR MEANS IN RECRUITMENT) BILL, 2023 (LA Bill No. 21) | 06.09.2024 | **ರಾಜ್ಯಪಾಲರು** |
| 11 | ಶ್ರೀ ರೇಣುಕಾಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 (ವಿ.ಸಂ.38)<br>SRI RENUKA YELLAMMA TEMPLE DEVELOPMENT AUTHORITY BILL, 2024 | **06.09.2024** | **ರಾಜ್ಯಪಾಲರು** |
| 12 | ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2024 (ವಿ.ಸಂ.31)<br>THE KARNATAKA MUNICIPALITIES AND CERTAIN OTHER LAW (AMENDMENT) BILL, 2024 | **18.02.2024** | **ರಾಜ್ಯಪಾಲರು** |
| 13 | ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, 2024 (ವಿ.ಸಂ.28)<br>THE KARNATAKA CINE AND CULTURAL ACTIVISTS (WELFARE) BILL, 2024 | **23.09.2024** | **ರಾಜ್ಯಪಾಲರು** |
| 14 | ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ,2023 (2023ರ ವಿಧಾನ ಸಭೆಯ ವಿಧೇಯಕ ಸಂಖ್ಯೆ-11)<br>THE REGISTRATION (KARNATAKA AMENDMENT) BILL, 2023 | **08.10.2024** | **ರಾಷ್ಟ್ರಪತಿಯವರು** |

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ಸಭಾಪತಿಯವರು:-** ಮಂಡಿಸಲಾಯಿತು.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟಿತು. ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(717) 09.12.2024 3.40 ಬಿಕೆಪಿ-ಬಿಎನ್‌ಎಸ್

(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.)

**ಶ್ರೀ ಎಸ್.ಎಲ್.ಬೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸದನದಲ್ಲಿ ನಮಗೆ ಗೊತ್ತಿಲ್ಲದ ಸದಸ್ಯರು ಬಂದು ಕುಳಿತಿದ್ದಾರೆ, ಅವರು ಯಾರೆಂದು ಗೊತ್ತಾಗಲಿಲ್ಲ. ಅವರ ಪರಿಚಯ ಮಾಡಿಕೊಡಿ. ತಾವು ಅವರ ಹೆಸರನ್ನು ಈ ಸದನದಲ್ಲಿ ಹೇಳಿದರೆ ನಮಗೆ ಒಳ್ಳೆಯದು. ಅದನ್ನು ಬಿಟ್ಟು ಈ ಸದನದಲ್ಲಿ ಸುಮ್ಮನೆ ಯಾರು ಯಾರೋ ಬಂದು ಕುಳಿತುಕೊಳ್ಳಬಹುದಾ?

**ಸಭಾಪತಿಯವರು:-** ಅವರು ಶ್ರೀಯುತ ಕಿಶೋರ್ ಕುಮಾರ್. ಅವರನ್ನು ವಿರೋಧ ಪಕ್ಷದ ನಾಯಕರು ಪರಿಚಯ ಮಾಡಿಕೊಡಬೇಕು.

**08.<u>ನೂತನ ಸದಸ್ಯರ ಪರಿಚಯ</u>**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನೂತನ ಸದಸ್ಯರನ್ನು ಈ ಸಭೆಗೆ ಪರಿಚಯ ಮಾಡಿಕೊಡುತ್ತಿದ್ದೇನೆ. ಇದನ್ನು ನಾವು ಬೆಳಗ್ಗೆಯೇ ಮಾಡಬೇಕಾಗಿತ್ತು. ಕ್ಷಮೆ ಇರಲಿ. ಶ್ರೀಯುತ ಕಿಶೋರ್ ಕುಮಾರ್‌ರವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿರುತ್ತಾರೆ. ಯುವ ನಾಯಕರು, ಮಂಗಳೂರು-ಉಡುಪಿ ಭಾಗದಲ್ಲಿ ಬಹುದಿನಗಳಿಂದ ಸಮಾಜ ಸೇವೆಯಲ್ಲಿ ತೊಡಗಿಕೊಂಡವರು. ಇವರ ಸೇವೆಯನ್ನು ಗುರುತಿಸಿ, ನಮ್ಮ ಪಕ್ಷ ಅವರಿಗೊಂದು ಅವಕಾಶವನ್ನು ಕೊಟ್ಟಿದೆ.

**ಸಭಾಪತಿಯವರು:-** ಇವರು ಶ್ರೀಯುತ ಕೋಟ ಶ್ರೀನಿವಾಸ ಪೂಜಾರಿಯವರ ಜಾಗಕ್ಕೆ ಬಂದಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇವರು ಶ್ರೀಯುತ ಕೋಟ ಶ್ರೀನಿವಾಸ ಪೂಜಾರಿಯವರಿಂದ ತೆರವಾದ ಜಾಗಕ್ಕೆ ಅವರಿಗೆ ಅವಕಾಶ ಸಿಕ್ಕಿದೆ.

**ಸಭಾಪತಿಯವರು:-** ನಿಮಗೂ ಅವರಿಂದ ತೆರವಾದ ಜಾಗ ಸಿಕ್ಕಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರ ತೆರವಾದ ಸ್ಥಾನದಿಂದ ನಾನು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಬಂದಿದ್ದೇನೆ. ಅವರು ಅಲ್ಲಿಂದ ಲೋಕಸಭೆ ಸದಸ್ಯರಾಗಿ ಚುನಾಯಿತರಾಗಿ

ಹೋಗಿದ್ದಾರೆ. ಬಹಳ ಸ್ಥಾನ ಪಲ್ಲಟಗಳು ಆಗಿವೆ. ಈ ರೀತಿಯಲ್ಲಿಯೇ ನೀವು ಯಾರಾದರೂ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು ಎಂದು ಹೇಳ ಬಯಸುತ್ತೇನೆ. ಬೇರೆ ಬೇರೆಯವರಿಗೆ ಅವಕಾಶಗಳು ಸಿಗುತ್ತವೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ನಿಮ್ಮ ಪಕ್ಷದಲ್ಲಿ ನಿಮ್ಮಂತಹವರಿಗೆ ಅವಕಾಶ ಸಿಕ್ಕಿರುವುದು ಬಹಳ ಅಪರೂಪದ್ದು.

**ಶ್ರೀ ಪಿ.ಹೆಚ್. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಇಂತಹ ಅವಕಾಶಗಳಾಗುವುದು ಬಿಜೆಪಿಯಲ್ಲಿ ಮಾತ್ರ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಶ್ರೀಯುತ ಪೂಜಾರ್‌ರವರೆ, ನೀವು ಈ ವಿಚಾರದಲ್ಲಿ ಯಾವ ರೀತಿಯಲ್ಲಿ ತೊಂದರೆಯನ್ನು ಅನುಭವಿಸಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ನಾವು ಮತ್ತು ನೀವು ಸ್ನೇಹಿತರಿದ್ದೇವೆ.

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸಭಾಪತಿಯವರೆ, ಸಚಿವರಾದ ಡಾ|| ಎಂ.ಸಿ. ಸುಧಾಕರರವರು ನನ್ನ ಸ್ನೇಹಿತರು. ಇಲ್ಲಿಗೆ ಬರಬೇಕಾ ಎಂದವರು ಕೇಳಿದರು.

**ಸಭಾಪತಿಯವರು:-** ಈಗ ನೀವು ಶ್ರೀಯುತ ಕಿಶೋರ್ ಕುಮಾರ್ ರವರ ವಿಚಾರವನ್ನು ಮುಗಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಶ್ರೀಯುತ ಕಿಶೋರ್ ಕುಮಾರ್‌ರವರನ್ನು ಪರಿಚಯ ಮಾಡಿಕೊಟ್ಟಾಯಿತು.

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ. ಶ್ರೀಯುತ ಕಿಶೋರ್ ಕುಮಾರ್ ರವರನ್ನು ಈ ಸದನಕ್ಕೆ ಸ್ವಾಗತ ಮಾಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಒಂದು ವಿಚಾರವನ್ನು ತಮಗೆ ಹೇಳಿದ್ದೆ. ಯಾರನ್ನೂ ಸಹ ತುಂಬಾ ಗೇಲಿ ಮಾಡಬಾರದು. ಇಲ್ಲಿಗೆ ನಾನು ಈ ಸದನಕ್ಕೆ ಬರಲಿಕ್ಕೆ 45 ವರ್ಷಗಳನ್ನು ತೆಗೆದುಕೊಂಡಿದ್ದೇನೆ.

**ಸಭಾಪತಿಯವರು:-** 45 ವರ್ಷಗಳು ಎಂದಾಗ ನನ್ನ ವಿಚಾರವನ್ನು ಹೇಳುತ್ತಿದ್ದಾರೆನಿಸಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಇಲ್ಲಿ ಎಷ್ಟು ಸರ್ವೀಸ್ ಮಾಡಿದ್ದೀರೋ ಅಷ್ಟು ನಾನು ಹೊರಗಡೆ ಸರ್ವೀಸ್ ಮಾಡಿದ್ದೇನೆ.

**ಶ್ರೀ ಸಿ.ಟಿ.ರವಿ:-** ಇಲ್ಲಾ ಸ್ವಾಮಿ, ಯೋಗದಲ್ಲಿ ಕೆಲವರು ಮಾತ್ರ ಹುಟ್ಟಿರುತ್ತಾರೆ. ಇಲ್ಲಿ ಬಂದವರು ಖಾಯಂ ಉಳಿದವರು ಎಂದರೆ ಸಭಾಪತಿಯವರು ಸಹ ಒಬ್ಬರಾಗಿದ್ದಾರೆ. ಇನ್ನು ಕೆಲವರು ಬಂದು ಹೋಗಿ, ಬಂದು ಹೋಗಿ ಮಾಡಿದ್ದಾರೆ. ಈ ರೀತಿಯಲ್ಲಿ ಎಲ್ಲರಿಗೂ ಆ ಯೋಗ ಇರುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಆದರೆ, ನನ್ನ ಪಕ್ಷ ನನ್ನನ್ನು ಇಲ್ಲಿಗೆ ತಂದು ಕೂರಿಸಿದೆ. ನೋಡಿ, ತುಂಬಾ ಸಮಯ ಬೇಕಾಗಿಲ್ಲ, ಹೀಗೆ ಮಾತನಾಡಬೇಡಿ, ಮುಂದೆ ಬರುವಂತಹ ದಿನಗಳು ಬರುತ್ತದೆ. ಈಗ ಇಲ್ಲಿ ತಂದು ಕೂರಿಸಿದ್ದಾರೆ. ಇಲ್ಲಿಗೆ ಬರಬೇಕಾ ಎಂದು ಸಚಿವರು ಹೇಳಿದರು. ಇದು **"ಹಾವು ಏಣಿ"** ಆಟ

**ಸಭಾಪತಿಯವರು:-** ನಸೀಬು ಹೇಗೆ ಇರುತ್ತದೆ ಎಂದು ಯಾರಿಗೆ ಗೊತ್ತು.

**ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಹಾವು ಏಣಿ ಆಟ. ಮೊನ್ನೆ ನಾವು ಅಲ್ಲಿ ಇದ್ದೆವು, ಆದಾದ ಮೇಲೆ ಜನರು ತೀರ್ಮಾನ ಮಾಡಿದರು. ನಿಮ್ಮನ್ನು ಅಲ್ಲಿಗೆ ತಂದಿದ್ದಾರೆ. ಆದರೆ, ಅಲ್ಲಿಗೆ ನಾವು ಬರಬೇಕೆಂದು ಜನರು ಈಗಾಗಲೇ ತೀರ್ಮಾನ ಮಾಡಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಜನರು ತೀರ್ಮಾನ ಮಾಡಿಲ್ಲ. ಕಾಯಂ ಆಗಿ ನೀವು ಅಲ್ಲಿಯೇ ಇರಬೇಕೆಂದು ತೀರ್ಮಾನ ಮಾಡಿದ್ದಾರೆ.

**(ಗೊಂದಲ)**

ಮೊನ್ನೆ ನಡೆದ ಚುನಾವಣೆಯಲ್ಲಿ 3 ಭಾಗಗಳಿಂದ ಜನ ಈ ರೀತಿಯ ತೀರ್ಮಾನ ಮಾಡಿದ್ದಾರೆ. ತಾವು ಅಲ್ಲೇ ಇರಿ 2028 ರ ಬಗ್ಗೆ ಯಾವುದೇ ಆಸೆ ಇಟ್ಟುಕೊಳ್ಳಬೇಡಿ ಎಂದು ಇಡೀ ರಾಜ್ಯದ ಜನರು ತೀರ್ಮಾನ ಮಾಡಿದ್ದಾರೆ. Clear message against your senior leaders.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಆದರೆ, ನಾವು ಆಡಳಿತಕ್ಕೆ ಬಂದೇ ಬರುತ್ತೇವೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ನೀವು ಅಲ್ಲೇ ಕಾಯಂ ಆಗಿ ಇರುತ್ತೀರಿ. ಅದು ಇಡೀ ರಾಜ್ಯದ ಮೂರು ಭಾಗದ ಜನರಿಂದ ತೀರ್ಮಾನವಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಕಾಲಾಯ ತಸ್ಮೈ ನಮಃ

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ಒಂದು ಪ್ರಕಟಣೆ ಇದೆ.

**೦೯.ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ ೯ ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಗ್ರಹಣ ಮಾಡಲು ಈ ಮುಂದಿನ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

1. ಶ್ರೀ ಶಶಿಲ್ ಜಿ. ನಮೋಶಿ
2. ಶ್ರೀಮತಿ ಭಾರತಿ ಶೆಟ್ಟಿ
3. ಶ್ರೀ ಕೆ.ಎ. ತಿಪ್ಪೇಸ್ವಾಮಿ
4. ಶ್ರೀ ಮಂಜುನಾಥ ಭಂಡಾರಿ

**ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಾದ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಕಾಂಗ್ರೆಸ್ ಪಕ್ಷದಿಂದ ಬಿಜೆಪಿ ಪಕ್ಷಕ್ಕೆ ಬಂದಿದ್ದಾರೆ. ಬಿಜೆಪಿಯವರು ಪರ್ಮನೆಂಟ್ ಆಗಿ ವಿರೋಧ ಪಕ್ಷದಲ್ಲಿರುತ್ತಾರೆಂದು ಮಾನ್ಯ ಸಭಾನಾಯಕರು ಹೇಳಿದರು.

ಮಾನ್ಯ ಸಭಾಪತಿಗಳಾದ ಬಸವರಾಜ್ ಎಸ್. ಹೊರಟ್ಟಿಯವರು ಉತ್ತರ ಕರ್ನಾಟಕ ಭಾಗದ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಪುಟ್ಟ ಹಳ್ಳಿಯಾದ ಯಡಹಳ್ಳಿಯವರು. ಅವರ ತಂದೆ ಶ್ರೀಯುತ ಶಿವಲಿಂಗಪ್ಪ ಹಾಗೂ ತಾಯಿ ಶ್ರೀಮತಿ ಗುರವ್ವ. ಅವರ ಒಬ್ಬನೇ ಮಗನಾದ ಶ್ರೀಯುತರು ಕುಟುಂಬದ ಪ್ರೀತಿಗೆ ಪಾತ್ರರಾದವರು. ಶ್ರೀಯುತರು ಹದಿನೈದನೇ ವಯಸ್ಸಿನಲ್ಲಿರುವಾಗಲೇ ಅವರ ತಂದೆಯವರು ಅಕಾಲಿಕ ಮರಣ ಹೊಂದಿದರು. ನಂತರ, ಅವರ ತಾಯಿಯ ಜವಾಬ್ದಾರಿಯಲ್ಲಿ ಶ್ರೀಯುತರು ತಮ್ಮ ಶಾಲಾ ಶಿಕ್ಷಣ ಹಾಗೂ ಕಾಲೇಜು ವಿದ್ಯಾಭ್ಯಾಸವನ್ನು ಯಡಹಳ್ಳಿ, ಮುಧೋಳ ಹಾಗೂ ಬಾಗಲಕೋಟೆಯಲ್ಲಿ ಮಾಡಿದರು. 1980 ರಲ್ಲಿ ವಾಯುವ್ಯ ಶಿಕ್ಷಕರ ಮತಕ್ಷೇತ್ರದಿಂದ ಪ್ರಥಮ ಬಾರಿಗೆ ಚುನಾಯಿತರಾದರು. ಶ್ರೀಯುತರು ಮಾಡಿದ ಉತ್ತಮ ಕೆಲಸಗಳಿಂದ ಅವರು ಎಂಟು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಈ ಸದನದ ಘನತೆ, ಗೌರವವನ್ನು ಎತ್ತಿಹಿಡಿದಿದ್ದೀರಿ. ಈ ಸದನದ ಅತ್ಯಂತ ಮಾನವೀಯ ಮೌಲ್ಯಗಳುಳ್ಳ ಸಭಾಪತಿಗಳಾಗಿ ಕೆಲಸ ಮಾಡುತ್ತಿದ್ದೀರಿ.

**ಸಭಾಪತಿಯವರು:-** ತಿಪ್ಪಣ್ಣಪ್ಪ ಕಮಕನೂರರವರೆ, ನೀವು ತಮ್ಮ ವಿಷಯವನ್ನು ಮೊದಲು ಗಮನ ಸೆಳೆಯಿರಿ. ಮತ್ತೊಮ್ಮೆ ಈ ಬಗ್ಗೆ ಮಾತನಾಡಲು ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಹಾಗಾಗಿ, ನಾನು ವಿರೋಧ ಪಕ್ಷದ ಸದಸ್ಯರಲ್ಲಿ ಹೇಳಬಯಸುವುದಿಷ್ಟೆ. ಅಧಿವೇಶನವನ್ನು ನಡೆಸಲು ಸುಮಾರು 20 ಕೋಟಿಗಳಷ್ಟು ಹಣ ಖರ್ಚಾಗುತ್ತಿದೆ. ಈ ಸದನಕ್ಕೆ ಘನತೆ, ಗೌರವಗಳನ್ನು ತರುವಂತಹ ಕೆಲಸಗಳನ್ನು ಮಾನ್ಯ ಸದಸ್ಯರು ಮಾಡಬೇಕು. ಯಾವುದೇ ತೊಂದರೆಯಾಗದಂತೆ ಸದನವನ್ನು

ಮುಂದಕ್ಕೆ ಹಾಕದಂತೆ ಸದನವನ್ನು ನಡೆಸಲು ಅನುವು ಮಾಡಿಕೊಡಬೇಕೆಂದು ತಾವು ಮನವಿ ಮಾಡಿದ್ದೀರಿ. ಆದ್ದರಿಂದ ನಾನು ಈ ಬಗ್ಗೆ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಆಯಿತು. Thank you. ಈಗ ಗಮನ ಸೆಳೆಯಿರಿ.

**10.ಗಮನ ಸೆಳೆಯುವ ಸೂಚನೆ**

**ವಿಷಯ:- ಕಲಬುರಗಿ ಜಿಲ್ಲೆಯ 30 ಲಕ್ಷ ರೈತರು ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ GI- ಟ್ಯಾಗ್ ಕ್ಲಾಸ್-31 ಪ್ರಮಾಣಪತ್ರ 2017 ರಿಂದ 2019 ರಲ್ಲಿ ದೊರೆತಿದ್ದು ಅದರ ಗುಣಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಬೆಂಬಲ ಬೆಲೆ ಇನ್ನೂ ಘೋಷಿಸದೆ ಇರುವುದರಿಂದ ಕಲಬುರಗಿ ಜಿಲ್ಲೆಯ ರೈತರಿಗೆ ನಷ್ಟವುಂಟಾಗುತ್ತಿರುವುದರ ಬಗ್ಗೆ.**

- - - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಕಲಬುರ್ಗಿ ಜಿಲ್ಲೆಯಲ್ಲಿ 30 ಲಕ್ಷ ರೈತರು ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ ಜಿ1 -ಟ್ಯಾಗ್ ಕ್ಲಾಸ್-31 ಪ್ರಮಾಣಪತ್ರ 2017 ರಿಂದ 2019 ರಲ್ಲಿ ದೊರೆತಿದ್ದರೂ, ಅದರ ಗುಣಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಬೆಂಬಲ ಬೆಲೆ ಇನ್ನೂ ಘೋಷಿಸದಿರುವುದರಿಂದ ರೈತರಿಗೆ ನಷ್ಟವುಂಟಾಗುತ್ತಿರುವುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

(ಮುಂದು.)

(718) 09.12.2024 03.50 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಚಲುವರಾಯಸ್ವಾಮಿ (ಮುಂದು):**

ಇದನ್ನು ತೀರ್ಮಾನ ಮಾಡುವುದು, ಘೋಷಣೆ ಮಾಡುವುದು ಕೇಂದ್ರ ಸರ್ಕಾರ. ನಾವು ರೈತರ ಪರಿಸ್ಥಿತಿಯನ್ನು ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದವರ ಜೊತೆ ಚರ್ಚಿಸಿ ಉತ್ತಮ ಬೆಲೆಯನ್ನು ನೀಡಬೇಕೆನ್ನುವ ಅಭಿಲಾಷೆಯಿಂದ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಅಂತಿಮವಾಗಿ ತೀರ್ಮಾನ ಮಾಡುವ MSP (Minimum Support Price) ಯನ್ನು ನಾವು ಕೊಡಬೇಕಾಗುತ್ತದೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. 2017ರಲ್ಲಿ ಕೃಷಿ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ತೊಗರಿ ಅಭಿವೃದ್ಧಿ ಮಂಡಳಿಯು ಜಂಟಿಯಾಗಿ ಸಂಶೋಧನಾ ಕಾರ್ಯವನ್ನು ಕೈಗೊಂಡು, ಸದರಿ ಸಂಶೋಧನೆಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಬೆಳೆಯುವ ತೊಗರಿಯು ರಾಷ್ಟ್ರದ ಯಾವುದೇ ಪ್ರದೇಶದಲ್ಲಿ ಬೆಳೆಯುವ ತೊಗರಿಯಲ್ಲಿಯೂ ಇರದ ಗುಣಮಟ್ಟದ ಪೌಷ್ಠಿಕಾಂಶಗಳು ಹಾಗೂ ಔಷಧೀಯ ಗುಣಗಳನ್ನು ಹೊಂದಿರುವುದು ಕಂಡುಬಂದಿದೆ. ರಾಯಚೂರು ಕೃಷಿ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಬೇಳೆಕಾಳುಗಳ ಅಭಿವೃದ್ಧಿ ಮಂಡಳಿ ಜಂಟಿಯಾಗಿ ಕೇಂದ್ರ ಸರ್ಕಾರದ ಗುಣಮಟ್ಟ ನಿಗದಿ ಸಂಸ್ಥೆಗೆ ವರದಿಯನ್ನು ಸಲ್ಲಿಸಿದೆ.

ಅಕ್ಕಿ, ಜೋಳ, ಕಡಲೆ ಇತ್ಯಾದಿಗಳಿಗೆ ಗುಣಮಟ್ಟ ಆಧಾರಿಸಿ ಬೆಂಬಲಬೆಲೆಯನ್ನು ನಿಗದಿ ಪಡಿಸಲಾಗುತ್ತದೆ. ಮುಂಬೈ, ಆಂಧ್ರ, ತೆಲಂಗಾಣ ಎಲ್ಲಿಗೆ ಹೋದರೂ "ಗುಲ್ಬರ್ಗಾ ದಾಲ್" ಎಂದು ಬರೆದಿರುವುದನ್ನು ನೋಡಬಹುದು. "ಗುಲ್ಬರ್ಗ ಬೇಳೆಯನ್ನು ಹಾಕಿ ರೋಗಿಗೆ ಊಟ ಕೊಡಿ" ಎಂದು ಆಸ್ಪತ್ರೆಗಳಲ್ಲಿ ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ಇದಕ್ಕೆ ಒಂದು ಬೆಂಬಲ ಬೆಲೆಯನ್ನು ನೀಡಬೇಕೆಂದು ಕೋರುತ್ತೇನೆ. ಏಕೆಂದರೆ ನಮ್ಮಲ್ಲಿ ಈಗ ಬಹಳ strike ಮಾಡುತ್ತಿದ್ದಾರೆ. ರಾಷ್ಟ್ರದಲ್ಲಿ ಗುಣಮಟ್ಟದ ಆಧಾರದ ಮೇಲೆ ಬೇರೆ ಬೇರೆ ಬೆಳೆಗಳಿಗೆ ಬೆಲೆ ಒಂದೇ ಇದ್ದರೂ ಬೆಂಬಲ ಬೆಲೆ ಹೆಚ್ಚು ಮಾಡಲಾಗಿದೆ. ಅಕ್ಕಿ, ಜೋಳ ಇತ್ಯಾದಿಗಳ ಗುಣಮಟ್ಟವನ್ನು ಆಧರಿಸಿ ಬೆಂಬಲ ಬೆಲೆಯನ್ನು ಹೆಚ್ಚು ಮಾಡಲಾಗಿದೆ. ಕೇಂದ್ರ ಸರ್ಕಾರವು ಕೊಡಮಾಡಿದ G.I. tag Class-31 ತೊಗರಿಗೆ ಬೆಂಬಲ ಬೆಲೆಗಿಂತ ಕನಿಷ್ಠ 20-25% ಬೆಂಬಲ ಬೆಲೆ ಹೆಚ್ಚಿಸಿ ಪ್ರತ್ಯೇಕವಾಗಿ ನಿರ್ಧಾರ ಮಾಡುವಂತೆ ಕರ್ನಾಟಕ ರಾಜ್ಯ ಕೃಷಿ ಬೆಲೆ ನಿಗದಿ ಆಯೋಗದಿಂದ ಕೇಂದ್ರ ಸರ್ಕಾರದ ಕೃಷಿ ಉತ್ಪನ್ನ ಬೆಲೆ ನಿಗದಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಾಳಜಿ ನಮಗೂ ಅರ್ಥವಾಗುತ್ತದೆ. ಮತ್ತೊಂದು ಪತ್ರ ಬರೆಯುವ ಅಥವಾ ಮಾತನಾಡುವ ಮೂಲಕ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ತರಲಾಗುವುದು.

**ಸಭಾಪತಿಯವರು:-** ಈಗ ನಿಯಮ 330 ರ ಅಡಿಯಲ್ಲಿ ಚರ್ಚಿಸಲಾಗುವ ವಿಷಯಗಳು. ಮಾನ್ಯ ತಳವಾರ ಸಾಬಣ್ಣ ಅವರೇ, ನಿಮ್ಮ ವಿಷಯಕ್ಕೆ ಉತ್ತರ ಬಂದಿರುವುದಿಲ್ಲ.

ಮಾನ್ಯ ಸಭಾನಾಯಕರೆ, ಉತ್ತರ ಬಂದಿಲ್ಲ ಎಂದರೆ ಸದನವನ್ನು ಹೇಗೆ ನಡೆಸುವುದು? ಇದು ಬಹಳ ಕೆಟ್ಟ ಸಂಪ್ರದಾಯವಾಗುತ್ತದೆ. ಪ್ರಶ್ನೋತ್ತರದಲ್ಲಿ 25-30 ದಿವಸ ಸಮಯವನ್ನು ಕೇಳುತ್ತಾರೆ. ಅದಕ್ಕೆ ನಾನು ನಿಮಗೆ strict ಆಗಿ ಹೇಳುತ್ತಿದ್ದೇನೆ. ಸದನ ಮುಗಿಯುವುದರೊಳಗಾಗಿ ಉತ್ತರ ಕೊಡಲೇ ಬೇಕು.

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ಸಿಗುವುದೇ ಕಡಿಮೆ. ಉತ್ತರವನ್ನು ಯಾವಾಗ ಕೊಡುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಉತ್ತರವನ್ನು ಒದಗಿಸಿಕೊಡುತ್ತೇವೆ.

**ಸಭಾಪತಿಯವರು:-** ಬೆಳಗ್ಗೆ ಬಂದ ಕೂಡಲೇ ಅಜೆಂಡಾ ನೋಡಿ ಸಂಬಂಧಪಟ್ಟವರನ್ನು ಕರೆಸಿ "ಉತ್ತರ ಕೊಡಲಾಗಿದೆಯೇ" ಎಂದು ಕೇಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಈಗ ಗಮನ ಸೆಳೆಯುವ ಸೂಚನೆಯಡಿಯಲ್ಲಿ ಕಳುಹಿಸಿಕೊಟ್ಟಿರುವ ವಿಚಾರ ಬಹಳ ಗಂಭೀರವಾಗಿದೆ. ಕರಾವಳಿ ಪ್ರದೇಶದಲ್ಲಿ ಮೀನುಗಾರರಿಗೆ ಸುಮಾರು ರೂ.28 ಕೋಟಿಗಳಷ್ಟು ಸಾಲ ಕೊಡಲಾಗಿದೆ ಎಂದು ವಂಚನೆ ಮಾಡಿರುವ ಪ್ರಕರಣದಲ್ಲಿ ಒಬ್ಬ ಅಧಿಕಾರಿ ಕೂಡ ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಈಗಾಗಲೇ ವಿಚಾರಣೆಗಳು ನಡೆದಿವೆ. ಅದೆಲ್ಲಾ ಬಹಳ ಗಂಭೀರವಾದ ವಿಷಯಗಳು. ಬಡವರ ಬಳಿ ಸಹಿ ತೆಗೆದುಕೊಂಡು ಸಾಲ ಕೊಟ್ಟಿರುವುದಾಗಿ ದಿನನಿತ್ಯ ಅವರಿಗೆ ಕಿರುಕುಳ ಕೊಡಲಾಗುತ್ತಿದೆ. ಅದರ ಬಗ್ಗೆ ಗಮನ ಸೆಳೆಯಬೇಕು ಎಂದು ನಾನು ಕಳೆದ ಬಾರಿಯೂ ಪ್ರಯತ್ನ ಮಾಡಿದ್ದೆನು. ಈ ಬಾರಿಯೂ ತಂದಿದ್ದು, ದಯವಿಟ್ಟು ತಾವು ಇದಕ್ಕೆ ಒಂದು ಅವಕಾಶವನ್ನು ಆದಷ್ಟು ಬೇಗನೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಈ ಮೂರು ವಿಷಯಗಳಿಗೂ ಗುರುವಾರ ಉತ್ತರವನ್ನು ಒದಗಿಸಬೇಕು. ಇಂದಿನ ಅಜೆಂಡಾದಲ್ಲಿರುವ ವಿಷಯಗಳಿಗೆಲ್ಲಾ ಗುರುವಾರ ಉತ್ತರ ಕೊಡಬೇಕು. ಈಗ Adjournment Motion ಅಡಿಯಲ್ಲಿ ಕೊಟ್ಟಂತಹ ವಿಷಯವನ್ನು ನಿಯಮ 68 ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ನೀಡಿದ್ದೇನೆ.

**11.ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಕುರಿತು ಚರ್ಚೆ**

**ವಿಷಯ: ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದದಿಂದ ರೈತರು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು**

***

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):** ಮಾನ್ಯ ಸಭಾಪತಿಯವರೆ, ನಾನು ಮಂಡಿಸಿರುವಂತಹ ನಿಲುವಳ ಸೂಚನೆಯನ್ನು ಪರಿವರ್ತಿಸಿ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದಲ್ಲಿ ವಕ್ಫ್ ಆಸ್ತಿಗಳ ವಿವಾದ ರಾಜ್ಯಾದ್ಯಂತ ಅನೇಕ ಜನರ ಹುಬ್ಬುಗಳನ್ನೇರಿಸುವಂತೆ ಮಾಡಿದೆ. ರಾಜ್ಯದ ರೈತರ ಜಮೀನಿನ ಪಹಣಿಗಳಲ್ಲಿ ರಾತ್ರೋರಾತ್ರಿ ವಕ್ಫ್ ಆಸ್ತಿ ಎಂದು ಹೇಳಿ ನಮೂದಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಸುಮಾರು 10-11ನೇ ಶತಮಾನದಲ್ಲಿದ್ದ ಮಠ-ಮಾನ್ಯಗಳೂ ಕೂಡ ಇಂದು ವಕ್ಫ್ ಆಸ್ತಿ ಎಂದು ನಮೂದಾಗುತ್ತಿದೆ. ಇದು ಹೇಗೆ ಉದ್ಭವವಾಗುತ್ತಿದೆ ಎನ್ನುವುದೇ ಒಂದು ಆಶ್ಚರ್ಯಕರವಾದ ಸಂಗತಿ.

ಮಾನ್ಯ ಸಭಾಪತಿಯವರೆ, ಅವಿಭಾಜ್ಯ ಭಾರತದಲ್ಲಿ 1913ರಲ್ಲಿ ಶಿಯಾ-ಸುನ್ನಿ ಪಂಗಡಗಳ ನಡುವೆ ಆಸ್ತಿ ಜಗಳದಿಂದ ಸಹಜವಾಗಿ ಅಂದಿನ ಬ್ರಿಟಿಷ್ ಸರ್ಕಾರದಲ್ಲಿ ವಕ್ಫ್ ಅನ್ನು ನೇಮಕ ಮಾಡಲಾಯಿತು ಎಂಬುದನ್ನು ಇತಿಹಾಸದ ಪುಟಗಳಲ್ಲಿ ನೋಡಬಹುದು. ಅವರ ಜಮೀನುಗಳನ್ನು ಕಾಪಾಡಿಕೊಳ್ಳಲಿಕ್ಕೆ ಅದನ್ನು ಮಾಡಲಾಯಿತು. 1954ರಲ್ಲಿ ಭಾರತ ದೇಶದ ಪ್ರಥಮ ಪ್ರಧಾನಿಗಳಾಗಿದ್ದ ಶ್ರೀ ಜವಹರಲಾಲ್ ನೆಹರು ಅವರು ಇದಕ್ಕೆ ಮರುಜೀವ ಕೊಟ್ಟರು. ಇದು ಕೂಡ ಇತಿಹಾಸ. ಆದರೆ ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕು. ಇದು ಒಂದು ಸಮುದಾಯದ ವಿರುದ್ಧವಾಗಿ ಮಾತನಾಡತಕ್ಕಂತಹ ಮಾತುಗಳಲ್ಲ. ಇದು ಒಂದು ಸಂಸ್ಥೆಯ ಬಗ್ಗೆ ಮಾತನಾಡತಕ್ಕಂತಹ ಮಾತಷ್ಟೆ.

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ 1947ರಲ್ಲಿ ನಮಗೆ ಸ್ವಾತಂತ್ರ್ಯ ಲಭಿಸಿತು. ಅವಿಭಾಜ್ಯ ಭಾರತ ದೇಶ ಎರಡಾಯಿತು. ಒಂದು ಹಿಂದೂಸ್ತಾನ ಮತ್ತೊಂದು ಪಾಕಿಸ್ತಾನ.

(ಮುಂದು)

(719) 09-12-2024 (4.00) ಕೆಜಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ಇರಲಿ, (ಗೊಂದಲ) ಮೂರು ಆಗಿದೆ. ಈ ಮೂರರಲ್ಲಿ ವಕ್ಫ್ ಕೇವಲ ಭಾರತಕ್ಕೆ ಸೀಮಿತವಾಗಿದೆ. ಅಲ್ಲಿ ಏಕೆ ಇಲ್ಲ? ಅಂದರೆ, ನಮಗೆ ಏಕೆ ಬೇಕಿತ್ತು? ಅದು ಒಂದು ಸಮಯ ಬೇಕು. ಏಕೆಂದರೆ, ಅವರು minority ಯ ಆಸ್ತಿಗಳನ್ನು ಕಾಪಾಡಬೇಕು. ಆದರೆ, ಇಲ್ಲಿ minority Christians ಇಲ್ಲವೇ? ಬೌದ್ಧರು ಇಲ್ಲವೇ? ಬಹಳ ಜನರು ಇದ್ದಾರೆ. ಆದರೂ ಸಹ, ಇಲ್ಲಿ ವಕ್ಫ್ ಅನ್ನು ಇಟ್ಟು, ಅಲ್ಲಿ ಇಲ್ಲ. ಇದು ಒಂದು ರೀತಿಯ ತಾರತಮ್ಯ. ಜೊತೆಗೆ ನನ್ನ ಗಮನಕ್ಕೆ ಬಂದಿರುವ ರೀತಿಯಲ್ಲಿ 1969-1970 ರಲ್ಲಿ ಇದರ ಸರ್ವೆ ಮಾಡಬೇಕೆಂದು ದಿವಂಗತ ಶ್ರೀಮತಿ ಇಂದಿರಾಗಾಂಧಿಜೀಯವರು ಒಂದು ಆದೇಶವನ್ನು ಮಾಡಿದ್ದಾರೆ. ಅದರ ಹೆಸರಿನಲ್ಲಿ ಆಗಿನ ಕಾಲದಲ್ಲಿ ಸರ್ವೆ

ಮಾಡುವಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಇರಬಹುದು ಅಥವಾ ಬೇರೆ ಬೇರೆ ಕಡೆ ಇರಬಹುದು, ನಾವು ರಾಜ್ಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ನಮಗೆ ಗೊತ್ತಿರುವಂತಹದ್ದು, ಆ ಕಾಲದಲ್ಲಿ ಯಾವ ಅಧಿಕಾರಿಗಳು ಈ ಸರ್ವೆ ಕಾರ್ಯಕ್ರಮಕ್ಕೆ ಹೋಗಿದ್ದರು ಅವರು ಕೇವಲ ದರ್ಗಾಗಳು ಅಥವಾ ಮಸೀದಿಗಳ ಬಳಿ ಕುಳಿತುಕೊಂಡು ನಿಮ್ಮದು ಯಾವ ಯಾವ ಆಸ್ತಿಗಳು ಇವೆ, ಅವುಗಳ ಸರ್ವೆ ನಂಬರ್‌ಗಳು ಏನು ಎಂದು ಕೇಳಿ ಬರೆದರು ಎನ್ನುವಂತಹ ಮಾತು ಇದೆ. ಆ ಅಧಿಕಾರಿಗಳು ಯಾವುದನ್ನು ಪಟ್ಟಿಮಾಡಿಕೊಂಡು ಬಂದರು ಎನ್ನುವುದಕ್ಕೆ ಆಧಾರಗಳು ಇಲ್ಲ. ಇದಕ್ಕೆ ಯಾವುದೇ ಪೇಪರ್‌ಗಳು ಇಲ್ಲ. ಯಾವುದೇ ಆಧಾರಗಳು ಇಲ್ಲ. ಆದರೆ, ಆ ಪಟ್ಟಿಯನ್ನು ಇಟ್ಟುಕೊಂಡು 1974 ರಲ್ಲಿ ರಾಜ್ಯ ಸರ್ಕಾರ ಒಂದು gazette ಅನ್ನು ಹೊರಡಿಸಿತು.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆ gazette ನಲ್ಲಿ ಯಾವ ಸರ್ವೆ ನಂಬರ್‌ಗಳು ನಮೂದಾಗಿವೆ, ಅದು ಅಲ್ಲಿ ಮಠ ಮಾನ್ಯಗಳು ಇವೆಯೇ, ರೈತರ ಹೊಲ, ಗದ್ದೆ ಅಥವಾ ಅದು ಯಾರದ್ದಾದರೂ ಸ್ವಂತ ಭೂಮಿಯೇ ಎನ್ನುವ ಯಾವುದೇ ಪ್ರಶ್ನೆ ಇಲ್ಲ. ಮನೆ ಕಟ್ಟಿದವರದ್ದೂ ಸಹ, ಇವತ್ತು ಆ ಮನೆಗಳು ವಕ್ಫ್ ಆಸ್ತಿ ಎಂದು ಬಂದಿದೆ. ಇವತ್ತು ಪಹಣಿಗಳ ಕಾಲಂ 11 ರಲ್ಲಿ ಬರೆಯುವಾಗ, ಕಳೆದ ವರ್ಷ ಯಾವ ರೈತರು ಅವರ ಜಮೀನಿನಲ್ಲಿ ದುಡಿದು ಕೆಲಸ ಮಾಡುತ್ತಿದ್ದರೂ, ಇವತ್ತು ಹೋಗಿ ಆ ಜಮೀನಿನ ಪಹಣಿ ತೆಗೆಸಿ ನೋಡಿದರೆ ಅದು ಪಕ್ಫ್ ಎಂದು ಇದೆ. ಈ ಪರಿಸ್ಥಿತಿ ಉದ್ಭವವಾದರೆ ಇದನ್ನು ಯಾವ ರೀತಿ ನಿಭಾಯಿಸಬೇಕು? ಇದು ಪ್ರಶ್ನೆ. 1995 ರಲ್ಲಿ ಕೇಂದ್ರ ಸರ್ಕಾರದಲ್ಲಿ ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನ ಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಅವರು ಒಂದು ಆದೇಶವನ್ನು ಮಾಡಿ ಇದಕ್ಕೆ ಅಧಿಕಾರವನ್ನು ಕೊಡುತ್ತಾರೆ. ಬೇರೆಯದಕ್ಕೆ ಅಧಿಕಾರ ಅಲ್ಲ. ಇದಕ್ಕೆ ಅಧಿಕಾರ ಕೊಡುತ್ತಾರೆ. 2013 ರಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಡಾ॥ ಮನಮೋಹನ್‌ಸಿಂಗ್‌ರವರು ಇದಕ್ಕೆ ಪರಮಾಧಿಕಾರವನ್ನು ಕೊಡುತ್ತಾರೆ. ಈಗ ಏನಾಗಿದರೆ ಎಂದರೆ, ಅಧಿಕಾರ ಮತ್ತು ಪರಮಾಧಿಕಾರ ಈ ಎರಡೂ ಸೇರಿ ಸರ್ವಾಧಿಕಾರವಾಗಿದೆ. ಈ ಸರ್ವಾಧಿಕಾರ ಎಂದರೆ ಏನು? ಒಂದು ಬಾರಿ ನಿಮ್ಮ ಆಸ್ತಿ ವಕ್ಫ್ ಎಂದಾದರೆ, ಅದರ ಬಗ್ಗೆ ನೀವು ಯಾವುದೇ ನ್ಯಾಯಾಲಯಗಳಿಗೆ ಹೋಗುವಂತಿಲ್ಲ. ನಾವು ಹೋಗಬೇಕೆಂದರೆ, Waqf Tribunal ಮುಂದೆ ಹೋಗಿ ಕೇಳಬೇಕಾಗುತ್ತದೆ. ನಮ್ಮ ಆಸ್ತಿಗಳನ್ನು ಬರೆದುಕೊಂಡಿರುವವರು ಯಾರು? ವಕ್ಫ್‌ನವರು. ತೋಳ ಕುರಿಯನ್ನು ತಿಂದು ಆಯಿತು. ಈಗ ಬೇರೆ ಕುರಿಗಳಿಗೆ ನ್ಯಾಯ ಬೇಕಾಗಿದೆ. ಆ ಕುರಿಗಳು ಏನು ಮಾಡಬೇಕೆಂದರೆ, ಅವರು ಬೇರೆ ಎಲ್ಲಿಗೂ ಹೋಗಿ ನ್ಯಾಯ ಕೇಳುವಂತಿಲ್ಲ. ಅವರು ತೋಳದ ಮುಂದೆ ಹೋಗಿಯೇ ನ್ಯಾಯ ಕೇಳಬೇಕಾಗಿದೆ. ಆಗ ತೋಳ ಅದಕ್ಕೆ ಒಪ್ಪುತ್ತದೆಯೇ? ಅದು ಕೂಡ ತಿನ್ನುತ್ತದೆ. ಈ ರೀತಿ ಪರಿಸ್ಥಿತಿ ಇದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಹಾಗಾಗಿ, ತಾವು ಮಧ್ಯೆ interfere ಆಗಬೇಡಿ. ಈಗ ತಾವು ಕುಳಿತುಕೊಳ್ಳಿ. ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ಕಿರುಚಬಾರದು. ನನಗೆ ಗೊತ್ತಿರುವುದನ್ನು ನಾನು ಹೇಳುತ್ತೇನೆ. ನಂತರ ಅವರು ಅವರ ಅವಕಾಶವನ್ನು ತೆಗೆದುಕೊಂಡು ಮಾತನಾಡಲಿ. ನನಗೆ ಏನು ತೊಂದರೆ ಇಲ್ಲ. ಇದು ಒಂದು ದಿವಸಕ್ಕೆ ತೀರ್ಮಾನವಾಗುವುದಿಲ್ಲವೆಂದು ನನಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐ.ಟಿ ಮತ್ತು ಬಿ.ಟಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರಿಗೆ ಅಡ್ಡಿ ಮಾಡಬೇಕೆಂದಲ್ಲ. ಆದರೆ, ಅವರು ಮಾತನಾಡುವಾಗ ಕಾಲಂ 11 ರಲ್ಲಿ ಬಂದ ತಕ್ಷಣ ownership ಆಗುತ್ತದೆ ಎಂದು ಆಗುತ್ತಿದೆ. That is wrong ಕಾಲಂ 11 ರಲ್ಲಿ ಬಂದ ತಕ್ಷಣ, it is not an ownership. Waqf Tribunal ಮುಂದೆ ಹೋದರೆ ಮುಗಿದು ಹೋಯಿತು.,

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರೇ, ಒಂದು ನಿಮಿಷ. ತಾವು ಮಂತ್ರಿಯಾಗಿದ್ದೀರಿ. ಅವರು ನಿಯಮ 68 ರಡಿ ಕೇಳಿಕೊಂಡಿದ್ದಾರೆ. ಅವರಿಗೆ ಅವಕಾಶ ನೀಡಲಾಗಿದೆ. ಅವರ ಅಭಿಪ್ರಾಯವನ್ನು ಅವರು ಹೇಳುತ್ತಾರೆ. ಅದಕ್ಕೆ ತಾವು counter ಮಾಡಬೇಕಾದರೆ, ತಮಗೆ ಅವಕಾಶ ಇದೆ. ಆಗ ತಾವು ಮಾಡಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನನ್ನ ತಕಾರಾರು ಇಲ್ಲ. ಅವರು ಮಾತನಾಡಲಿ. ಏಕೆಂದರೆ, the narrative is set in a wrong way ಎಂದಷ್ಟೇ ನಾನು ಹೇಳುತ್ತಿದ್ದೇನೆ. Waqf Tribunal ನಲ್ಲಿ ಹೋದ ತಕ್ಷಣ ಅದು ಅಂತಿಮ ಅಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, of course, ಈಗ ಅವರಿಗೆ ನಿಮ್ಮ knowledge ಇದೆ, ಅವರ knowledge ನಿಮಗೆ ಇದೆ ಎಂದಲ್ಲ. ಅವರ ಅಭಿಪ್ರಾಯ ಏನಿದೆ, ಅದನ್ನು ಅವರು ಹೇಳಲಿ ಬಿಡಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, Waqf Tribunal ಮುಂದೆ ಬಂದರೆ, ಅದೇ final ಎಂದರೆ, isn't that misinformation sir. Can a Leader of Opposition give misinformation on the Floor of the House? ಈಗ Waqf Tribunal ಮುಂದೆ ಹೋದ ತಕ್ಷಣವೇ ಅದು final ಅಂದು ಬಿಟ್ಟರೆ, ಅದು final ಆಗುತ್ತದೆಯೇ? ವಕ್ಫ್ ಕೇಳದ ತಕ್ಷಣ ಅದು ಫೈನಲಾ? ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಇವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಇವೆ. ಡಿ.ಸಿ ಯವರ ನ್ಯಾಯಾಲಯಕ್ಕೆ ಎಷ್ಟೋ ಪ್ರಕರಣಗಳು ಹೋಗಿವೆ. This is completely….. ಇದು ಹೇಗೆ ಎಂದರೆ, ಅವರು ಒಂದೇ ದಿಕ್ಕಿನಲ್ಲಿ ಅಜೆಂಡಾ ಸೆಟ್ ಮಾಡಿದಂತೆ ಆಗುತ್ತಿದೆ. ಪಹಣಿಯ ಕಾಲಂ 11 ರಲ್ಲಿ ಬಂದ ತಕ್ಷಣ ownership ಎಂದರೆ, is that a fact sir? Column ೯ ನಲ್ಲಿ ಬಂದರೆ, it's a fact. My only request to the Hon'ble Leader of Opposition is, facts ಇಡಲಿ, ಅಂಕಿ-ಅಂಶಗಳನ್ನು ಇಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಹೇಳಿದ್ದನ್ನು convince ಆಗಿ ಅವರು ಬಿಟ್ಟರೆ, ಓಕೆ. ನಮ್ಮದು ಏನಿಲ್ಲ. ಆದರೆ. ಅವರು ಅಭಿಪ್ರಾಯವನ್ನು ಅವರ ಮಂಡಿಸುವುದಕ್ಕೆ ಸ್ವತಂತ್ರರರು ಇದ್ದಾರೆ. ಹಾಗಾಗಿ, ಅವರು ಮಂಡಿಸಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅದು ತಪ್ಪು ಅಭಿಪ್ರಾಯ ಅಲ್ಲವೇ;

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಾನೂನು ಇದ್ದಾಗ (ಗೊಂದಲ) ತಪ್ಪಾಗಿ ದಾಖಲೆಗೆ ಹೋಗಬಾರದು. ಅದಕ್ಕೆ ಸರ್ಕಾರ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಸ್ವಾತಂತ್ರ್ಯ ಇದೆ. ಅವರು ಅವರ ಅಭಿಪ್ರಾಯವನ್ನು ಹೇಳಬೇಕಾದಾಗ it should be correct also ಅಲ್ಲವೇ? ತಪ್ಪು ಅಭಿಪ್ರಾಯಗಳನ್ನು ಹೇಳಿಕೊಂಡು ಇರುವುದಕ್ಕೆ ಈ ಸದನ ಇದೆಯೇ? ನಮ್ಮದು ಲೋಪ ಇದ್ದರೆ, ಅದನ್ನು ಅವರು ಎತ್ತಿಹಿಡಿಯಲಿ. ನಾವು ತಿದ್ದಿಕೊಳ್ಳುವುದಕ್ಕೆ ತಯಾರು ಇದ್ದೇವೆ. Constructive criticism is always welcome, but not setting of agenda.

**(ಗೊಂದಲ)**

(ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಹಾಗೂ ವಿರೋಧ ಪಕ್ಷದ ನಾಯಕರಾದ ಛಲವಾದಿ ಟಿ.ನಾರಾಯಣಸ್ವಾಮಿಯವರು ಒಟ್ಟಿಗೆ ಚರ್ಚೆಯಲ್ಲಿ ತೊಡಗಿದರು)

**ಶ್ರೀ ಪಿ.ಹೆಚ್‌ಪೂಜಾರ್:-** ಮಾನ್ಯ ಸಭಾಪತಿಯವರೇ, ಅದು ಮಾನ್ಯ ವಿರೋಧ ಪಕ್ಷದ ನಾಯಕರ perception. He is telling his perception.

**Sri PRIYANK KHARGE:-** That statement was not made by me.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಪಿ.ಹೆಚ್.ಪೂಜಾರ್‌ರವರೇ, ಅವರು yield ಆದರೆ ಮಾತ್ರ ತಾವು ಮಾತನಾಡಿ. ಅವರು yield ಆಗಿಲ್ಲವೆಂದರೆ, ತಾವು ಮಾತನಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, Hon'ble Leader of Opposition ರವರು Tribunal ಗೆ ಹೋದರೆ ಅದು ಅಂತಿಮ ಎಂದು ಹೇಳುತ್ತಾರೆಂದರೆ, isn't that misinformation sir?

**ಶ್ರೀ ಪಿ.ಹೆಚ್‌ಪೂಜಾರ್:-** ಮಾನ್ಯ ಸಭಾಪತಿಯವರೇ, Tribunal ಎನ್ನುವಂಥಾದ್ದು, it is his perception.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಇದು ತಪ್ಪು ಮಾಹಿತಿಯೋ ಅಥವಾ ಅಲ್ಲವೋ ಎನ್ನುವುದನ್ನು ತಾವೇ ಹೇಳಬಿಡಿ. ಕಾಲಂ 11 ರಲ್ಲಿ ಬಂದರೆ, ownership ಎನ್ನುವುದು ತಪ್ಪು ಮಾಹಿತಿಯೋ ಅಥವಾ ಇಲ್ಲವೋ ಎಂಬುದನ್ನು ತಾವೇ ಹೇಳಿ.

**(ಗೊಂದಲ)**

We are ready to deliberate. Please don't give misinformation on the Floor of the House. That is all I am telling you.

**Sri P.H.Poojar:-** He is not giving any misinformation. It is his perception that the Tribunal itself is working like that.

**Sri PRIYANK KHARGE:-** Sir, I am not ready to give any wrong perception about the law. ನಾನು ಕಾನೂನಿನ ಬಗ್ಗೆ perception ಎಂದು ಹೇಳುವುದಕ್ಕಾಗುವುದಿಲ್ಲ. (ಗೊಂದಲ) ಕಾನೂನನ್ನೇ ಉಲ್ಲೇಖಿಸಬೇಕೇ ಹೊರತು....

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ವಿರೋಧ ಪಕ್ಷದ ನಾಯಕರನ್ನು ಕೇಳಿಕೊಂಡಿದ್ದೇನೆ. ಅವರು yield ಆಗಿದ್ದಾರೆ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, it is his perception. He is objecting it.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

(ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆರವರು ಹಾಗೂ ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಒಟ್ಟಿಗೆ ಮಾತನಾಡತೊಡಗಿದರು)

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಇದಕ್ಕೆ ಉತ್ತರ ಕೊಡುವುದಕ್ಕೆ ಅವರು ಅಲ್ಲ. ತಾವು ಅಲ್ಲ. ತಾವು ಕುಳಿತುಕೊಳ್ಳಿ. ಅವರು ಮಾತನಾಡುತ್ತಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಸಮಯ ಕೊಡಲಾಗುತ್ತದೆ. ಇದು ನಿಯಮ 68 ರಡಿ ಚರ್ಚೆಯಾಗುತ್ತಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು yield ಆದರೆ, ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರಿಗೆ ಅವಕಾಶ ಇದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದೇ ಒಂದು ವಿಷಯವನ್ನು ಹೇಳುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರೇ., ತಾವು ಅರ್ಥ ಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರಿಗೆ ಮನವಿ ಮಾಡಿದ್ದೇನೆ. ಪಹಣಿಯ ಕಾಲಂ 11 ರಲ್ಲಿ ಯಾರದ್ದೇ ಆಸ್ತಿಯನ್ನು, ಯಾರದ್ದೇ ಮನೆಯನ್ನು, ಯಾವುದೇ ದೇವಸ್ಥಾನವನ್ನು, ಯಾವುದೇ ಚರ್ಚ್‌ನ್ನು ಕಾಲಂ 11 ರಲ್ಲಿ ಹಾಕಬಹುದೇ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ,,

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. ಹಾಕಬಹುದಾ; ಓಕೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ,ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅದು claim ಅಷ್ಟೇ. Industries ಮೇಲೆ acquisition ಮಾಡುತ್ತೀರಿ. ಅವಾಗ ಏನಾಗುತ್ತದೆ ಹೇಳಿ? Be honest.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಫೈನಲ್ ಆದಾಗ ಒಪ್ಪಿಕೊಳ್ಳುತ್ತೇವೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ತಾವೇ ನೇರವಾಗಿ ಚರ್ಚೆ ಮಾಡಿಕೊಳ್ಳುವುದಾದರೆ, ನಾನು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ದಯವಿಟ್ಟು ಕುಳಿತುಕೊಳ್ಳಿ. ತಮಗೂ ಅವಕಾಶ ಮಾಡಿ ಕೊಡಲಾಗುತ್ತದೆ. ತಾವು ಆಗ ಮಾತನಾಡಿ. ತಾವು ಮಧ್ಯೆ ಮಧ್ಯೆ ಎದ್ದು ಮಾತನಾಡಿದರೆ, ಏನು ಪ್ರಯೋಜನವಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರು ಹಾಗೂ ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಒಟ್ಟಿಗೆ ಮಾತನಾಡತೊಡಗಿದರು)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, Tribunal final ಅಲ್ಲ ಎನ್ನುವುದು ನಮಗೂ ಗೊತ್ತು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿಗಳು ದಾಖಲೆಗೆ ಹೋಗಬಾರದು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, Tribunal final ಅಲ್ಲ ಎಂದು ಗೊತ್ತಿದ್ದರೂ ಸಹ, ಅದನ್ನು ಏಕೆ ಅವರು ಹೇಳಬೇಕು. What is this?

**(ಗೊಂದಲ)**

(ಮುಂದು)

(720) 09.12.2024 4.10 ಎಂವಿ-ಕೆಎಸ್ (ಎಂಡಿ) (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಸಾಮಾನ್ಯ ಜನರು ಲಕ್ಷಾಂತರ ಮತ್ತು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಕೋರ್ಟ್‌ಗೆ ಹೋಗುವುದಕ್ಕೆ ಸಾಧ್ಯವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ನಿಯಮ 68ರ ಅಡಿಯಲ್ಲಿ ಮಾತನಾಡುವುದಕ್ಕೆ ಪೀಠ ಅವಕಾಶ ಮಾಡಿಕೊಟ್ಟಿದೆ. ನೀವು ನಿಮ್ಮ ಅನಿಸಿಕೆಗಳನ್ನು ಹೇಳಿ. ಅವರು ತಮ್ಮ ಅಭಿಪ್ರಾಯಗಳನ್ನು ಹೇಳಲಿ. ಕೊನೆಗೆ ಅದು ಏನಾಗಬೇಕೆಂದು ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಯಾರು...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ನಾನು ಹೇಳುವುದಕ್ಕೇ ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರ ಬಾಯಿಯಿಂದ ಬಂದರೆ ಮಾತ್ರ ಸತ್ಯವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ, ಒಂದು ನಿಮಿಷ

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು ಸತ್ಯವಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ತಾವು ಮಾತನಾಡಿ. ನಾನು ಅವರಿಗೆ ಅವಕಾಶ ನೀಡಿಲ್ಲ. ಅವರು ಮಾತನಾಡಿದ್ದು ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐ.ಟಿ., ಬಿ.ಟಿ. ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಇದನ್ನು ಒಪ್ಪುತ್ತಾರೆಯೇ? ಅಂದರೆ ಕಾಲಂ-11ರ ownership ಅನ್ನು ಒಪ್ಪುತ್ತಾರೆಯೇ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು Tribunal final ಎಂದು ಹೇಳುತ್ತಿದ್ದಾರೆ. ತಾವು ಅದನ್ನು ಒಪ್ಪುತ್ತೀರಾ?

**(ಗೊಂದಲ)**

**Sri C.T.RAVI:-** What act says?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಕೋರ್ಟ್‌ನಲ್ಲಿ ಚರ್ಚೆ ಮಾಡುವುದಕ್ಕೆ ಹಣ ಯಾರು ಕೊಡುತ್ತಾರೆ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ರೆಡಿ ಇದ್ದೇವೆ. ಆದರೆ, ಅವರು ಇರುವಂತಹ facts ಅನ್ನು ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 2013ರ ಆಕ್ಟ್ ಏನು ಹೇಳುತ್ತದೆ? ಮತ್ತೆ ತಿದ್ದುಪಡಿ ಮಾಡಿದಂತಹ ಆಕ್ಟ್ ಏನು ಹೇಳುತ್ತದೆ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ತಾವು ಮಾತನಾಡುವುದಕ್ಕೂ ಸಹ ಅವಕಾಶವಿದೆ. ಈಗ ತಾವು ಏಕೆ ಸಮಯವನ್ನು ವ್ಯರ್ಥ ಮಾಡುತ್ತೀರಿ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ನಾಲ್ಕು ಲಕ್ಷದಿಂದ ಒಂಬತ್ತು ಲಕ್ಷ ಆಗಿರುವುದು fact ಅಲ್ಲವೇ? Is it not the fact?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ಈಗ ತಾವು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ. ಇದರಿಂದ ಏನು ಪ್ರಯೋಜನ?

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಏನು? ಮಾನ್ಯ ಎನ್.ರವಿಕುಮಾರ್‌ರವರು ಯಿಲ್ಡ್ ಆಗಿದ್ದಾರೆ.

**(ಗೊಂದಲ)**

**ಡಾ: ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ನಮ್ಮ ಸರ್ಕಾರದಲ್ಲಿ ಅಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು ನಮ್ಮನ್ನು ಏಕೆ ಕೇಳುತ್ತಿದ್ದಾರೆ? ಅವರು ಶ್ರೀ ಅನ್ವರ್ ಮಾಣಿಪ್ಪಾಡಿಯವರನ್ನು ಕೇಳಲಿ. ಅವರು ಅವರ ಪಕ್ಷದವರಲ್ಲವೇ? ಮಾನ್ಯ ಯಡಿಯೂರಪ್ಪನವರು ಅವರಿಗೆ ದುಡ್ಡು ಕೊಡುವುದಕ್ಕೆ ಹೋಗಿದ್ದರಂತೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಏನೇನೋ ಮಾತನಾಡುತ್ತಿದ್ದಾರೆ. ಅವರು ಅಂಕಿ-ಅಂಶ ಇದ್ದರೆ ಕೊಟ್ಟು ಮಾತನಾಡಲಿ ಅದಕ್ಕೆ ನಾವು ತಯಾರು ಇದ್ದೇವೆ.

**(ಗೊಂದಲ)**

**ಉಪ ಸಭಾಪತಿಯವರು:-** ನಾನು ತಮಗೆ ಅವಕಾಶ ಕೊಡುತ್ತೇನೆಂದು ಒಂದು ಬಾರಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು ಶ್ರೀ ಅನ್ವರ್ ಮಾಣಿಪ್ಪಾಡಿಯವರನ್ನು ಕೇಳಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರಾದ ಪ್ರಿಯಾಂಕ್ ಖರ್ಗೆಯವರೆ, ತಾವು ಕುಳಿತುಕೊಳ್ಳಿ. ಮಾನ್ಯ ಶ್ರೀ ಬಿ.ಕೆ.ಹರಿಪ್ರಸಾದ್‌ರವರೆ ಈಗ ಅವರು ಯಿಲ್ಡ್ ಆಗಿದ್ದಾರೆ. ಆದುದರಿಂದ, ಈಗ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುತ್ತಾರೆ.

**(ಗೊಂದಲ)**

**ಡಾ: ಯತೀಂದ್ರ.ಎಸ್:-** ಮಾನ್ಯ ಸಭಾಪತಿಯವರೇ, ವರದಿ ನೋಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಡಾ:ಯತೀಂದ್ರರವರೆ ಕುಳಿತುಕೊಳ್ಳಿ. ಈಗ ಶ್ರೀ ಬಿ.ಕೆ.ಹರಿಪ್ರಸಾದ್‌ರವರೆ ತಾವು ಮಾತನಾಡಿ. ಈಗ ನೀವು ಮಾತನಾಡಬೇಕಾದರೆ ಯಿಲ್ಡ್ ಆದರೆ ಆಗ ನಿಮ್ಮ ಸಮಯವನ್ನು ಕಡಿತಗೊಳಿಸುತ್ತೇನೆ. ಈಗ ನೀವು ಮಾತ್ರ ಮಾತನಾಡುವುದು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮೊದಲನೇ ದಿವಸ ಭಾರತೀಯ ಜನತಾ ಪಕ್ಷದವರು ನಿಯಮ 68ರ ಅಡಿಯಲ್ಲಿ ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ. ಈಗ ಅವರ ಪಕ್ಷದಲ್ಲಿ ಯಾರ್ಯಾರು ಸಹಿ ಹಾಕಿದ್ದಾರೆ ಅವರೆಲ್ಲರೂ ಸಹ ಮಾತನಾಡಬಹುದು. ಈಗ ವಿರೋಧ ಪಕ್ಷದ ನಾಯಕರು ಸಾಂವಿಧಾನಿಕ ಪೀಠದಲ್ಲಿ ಇರತಕ್ಕಂತಹವರು ಅವರು ಮಾತನಾಡುವಾಗ ಬಹಳ ಎಚ್ಚರಿಕೆ ವಹಿಸಿ ಮಾತನಾಡುವುದು ಉತ್ತಮವೆಂದು ಕಾಣುತ್ತದೆ. ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇತಿಹಾಸಕ್ಕೆ ಹೋಗಿಬಿಟ್ಟಿದ್ದಾರೆ. ಅಂದರೆ, ಶ್ರೀ ಪಂಡಿತ್ ಜವಾಹರಲಾಲ್ ನೆಹರು, ಶ್ರೀಮತಿ ಇಂದಿರಾಗಾಂಧಿ ಮತ್ತು ಡಾ:ಮನಮೋಹನ್ ಸಿಂಗ್ ಎಂದು. 1913ರಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರುರವರು ಇರಲಿಲ್ಲ. ಬ್ರಿಟಿಷ್ ಕಾಲದಲ್ಲಿ ವಕ್ಫ್ ಕಾಯ್ದೆಯಾದಾಗ, 1923ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಅದು ಮುಸಲ್ಮಾನ್ ವಕ್ಫ್ ಕಾಯಿದೆ ಎಂದು ಆಗಿದೆ. ಆದುದರಿಂದ, ದಯವಿಟ್ಟು ಶ್ರೀ ಪಂಡಿತ್ ಜವಾಹರಲಾಲ್ ನೆಹರು ಮತ್ತು ಡಾ: ಮನಮೋಹನ್ ಸಿಂಗ್

ರವರುಗಳ ಬಗ್ಗೆ ಮಾತನಾಡುವಾಗ substantiate ಮಾಡಲಿ. ಅವರ ಬಳಿ ದಾಖಲೆ ಇದ್ದರೆ ಮಾತನಾಡಲಿ. ಅವರು ಚರ್ಚೆ ಮಾಡಿದ ಮೇಲೆ ನಾನು ಮಾತನಾಡುವುದಕ್ಕೆ ಸಮಯವನ್ನು ಕೇಳಿದ್ದೇನೆ. ಆಗ ನಾನು ಮಾತನಾಡುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2013ರಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರುವರು ಮಾಡಿದ್ದು ಅಲ್ಲ. 2023ರಲ್ಲಿ ಅದರ ಕಾಯಿದೆ ಆಗಿದ್ದು. ಆದರೆ, 1947 ಆಗಸ್ಟ್ 14ರಂದು ಭಾರತ ವಿಭಜನೆಯಾಯಿತಲ್ಲ, ಅದು ಯಾವ ಆಧಾರದ ಮೇಲೆ ವಿಭಜನೆಯಾಯಿತು. ನಾವು ಹಿಂದುಗಳ ಜೊತೆ ಬದುಕುವುದಕ್ಕೆ ಆಗುವುದಿಲ್ಲ. ನಮಗೆ ಪ್ರತ್ಯೇಕವಾದ ರಾಷ್ಟ್ರ ಬೇಕು ಎನ್ನುವಂತಹ ಆಧಾರದ ಮೇಲೆಯೇ ದೇಶ ವಿಭಜನೆಯಾಗಿರುವುದು. ಅದಾದ ನಂತರ ಮತ್ತೆ ಮತೀಯವಾದವನ್ನು ಬೆಳೆಸುವಂತಹ ಕೆಲಸವನ್ನು ಯಾರು ಮಾಡಿದ್ದು?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದಕ್ಕೆ ಅವರು ಕೌಂಟರ್ ಮಾಡುತ್ತಿದ್ದಾರೆ. ನಾನು ಅದನ್ನು ಒಪ್ಪುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಈ ರೀತಿ ಮಾತನಾಡಬೇಕಾದರೆ, ತಮಗೆ ಅದು ತಿಳಿಯುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ದೇಶ ವಿಭಜನೆ ಮಾಡಿ, ಅದಕ್ಕೆ ಸಹಿ ಮಾಡಿದವರು ಯಾರು ಎಂದು ಹೇಳಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು ವಕ್ಫ್ ಬಗ್ಗೆ ಚರ್ಚೆ ಮಾಡಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈಗ ಇವರು pick and choose ಆಗುತ್ತಾರೆ. ಇವರು ಸಂವಿಧಾನಕ್ಕೆ ವಿರುದ್ಧವಾಗಿ...

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಅವರು ಸ್ವಾತಂತ್ರ್ಯದ ಹೋರಾಟದಲ್ಲಿಯೂ ಕೂಸ ಭಾಗಿಯಾದಂತಹವರಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಹೊರಡಿಸಿದಂತೆ ಸರ್ವಧರ್ಮ ಸಮ ಭಾವದ....

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 2023ರಲ್ಲಿ ಅವರ ಸರ್ಕಾರ ಇದ್ದದ್ದು. 1947ರಲ್ಲಿ ಪಾಕಿಸ್ತಾನ ವಿಭಜನೆ ಆಗುವುದಕ್ಕೆ ಮಾನ್ಯ ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಕಾರಣ. ಪಾಕಿಸ್ತಾನ ಮತ್ತು ಹಿಂದೂಸ್ಥಾನ ಆಗುವುದಕ್ಕೆ ಮಾನ್ಯ ಸಾವರ್ಕರ್ ಕಾರಣ. ಅದರ ಬಗ್ಗೆ ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾಚಿಕೆಯಾಗಬೇಕು.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಇದನು ಮಾಡಿದ್ದು, ಮಾನ್ಯ ಸಾವರ್ಕರ್ ಮತ್ತು ಶ್ರೀ ಮಹಮ್ಮದ್ ಆಲಿ ಜಿನ್ನಾರವರು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮೂರನ್ನು ಬಿಟ್ಟಂತಹವರು ಈ ರೀತಿ ಮಾತನಾಡುವುದು.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಇದನ್ನು ಮಾಡಿದ್ದು, ಮಾನ್ಯ ಸಾವರ್ಕರ್ ಮತ್ತು ಶ್ರೀ ಮಹಮ್ಮದ್ ಆಲಿ ಜಿನ್ನಾರವರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಎಲ್ಲದಕ್ಕೂ ಸಹ ನೆಹರು, ನೆಹರು ಎನ್ನುತ್ತಾರೆ.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಯಾವಾಗಲೂ ಕೂಡ ಅದರ ಪರವಾಗಿ ಇರಲಿಲ್ಲ. ಅದು ಶ್ರೀ ಸಾವರ್ಕರ್ ಮತ್ತು ಶ್ರೀ ಮಹಮ್ಮದ್ ಆಲಿ ಜಿನ್ನಾರವರಿಗೆ ಇದ್ದಿದ್ದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, Tri-party Agreement ಗೆ ಸಹಿ ಹಾಕಿದ್ದು, ವೀರ ಸಾವರ್ಕರೋ ಅಥವಾ ನೆಹರು ರವರೋ ಎಂದು ಇತಿಹಾಸ ಹೇಳುತ್ತದೆ. ಅದು ಗೊತ್ತಾಗಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಐ.ಟಿ.,ಬಿಟಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಇತಿಹಾಸದ ಬಗ್ಗೆ ಮಾತನಾಡುವುದಾರೆ, ಅದರ ಬಗ್ಗೆ ಮಾತನಾಡೋಣ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಯಿತು, ಅವರು ಇತಿಹಾಸದ ಬಗ್ಗೆ ಮಾತನಾಡಲಿ. ಈಗ ನಾನು ಮಾತನಾಡುವುದಕ್ಕೆ ಬಿಡಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಓದಿ ಬಿಡುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಯಿಲ್ಡ್ ಆದರೆ ನಮ್ಮದು ಏನೂ ಅಭ್ಯಂತರವಿಲ್ಲ. ತಾವು yield ಆಗುವುದಾರೆ, yield ಆಗಿ ಅವರಿಗೆ ಅವಕಾಶ ಮಾಡಿಕೊಡಿ. ಇದಕ್ಕೂ ಒಂದು ವ್ಯವಸ್ಥೆ ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ ಶ್ರೀ ಪಂಡಿತ್ ಜವಾಹರ್‌ಲಾಲ್ ನೆಹರುರವರು ಆ ಕಾಲದಲ್ಲಿ ಇರಲಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, Kindly ಒಂದು ನಿಮಿಷ. ನಾನು ಇತಿಹಾಸಕ್ಕೆ ಹೋಗುವುದಿಲ್ಲ. ನಾನು ಎರಡು ಲೈನ್‌ಗಳನ್ನು ಓದಿಬಿಡುತ್ತೇನೆ.

"Empower Waqf Boards in consultation with religious leaders;

taking steps to remove encroachments from and unauthorized occupation of Waqf properties.

Curate their rich heritage and culture – maintenance and

restoration of heritage sites; digitization of archives;

preservation and promotion of Urdu."

ಇದು ಯಾರ ಲಾಂಛನ? ಇದು ಬಿ.ಜೆ.ಪಿ.ಯವರದು. ಇದು ಯಾರ manifesto ಎಂದರೆ, ಅದು ಬಿ.ಜೆ.ಪಿ.ಯವರ manifesto. ಈಗ ಅವರು ಇತಿಹಾಸ ಬಿಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಅದನ್ನು ಅರ್ಥ ಮಾಡಿಕೊಳ್ಳಲಿ. ಅವರು ಅದನ್ನು ತೆಗೆದುಕೊಂಡು ಓದಿದ್ದಾರೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮತೀಯರು, ವಕ್ಫ್, ಮುಸ್ಲಿಂ, ಹಿಂದೂ, ಇದು ಯಾರ ಲಾಂಛನಾ? ಇದು ಕಾಂಗ್ರೆಸ್‌ನವರದಾ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಓದಿರುವುದನ್ನು ಅರ್ಥ ಮಾಡಿಕೊಳ್ಳಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು 330 ಕೋಟಿ ರೂಪಾಯಿಗಳನ್ನು ಕಟ್ಟಿಬಿಟ್ಟು, GIS (Geographic Information System) mapping ಮಾಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಕ್ಫ್ ಎನ್ನುವುದು ಇವತ್ತಿನ ದಿವಸ ಹುಟ್ಟಿದಲ್ಲ. ನಾನು ಇದನ್ನು ಮೊದಲೇ ಹೇಳಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ವಿಚಾರ ನಿಯಮ 68ರ ಅಡಿಯಲ್ಲಿ ಬಂದಿದೆಯಲ್ಲಾ, ಅದರ ಬಗ್ಗೆಯೇ ಹೋಗಲಿ. ಅದರ ವಿಷಯಾಂತರವಾಗುವುದು ಬೇಡ. ಅಂದರೆ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡಕ್ಕೂ ಸಹ. ವಿಷಯಾಂತರಗಳನ್ನು ಮಾಡುವುದು ಬೇಡ. ಈಗ ಎಲ್ಲೂ ಇದರಲ್ಲಿ unparliamentary words ಪ್ರಸ್ತಾಪವಾಗಿಲ್ಲ. ಅದನ್ನು ನಾನು ನೋಡುತ್ತಲೇ ಇದ್ದೇನೆ. ತಾವು ಮಾತನಾಡುತ್ತಿದ್ದೀರಿ. ಆ ವಿಚಾರ ಬೇರೆ track ತೆಗೆದುಕೊಳ್ಳುವುದು ಬೇಡ. ಇದರ ಬಗ್ಗೆ ಒಂದು ಆರೋಗ್ಯಕರವಾದ ಚರ್ಚೆಯಾಗಲಿ. ಇದು ಎಲ್ಲರಿಗೂ ಸಹ ಗೊತ್ತಾಗಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ವಿಷಯ ಮಂಡನೆ ಮಾಡುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನೀವುಗಳು ಏನಾದರೂ yield ಆದರೆ ಅವರಿಗೆ ಅವಕಾಶ. ಈಗ ವಿರೋಧ ಪಕ್ಷದವರು ಯಾರಾದರೂ ಎದ್ದು ನಿಂತಾಗ, ನೀವು yield ಆದರೆ ಅವರಿಗೆ ಅವಕಾಶ. ಮಾನ್ಯ ಮಂತ್ರಿಗಳು ತಾವು ಜವಾಬ್ದಾರಿಯಲ್ಲಿದ್ದೀರಿ, ತಾವು ಸ್ವಲ್ಪ ಯೋಚನೆ ಮಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ನಾನು ವಿಷಯ ಮಂಡನೆ ಮಾಡುತ್ತಿದ್ದೇನೆ. ಇವೆಲ್ಲವೂ ಕೂಡ ಇತಿಹಾಸದ ಉದ್ದಕ್ಕೂ ಸಹ ಸಿಕ್ಕಿರುವಂತಹ ವಿಚಾರಗಳೆ. ನಾನು ವಿಷಯ ಬಿಟ್ಟು

ಹೋಗುವುದಿಲ್ಲ. ಪದೇ ಪದೇ ಅವರು ಮೇಲೆ ಎದ್ದು ನಮ್ಮ ದಾರಿ ತಪ್ಪಿಸುತ್ತಾರೆಂದರೆ, ಅದಕ್ಕೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಈಗ ನಾನು ಹೇಳಿದ್ದಕ್ಕೆ ನಿಂತು, ನಿಂತು ಉತ್ತರ ಕೊಡಬೇಕಾಗಿಲ್ಲ. ಅವರು ಉತ್ತರ ಕೊಡುವುದಕ್ಕೆ ಅವಕಾಶವಿದೆ. ಆಗ ಅವರು ಉತ್ತರ ಕೊಡಲಿ. ನಾವು ಅವರನ್ನು ತಡೆದಿದ್ದೇವೆಯೇ? ನಾವು ಅವರನ್ನು ತಡೆಯುವುದಿಲ್ಲ. ಆದರೆ, ವಿಷಯವನ್ನು ಮಂಡನೆ ಮಾಡಬೇಕು. ರಾಜ್ಯದಲ್ಲಿ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದು ಜನ ಎಲ್ಲವನ್ನು ಸಹ ನೋಡುತ್ತಿದ್ದಾರೆ. ತಾವು ಸಹ ನೋಡುತ್ತಿದ್ದೀರಿ. ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲಾ ರೈತರು ನಾಲ್ಕು-ಐದು ದಶಕಗಳ ಕಾಲದಿಂದ ಮಾಡಿಕೊಂಡು ಬರುತ್ತಿರುವಂತಹ ಜಮೀನುಗಳಲ್ಲಿ ಪಹಣಿ ತೆಗೆದರೆ, ವಕ್ಫ್ ಎಂದು ಬರುತ್ತಿದೆ. ನಾನು ಸಿಂಧಗಿಯ ವಿರಕ್ತ ಮಠಕ್ಕೆ ಹೋಗಿದ್ದೆ. ಅದು ಸುಮಾರು ಹನ್ನೊಂದನೆ ಶತಮಾನದ ಮಠ. ಇವತ್ತು ಪಹಣಿಯಲ್ಲಿ ಅದರಲ್ಲಿ ವಕ್ಫ್ ಎಂದು ಬಂದಿದೆ. ಅವರು ಒಂದು ಕಡೆ ಹೇಳುತ್ತಾರೆ ದಾನವಾಗಿ ಕೊಟ್ಟಂತಹ ಜಮೀನುಗಳು. ಈಗ ಹನ್ನೊಂದನೆ ಶತಮಾನದ ಮಠ ಯಾವೊತ್ತು ಸಹ ವಕ್ಫ್ ಎಂದು ಇರಲಿಲ್ಲ. ಅವರು ಯಾವುದೋ ವಿಚಾರಕ್ಕೆ ಹೋಗಿ ಎರಡು ವರ್ಷದ ಹಿಂದಿನದನ್ನು ತೆಗೆದಾಗ, ಪಹಣಿಯಲ್ಲಿ ವಕ್ಫ್ ಎಂದು ಬಂದಿತ್ತು. ಅದಕ್ಕೆ ಹೋಗಿ ಅರ್ಜಿ ಕೊಟ್ಟರು ಏನೂ ಆಗಲಿಲ್ಲ. ಅದು ಈಗಲೂ ಸಹ ಹಾಗೆಯೇ ಇದೆ. ಅವರು ಹೋರಾಟ ಮಾಡುತ್ತಿದ್ದಾರೆ. ಇದು ಬಂದ ಮೇಲೆ ಪಕ್ಕದ ಮಠಮಾನ್ಯದವರು ತೆಗೆಯಿಸಿ ನೋಡಿದರು. ಅಂದರೆ, ಅವರದೇ ಆ ರೀತಿ ಬಂದಿದೆ ನಮ್ಮದು ಏನಾಗಿದೆ ಎಂದು. ಅವರು ಅದನ್ನು ನೋಡಿದಾಗ, ಅವರಲ್ಲೂ ಸಹ ಅದೇ ರೀತಿ ಬಂದಿತ್ತು. ಈಗ ರೈತರುಗಳಿಗೂ ಸಹ ಬಂದಿದೆ. ಎರಡು ಮತ್ತು ಮೂರು ಸಾವಿರ ಎಕರೆಗಳಿಗೆ ಬಂದಿದೆ ಎಂದು ಅದು ವಿಜಯಪುರದಿಂದ ಪ್ರಾರಂಭವಾಗಿದೆ. ಇದೇ ರೀತಿ ಕೋಲಾರ ಜಿಲ್ಲೆಯಲ್ಲೂ ಸಹ ಇದೆ. ಈಗ ಎಷ್ಟೋ ಗ್ರಾಮಗಳಲ್ಲಿ ಆ ಸಮುದಾಯವೇ ಇಲ್ಲ. ಖಬರಸ್ಥಾನ್ ವಕ್ಫ್‌ಗೆ ಸೇರಿರುವುದು ಎಂದು ಬಂದಿದೆ. ಆದರೆ, ಅಲ್ಲಿ ಆ ಸಮುದಾಯವೇ ಇಲ್ಲ. ಅಲ್ಲಿ ನಮಗೆ ದಾನ ಕೊಟ್ಟಂತಹವರು ಯಾರು?

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರು ಯಾವುದಾದರೂ ಹೆಸರನ್ನಾದರೂ ಹೇಳಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ನಸೀರ್ ಅಹಮದ್‌ರವರೆ, ಈಗ ತಾವು ಕುಳಿತುಕೊಳ್ಳಿ. ಆಮೇಲೆ ಬೇಕಾದರೆ ನೀವು ಪ್ರಶ್ನೆ ಮಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ಈಗ ಹರಿಹರದ ಹತ್ತಿರ ದಾನವಳ್ಳಿ ಎಂದು ಇದೆ. ನಾನು ಅಲ್ಲಿಗೆ ಹೋಗಿದ್ದೆ. ನಾನು ಅಲ್ಲಿಗೆ ಹೋದಾಗ ಆ ಊರಿನಲ್ಲಿ ಯಾರೂ ಇಲ್ಲ. ಆಮೇಲೆ ಮತ್ತೊಂದು ಹೆಸರು ಇದೆ. ಚಳ್ಳಕೆರೆ ಎಂದು ಇದೆ. ಅಲ್ಲೂ ಸಹ ಇದೆ.

**(ಮುಂದು)**

(721) 09.12.2024 04.20 LL-MD(KS) (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ಹೊಳಲ್ಕೆರೆಯಲ್ಲಿಯೂ ಇದೆ. ಅಲ್ಲಿಗೆ ಚಂದ್ರಣ್ಣ ಮತ್ತು ಇತರರು ರಾಜಕೀಯ ಮುಖಂಡರು ಅಲ್ಲಿಗೆ ಬಂದಿದ್ದರು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾದರೆ ಚಳ್ಳಕೆರೆಯಲ್ಲಿ ನಮ್ಮ ಸಮುದಾಯದ ಜನ ಇರುವುದಿಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಚಳ್ಳಕೆರೆಯಲ್ಲಿ ಆ ಸಮುದಾಯದ ಜನ ಇದ್ದಾರೆ. ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಆ ಗ್ರಾಮದಲ್ಲಿ ಇಲ್ಲ. 4 ಗ್ರಾಮ ಆಚೆ ಇದೆ. ಆದರೆ, ಇಲ್ಲಿ 5 ಎಕರೆ 38 ಗುಂಟೆ ಜಮೀನು ವಕ್ಫ್ ಬೋರ್ಡ್‌ನ ಹೆಸರಿನಲ್ಲಿದೆ.

**ಶ್ರೀ ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ಸ್ವಂತ ಜಮೀನು. ವಕ್ಫ್ ಬೋರ್ಡ್‌ನದ್ದಲ್ಲ. ಅದು ಖರೀದಿ ಮಾಡಿರುವಂತಹ ಜಮೀನು. ಆ ಬಗ್ಗೆ ದಾಖಲೆ ಇದೆ. ಸುಮ್ಮನೆ ಏನೇನೋ ಮಾತನಾಡಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಭೇಟಿ ನೀಡಿರುವುದು ನಮಗೆ ಗೊತ್ತಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಬಗ್ಗೆ ಅವರು ನಂತರ ಮಾತನಾಡಲಿ.

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಅವರು ಎಲ್ಲಿಗೆ ಬೇಕಾದರೂ ಹೋಗಲಿ. ಆದರೆ, ಅಲ್ಲಿ ನಮ್ಮ ಸಮುದಾಯದ ಜನ ಇದ್ದರೆ ಏನು ಮಾಡಬೇಕು? ಅಲ್ಲಿ ಜನ ಇಲ್ಲದೇ ಆ ರೀತಿ ಇರುತ್ತದೆಯೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಕಡೆಗಳಲ್ಲಿ ಆ ಸಮುದಾಯದ ಜನ ಇದ್ದು, ಅವರ ಬಳಿ ದಾಖಲೆ ಇದ್ದರೆ, ಆ ಎಲ್ಲಾ ದಾಖಲೆಗಳನ್ನು ಸದನದಲ್ಲಿ ಮಂಡಿಸಲಿ. ಆದರೆ, ನಮ್ಮ ಗಮನಕ್ಕೆ ಬಂದಿರುವುದನ್ನು ನಾವು ಹೇಳುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡುತ್ತಿರುವಾಗ ಆಡಳಿತ ಪಕ್ಷದ ಸದಸ್ಯರ ಮಾತಿಗೆ ಕೌಂಟರ್ ಮಾಡುತ್ತಿದ್ದರೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ತಾವು ನೇರವಾಗಿ ಪೀಠದ ಜೊತೆ ಮಾತನಾಡಿ. ಅಲ್ಲದೇ, ತಾವು ಮಾತನಾಡುವಾಗ ಅನುಮತಿ ಇಲ್ಲದೇ ಸದಸ್ಯರು ಎದ್ದು ನಿಂತು ಮಾತನಾಡಿದರೆ ಅದು ರೆಕಾರ್ಡ್‌ಗೆ ಕೂಡ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ನಮ್ಮ ಸಮುದಾಯದ ಜನ ಇಲ್ಲವೆಂದು ಹೇಳಿದರೆ ನಾವು ಹೇಳಬೇಕಲ್ಲವೇ?...

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಉಪ ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ತಾವು ಸರ್ಕಾರದ ಮುಖ್ಯ ಸಚೇತಕರಾಗಿ ಈ ರೀತಿ ಮಧ್ಯೆ ಎದ್ದು ನಿಂತು ಮಾತನಾಡಿದರೆ ಹೇಗೆ? ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ, ಅದಕ್ಕೆ ಅವರು ದಾಖಲೆಗಳನ್ನು ಕೊಡಬೇಕಲ್ಲವೇ?

**ಉಪ ಸಭಾಪತಿಯವರು:–** ಅದನ್ನು ತಾವು ಆಮೇಲೆ ಕೇಳಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ದಾಖಲೆ ಇಲ್ಲದೇ ಈ ರೀತಿ ಬಾಯಿಗೆ ಬಂದ ಹಾಗೆ ಮಾತನಾಡಿದರೆ ಹೇಗೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ದಾಖಲೆಗಳನ್ನು ನಾನು ನಂತರ ಕೊಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲಾ ದಾಖಲೆಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ಈಗ ಏನಾಯಿತೆಂದರೆ, ಇವೊತ್ತಿನ ದಿವಸ ಈ ವಿಚಾರ ಚರ್ಚೆಗೆ ಬರುತ್ತದೆಯೆಂದು ಗೊತ್ತಿರಲಿಲ್ಲ. ಈ ವಿಷಯದ ಬಗ್ಗೆ ಬರೆದಿಟ್ಟುಕೊಂಡಿದ್ದ ಮಾಹಿತಿ ಎಲ್ಲವೂ ಸಹ ನನ್ನ ಕೊಠಡಿಯಲ್ಲಿದ್ದು, ನಾನು ಅದನ್ನು ಇಲ್ಲಿಗೆ ತಂದಿರುವುದಿಲ್ಲ. ನಾಳೆಯ ದಿವಸ ಆ ಎಲ್ಲಾ ಮಾಹಿತಿಯನ್ನು ತಮ್ಮ ಟೇಬಲ್ ಬಳಿ ತಲುಪಿಸುತ್ತೇನೆ. **(ಗೊಂದಲ)** ಆ ಬಗ್ಗೆ ನನಗೆ ಏನೂ ಚಿಂತೆ ಇಲ್ಲ. ಆದರೆ, ಈಗ ನನಗೆ ಗೊತ್ತಿರುವ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ನೂರಕ್ಕೆ ನೂರರಷ್ಟು ಹೀಗೆ ಆಗಿದೆ ಎಂದು ನಾನು ಹೇಳುವುದಿಲ್ಲ. ಆಗಿರುವಂಥ ವಿಷಯವನ್ನು ನಾನು ಗಮನಕ್ಕೆ ತರುತ್ತಿದ್ದೇನೆ. ಇವೊತ್ತಿನ ದಿವಸ ನಮ್ಮ ಪಕ್ಷದಿಂದ ಮೂರು ತಂಡಗಳಾಗಿ ನಾವು ಇಡೀ ರಾಜ್ಯದಲ್ಲಿ ಸುತ್ತಾಡಿದ್ದೇವೆ. ಆ ಸಂದರ್ಭದಲ್ಲಿ ಜನರು ನಮ್ಮ ಗಮನಕ್ಕೆ ಏನು ತಂದಿದ್ದಾರೆ, ಆ ವಿಚಾರವನ್ನು ಸದನದ ಮುಂದೆ ಇಡಬೇಕಾಗಿದ್ದು ನಮ್ಮ ಧರ್ಮ. ಇವೊತ್ತಿನ ದಿವಸ ನಾನು ಏನೂ ತಪ್ಪು ಹೇಳಿರುವುದಿಲ್ಲ. ಇದು ಹಿಂದಿನಿಂದ ಬಂದಿರುವಂತಹ ವಿಷಯ. ಮೂಲ ವಕ್ಫ್ ಕಾಯಿದೆ, 1913ರ ಬಗ್ಗೆ ಮಾತನಾಡಿದರೆ ಶಿಯಾ ಮತ್ತು ಸುನ್ನಿಗಳ ನಡುವಿನ ಯಾವುದೇ ವಿವಾದವೂ ನ್ಯಾಯಾಧೀಕರಣಕ್ಕೆ ಮಾತ್ರ ಹೋಗುತ್ತದೆ ಎಂದು ಇದರಲ್ಲಿತ್ತು. ಅದು ಇತಿಹಾಸದ ವಿಚಾರವೇ. ಅದಕ್ಕಾಗಿ ನಾನು ಆ ವಿಚಾರವನ್ನು ಹೇಳಿದೆನು. ಆದರೆ, ಆಗ ಜವಾಹರಲಾಲ್ ನೆಹರುರವರು ಇದ್ದರು ಎಂದು ನಾನು ಖಂಡಿತವಾಗಿ ಹೇಳಿದೆನು. ನಾನು ಹೇಳಿದ್ದೇನೆಂದರೆ, ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಎಂದು. ಅಲ್ಲಿಂದ ಪ್ರಾರಂಭವಾಗಿರುತ್ತದೆ. ಅವರು 1954ರಲ್ಲಿ ಇದನ್ನು ತಂದರು. ಆದುದರಿಂದಾಗಿ, ನಾನು ಆ ವಿಷಯವನ್ನು ಪ್ರಸ್ತಾಪ ಮಾಡಿದೆನು.

**ಶ್ರೀ ಬಿ.ಕೆ. ಹರಿಪ್ರಸಾದ್ :–** ಮಾನ್ಯ ಸಭಾಪತಿಯವರೇ, ಆ ಸಮಯದಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರು ಆ ಕಾನೂನನ್ನು ಜಾರಿಗೆ ತಂದಿದ್ದು ಸಂವಿಧಾನ ಚೌಕಟ್ಟಿನಲ್ಲಿ ಮತ್ತು ಲೋಕಸಭೆಯಲ್ಲಿ ಚರ್ಚೆ ಮಾಡಿ ತಂದಿರುತ್ತಾರೆ. ಬದಲಾಗಿ, ಯಾವುದೇ ಕಾನೂನು ಬಾಹಿರವಾಗಿ ತಂದಿರುವುದಿಲ್ಲ.

**Sri IVAN D'SOUZA (LEGISLATIVE ASSEMBLY CONSTITUENCY):–** Hon'ble Chairman sir, it is an Act.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಕಾನೂನನ್ನು ಕಾನೂನು ಬಾಹಿರವಾಗಿ ಜಾರಿಗೆ ತಂದಿದ್ದಾರೆಂದು ಎಲ್ಲಿಯೂ ಹೇಳಿರುವುದಿಲ್ಲ. ನಾನು ಹೇಳಿದ್ದೇನೆಂದರೆ, ಆವೊತ್ತಿನ ದಿವಸ ಅದಕ್ಕೆ ಜೀವ ಕೊಟ್ಟವರ ಹೆಸರನ್ನು ಮಾತ್ರ ಹೇಳಿದ್ದೇನೆ. ಅದಾದ ನಂತರ 2013ರವರೆಗೆ ಹೇಗೆ ನಡೆದುಕೊಂಡು ಬಂತು ಎಂದು ಹೇಳಿದ್ದೇನೆ. ಇದರಲ್ಲಿ ಏನು ತಪ್ಪಿದೆ? ಆದರೆ, ಇವೊತ್ತಿನ ದಿವಸ ಪರಿಸ್ಥಿತಿಗೆ ಬರೋಣ. ನಾವು ಈಗ ಚರಿತ್ರೆಗೆ ಹೋಗುವುದು ಬೇಡ. ನಾವು ಇಂದಿನ ಪರಿಸ್ಥಿತಿಯನ್ನಷ್ಟೇ ಅವಲೋಕನ ಮಾಡೋಣ. ಈಗ ಅವರ ಆಸ್ತಿಗಳು ದಿನದಿಂದ ದಿನಕ್ಕೆ ಉದ್ಭವವಾಗುತ್ತದೆ, ಅದು ಎಲ್ಲಿಂದ ಬಂತು. ಇದನ್ನು ಯಾರು ಕೊಟ್ಟರು? ಮೊದಲನೆಯದಾಗಿ, ಇದರಲ್ಲಿ ಏನಿದೆಯೆಂದರೆ, ದಾನ ಕೊಟ್ಟ ಜಮೀನು ಎಂದು ಇದೆ. ಈ ಜಮೀನು ಅವರಿಗೆ ಎಲ್ಲಿಂದ ಬಂತು? ಇವೊತ್ತಿನ ದಿವಸ ರಾಜ್ಯದಲ್ಲಿ ದಲಿತ ಸಮುದಾಯಗಳು ಎಲ್ಲಿಯಾದರೂ ಯಾರಾದರೂ ತೀರಿಕೊಂಡರೆ ಅವರನ್ನು ಹೂಳುವುದಕ್ಕೆ ಜಾಗ ಇಲ್ಲ. ನಾವು ಅವರನ್ನು ಎಲ್ಲಿಯಾದರೂ ಹೂಳುವುದಕ್ಕೆ ಹೊತ್ತಿಕೊಂಡು ಹೋದರೆ, "ಏಯ್ ಇಲ್ಲಿ ಹೂಳಬೇಡಿ" ಎಂದು ಹೇಳುತ್ತಾರೆ. ಅವರಿಗೆ ಸ್ಮಶಾನಗಳು ಇಲ್ಲ. ಆದರೆ, ನೂರಾರು ಎಕರೆ, ಲಕ್ಷಾಂತರ ಎಕರೆ ಜಮೀನುಗಳು ಒಂದು ಸಮುದಾಯಕ್ಕೆ ಮಾತ್ರ ಸಿಗುತ್ತಿದೆಯೆಂದರೆ, ಇದರ ಅರ್ಥ ಏನು? ಎಲ್ಲರಿಗೂ ನ್ಯಾಯ ಕೊಡಬೇಕಲ್ಲವೇ? ನಾನು ಆ ವಿಚಾರವನ್ನೇ ಹೇಳಿದೆನು. ಮೈನಾರಿಟಿ ಎಂದು ಹೇಳುವುದಾದರೆ, ಜೈನರಿದ್ದಾರೆ, ಸಿಖ್ಖರಿದ್ದಾರೆ, ಬೌದ್ಧರಿದ್ದಾರೆ, ಕ್ರೈಸ್ತರಿದ್ದಾರೆ ಇವರೆಲ್ಲರಿಗೂ ಬರಬೇಕಲ್ಲವೇ? ಆಯಿತು, ಹಾಗಾದರೆ ಜನಾಂಗಗಳ ಆಧಾರದ ಮೇರೆಗೆ ಎಲ್ಲರಿಗೂ ಹಂಚಿಬಿಡಲಿ. ಅದು ಎಲ್ಲರಿಗೂ ಸಿಗಲಿ. ನಾನು ಬೇಡವೆಂದು ಹೇಳುತ್ತಿಲ್ಲ. ಆದರೆ, ಪರಿಸ್ಥಿತಿ ಇವೊತ್ತಿನ ದಿವಸ ಏನಾಗುತ್ತಿದೆಯೆಂದರೆ, ಒಂದು ವಕ್ಫ್ ಬೋರ್ಡ್‌ಗೆ ಈ ರೀತಿ ಉದ್ಭವಗಳು ಆಗುತ್ತಿದೆಯಲ್ಲಾ, ಅದು ಪ್ರಶ್ನೆ ಇರುವಂಥದ್ದು. ಆ ಪ್ರಶ್ನೆಯನ್ನು ನಾವು ಎತ್ತಿದ್ದೇವೆ. ಜೊತೆಗೆ, ಪಹಣಿಯ ಕಾಲಂ 11 ಅನ್ನು ಯಾರು ಬೇಕಾದರೂ ಸಹ ಬದಲಾವಣೆ ಮಾಡುತ್ತಾರೆ. ಇವೊತ್ತಿನ ದಿವಸ ಆ ಕಾಲಂ 11 ರಲ್ಲಿ ಒಂದು ಹೆಸರು ಬಂದಿದೆ, ನಾಳೆ ದಿವಸ ಸಂಬಂಧಪಟ್ಟ ಗ್ರಾಮ ಲೆಕ್ಕಿಗನಿಗೆ ಹೇಳಿ, "ನೋಡಪ್ಪಾ, ಇದು ಈ ರೀತಿ ಎಂದು ಹೇಳಿ ಇದನ್ನು ಸರಿ ಮಾಡು" ಎಂದು ಹೇಳಿದರೆ ಆತ ಅದನ್ನು ಸರಿ ಮಾಡುತ್ತಾನೆ. ಆದರೆ, ಆ ಆಸ್ತಿ ಅವನದ್ದು ಆಗಿ ಹೋಗುತ್ತದೆಯೇ? ಅಂದರೆ, ನಿಮ್ಮ ಆಸ್ತಿ ಎಂದು ಇದ್ದ ಜಾಗದಲ್ಲಿ ನನ್ನ ಹೆಸರು ಬರೆಯಿಸಿಬಿಟ್ಟರೆ ಆಗುತ್ತದೆಯೇ? ಅದು ಆಗುವುದಿಲ್ಲ. ಅದು ನಮಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಆದೇಶ ಮಾಡಿದರು. ಅದೇನೆಂದರೆ, ಪಹಣಿಯ ಕಾಲಂ 11 ರಲ್ಲಿ ಬಂದಿರುವಂತಹ "ವಕ್ಫ್" ಎನ್ನುವ ಹೆಸರನ್ನು ನಾವು ತೆಗೆದುಬಿಡುತ್ತೇವೆ. ಇನ್ನು ಮುಂದೆ ಆ ರೀತಿ ಯಾರೂ ಕೂಡ ನಮೂದಿಸಬೇಡಿ ಎಂದು ಹೇಳಿದರು. OK, we welcome it. ಆದರೆ, ನಾನು ಹೇಳುವುದೇನೆಂದರೆ, ಅದನ್ನು ತೆಗೆದ ತಕ್ಷಣ ಅದು ಹೋಗುವುದಿಲ್ಲ. ಅದರ ಮೂಲ ಏನು? ಅದು ಎಲ್ಲಿಂದ ಬಂತು? ಏತಕ್ಕೆ ಬಂತು? ಇದರ ಮೂಲಕ್ಕೆ ಹೋಗಬೇಕಾಗಿದೆ. ಅಲ್ಲಿ ತೆಗೆದರೆ ಅಂದರೆ, ಬೇರನ್ನು ತೆಗೆದರೆ ಮಾತ್ರ ಅದು ಸರಿಹೋಗುತ್ತದೆ. ಬದಲಾಗಿ ಕೊಂಬೆಯನ್ನು ತೆಗೆದರೆ ಏನೂ ಆಗುವುದಿಲ್ಲ. 1974ರ ಗೆಜೆಟ್ ನೋಟಿಫಿಕೇಷನ್ ಅಲ್ಲಿ ಅದೆಲ್ಲವೂ ಇದೆ. ಅದನ್ನು ತೆಗೆಯಬೇಕು. ಈ ಹಿಂದೆ ಸುಮಾರು 54,000 ಎಕರೆ ಜಮೀನು ವಕ್ಫ್ ಬೋರ್ಡ್‌ಗೆ ಸೇರಿದೆ ಎಂದು ಒಂದು ವರದಿ ಬಂದಿತ್ತು. 26 ಸಾವಿರ ಎಕರೆಯನ್ನು ಯಾರ್‍ಯಾರು ಪ್ರಭಾವಿ ರಾಜಕಾರಣಿಗಳು ಮತ್ತು

ಮೌಲ್ವಿಗಳು ಇದ್ದಾರೆಯೋ ಅವರೆಲ್ಲರೂ ಕೆಲವು ವಕ್ಫ್‌ಬೋರ್ಡ್ ಜಮೀನನ್ನು ಮಾರಾಟ ಮಾಡಿದ್ದಾರೆಂದು ಅನ್ವರ್ ಮಾಣಿಪ್ಪಾಡಿ ವರದಿಯಲ್ಲಿ ಬಂದಿದೆ. ಅದರ ಬಗ್ಗೆ ಯಾರೂ ಕೂಡ ತಲೆ ಕೆಡಿಸಿಕೊಂಡಿರುವುದಿಲ್ಲ. ಅದು ಬೇರೆ ವಿಷಯ. ಅದರ ಬಗ್ಗೆ ಸರ್ಕಾರ ಯಾವ ರೀತಿ ತೀಕ್ಷ್ಣವಾಗಿ ತೆಗೆದುಕೊಳ್ಳುತ್ತದೆಯೋ ಅಥವಾ ತೆಗೆದುಕೊಳ್ಳುವುದಿಲ್ಲವೋ ಅದು ಬೇರೆ ವಿಷಯ. ಆದರೆ, ಇವೊತ್ತಿನ ದಿವಸ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಪ್ರಾರಂಭವಾಗಿದೆಯಲ್ಲಾ, ಇದ್ದಕ್ಕಿದ್ದ ಹಾಗೆ ರೈತರ ಆಸ್ತಿಗಳ ಪಹಣಿಗಳಲ್ಲಿ ವಕ್ಫ್ ಬೋರ್ಡ್ ಎಂದು ಹೆಸರು ಬಂದಾಗ, ಅವರು ಈಗ ಆತಂಕದಲ್ಲಿದ್ದಾರೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಪ್ರಸ್ತಾವನೆ ಇದೆ. ಒಂದೇ ಸೆಕೆಂಡ್.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಯೀಲ್ಡ್ ಆದರೆ ಮಾತ್ರ ತಮಗೆ ಅವಕಾಶ. ಇಲ್ಲದೇ ಇದ್ದರೆ, ತಮಗೆ ಮಾತನಾಡಲು ಅವಕಾಶ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ನೋಟಿಸ್ ನಡೆಯಿತು. ಅದರ ಬೆನ್ನಲ್ಲೇ ಇಡೀ ರಾಜ್ಯಾದ್ಯಂತ ಸಮಸ್ಯೆ ಎದುರಾಗಿರುತ್ತದೆ. ಹೋರಾಟಗಳು ಆಯಿತು. ಅನೇಕ ರೈತ ಮುಖಂಡರು ಅಹೋರಾತ್ರಿ ಧರಣಿ ನಡೆಸಿದರು. ಅವೊತ್ತಿನ ದಿವಸ ದೀಪಾವಳಿ ಹಬ್ಬ ಇತ್ತು. ಆ ದಿನ ಕೂಡ ನಾವು ಮನೆಗೆ ಹೋಗುವುದಿಲ್ಲ. ಇಲ್ಲಿ ನಮ್ಮ ದೀಪ ಹಾರುತ್ತಿದೆ. ನಾವು ಈಗ ಮನೆಗೆ ಹೋಗಿ ಏನು ಮಾಡಬೇಕೆಂದು ಅವರು ಅಹೋರಾತ್ರಿ ಧರಣಿ ಮಾಡುತ್ತಿದ್ದರು.

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಇವರು ರಾಜಕೀಯ ಮಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ತಾಳ್ಮೆಯಿಂದ ಕುಳಿತುಕೊಂಡರೆ ದೇವರು ಅವರಿಗೆ ಒಳ್ಳೆಯದನ್ನು ಮಾಡುತ್ತಾನೆ.

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಇವರಿಗೆ ಬೇರೆ ಉದ್ಯೋಗವೇ ಇಲ್ಲ. ನಮ್ಮ ಹೆಸರು ತೆಗೆದುಕೊಳ್ಳುವುದು ರಾಜಕೀಯ ಮಾಡುವುದು.

**(ಗೊಂದಲ)**

**ಉಪ ಸಭಾಪತಿಯವರು:-** ಅದನ್ನು ತಾವು ಮಾತನಾಡುವಾಗ ಮಾತನಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಮುಸಲ್ಮಾನರನ್ನು ಬಿಟ್ಟರೆ ಇವರಿಗೆ ಬೇರೆ ದಂಧೆ ಇಲ್ಲ. ನಮ್ಮ ಹೆಸರನ್ನು ತೆಗೆದುಕೊಳ್ಳಬೇಕು, ಇವರು ರಾಜಕೀಯ ಮಾಡಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯೊಂದರಲ್ಲಿಯೇ 15,000 ಎಕರೆ ರೈತರ ಜಮೀನಿನಲ್ಲಿ ಇವೊತ್ತಿನ ದಿವಸ ವಕ್ಫ್ ಹೆಸರು ಬಂದಿದೆ. ಈಗ ಬೇರೆ ಬೇರೆ ಕಡೆ ಬಂದಿದೆ.

ಕೋಲಾರ ಜಿಲ್ಲೆಗೆ ಮೊನ್ನೆಯ ದಿವಸ ಹೋಗಿ ಬಂದಿದ್ದೇನೆ. ಅಲ್ಲಿ ಚಿಂತಾಮಣಿಯಲ್ಲಿ ಒಬ್ಬ ರೈತರ ಜಮೀನಿನಲ್ಲಿ ಸುಮಾರು ನೂರು ವರ್ಷದ ಅರಳಿಮರ ಇದೆ. ಅಲ್ಲಿ ರೈತರು ಆ ಜಮೀನಿನಲ್ಲಿ ಉಳುಮೆ ಮಾಡಿ, ಬೆಳೆ ಬೆಳೆಯುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ಫೋಟೋ ಕಾಫಿ ನನ್ನ ಬಳಿ ಇದೆ. ನಾಳೆಯ ದಿವಸ ನಾನು ಅದನ್ನು ತಮಗೆ ತಲುಪಿಸುತ್ತೇನೆ. ಆದರೆ, ಅವರು 5 ತಲಾಂತರದಿಂದ ತಮ್ಮ ಕುಟುಂಬದಲ್ಲಿ ಯಾವ ಸದಸ್ಯರು ತೀರಿಕೊಂಡಿದ್ದಾರೋ ಅದಷ್ಟು ಜಾಗವನ್ನು ಸ್ಮಶಾನದ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಆ ಫೋಟೋಗಳನ್ನು ತೆಗೆದುಕೊಂಡು ಬಂದಿದ್ದೇವೆ. ಆದರೆ, ರಾತ್ರೋರಾತ್ರಿ ಸುಮಾರು 500 ಜನರು ಅಲ್ಲಿಗೆ ಹೋಗಿ, ಆ ಜಮೀನಿಗೆ ಬೇಲಿ ಹಾಕಿರುತ್ತಾರೆ. ಆ ಜಮೀನಿನಲ್ಲಿ ಕೋಸು ಮತ್ತು ಮೆಣಸಿನಕಾಯಿ ತರಕಾರಿ ಬೆಳೆದಿದ್ದರು. ಅದು ಯಾವುದೇ ತರಕಾರಿಯನ್ನು ಬಿಡಿಸಿಕೊಳ್ಳುವುದಕ್ಕೆ ಅವರನ್ನು ಬಿಡಲಿಲ್ಲ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಒಂದು ಪ್ರಸ್ತಾವನೆ...

**ಉಪ ಸಭಾಪತಿಯವರು:-** ತಾವು ಮಾನ್ಯ ವಿರೋಧ ಪಕ್ಷದ ನಾಯಕರನ್ನು ರಿಕ್ವೆಸ್ಟ್ ಮಾಡಿಕೊಳ್ಳಬಹುದು.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ನಾರಾಯಣಸ್ವಾಮಿಯವರೇ, ಒಂದು clarification ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಂದರೆ ಈ ರೀತಿ ಆಗುತ್ತಿದ್ದರೆ, ಇದನ್ನು ಕೇಳಬಾರದು ಎಂದು ಇದೆಯೇ?

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರ ಅನುಮತಿಯಿಲ್ಲದೇ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆಂದರೆ ಹೇಗೆ?

**ಉಪ ಸಭಾಪತಿಯವರು:-** ಅವರು ಯೀಲ್ಡ್ ಆದರೆ ಮಾತ್ರ ಬೇರೆಯವರಿಗೆ ಅವಕಾಶ. ಇಲ್ಲವಾದರೆ, ಯಾರಿಗೂ ಮಾತನಾಡಲು ಅವಕಾಶವಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಭೂತವನ್ನು ಕಿತ್ತು ಹಾಕುವಂತಹ ಒಂದು ವ್ಯವಸ್ಥೆ ಆಗಬೇಕು. ಇಲ್ಲವಾದರೆ ಏನು ಆಗುತ್ತದೆಯೆಂದರೆ... ನಾವು ಮತ್ತು ಅವರು ಶತ್ರುಗಳಲ್ಲ. ನಾವೆಲ್ಲರೂ ಸಹ ಸಹೋದರತ್ವದಿಂದ ಈ ದೇಶದಲ್ಲಿ ಬಾಳಬೇಕಾಗಿರುವವರು. ಈ ಸಣ್ಣಪುಟ್ಟ ವಿಚಾರಗಳು ಬರುವುದರಿಂದ ಏನಾಗುತ್ತದೆಯೆಂದರೆ, ವೈಷಮ್ಯಗಳು ಬೆಳೆಯುತ್ತಾ ಹೋಗುತ್ತಿರುತ್ತದೆ. ಇದಕ್ಕೆ ಸರ್ಕಾರವೂ ಉತ್ತರ ಕೊಡಬೇಕು. ನಾವು ಕೂಡ ಸಹಕಾರ ಕೊಡಬೇಕು. ಸಹಕಾರ ಕೊಡಬೇಕೆಂದು ಏನು ಮಾಡಬೇಕೆಂದರೆ, ಈ ಬೆಳವಣಿಗೆಯನ್ನು ನಾವು ಅಲ್ಲಿಂದ ಅಲ್ಲಿಗೆ ಕತ್ತರಿಸಬೇಕಾಗುತ್ತದೆ. ಬೆಳವಣಿಗೆ ಮುಂದೆ ಆಗಬಾರದು. ಅದಕ್ಕೆ ಏನು ಮಾಡಬೇಕೆಂದರೆ, ಈ ಪಹಣಿಯ ಕಾಲಂ 11 ರಲ್ಲಾಗಲೀ ಅಥವಾ ದಾಖಲೆಗಳಲ್ಲಿ ಉದ್ಭವವಾಗುವುದರ ಮೂಲವನ್ನು ಹುಡುಕಬೇಕು. ಈ ಬಗ್ಗೆ ನಮಗೆ ಗೊತ್ತಿದೆ. ಕೆಲವು ಕಡೆಗಳಲ್ಲಿ ನಿವೃತ್ತಿಯಾದ ಅಧಿಕಾರಿಗಳು ವಕ್ಫ್ ಬೋರ್ಡ್‌ನ ಜೊತೆಯಲ್ಲಿ ಕುಳಿತುಕೊಂಡು ಎಲ್ಲೆಲ್ಲಿ ಆಸ್ತಿಗಳು ಈ ರೀತಿ ಇದೆ, ಅದನ್ನು ಗುರ್ತಿಸುವುದು ಮತ್ತು ಅಧಿಕಾರಿಗಳ ಜೊತೆಯಲ್ಲಿ ಹೋಗಿ ಮಾತುಕತೆ ಆಡಿ, ಪಹಣಿಯ ಕಾಲಂ 11 ರಲ್ಲಿ ಬರೆಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

(722) 09.12.2024 (4.30) ಎಸ್‌ಕೆ-ಎಂ.ಡಿ (ಕೆಎಸ್) (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ಇದು ಹೊರಗಡೆ ಗೊತ್ತಾಗುತ್ತಿಲ್ಲ. ಇದು ಯಾವಾಗ ಗೊತ್ತಾಗುತ್ತದೆ ಎಂದರೆ, ಇದು ಸ್ಫೋಟವಾದಾಗ ಮಾತ್ರ ಹೊರಗಡೆ ಗೊತ್ತಾಗುತ್ತದೆ. ಅದು ಗೊತ್ತಾಗುವಷ್ಟು ಹೊತ್ತಿಗೆ ಇದು ಯಾವ ಪರಿಸ್ಥಿತಿಗೆ ಬರುತ್ತದೆ. ಎಂದರೆ, ಇನ್ನೂ ಬೀದಿ ಬೀದಿಗಳಲ್ಲಿ ನಾವು ಅಶಾಂತಿಯನ್ನು ನೋಡಬೇಕಾದಂತಹ ಪರಿಸ್ಥಿತಿಗಳು ಉದ್ಭವವಾಗುತ್ತವೆ. ಇದು ಆಗಬಾರದು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಇದು ಆಗಬಾರದು ಎನ್ನುವ ಕಾರಣಕ್ಕೆ ನಾನು ಹೇಳುತ್ತಿದ್ದೇನೆ. ಈಗಾಗಲೇ ಬೀಜವನ್ನು ಬಿತ್ತಿ ಬಿಟ್ಟಿದ್ದೀರಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಈಗ ಅದನ್ನೆಲ್ಲಾ ಬಿತ್ತಿಬಿಟ್ಟಿದ್ದೀರೇನು?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾನು ಏನು ನಿಮ್ಮನ್ನು ಎತ್ತಿ ಕಟ್ಟುವುದಕ್ಕೆ ಹೇಳುತ್ತಿಲ್ಲ. ಇದಕ್ಕೆ ನೀವು ಏನು ಮಾಡಬೇಕೆಂದರೆ, ಕೂಡಲೇ ಸರ್ಕಾರ ಒಂದು ನಿರ್ಧಾರಕ್ಕೆ ಬರಬೇಕು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಅಶಾಂತಿ ತರುವುದಕ್ಕೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸರ್ಕಾರ ಒಂದು ನಿರ್ಧಾರಕ್ಕೆ ಬಂದು...

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಈ ರೀತಿ ಹೇಳುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ರೈತರಿಗೆ ಸರಿಯಾದ ನ್ಯಾಯ ಸಿಗಬೇಕು. ಮಠ-ಮಾನ್ಯಗಳಿಗೂ ನ್ಯಾಯ ಸಿಗಬೇಕು.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಅವರ intention ಇದು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಯಾವ ಆಸ್ತಿಗಳು ನಿಮಗೆ ದಾನವಾಗಿ ಬಂದಿದೆ? ಅದು ಯಾವ ಕಾಲದಲ್ಲಿ ಬಂದಿದೆ? ಆ ದಾನ ಬಂದಿದ್ದು ನಮ್ಮದಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರು ಕಾಲ್ಪನಿಕ . . .ಅಲ್ಲಿ ಎಲ್ಲೋ ಒಂದು ಕಡೆ ಅಧಿಕಾರಿಗಳೂ ಕುಳಿತಿರಬಹುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರ ವಕ್ಫ್ ಬೋರ್ಡ್‌ಗೆ ಎಂದೋ, ಅದು ಯಾವುದೋ ಕಾಲದಲ್ಲಿ ದಾನ ಬಂದಿದ್ದು, ಅದನ್ನು ನಮಗೆ ವಾಪಸ್ಸು ಕೊಡಿ ಎಂದು ಕುಳಿತಿರಬಹುದು. ಆದರೆ ತಾವು ಅದನ್ನು ತಿಳಿದುಕೊಳ್ಳಬೇಕು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಅಲ್ಲಿ ಎಲ್ಲೋ ಒಂದು ಕಡೆ ಅಧಿಕಾರಿಗಳು ಕುಳಿತಿರಬಹುದು, ಅದು ಆಗುತ್ತಿರಬಹುದು, ಅದರ ಚಿತ್ರ ಬಂದರೆ ಮಾತ್ರ ಗೊತ್ತಾಗುತ್ತದೆ. ಅವರಲ್ಲಿ ಸಾಕ್ಷಿ ಇದ್ದರೆ ಕೊಡಲಿ. Hon'ble member cannot speak like this.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಆಗಲ್ಲಾ ರೀ, ನಾವು ಮಾತನಾಡುವಾಗ ನೀವು ಮಾತನಾಡುವುದಿಲ್ಲವೇ? ತಾವು ಹೀಗೆಯೇ ಮಾತನಾಡುವುದು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನಾನು ಮಾತನಾಡುವಾಗ, ನೀವು ಏಕೆ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ? ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಜವಾಬ್ದಾರಿಯಿಂದ ಮಾತನಾಡಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ತಾವು ಕುಳಿತುಕೊಳ್ಳಿ. ನಾನು ತಮ್ಮನ್ನು ನೋಡಿದ್ದೇನೆ. ಬಗ್ಗಲ್ಲ ಎನ್ನುವುದಲ್ಲ, ರಾತ್ರೋರಾತ್ರಿ ಬಗ್ಗುವುದು ನಿನಗೆ ಗೊತ್ತಿದೆ. **(ಗೊಂದಲ)** ಕೂತುಕೊಳ್ಳೋ ಅಲ್ಲಿ. ಕುಳಿತುಕೊಳ್ರೋ ನಾನು ತಮ್ಮನ್ನು ನೋಡಿದ್ದೇನೆ. ನನಗೆ ಮಾತನಾಡುವುದಕ್ಕೆ ಬಿಡಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

**(ಗೊಂದಲ)** ತಮಗೆ ಅವಕಾಶ ಮಾಡಿಕೊಟ್ಟಾಗ ಮಾತ್ರ ತಾವು ಮಾತನಾಡಿ. ತಾವು ಕುಳಿತುಕೊಳ್ಳಿ. ಜಗ್ಗಲ್ಲ, ಬಗ್ಗಲ್ಲ. ರಾತ್ರೋರಾತ್ರಿ ಬಗ್ಗೋದು ಗೊತ್ತಿದೆ. **(ಗೊಂದಲ)** ಫೋಟೋ ಹೊಡೆದುಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಬರೀ ಸತ್ಯಕ್ಕೆ ದೂರವಾದದ್ದನ್ನು ಹೇಳುತ್ತಿದ್ದಾರೆ. ಬಾಯಿ ಬಿಟ್ಟರೆ, ಬರೀ ಸತ್ಯಕ್ಕೆ ದೂರವಾದದು.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,..

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೋಡಿ ಒಂದು...

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರೇ, ತಾವು ತಮ್ಮವರಿಗೆ ಬುದ್ಧಿ ಹೇಳಿ. ತಗ್ಗಲ್ಲ ಬಗ್ಗಲ್ಲ. ರಾತ್ರೋರಾತ್ರಿ ಜಮೀನುಗಳನ್ನು ಹೊಡೆಯುವುದು. ರಾತ್ರೋರಾತ್ರಿ ಆ ಜಮೀನುಗಳನ್ನು ವಾಪಸ್ಸು ಕೊಡುವುದು. ನಮಗೂ ಗೊತ್ತಿದೆ. **(ಗೊಂದಲ)** ಇವರು ರಾತ್ರೋರಾತ್ರಿ ಜಮೀನುಗಳನ್ನು ಲೂಟಿ ಮಾಡುವವರು. **(ಗೊಂದಲ)** ಅದನ್ನು ಬೆಳಗ್ಗೆ ವಾಪಸ್ಸು ಕೊಟ್ಟುಬಿಟ್ಟು, ತಗ್ಗಲ್ಲ, ಬಗ್ಗಲ್ಲ. ಅದು ನಮಗೂ ಗೊತ್ತಿದೆ.

**(ಗೊಂದಲ)**

**ಉಪ ಸಭಾಪತಿಯವರು:-** ಅವರು ಹೇಳಿದಾಗ ಕೇಳಬೇಕೆಂದು ಸ್ವಲ್ಪವಾದರೂ ಇರಬೇಕಲ್ಲವೇ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರೇ, (ಗೊಂದಲ) ನನಗೆ ಮಾತನಾಡುವುದಕ್ಕೆ ಬಿಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ನಾನು ಪೀಠದಿಂದ ಎದ್ದು ನಿಂತಾಗ, ಎಲ್ಲರೂ ಕುಳಿತುಕೊಳ್ಳಬೇಕು ದಯವಿಟ್ಟು, ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕುಳಿತುಕೊಳ್ಳಿ.

**Sri PRIYANK KHARGE:** – Hon'ble Chairman sir, we object this. Hon'ble member cannot speak as he wants.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರೆಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ಉಪ ಸಭಾಪತಿಯವರು:-** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ:-** Retired officers ಕುಳಿತಿದ್ದಾರೆ... ರಾತ್ರೋರಾತ್ರಿ ಆಗುತ್ತದೆ ಎಂದು ಹೇಳಿದರೆ, ಇದರ ಅರ್ಥವೇನು?

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಅವರಿಗೆ ಆಡಳಿತ ಪಕ್ಷದವರು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

**ಉಪ ಸಭಾಪತಿಯವರು:-** ಆಡಳಿತ ಪಕ್ಷದವರು ನೀವು, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಕೇಳಿ, ತಾವು ಅದರ ಬಗ್ಗೆ ನೋಟ್ ಮಾಡಿಕೊಳ್ಳಿ. ಅದನ್ನು ನೀವು counter ಮಾಡಿ. ನಾವು counter ಮಾಡುವುದು ಬೇಡ ಎಂದು ಯಾರೂ ಹೇಳುವುದಿಲ್ಲ. ಆದರೆ ಮಾತನಾಡುವವರಿಗೆ ಅದನ್ನು ಪೂರ್ಣ ಮಾಡುವುದಕ್ಕೆ ಬಿಡಿ. ಈಗ ಏನೆಂದು ಹೇಳಿದರೆ, ನಿಲುವಳಿ ಸೂಚನೆ ಮಂಡಿಸಿದ್ದಾರೆ. .....

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ಷಮಿಸಬೇಕು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ತಾವು ಒಬ್ಬರು ಜವಾಬ್ದಾರಿ ಸ್ಥಾನದಲ್ಲಿರುವವರು. No, this is not right.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ದಾಟಿ. ಅವರು ಕೊಡುತ್ತಿರುವಂತಹ information.........

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಪ್ರತಿ ಸಂದರ್ಭದಲ್ಲಿ ಎದ್ದೇಳುತ್ತಿದ್ದೀರಿ. ತಾವು ಒಬ್ಬರು ಸಚಿವರಿದ್ದೀರಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಹೌದು. That is the reason I am standing here.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ತಾವು ಉತ್ತರ ಕೊಡುವಂತಹ ಸ್ಥಾನದಲ್ಲಿದ್ದೀರಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಯಾಗಿರುವುದಕ್ಕೆ, I am in my seat.

**ಉಪ ಸಭಾಪತಿಯವರು:-** ನೀವು ಉತ್ತರ ಕೊಡಬೇಕಾಗುತ್ತದೆ. ಆದರೆ ನಿಮ್ಮ ಹಿಂದಿನ ಸಾಲಿನಲ್ಲಿರುವ ಮಾನ್ಯ ಶಾಸಕರುಗಳು ಎದ್ದು ನಿಂತರೆ ಓಕೆ. ತಾವು ಎದ್ದು ನಿಲ್ಲುವುದು ಸರಿಯಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಬೇಕಾದರೂ ಮಾತನಾಡಬಹುದೇ?

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಇರಲಿ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಸಚಿವನಿದ್ದೇನೆ. ನಾನು ಅದಕ್ಕೆ ಎದ್ದು ನಿಂತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನೋಟ್ ಮಾಡಿಕೊಂಡು, ಅನಂತರ ತಾವೇ ಉತ್ತರ ಕೊಡಿ. **(ಗೊಂದಲ)** ತಮಗೆ ಬೇಕಾದಾಗೆಲ್ಲಾ ಎದ್ದು ನಿಂತುಕೊಂಡರೆ ಹೇಗೆ ಸದನದ ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯುವುದನ್ನು ಕಲಿಯಿರಿ. This is not right. ತಾವೆಲ್ಲರೂ ಬುದ್ಧಿವಂತಿರಿದ್ದೀರಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ...

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಕಡತವನ್ನು ನೋಡಿ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆಂದರೆ, Retired Officers ಕುಳಿತಿದ್ದಾರೆ ಮತ್ತು Revenue Officers ಕುಳಿತಿದ್ದಾರೆ. ಸದ್ಯಕ್ಕೆ ಯಾರಿಗೂ ಗೊತ್ತಿಲ್ಲ. ಫೋಟೋ ಬಂದ ಮೇಲೆ ಗೊತ್ತಾಗುತ್ತದೆ ಎಂದು ಹೇಳಿದ್ದಾರೆ, let him provide the names of the revenue and retired officers. Hon'ble Chairman sir, this is not acceptable. ಇದನ್ನು ನೀವು allow ಮಾಡಬಾರದು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಜವಾಬ್ದಾರಿ ಸ್ಥಾನದಲ್ಲಿದ್ದು, ಕೆಲಸ ಮಾಡುತ್ತಿದ್ದೀರಿ. ತಾವು ಹೀಗೆ ಮಾಡುವುದು ಎಷ್ಟು ಸರಿಯಿದೆ? ಇದು ಸರಿಯಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನೋಟ್ ಮಾಡಿಕೊಳ್ಳಿ. ಅನಂತರ ತಾವು answer ಕೊಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ತಾವು ಇದನ್ನು allow ಮಾಡಬೇಡಿ. ಅವರು ಇದರ ಬಗ್ಗೆ discussion ಮಾಡಲಿ. ಕಾಲ್ಪನಿಕವಾಗಿ ಮಾತನಾಡಿದರೆ ಏನೂ ಇಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು assumption ಮಾಡಿಕೊಂಡು ಅಪಾದನೆ ಮಾಡುವುದು ಸರಿಯಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್ ರವರೇ, ಒಂದು ನಿಮಿಷ. ನಾವು ಈ ಕುರ್ಚಿಯಲ್ಲಿ ಎಲ್ಲಾದರೂ ಅವರು ಈ ಒಂದು ಕಡತದಲ್ಲಿ ಸೇರಿಸಿಕೊಳ್ಳದಿದ್ದಂತಹ ವಿಚಾರಗಳನ್ನು ಮಾತನಾಡಿದರೆ, ಅವರು ಮಾತನಾಡುವುದನ್ನು cut ಮಾಡುವಂತಹ ಅಧಿಕಾರ ಇರುತ್ತದೆ.

**ಶ್ರೀ ಐವನ್ ಡಿ" ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, properties ಗಳು illegal acquire ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಏನು ಉತ್ತರ?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರುಗಳು unparliamentary ಏನಾದರೂ ಮಾತನಾಡುತ್ತಾರೆಂದರೆ, ಅದನ್ನು ನಿಲ್ಲಿಸುವಂತಹ ಕೆಲಸವನ್ನು ನಾವು ಮಾಡಬಹುದು. Otherwise, ಮಾನ್ಯ ವಿರೋಧ ಪಕ್ಷದವರು ಮಾತನಾಡುವಾಗ, ತಾವು ಏನು ಮಾಡಬೇಕೆಂದರೆ, ಕಿರುಹೊತ್ತಿಗೆ ಮಾಡಿ. ಇದನ್ನು ಎದುರಿಸುವುದಕ್ಕೆ ಆಡಳಿತ ಪಕ್ಷ ಸಮರ್ಥವಾಗಿದೆ. ಅದಕ್ಕೆ ಸಮರ್ಥವಾಗಿ ಕೌಂಟರ್ ಮಾಡುವುದಕ್ಕ ಆಡಳಿತ ಪಕ್ಷಕ್ಕೆ ಶಕ್ತಿಯಿದೆ. ಅದು ಆಗಿದ್ದಾಗ,

ಅವರಿಗೆ disturb ಏತಕ್ಕೆ ಮಾಡುತ್ತೀರಾ? ಅವರು ಮಾತನಾಡಲಿ. ವಿರೋಧ ಪಕ್ಷದವರು ಮಾತನಾಡುವಂತಹದ್ದನ್ನು ಕೇಳಿ. ಅದರಲ್ಲಿ ಏನಾದರೂ ಇದ್ದರೆ Point of Order ಅನ್ನು ತನ್ನಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ....

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, ತಾವು Point of Order ಅನ್ನು ತನ್ನಿ. Point of Order ಅನ್ನು ಒಳಗಡೆ ಇದೆ ಎಂದರೆ, ಅದನ್ನು ಅವರಿಗೆ ಮಾತನಾಡುವುದಕ್ಕೆ Otherwise, Point of Order ಅನ್ನು ತರದೇ, ತಾವು ಕೇಳಿ ನಿಲ್ಲಿಸಿ ಎಂದರೆ, ಅದು ಆಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಆ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಇದು ಮೇಲ್ಮನೆ ಮತ್ತು ಹಿರಿಯರ ಸದನ ಹಾಗೂ ಚಿಂತಕರ ಚಾವಡಿ. ಇಲ್ಲಿ ಚರ್ಚೆಯಾದಾಗ, ಸಮಸ್ಯೆಗೆ ಪರಹಾರವನ್ನು ಬಗೆಹರಿಸುವಂತಹದ್ದಾಗಬೇಕು. ಇಲ್ಲಿ ಭಾಷಣ ಮಾಡಿ, ಈಗಾಗಲೇ ಕರ್ನಾಟಕ ರಾಜ್ಯದ ಜನರಿಗೆ ಭಯದ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಇನ್ನೂ ಒಂದಿಷ್ಟು ಭಯದ ವಾತಾವರಣ ಸೃಷ್ಟಿಯಾಗಬಾರದು. ಸಮಸ್ಯೆಗೆ ಪರಿಹಾರ ಇರಬೇಕಾದರೆ, ಆ ರೀತಿ ಇಲ್ಲಿ ಭಾಷಣ ನಡೆಯಬೇಕು. ಈ ಮೇಲ್ಮನೆಯನ್ನು "ಚಿಂತಕರ ಚಾವಡಿ" ಎಂದು ಹೇಳಿಸಿಕೊಳ್ಳುವುದು ಏಕೆ?

**ಉಪ ಸಭಾಪತಿಯವರು:–** ಆಯಿತು. ನಾವೆಲ್ಲರೂ ಇದನ್ನು ಅರ್ಥ ಮಾಡಿಕೊಂಡರೆ, ಮಾನ್ಯ ಹರಿಪ್ರಸಾದ್‌ರವರೇ, ಇಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಭಯದ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರೆಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ಉಪ ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ಕುಳಿತುಕೊಳ್ಳಿ. ಮಾನ್ಯ ಹರಿಪ್ರಸಾದ್‌ರವರು ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಭಯದ ವಾತಾವರಣವನ್ನು ಸೃಷ್ಟಿ ಮಾಡಿದವರು ನೀವು.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಪೂಜಾರ್‌ರವರೇ, ತಮಗೂ ಕೂಡ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈ ಒಂದು ನಿಲುವಳಿ ಸೂಚನೆಗೆ ಯಾರೆಲ್ಲಾ ಸಹಿ ಮಾಡಿದ್ದಾರೋ, ತಮಗೆಲ್ಲರಿಗೂ

ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆಡಳಿತ ಪಕ್ಷದವರು ಇದನ್ನು ಖಂಡಿತವಾಗಿಯೂ ತಪ್ಪಿಸುವಂತಹ ಪ್ರಶ್ನೆಯಿಲ್ಲ. ಮಾನ್ಯ ಹರಿಪ್ರಸಾದ್‌ರವರೇ, ತಾವು ಕೂಡ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂತಹವರು. ತಾವು ಮಾತನಾಡಬೇಕೆಂದರೆ, ಇದರ ಬಗ್ಗೆ ನೋಟ್ ಮಾಡಿಕೊಳ್ಳಿ. ಅದರ ಬಗ್ಗೆ ಅವರು interfere ಆದರೆ ನಾನು ಅವರನ್ನು ಕೂರಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದವರಿಗೆ ಮನವಿ ಮಾಡುವುದೇನೆಂದರೆ, ಅವರು ಚರ್ಚೆ ಮಾಡುವಾಗ, ಒಂದು ಸಂದೇಶವನ್ನು ಕೊಡುವಾಗ ಭಯದ ವಾತಾವರಣವನ್ನು ಸೃಷ್ಟಿ ಮಾಡಬೇಡಿ. ಸಮಸ್ಯೆಗೆ ಏನು ಪರಿಹಾರ ಮಾಡಬೇಕೆಂಬುದರ ಬಗ್ಗೆ ಹೇಳಿದರೆ, ನಾವು ಅದರ ಬಗ್ಗೆ ಮಾತನಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಭಯದ ವಾತಾವರಣದ ಬಗ್ಗೆ ಮಾತನಾಡಲೇ ಇಲ್ಲ.

**(ಗೊಂದಲ)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ..

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾಳೆ...

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಹೇಳುವುದೆಲ್ಲಾ ಹೇಳಿದ್ದಾಗಿದೆ. ತಾವು ಕುಳಿತುಕೊಳ್ಳಿ. ತಾವು ಪ್ರತಿ ಬಾರಿ ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಹತ್ತಿರ ಮನವಿ ಮಾಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆ? ಯಾರೂ ಪದೇ ಪದೇ ಏಳಬಾರದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ತಮ್ಮ ಬಳಿ ನನ್ನದೊಂದು ಕೊನೆಯ ಮನವಿ.

**ಉಪ ಸಭಾಪತಿಯವರು:-** ಆಯಿತು ಮಾನ್ಯ ಸಚಿವರೇ, ತಾವು ಹೇಳಿಬಿಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ತಾವು ಕಡತವನ್ನು ತೆಗೆಸಿ ನೋಡಿಸಿ. ಮಾನ್ಯ ವಿರೋಧ ಪಕ್ಷದ ನಾಯಕರು retired officers ಮತ್ತು Government officials ಜೊತೆ ಕುಳಿತುಕೊಂಡು ಹೀಗೆ ಮಾಡುತ್ತಿರಬಹುದು, ಅದು ನಮಗೆ ಗೊತ್ತಾಗುತ್ತಿಲ್ಲ. ಅದರ ಫೋಟೋ ಹೊರಗಡೆ ಬಂದಾಗ ಮಾತ್ರ ನಮಗೆ ಗೊತ್ತಾಗುತ್ತದೆ. ಇದರಿಂದ ಅಶಾಂತಿ ಮೂಡುತ್ತದೆ ಎಂದು ಹೇಳಿದರೆ ಏನು ಅರ್ಥ? Is that correct? ನಾವು ದಾಖಲೆ ಸಮೇತ ತೋರಿಸಿದ್ದೇವೆ ಮತ್ತು ಓದಿದ್ದೇವೆ. ಯಾವ ಪತ್ರಿಕೆಯಲ್ಲಿ ಬಂದಿದೆ ಎಂಬ ಬಗ್ಗೆ

ಅವರು ಹೇಳಲಿ ಅಥವಾ ಇವರ ಹತ್ತಿರ ಫೋಟೋ ಇದೆಯೇ? ಇವರ intelligence ಮೇಲೆ ಕೇಂದ್ರ ಸರ್ಕಾರ ಏನಾದರೂ ಹೇಳಿದ್ದಾರೆಯೇ? ಆ ರೀತಿ ಮಾತನಾಡಿದರೆ, ನಾವು ಕೂಡ ಮಾತನಾಡಬಹುದು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವಾಗ ಅದನ್ನು ಹೇಳಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸದಸ್ಯರೇ, ಒಂದು ನಿಮಿಷ. ನಾನು ಪೀಠಕ್ಕೆ ಮಾತನಾಡುತ್ತಿದ್ದೇನೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಏಕೆ ಅವರು ಕೈ ತಿರುಗಿಸಿ ಮಾತನಾಡುತ್ತಿದ್ದಾರೆ?

**(ಗೊಂದಲ)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಪದೇ ಪದೇ ನನಗೆ ಏತಕ್ಕೆ ಎದ್ದು ನಿಂತು ಮಾತನಾಡುತ್ತಿದ್ದೀರಿ ಎಂದು ತಾವು ನನಗೆ ಹೇಳಿದಿರಿ. ನಾನು ಮಂತ್ರಿಯಾಗಿರುವುದರಿಂದ ಈ ಸದನಕ್ಕೆ ತಪ್ಪು ಸಂದೇಶ ಹೋಗಬಾರದು ಎನ್ನುವ ಉದ್ದೇಶದಿಂದ ಎದ್ದುನಿಂತು ಮಾತನಾಡುತ್ತಿದ್ದೇನೆ. ಇಲ್ಲವಾದರೆ ಮಾಧ್ಯಮ ಸ್ನೇಹಿತರು ಇದನ್ನೇ ಪ್ರಿಂಟ್ ಮಾಡುತ್ತಾರೆ. ಈಗ ನಾನು ಎದ್ದು ಮಾತನಾಡದಿದ್ದರೆ, only one side of the story will be printed.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಜಮೀನು ಎಂದಾಕ್ಷಣ ಪಾಪ ಅವರಿಗೆ ನೋವಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ನೀವು ಏನು ಹೇಳುತ್ತಿದ್ದೀರಿ ಅದನ್ನು ಕೇಳಿ ಕೊಡಿ ಎನ್ನುವುದಕ್ಕೆ ತಮ್ಮ ಬಳಿಯೇ ಉತ್ತರವಿದೆ. ಅದಕ್ಕೂ ತಮಗೂ ಕೂಡ ಅವಕಾಶವಿದೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಅಷ್ಟರಲ್ಲಿ ಇವರೆಲ್ಲರೂ ಇವರದು ಇದೇ ಸತ್ಯವೆಂದು ಪ್ರಿಂಟ್ ಮಾಡಿಸಿಬಿಡುತ್ತಾರಲ್ಲ.

**ಉಪ ಸಭಾಪತಿಯವರು:–** ಅದರ ಬಗ್ಗೆ ತಾವು ಕೇಳಿ ಪ್ರಶ್ನೆ ಮಾಡಿ. ಅವರು ಮಾತನಾಡುವಾಗ ಮಧ್ಯದಲ್ಲಿ ಎದ್ದು ನಿಂತು ಪ್ರಶ್ನೆ ಮಾಡಿದರೆ, ಉತ್ತರ ಸಿಗುವುದಿಲ್ಲ. ಆಗ ತಾವು ಮಾತನಾಡಿ. ನಮಗೆ ದಾಖಲೆ ಕೊಡಿ ಎಂದು ಕೇಳಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, my request to the Leader of Opposition is, facts ಗಳ ಮೇಲೆ ಚರ್ಚೆ ಮಾಡಿ. Misinformation ಆಧಾರದ ಮೇಲೆ ಚರ್ಚೆ ಮಾಡಬೇಡಿ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಆಯಿತು. ತಾವು ಕುಳಿತುಕೊಳ್ಳಿ. ಮಾನ್ಯ ಶರವಣರವರೇ, ತಾವು ಮಾತನಾಡಿ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಒಂದು ಮಾತನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ತಮ್ಮದೇ ಆದ ಸರ್ಕಾರ ಮತ್ತು ವಿರೋಧ ಪಕ್ಷದವರು ನಾವು.

ವಿರೋಧ ಪಕ್ಷಗಳು ಸಂವಿಧಾನದ ಜೀವಾಳ ಎನ್ನುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಸೌಜನ್ಯವಾಗಿ ಕೇಳಿಸಿಕೊಳ್ಳಬೇಕು. ತಮ್ಮ ಸರದಿ ಬಂದಾಗ, ತಾವು ಮಾತನಾಡುವುದನ್ನು ಯಾರು ಬೇಡ ಎನ್ನುತ್ತಾರೆ?

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಹರಿಪ್ರಸಾದ್ ಸಾಹೇಬರು ಸದನದಲ್ಲಿಯೇ ಕುಳಿತಿದ್ದರು. ಅವರು ಏನೆಲ್ಲಾ ಮಾತನಾಡುವ ಮೂಲಕ ಚುಚ್ಚಿದ್ದಾರೆಂಬುದರ ಬಗ್ಗೆ ನಾವೆಲ್ಲಾ ಕೇಳಿಸಿಕೊಂಡಿಲ್ಲವೇ?

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಶರವಣನವರ ಪಾಠವನ್ನು ನೋಡಿಕೊಳ್ಳಬೇಕು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಒಂದು ಗೌರವಾನ್ವಿತ ಸಂವಿಧಾನದ ಹುದ್ದೆಯಲ್ಲಿರುವಂತಹ ವಿರೋಧ ಪಕ್ಷದ ನಾಯಕರನ್ನು ತಾವು ಕುಳಿತುಕೊಳ್ಳಿ ಎನ್ನುವುದು ಎಷ್ಟರಮಟ್ಟಿಗೆ ಸರಿ? ತಾವು ಸತ್ಯ ಮಾತನಾಡಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಏನು ಗೌರವ ಇಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಸತ್ಯವನ್ನು ಸಂವಿಧಾನಿಕವಾಗಿ ಮಾತನಾಡಿದರೆ, ನಾವು ಕೇಳಿಸಿಕೊಳ್ಳುವುದಕ್ಕೆ ತಯಾರಿದ್ದೇವೆ. **(ಗೊಂದಲ)** ಅವರಿಗೆ ಗೌರವದಿಂದ ನಡೆದುಕೊಳ್ಳುವಂತೆ ಹೇಳಿ.

**ಉಪ ಸಭಾಪತಿಯವರು:-** ಆಯಿತು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಕುಳಿತುಕೊಳ್ಳಿ. ಅನಂತರ ಮಾತನಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಅವರು ಹೇಳಿದ್ದನ್ನು ಕೇಳಿ, ಅವರು ಏನು ಹೇಳುತ್ತಾರೋ, ಅದರ ಪ್ರಕಾರ ಹೇಳಬೇಕೆಂಬುದು ಕಾಣುತ್ತದೆ. ನಾನು facts ಹೇಳಿದ್ದಕ್ಕೆ ಐದು ಎಕರೆ ಜಮೀನು ವಾಪಸ್ಸು ಬಂದಿದ್ದು. ನಾನು facts ಹೇಳಿದ್ದಕ್ಕೆ ಆ ಹದಿನಾಲ್ಕು ಸೈಟುಗಳು ವಾಪಸ್ಸು ಬಂದಿದ್ದು. ಇದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಸಲೀಂ ಅಹಮದ್:-** ಅಶಾಂತಿ ಎಂದು ಹೇಳಿದ್ದರಲ್ಲ, ಅದು ಸರಿಯಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಹೇಳಿದ್ದನ್ನು ಅವರು ಸಹಿಸಿಕೊಳ್ಳಬೇಕು. Unconstitutional ಏನು ಹೇಳುತ್ತಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ:-** ಸತ್ಯಕ್ಕೆ ದೂರವಾದದ್ದು ...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾವು ಸತ್ಯಕ್ಕೆ ದೂರವಾದದ್ದನ್ನು ಹೇಳುತ್ತಿಲ್ಲ. ನಾನು ಹೇಳಿದ್ದೇನೆಂದರೆ, ಅಶಾಂತಿ ಆಗಬಾರದು. ಅದಕ್ಕಾಗಿ ನಾವು ಪ್ರಯತ್ನ ಮಾಡಬೇಕೆಂದು ಹೇಳಿದೆ. ಅಶಾಂತಿ ಎಂದು ಹೇಗೆ ತೆಗೆದುಕೊಂಡಿರಿ? ನೀವು ತೆಗೆದುಕೊಂಡರೆ, ನಾನು ಏನು ಮಾಡಲಿ? ನಾನು ಹೇಳುವುದು ನನ್ನ ಧರ್ಮ. ಅದನ್ನು ಕೇಳುವುದು ಬಿಡುವುದು ನಿಮ್ಮ ಧರ್ಮ. ಆದರೆ ನಾನು ಬೀದಿ ಬಸವ ಅಲ್ಲ. ನಾನು ಬೀದಿ ಬಸವನ ತರ ಮಾತನಾಡುವುದಿಲ್ಲ. ಯಾರೇ ಮಾತನಾಡಿದರೂ ನಾನು ಆಲಿಸುತ್ತೇನೆ. ನಾನು ಹೇಳಿದ್ದನ್ನು ಕೇಳುವಂತಹ ತಾಳ್ಮೆಯನ್ನು ದೇವರು ನಿಮಗೆ ಕೊಡಲಿ. ನಮಗೇನೂ ಚಿಂತೆ ಇಲ್ಲ. ರೈತರು ಕಂಗಲಾಗಿದ್ದಾರೆ. ರಾಜ್ಯದಲ್ಲಿ ಒಂದು ರೀತಿಯ ಅಶಾಂತಿಯ ವಾತಾವರಣ ಸೃಷ್ಟಿಯಾಗುತ್ತಿದೆ. ಅದು ಆಗಬಾರದು. ಸರ್ಕಾರ ಅದಕ್ಕೆ ಉತ್ತರ ಕೊಡಬೇಕು. ನಾವು ಕೂಡ ಸಹಕಾರ ಕೊಡಬೇಕು.

(ಮುಂದು)

(723) 09.12.2024, 4.40, TCH-AK (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):**

ಆದರೆ, ಆ ವಿಷಯಗಳು ನಿಮಗೂ ಕೂಡ ಗೊತ್ತಿದೆ. ನಮಗೆ ಅನಿಸಿದ್ದನ್ನು ಮತ್ತು ಜನರು ನಮಗೆ ತಿಳಿಸಿದ್ದನ್ನು ತಮ್ಮ ಗಮನಕ್ಕೆ ತರುತ್ತೇವೆ. Ultimately, ಸರ್ಕಾರ ನೀವು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ಅದು ನಮಗೆ ಬೇಕಾಗಿರತಕ್ಕಂಥದ್ದು. ನಾವು ರಾಜ್ಯದ ಎಲ್ಲಾ ಕಡೆಗಳಲ್ಲಿ tour ಮಾಡಿದ್ದೇವೆ. ಎಲ್ಲಾ ಕಡೆ ಜನ ನಮಗೆ ಏನು ಹೇಳಿದ್ದಾರೋ ಅದರ ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಸಾವಿರಾರು ಎಕರೆಗಳು ಇದ್ದಕ್ಕಿದ್ದಂತೆ ಉದ್ಭವವಾಗಿವೆ, ಇದು ನನ್ನ ಪ್ರಶ್ನೆ ಇರುವುದು. ಇದು ಬಿಟ್ಟು ಏನಿದೆ? ಈಗ ವಕ್ಫ್‌ಗೆ ಹಿಂದಿನಿಂದ ದಾನ ಬಂದಿರುವುದು ಇರಬಹುದು, ಅವರು ದರ್ಗ ಕಟ್ಟಿರುವುದು ಇರಬಹುದು ಅಥವಾ ಖಬರಸ್ತಾನಗಳಿರಬಹುದು ಅದನ್ನೆಲ್ಲಾ ರಕ್ಷಣೆ ಮಾಡುವುದರಲ್ಲಿ ಏನೂ ಇಲ್ಲ. ಯಾವುದೇ ಸರ್ಕಾರ ಇದು ವಕ್ಫ್‌ದು ಅಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಹಿಂದೆ ಬಂದಿರತಕ್ಕಂಥದ್ದು ಹೌದು ನಿಜ. ಆದರೆ 1974ರ ನಂತರ ಬಂದಿರತಕ್ಕಂಥದ್ದು ಇದೆಯಲ್ಲಾ ಇದನ್ನು ಸೃಷ್ಟಿಸಲಾಗಿದೆ. ಈ ಸೃಷ್ಟಿಗೆ ಉತ್ತರ ಕೊಡಬೇಕಾಗಿರುವವರು ಯಾರು? ಅದು 1974ರಲ್ಲಿ ಬಂದಿದೆ. ಅವೊತ್ತಿನಿಂದ ಪಹಣಿಯಲ್ಲಿ ಏಕೆ ನಮೂದು ಆಗಲಿಲ್ಲ? ಅದು ಅವೊತ್ತೇ ಆಗಿದ್ದರೆ ಇತ್ಯರ್ಥ ಅವೊತ್ತೇ ಆಗಿಹೋಗುತ್ತಿತ್ತು. ಸುಮಾರು 50-60 ವರ್ಷಗಳ ಕಾಲ ಹಾಗೆಯೇ ಸುಮ್ಮನೆ ಬಿಟ್ಟು ಸುಮಾರು 50 ವರ್ಷಗಳಾದ ನಂತರ ಈಗ ಒಮ್ಮೆಲೆ ರೈತರಿಗೆ ಇದು ನಿನ್ನದು ಅಲ್ಲವೆಂದು ಹೇಳಿದರೆ ಅವರು ಎದೆಬಡಿದುಕೊಂಡು ಸಾಯುತ್ತಾರೆ. ಇದನ್ನು ನಾವೆಲ್ಲಾ ನೋಡಬೇಕೇ? ಇನ್ನು ಮಠ-ಮಾನ್ಯಗಳದ್ದು ಅಷ್ಟೇ. ಅವರೆಲ್ಲಾ ಕಾಲ ಕಾಲದಿಂದೆಲ್ಲಾ ಉಳಿಸಿಕೊಂಡು ಬಂದಿರುತ್ತಾರೆ. ಇವತ್ತಿಗೂ ಕೂಡ ಎಷ್ಟೋ ಜನರು ಭೂಮಿ ಇಲ್ಲದೇ ಇರತಕ್ಕಂಥ ಜನ ನಮ್ಮಲ್ಲಿ ಇದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 1 ಎಕರೆ ಅಥವಾ 2 ಎಕರೆ ಜಾಗ ಕೊಟ್ಟಿದ್ದಾರೆ. ಅದನ್ನು ಕೂಡ ಇತ್ತೀಚೆಗೆ ಕೊಟ್ಟಿರುವುದು. ಅದರಲ್ಲೂ

ಕೂಡ ವಕ್ಫ್ ಎಂದು ನಮೂದಾದರೆ ಅವರ ಪರಿಸ್ಥಿತಿ ಏನಾಗಬೇಕು? ಅವರಿಗೆ ಖರೀದಿ ಮಾಡಿಕೊಟ್ಟಿರತಕ್ಕಂಥ ಭೂಮಿಗಳಾಗಿವೆ. ಇಂತಹ ಪರಿಸ್ಥಿತಿಯನ್ನು ಇವತ್ತಿನ ದಿವಸ ನಾವು ಎದುರು ನೋಡುತ್ತಿದ್ದೇವೆ. ಆ ಕಾರಣದಿಂದ ಈ ವಕ್ಫ್‌ನಲ್ಲಿ ಯಾವ ರೀತಿ ಬಂತು ಇದೆಲ್ಲಾ ಕೂಡ investigation ಆಗಬೇಕು. ನೀವು ಯಾವುದಕ್ಕೆ ಕೋಡುತ್ತೀರೋ ಕೊಡಿ. ಯಾವ ಕಾರಣಕ್ಕಾಗಿ ವಕ್ಫ್ ಎಂದು ಬಂದಿದೆ ದಾಖಲೆ ಕೊಡಿ. ಈಗ ತಹಸೀಲ್ದಾರ್‌ಗೆ ಹೋಗುತ್ತದೆ. ಇಲ್ಲವೆಂದರೆ ಅದು ಕೋರ್ಟ್‌ಗೂ ಹೋಗುತ್ತದೆ. ಕೋರ್ಟ್ ಹೋಗಿ ಅಲ್ಲಿ ಕೇಳಿದರೆ ರೈತರ ಹತ್ತಿರ ದಾಖಲೆಗಳು ಇದ್ದರೂ ಕೂಡ ಆ ದಾಖಲೆ ಇಲ್ಲ, ಅದು ನಮ್ಮದು. ನಮ್ಮ ಗೆಜೆಟ್‌ನಲ್ಲಿದೆ. ಆ ಸರ್ವೇ ನಂಬರ್ ವಕ್ಫ್‌ನ ಬುಕ್‌ನಲ್ಲಿದೆ. ಆದ್ದರಿಂದ ಅದು ನಮ್ಮದು ಎಂದು ಹೇಳಿದರೆ ಹೇಗೆ? ಇದಕ್ಕೆ ಸರ್ಕಾರ ಏನು ಮಾಡಬೇಕು. ಕೋರ್ಟ್‌ಗಳು ಏನು ಮಾಡಬೇಕು? ನಮ್ಮಲ್ಲಿ ಸರ್ಕಾರ ಅಧಿಕಾರ ನಡೆಸುತ್ತದೆ. ಸರ್ಕಾರದ ತೀರ್ಮಾನಗಳನ್ನು ಪ್ರಶ್ನಿಸುವಂತಹ ಕೋರ್ಟ್‌ಗಳಿವೆ. ನ್ಯಾಯಾಧೀಕರಣಕ್ಕೆ ಪರಮಾಧಿಕಾರವಿದೆ. ಅದನ್ನು ಮೀರಿದ ಪರಮಾಧಿಕಾರವನ್ನು ಯಾವುದಕ್ಕಾದರೂ ಕೊಡಬಹುದೇ ನಮ್ಮ ದೇಶದಲ್ಲಿ? ಹಾಗಿದ್ದರೆ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರು ಬರೆದ ಸಂವಿಧಾನಕ್ಕೆ ಯಾವ ರೀತಿಯ ಬೆಲೆ ಇದೆ? ಇವೆಲ್ಲಾ ಪ್ರಶ್ನೆಗಳು ನಮಗೆ ಮೂಡುತ್ತವೆ. ಆ ಕಾರಣದಿಂದ ಇವತ್ತು ಏನು ವಕ್ಫ್ ಬೋರ್ಡ್‌ನಲ್ಲಿ ಈ ರೀತಿಯ ವಿಚಾರಗಳು ಬರುತ್ತಿವೆಯೋ ಅದರ ಮೂಲಕ್ಕೆ ಹೊಕ್ಕಿ ನೋಡಬೇಕು. ಏಕೆ ಇದು ಆಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಔಷಧಿ ಅಲ್ಲಿ ಬೇರಿಗೆ ಕೊಡಬೇಕು. ಇಲ್ಲದಿದ್ದರೆ ಇವತ್ತಿನ ದಿವಸ ಜನ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಇವತ್ತಿನ ದಿವಸ ಜನ ಕೋರ್ಟ್‌ಗಳಿಗೆ ಹೋಗುತ್ತಿದ್ದಾರೆ. ಅನೇಕ ಕೋರ್ಟ್‌ಗಳಲ್ಲಿ ಅದು ಒಪ್ಪಿಗೆಯೇ ಆಗುತ್ತಿಲ್ಲ. ಆ ಕೇಸ್‌ನ್ನೇ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಏನು ಮಾಡಬೇಕು? ಈ ಕಾರಣದಿಂದಲೇ ಇವತ್ತಿನ ದಿವಸ ಜನರು ಏನು ನಮ್ಮ ಗಮನಕ್ಕೆ ತಂದಿದ್ದಾರೆ ಅದನ್ನು ಸದನದಲ್ಲಿ ಇಡುತ್ತಿದ್ದೇವೆ. ವಿಜಯಪುರ ವಕ್ಫ್ ವಿರುದ್ಧ ನಿಲ್ಲದ ಹೋರಾಟ ಆದಾಗ ಅಲ್ಲಿ ಸುಮಾರು 15,000 ಎಕರೆ ಜಮೀನುಗಳಲ್ಲಿ ವಕ್ಫ್ ಎಂದು ಬಂದಿದೆ. ಈ 15,000 ಎಕರೆಗಳನ್ನು ದಾನವಾಗಿ ಕೊಟ್ಟವರು ಯಾರು? ಹಾಗಿದ್ದ ಮೇಲೆ ಊರಿಗೆ ಊರುಗಳೇ ವಕ್ಫ್ ಆಗಿ ಕುಳಿತಿವೆ. ಈ ರೀತಿ ಆದಲ್ಲಿ ಆ ಗ್ರಾಮಗಳ ಗತಿಯೇನು? ಆ ಮನೆಗಳ ಗತಿಯೇನು? ಮಾನ್ಯ ಸಭಾಪತಿಯವರೇ, ನಾವು ಇದನ್ನು ಪ್ರಶ್ನೆ ಮಾಡಬೇಕಲ್ಲವೇ? ಆ ಕಾರಣದಿಂದಲೇ ಇವತ್ತಿನ ದಿವಸ ವಕ್ಫ್‌ಗೆ ಏನು ಪರಮಾಧಿಕಾರವನ್ನು ಕೊಟ್ಟಿದೆ ಅದನ್ನು ಮೊಟಕುಗೊಳಿಸಬೇಕು. ಆಮೇಲೆ ಅನ್ವರ್ ಮಾನಪ್ಪಾಡಿ ರಿಪೋರ್ಟ್ ಏನಿದೆ, ಆ ರಿಪೋರ್ಟ್ ಪ್ರಕಾರ ನಿಮ್ಮ ಹಾದಿಯಲ್ಲಿ ಯಾರ್ಯಾರು ಅದರಲ್ಲಿ ಹೆಸರುಗಳನ್ನು ನಮೂದು ಮಾಡಿ 26,000 ಎಕರೆಗಳನ್ನು ಬೇರೆ ಬೇರೆಯವರು ಕಬಳಿಸಿದ್ದಾರೆಂದು ಹೇಳಿದ್ದಾರಲ್ಲಾ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಆ ಜಮೀನುಗಳನ್ನು ನೀವು ಭದ್ರಮಾಡಿಕೊಳ್ಳುವುದನ್ನು ನೋಡಿ. ಸುಮಾರು 15,000 ಅಥವಾ 20,000 ಎಕರೆ ಜಮೀನು ಕರ್ನಾಟಕದಲ್ಲೇ 3 ಲಕ್ಷ ಎಕರೆ ವಕ್ಫ್ ಆಸ್ತಿ ಆಗುತ್ತದೆ. ಇದು ಎಲ್ಲಿಂದ ಬಂತು? ಇದು ಪ್ರಶ್ನೆ ಇರತಕ್ಕಂಥದ್ದು. ನಮಗೆ ಎಲ್ಲರೂ ಒಂದೇ. ನಾನು ಅದಕ್ಕೇ ಹೇಳಿದೆನು ಬೌದ್ಧರು ಇರಬಹುದು, ಕ್ರೈಸ್ತರು ಇರಬಹುದು ನಮಗೆ ಎಲ್ಲರೂ ಒಂದೇ. ಅವರಿಗೂ ಕೂಡ ಇದೇ ರೀತಿ ಇದ್ದರೆ ಇದು ಯಾವ ಜಮೀನುಗಳು? ಅವರಿಗೆ ಮಾತ್ರ ಇಲ್ಲ, ಇವರಿಗೆ ಮಾತ್ರ ಇದೆ. ಇದು ಯಾವ ಪ್ರಶ್ನೆ

ಆಯಿತು. ಇಂತಹ ಪರಿಸ್ಥಿತಿಯನ್ನು ನಿಭಾಯಿಸಬೇಕಾದರೆ ಸರ್ಕಾರ ಒಂದು ಸೂಕ್ತ ನಿರ್ಧಾರಕ್ಕೆ ಬರಬೇಕು. ಅದಕ್ಕೆ ನಾನು ಹೇಳುವುದೇನೆಂದರೆ, ನೀವು ಪಹಣಿಯಲ್ಲಿರುವ ಹೆಸರನ್ನು ತೆಗೆದುಬಿಟ್ಟರೆ ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಒಂದು ಬ್ಯಾಂಕ್‌ನಲ್ಲಿ ರೈತನೊಬ್ಬ ಸಾಲ ತೆಗೆದುಕೊಳ್ಳುತ್ತಾನೆ. ಆ ಸಾಲವನ್ನು ಅವನು ಕಟ್ಟಬೇಕಾಗುತ್ತದೆ. ಅವನಿಗೆ ಒಂದು ನೋಟೀಸ್ ಬರುತ್ತದೆ. ಆ ನೋಟೀಸ್ ಬಂದ ಕೂಡಲೇ ಆ ರೈತ ಸರ್, ಇವತ್ತು ನನಗೆ ಕಟ್ಟುವುದಕ್ಕೆ ಆಗಲಿಲ್ಲ. ದಯವಿಟ್ಟು ಮತ್ತೊಂದು ಅವಕಾಶ ಕೊಡಿ ನಾನು ಕಟ್ಟುತ್ತೇನೆಂದು ಹೇಳುತ್ತಾರೆ. ಆಗ ಬ್ಯಾಂಕ್‌ನವರು ಆ ನೋಟೀಸ್‌ನ್ನು withdraw ಮಾಡಿಕೊಳ್ಳುತ್ತಾರೆ. ಆದರೆ ಆ ರೈತ ಇನ್ನು ಮುಂದೆ ಆ ಸಾಲವನ್ನು ಕಟ್ಟುವಂತಿಲ್ಲವೇ? ಆ ರೈತ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ಸೇರಿಸಿ ಕಟ್ಟಬೇಕಾಗುತ್ತದೆ. ಅದೇರೀತಿ ನೀವೇನಾದರೂ ಬರೀ ಪಹಣಿಯಲ್ಲಿರುವುದನ್ನು ತಿದ್ದಿದ್ದರೆ ಅದು ಏನೂ ಹೋಗುವುದಿಲ್ಲ. ಇವತ್ತಲ್ಲಾ ನಾಳೆ ದಿವಸ ಮತ್ತೇ ಅದು ಬರುತ್ತದೆ. ಸಮಸ್ಯೆಯನ್ನು ನಾವು ಮುಂದೂಡುವುದರ ಬದಲು ಸಮಸ್ಯೆಗೆ ಈಗ ಪರಿಹಾರ ಕೊಡಬೇಕಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ಇವತ್ತಿನ ದಿವಸ ಜಂಟಿ ಸದನ ಸಮಿತಿಯನ್ನು ಕರೆದಿದೆ. ಅಲ್ಲಿಯೂ ಕೂಡ ಏನು ಮಾಡಬೇಕೆಂದು ಅವಲೋಕನ ನಡೆದಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಇದಕ್ಕೆ ನೀವು ಪರಿಹಾರ ಕೊಡುವುದಕ್ಕೆ ಆಗದಿದ್ದರೆ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆಯಿರಿ. ನೀವೇನು ತೀರ್ಮಾನ ತೆಗೆದುಕೊಳ್ಳುತ್ತಿದ್ದೀರಿ... ಅದರಲ್ಲಿ ನನ್ನ ರಾಜ್ಯದಲ್ಲಿಯೂ ಕೂಡ ಗೊಂದಲ ಪ್ರಾರಂಭವಾಗಿದೆ. ಇದಕ್ಕೂ ಕೂಡ ನಾವು ಪರಿಹಾರಗಳನ್ನು ಕೊಡಬೇಕಾಗಿದೆ. ಆ ಕಾರಣದಿಂದಾಗಿ ವಕ್ಫ್ ಕಾಯ್ದೆಯಲ್ಲಿ ಇದಕ್ಕೆ ಏನು ಪರಮಾಧಿಕಾರವನ್ನು ಕೊಟ್ಟಿದ್ದೀರಿ, ಅದನ್ನು ತೆಗೆಯಿರಿ. ಸರ್ಕಾರದ ಅಧೀನದಲ್ಲಿ ಬರುವ ಎಲ್ಲಾ ನಿಗಮ ಮಂಡಳಿಗಳು ಯಾವ್ಯಾವುದಕ್ಕೆ ಅಧಿಕಾರಗಳನ್ನು ಕೊಟ್ಟಿದ್ದೀರೋ ಆ ಅಧಿಕಾರ ಇಟ್ಟುಕೊಳ್ಳಿ. ನಾವೇನು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಸರ್ಕಾರವನ್ನು ಮೀರಿಸುವ ಅಧಿಕಾರ ಯಾರಿಗೂ ಕೊಡಬಾರದು. ಇದು ಇರತಕ್ಕಂಥ ಪ್ರಶ್ನೆ. ಆದ್ದರಿಂದ ನಾನು ಸರ್ಕಾರದಲ್ಲಿ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, 1974ರ ಗೆಜೆಟ್‌ನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಅದರಿಂದ ಎಲ್ಲರಿಗೂ ತೊಂದರೆಯಾಗಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರಾತ್ರೋರಾತ್ರಿ ಸಮಸ್ಯೆಗಳು ಬುಗಿಲೆದ್ದಿವೆ. ಅರಣ್ಯ ಇಲಾಖೆಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಅರಣ್ಯ ಇಲಾಖೆಯ ಜಾಗವನ್ನೂ ಕೂಡ ಅದು ನಮ್ಮದು ಎಂದು ವಕ್ಫ್‌ನವರು fencing ಹಾಕಿದರೆಂದರೆ ಮುಗಿದೇ ಹೋಯಿತು. ಅವರು ಇನ್ನು ಯಾವ ಕೋರ್ಟಿಗೂ ಹೋಗುವಂತಿಲ್ಲ. ನೀಮ್ಮ ಬಳಿ ಎಷ್ಟೇ ದಾಖಲೆಗಳಿದ್ದರೂ ಕೂಡ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅರಣ್ಯ ಇಲಾಖೆಯ ಜಾಗ, ಇನ್ನೊಂದು ಮತ್ತೊಂದು ಕೂಡ ವಕ್ಫ್‌ಗೆ ಹೋಗುತ್ತದೆ. ಈ ರೀತಿ ಪರಿಸ್ಥಿತಿ ಆಗಿಹೋಗಿಬಿಟ್ಟರೆ ಜನರ ಗತಿ ಏನಾಗಬೇಕು? ಆ ಕಾರಣದಿಂದಲೇ ಇದು ಒಂದು ಗಂಭಿರ ಸಮಸ್ಯೆ ಆಗಿದೆ. ಸರ್ಕಾರ ಕೂಡಲೇ ಇದರ ಬಗ್ಗೆ ಗಮನ ಕೊಡಬೇಕು. ಇದರ ಬಗ್ಗೆ ಚಿಂತನೆ ಮಾಡಬೇಕು. ಮುಂದೆ ಎಂದೋ ಆಗತಕ್ಕಂಥ ಅನಾಹುತಕ್ಕೆ ಇವತ್ತೇ ತೆರೆ ಎಳೆಯಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ನಮಸ್ಕಾರ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಬ್ರಿಟೀಷ್ ಸರ್ಕಾರ ಅಧಿಕಾರದಲ್ಲಿದ್ದಾಗ 1913ರಲ್ಲಿ ವಕ್ಫ್ ಬೋರ್ಡ್ constitute ಆಗಿದೆ. ಅದು ಬರಲು ಕಾರಣವೇನೆಂದರೆ, ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ಆಸ್ತಿ ವಿವಾದ ವಿಷಯ ತಲೆದೋರಿದಾಗ ಆಗ ಒಂದು ಸೀಮಿತ ಅಧಿಕಾರವನ್ನು ಕೊಟ್ಟು, ದಾನ ಕೊಟ್ಟ ಆಸ್ತಿಯ ನಿರ್ವಹಣೆಯನ್ನು ಮಾಡುವುದಕ್ಕೋಸ್ಕರ 1913ರಲ್ಲಿ ವಕ್ಫ್ ಬೋರ್ಡನ್ನು constitute ಮಾಡಲಾಯಿತು. ಆದರೆ ಅದು ಸುಮಾರು 10 ವರ್ಷಗಳ ನಂತರ ಅಂದರೆ 1923ರಲ್ಲಿ ಅನುಷ್ಠಾನಕ್ಕೆ ಬಂತು. ನಮಗೆ ಸ್ವಾತಂತ್ರ್ಯ ಬಂತು. ಸ್ವಾತಂತ್ರ್ಯ ಬರಬೇಕಾದರೆ ಏನು ಹಿನ್ನೆಲೆ ಆಯಿತು ಎಂದು ನಾನು ಈಗಾಗಲೇ ಹೇಳಿದ್ದೇನೆ. ಕೆಲವರಿಗೆ ಸತ್ಯವನ್ನು ಹೇಳಿದರೆ ಅದನ್ನು ಅರಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಭಾರತವು ಮತೀಯ ಆಧಾರದ ಮೇಲೆ ವಿಭಜನೆ ಆಗಿದೆ. ಆ ಮತೀಯ ಆಧಾರದಲ್ಲಿ ವಿಭಜನೆ ಆದ ಕಾರಣಕ್ಕೋಸ್ಕರವೇ ಭಾರತದ ಸಂವಿಧಾನದಲ್ಲಿ ಮತೀಯ ಆಧಾರಿತ ಮೀಸಲಾತಿಗೆ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರು ಅದಕ್ಕೆ ಅವಕಾಶ ಕೊಡಲಿಲ್ಲ.

(ಮುಂದು)

(724)9.12.2024/4.50/ಎಂ.ಎಂ-ಎ.ಕೆ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು):**

ನಂತರ 1954ರಲ್ಲಿ ದಿ: ಜವಾಹರಲಾಲ್ ನೆಹರುರವರು ಪ್ರಧಾನ ಮಂತ್ರಿಯಾಗಿದ್ದಾಗ ಸ್ವತಂತ್ರ ಭಾರತದಲ್ಲಿ ವಕ್ಫ್ ಬೋರ್ಡ್ ಅನ್ನು ಒಂದು ಸೀಮಿತ ಅಧಿಕಾರದಲ್ಲಿ ರಚನೆ ಮಾಡಿದರು. ದಾನ ಕೊಟ್ಟ ಆಸ್ತಿಯ ನಿರ್ವಹಣೆಗೆ ಒಂದು ಮಂಡಳಿಯ ಅವಶ್ಯಕತೆ ಇದೆಯೆಂದು ವಕ್ಫ್ ಬೋರ್ಡ್ ಅನ್ನು ರಚನೆ ಮಾಡಿದರು. ಇದು ತಪ್ಪಲ್ಲ. ದಾನ ಕೊಟ್ಟಿರುವ ಆಸ್ತಿಯ ನಿರ್ವಹಣೆಯನ್ನು ಒಂದು ವ್ಯವಸ್ಥಿತ ರೂಪದಲ್ಲಿ ಮಾಡುವುದಕ್ಕೆ ಬೇಕಾದಂತಹ ಬೋರ್ಡನ್ನು ರಚನೆ ಮಾಡಿದ್ದು ಯಾವ ರೀತಿಯಲ್ಲಿಯೂ ತಪ್ಪಲ್ಲ. 1995ರಲ್ಲಿ ಇದಕ್ಕೊಂದು ತಿದ್ದುಪಡಿಯಾಯಿತು. ಈ ತಿದ್ದುಪಡಿಯಲ್ಲಿ ಯಾವುದೇ ಆಸ್ತಿಯನ್ನು ವಕ್ಫ್ ಬೋರ್ಡ್ ಘೋಷಣೆ ಮಾಡಿಕೊಳ್ಳುವಂತಹ ಅಧಿಕಾರವನ್ನು 2013ರಲ್ಲಿ ಕೊಟ್ಟರು, 1995ರಲ್ಲಿ ವಿವಾದಗಳು ತಲೆದೋರಿದರೆ ಅದನ್ನು ವಕ್ಫ್ ಟ್ರಿಬ್ಯುನಲ್ ಮೂಲಕ ಬಗೆಹರಿಸಿಕೊಳ್ಳುವಂತಹ ಅಧಿಕಾರ ಕೊಡಲಾಯಿತು. ಅಣ್ಣ-ತಮ್ಮಂದಿರ ನಡುವೆ ಆಸ್ತಿ ವಿವಾದವಾಗುತ್ತದೆ. ಮೊದಲು ಪೊಲೀಸ್ ಸ್ಟೇಷನ್‌ಗೆ ಹೋಗುತ್ತಾರೆ. ನಂತರ civil dispute ಎಂದು ಸಿವಿಲ್ ನ್ಯಾಯಾಲಯಗಳಿಗೆ ಬಗೆಹರಿಸಿಕೊಳ್ಳುವುದಕ್ಕೆ ಹೋಗುತ್ತಾರೆ. ಮುಜರಾಯಿ ಇಲಾಖೆ verses ಖಾಸಗಿ ವ್ಯಕ್ತಿಗಳಾಗಲಿ, ಸರ್ಕಾರ verses ಖಾಸಗಿ ವ್ಯಕ್ತಿಗಳಾಗಲೀ ಆಸ್ತಿ ವಿವಾದಗಳನ್ನು ಸಿವಿಲ್ ನ್ಯಾಯಾಲಯದಲ್ಲಿಯೇ ಬಗೆಹರಿಸಿಕೊಳ್ಳಬೇಕು. ಆದರೆ ವಕ್ಫ್ ಆಸ್ತಿ ವಿಷಯದಲ್ಲಿ ಒಂದು ಪರಮಾಧಿಕಾರ ಕೊಡಲಾಯಿತು. ಅದೇನೆಂದರೆ, ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವ ಅಧಿಕಾರ ಅಲ್ಲ. ಏನಾದರೂ ವಿವಾದ ತಲೆದೋರಿದರೆ ವಕ್ಫ್ ಟ್ರಿಬ್ಯುನಲ್ ಮುಂದೆ ಹೋಗಿ ಬಗೆಹರಿಸಿಕೊಳ್ಳಬೇಕು. ವಕ್ಫ್ ಟ್ರಿಬ್ಯುನಲ್‌ನಲ್ಲಿ ಯಾರಿರುತ್ತಾರೆ?

ಅದಕ್ಕೆ ನಾನು ಯಾವಾಗಲೂ ಒಂದು ಮಾತನ್ನು ಹೇಳುತ್ತಿದ್ದೆ. ತೋಳ ಕುರಿಮರಿಯನ್ನು ಹೊತ್ತುಕೊಂಡು ಹೋಗುತ್ತದೆ. ಕುರಿಯು ಕುರಿಮಂದೆಯನ್ನು ಕರೆದುಕೊಂಡು ತೋಳದ ಹತ್ತಿರಕ್ಕೆ ಹೋಗಿ ತನ್ನ ಕುರಿಮರಿಯನ್ನು ಹೊಡೆದುಕೊಂಡು ಹೋಗಿದ್ದಾರೆ ಎಂದು ನ್ಯಾಯ ಕೇಳಿದರೆ ಯಾವತ್ತಾದರೂ ತೋಳ ನ್ಯಾಯ ಕೊಟ್ಟಿರುವ ಉದಾಹರಣೆ ಇದೆಯೇ? ಅದು ಇನ್ನಷ್ಟು ಮರಿಗಳನ್ನು ಹೊಡೆದುಕೊಂಡು ತಿನ್ನುತ್ತದೆ. ಈ ವಕ್ಫ್ ಟ್ರಿಬ್ಯುನಲ್ ನಲ್ಲಿ ಆಗಿದ್ದು ಹೀಗೆಯೇ. ವಕ್ಫ್ ಟ್ರಿಬ್ಯುನಲ್ ಒಪ್ಪಿಕೊಂಡರೆ ಉದಾರತೆ ತೋರಿಸಿದರೆ ನಿಮಗೆ ಅವಕಾಶ ಉಂಟು. ಉದಾರತೆ ತೋರಿಸದೇ ಇದ್ದರೆ ಮತ್ತು ಇಷ್ಟಕ್ಕೂ ವಕ್ಫ್ ಟ್ರಿಬ್ಯುನಲ್‌ನಲ್ಲಿ ಯಾರಿರುತ್ತಾರೆ? ನಿಷ್ಪಕ್ಷಪಾತವಾಗಿ ನ್ಯಾಯ ಕೊಡುವಂತಹ ವ್ಯವಸ್ಥೆ ವಕ್ಫ್ ಟ್ರಿಬ್ಯುನಲ್‌ನಲ್ಲಿ ಇದೆಯೇ? ಅದಕ್ಕೆ ನಾನು ಹೇಳುವುದು ಇದು unconstitutional. ಸಂವಿಧಾನ ಬಾಹಿರವಾಗಿರುವಂತಹ ಒಂದು ಪರಮಾಧಿಕಾರವನ್ನು ಕೊಡಲಾಗಿದೆ. ಬೆಳಗ್ಗೆ ಈ ಸದನ ಪ್ರಾರಂಭವಾಗಬೇಕಾದರೆ 'ವಂದೇ ಮಾತರಂ' ಆದ ತಕ್ಷಣ ಸಂವಿಧಾನದ ಪ್ರಸ್ತಾವನೆಯನ್ನು ಓದಿಸಲಾಯಿತು. ಆ ಪ್ರಸ್ತಾವನೆಯಲ್ಲಿ 'ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ' ಎಂದು ಒಂದು ಸಾಲನ್ನು ಓದಲಾಯಿತು. 'ಸರ್ವಧರ್ಮ ಸಮಭಾವ' ಎಂದರೆ 'all are equal' ಅಂತ. Hindu Endowment ಗೆ ಈ ಅಧಿಕಾರ ಇದೆಯೇ? ನಾಳೆ ಯಾವುದಾದರೂ ವಿವಾದ ತಲೆದೋರಿದರೆ Hindu Endowment Tribunal ನಲ್ಲಿಯೇ ಬಗೆಹರಿಸಿಕೊಳ್ಳಬೇಕು ಎಂದು ಅಧಿಕಾರ ಕೊಟ್ಟಿದೆಯೇ? ಸೆಷನ್ ಕೋರ್ಟ್ ಬೇರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ರವಿಯವರೇ, ಒಂದು ನಿಮಿಷ . . .

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ. ನನ್ನ flow cut ಆಗುತ್ತದೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಟ್ರಿಬ್ಯುನಲ್‌ಗೆ ಯಾರು ನೇಮಕ ಮಾಡುತ್ತಾರೆ ಎಂಬ ಬಗ್ಗೆಯೂ ಸ್ವಲ್ಪ ಬೆಳಕು ಚೆಲ್ಲಿ. 'Who are the members' ಎಂಬುದನ್ನು ಸಹ ದಯವಿಟ್ಟು ಹೇಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಚಿವರೇ, ಪ್ಲೀಸ್, ನಿಮಗೆ ಉತ್ತರ ಕೊಡುವ ಅಧಿಕಾರ ಕೊಟ್ಟಿದೆ. ಹಾಗಾಗಿ ನಾನೇನಾದರೂ ಆಕ್ಷೇಪಾರ್ಹವಾಗಿರುವಂತಹದ್ದನ್ನು ಮಾತನಾಡಿದರೆ . . .

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಟ್ರಿಬ್ಯುನಲ್ ಸದಸ್ಯರ ಬಗ್ಗೆ ಹೇಳಿದರು. 'Who is the appointing authority and who are the members' ಎಂಬುದನ್ನು ಅವರು ಹೇಳಲಿ. ನಮಗೆ ಅದು ಗೊತ್ತಿಲ್ಲ.

**ಉಪ ಸಭಾಪತಿಯವರು:-** ಅವರು ಬೇಡ, ನೀವೇ ಆಮೇಲೆ ಅದನ್ನು ಹೇಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಅಧಿಕಾರ Hindu Endowment ಗಿದೆಯೇ? ಅವರು ಸಿವಿಲ್ ಕೋರ್ಟ್‌ಗೆ ಅಥವಾ ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಹೋಗಬೇಕು. ಆದರೆ Hindu Endowment

Tribunal ಅಂತಿಲ್ಲ. 'Once Waqf, always Waqf' ಎಂದು ಬಹಳ ಜನರು ಭಾಷಣ ಮಾಡುವುದನ್ನು ನಾವು ಕೇಳಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ರವಿಯವರೇ, . .

**ಶ್ರೀ ಸಿ.ಟಿ. ರವಿ:-** ಒಂದು ನಿಮಿಷ, ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ರವಿಯವರೇ, ಒಂದು ನಿಮಿಷ ಯೀಲ್ಡ್ ಆಗಿ.

**ಶ್ರೀ ಸಿ.ಟಿ. ರವಿ:-** ಒಂದು ನಿಮಿಷ, ನಾನು ಹೇಳುತ್ತೇನೆ. ಸುಪ್ರೀಂ ಕೋರ್ಟ್ ಆದೇಶವನ್ನು ಬದಲಾಯಿಸಿರುವ ಉದಾಹರಣೆಯೂ ಇದೆ. ಶಾ ಬಾನೋ ಬೇಗಂ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿತ್ತು. ಮುಸ್ಲಿಂ ಮಹಿಳೆಯರಿಗೆ ಅನ್ಯಾಯ ಮಾಡುವಂತಹ ತಿದ್ದುಪಡಿಯನ್ನು ನಮ್ಮ ದೇಶದ ಪಾರ್ಲಿಮೆಂಟ್ ಮಾಡಿತು. ಅನ್ಯಾಯ ಮಾಡುವಂತಹ ತಿದ್ದುಪಡಿಯನ್ನು, ಹಕ್ಕನ್ನು curtail ಮಾಡುವ ಕೆಲಸ ಮಾಡಿತು.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆ ಕ್ಷೇತ್ರ):-** ಮಾನ್ಯ ಸಿ.ಟಿ. ರವಿಯವರೇ, ಒಂದು ನಿಮಿಷ ಯೀಲ್ಡ್ ಆಗಿ. ತೋಳ ಕುರಿ ವಿಚಾರ ಬಂತಲ್ಲಾ, ತಮಗೆ ಕೋರ್ಟ್ ಬಗ್ಗೆ ಅಪಾರವಾದ ಗೌರವವಿದೆ ಎಂದು ನಾನು ಅಂದುಕೊಂಡಿದ್ದೇನೆ. ಟ್ರಿಬ್ಯುನಲ್‌ಗೆ ಛೇರ್ಮನ್ ಅನ್ನು ನೇಮಕ ಮಾಡುವುದು High Court Chief Justice. ಅದಕ್ಕೆ ಮುಸ್ಲಿಂರನ್ನೇ ಮಾಡಬೇಕೆಂದಿಲ್ಲ, ಕೆಲವು ಹಿಂದುಗಳೂ ಆಗಿದ್ದಾರೆ, ಮುಸ್ಲಿಮರೂ ಸಹ ಇದ್ದಾರೆ. ಆದರೆ ಅದರಲ್ಲಿ ಒಬ್ಬ ಸಾಮಾಜಿಕ ತಜ್ಞರನ್ನು ಅದರಲ್ಲಿಯೂ ಸಹ ಇಸ್ಲಾಂ ಅಥವಾ ಮುಸ್ಲಿಂ ಧರ್ಮದಲ್ಲಿ ಆಳವಾಗಿ ಅಧ್ಯಯನ ಮಾಡಿರುವಂತಹ ಒಬ್ಬ ಸದಸ್ಯನಿರುತ್ತಾನೆ. ಅದು ಬಿಟ್ಟರೆ ಟ್ರಿಬ್ಯುನಲ್‌ಗೆ ಛೇರ್ಮನ್ ಆಗುವುದು, it's appointed by the Chief Justice of High Court. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಸಿ.ಟಿ. ರವಿ:-** ಆದರೆ ವಕ್ಫ್ ಟ್ರಿಬ್ಯುನಲ್‌ನಲ್ಲಿ ಮೆಜಾರಿಟಿ ಯಾರಿರುತ್ತಾರೆ?

**(ಗೊಂದಲ)**

**ಉಪ ಸಭಾಪತಿಯವರು:-** ಇರಲಿ ನೋಡೋಣ, ಅವರು ಮಾತನಾಡಲಿ. Let him complete.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** (**ಗೊಂದಲ**) ಅವರು ಟಾಪಿಕ್ ಮುಗಿಸಲಿ, ಟ್ರಿಬ್ಯುನಲ್‌ನಲ್ಲಿ ಯಾರಿರುತ್ತಾರೆ? ಅವರು ಹೇಗೆ ನೇಮಕಗೊಳ್ಳುತ್ತಾರೆ ಎಂದು ಹೇಳಲಿ ಅಷ್ಟನ್ನೇ ನಾವು ಕೇಳುವುದು.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಚಿವರೇ, ದಯವಿಟ್ಟು ನನಗೆ ಡಿಸ್ಟರ್ಬ್ ಮಾಡಬೇಡಿ. ಸಚಿವರು ನೋಟ್ ಮಾಡಿಕೊಳ್ಳಲಿ. ವಕ್ಫ್ ಟ್ರಿಬ್ಯುನಲ್‌ಗೆ ಹೋಗುವಂತಹ ಅಧಿಕಾರ ಕೊಟ್ಟಿದ್ದು, ಅದನ್ನು ವಿಶೇಷ ಎಂದು ಪರಿಗಣಿಸುವುದಕ್ಕೆ ಕಾರಣವೇನು? ಇನ್ನೊಂದು ಅನ್ಯಾಯ ಏನು ಮಾಡಿತು ಎಂದರೆ, ಸಾವಿರಾರು ವರ್ಷಗಳಿಂದಲೂ ದೇವಸ್ಥಾನಗಳಿಗೆ ಇನಾಂ ಜಮೀನು ಎಂದು ದತ್ತಿ ಬಿಡುವಂತಹ ಪದ್ಧತಿ ನಮ್ಮ ದೇಶದಲ್ಲಿತ್ತು. ಸರ್ಕಾರ Tenancy Act ತಂದಿತು. ಉಳುವವನೇ ಭೂಮಿಯ ಒಡೆಯ ಎಂದು ಒಂದು ಕಾಯಿದೆಯನ್ನು ಜಾರಿಗೆ ತಂದಿತು. ಇನಾಂ ರದ್ದಿಯಾತಿ

ಕಾಯಿದೆಯನ್ನುಜಾರಿಗೆ ತಂದು ದೇವಸ್ಥಾನದ ಅಷ್ಟೂ ಆಸ್ತಿಯನ್ನು ರದ್ದುಪಡಿಸಿತು. ಅದಕ್ಕೆ ಪರ್ಯಾಯವಾಗಿ ತಸ್ತೀಕ್ ಹಣ ಕೊಡುತ್ತೇವೆ, ಅದಕ್ಕೆ equivalent ಆಗಿರುವಂತಹ ಅನುದಾನ ಕೊಡುತ್ತೇವೆಂದು ಹೇಳಿದರು. ಇವತ್ತು ಸಾವಿರಾರು ದೇವಾಲಯಗಳಿಗೆ ಎಣ್ಣೆ, ಬತ್ತಿಗೂ ಕೂಡ ಹಣವಿಲ್ಲ. ಪೂಜೆ ಮಾಡುವವರಿಗೂ ಕೂಡ ಬಿಡಿಗಾಸು ಇಲ್ಲ. ಏಕೆಂದರೆ, ಆತ್ಮನಿರ್ಭರವಾಗಿದ್ದಂತಹ ದೇವಾಲಯವನ್ನು ದುರ್ಬಲಗೊಳಿಸುವ ಕೆಲಸವನ್ನು ಒಂದು ಕಾಯಿದೆ ಮೂಲಕ ಮಾಡಲಾಯಿತು. ಆದರೆ ಇಲ್ಲಿ ಯಾವುದೇ ಆಸ್ತಿಯನ್ನು ವಕ್ಫ್ ತನ್ನ ಆಸ್ತಿ ಎಂದು ಘೋಷಣೆ ಮಾಡಿಕೊಳ್ಳುವಂತಹ ಪರಮಾಧಿಕಾರವನ್ನು 2013ರಲ್ಲಿ ಕೊಟ್ಟಿತು. ದಾನ ಕೊಟ್ಟ ಆಸ್ತಿಯ ನಿರ್ವಹಣೆಗಷ್ಟೇ ವಕ್ಫ್ ಬೋರ್ಡ್ ಇದ್ದಿದ್ದರೆ ಇದು ವಿವಾದ ಆಗುತ್ತಿರಲಿಲ್ಲ. ಅದರ ಬದಲಿಗೆ ಮುಂದುವರೆದು ವಕ್ಫ್ ಬೋರ್ಡ್ ಯಾವುದೇ ಆಸ್ತಿಯನ್ನು ಘೋಷಣೆ ಮಾಡಿಕೊಳ್ಳುವಂತಹ ಅಧಿಕಾರವನ್ನು ಹೊಂದಿತ್ತು ಅದಕ್ಕೆ ಅವರು ದಾಖಲೆ ಒದಗಿಸುವ ಅವಶ್ಯಕತೆ ಇಲ್ಲ. ಉದಾಹರಣೆಗೆ ಮಾಕನಹಳ್ಳಿಯಲ್ಲಿ ನಿಮ್ಮದೊಂದು ತೋಟವಿದೆ. ನಿಮ್ಮ ತೋಟವನ್ನು ನಾಳೆ ಬೆಳಗ್ಗೆ ವಕ್ಫ್ ಬೋರ್ಡ್‌ನಲ್ಲಿ ನಿರ್ಣಯ ಮಾಡಿಕೊಂಡು ಗೆಜೆಟ್ ನೋಟಿಫಿಕೇಷನ್ ಹೊರಡಿಸುತ್ತಾರೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೇಕಾದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ, ದಯವಿಟ್ಟು ಯಾವ ಆಕ್ಟ್, 2013ರಲ್ಲಿ ಯಾವ ಸೆಕ್ಷನ್ ಬದಲಾವಣೆಯಾಯಿತು ಯಾವ ಸೆಕ್ಷನ್‌ನಿಂದ ಅಧಿಕಾರ ಸಿಕ್ಕಿತು ಎಂಬುದನ್ನು ಸದನಕ್ಕೆ ತಿಳಿಸಿ.

**ಉಪ ಸಭಾಪತಿಯವರು:-** ನಾನು ಹೇಳುತ್ತೇನೆ.

(**ಗೊಂದಲ**)

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾರದೋ ತೋಟವನ್ನು ಯಾರಿಗೋ ಘೋಷಣೆ ಮಾಡುವುದಕ್ಕೆ ಅದಕ್ಕೊಂದು ಕಾನೂನಿಲ್ಲವೇ? ನೀವು ಬುದ್ಧಿವಂತರು ಹಾಗೆಲ್ಲಾ ಮಾತನಾಡಬಾರದು.

(**ಗೊಂದಲ**)

**ಶ್ರೀಮತಿ ಬಲ್ಕೀಸ್ ಬಾನು:-** ದಾನ ಕೊಡುವುದು

(**ಗೊಂದಲ**)

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾಡುವ ಕೆಲಸಕ್ಕೆ ಹೋಗಬಾರದು.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯಸಚೇತಕರು) :-** ದಾಖಲೆ ಕೊಟ್ಟು ಮಾತನಾಡಬೇಕು.

(**ಗೊಂದಲ**)

**ಶ್ರೀ ನಸೀರ್ ಅಹ್ಮದ್:-** ಯಾವ ಅಮೆಂಡ್‌ಮೆಂಟ್ (**ಗೊಂದಲ**)

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, 2013ರಲ್ಲಿ ಯು.ಪಿ.ಎ-2 ಸರ್ಕಾರ ತನ್ನ ಆಡಳಿತದ ಕೊನೆಯ ಅವಧಿಯಲ್ಲಿ ಕಾಯಿದೆಗೆ ತಂದ ತಿದ್ದುಪಡಿಯು ವಕ್ಫ್ ಮಂಡಳಿಗೆ ಪರಮಾಧಿಕಾರದ ಸ್ವರೂಪವನ್ನು ನೀಡಿತ್ತು. ಈ

ತಿದ್ದುಪಡಿಯನ್ವಯ ಯಾವುದೇ ವಕ್ಫ್ ಮಂಡಳ ಕೇವಲ ಅಧಿಸೂಚನೆ ಮೂಲಕ ಯಾವುದೇ ಆಸ್ತಿಯನ್ನು ತನ್ನದೆಂದು ಘೋಷಿಸಿಕೊಂಡು ಅದರ ಮೇಲೆ ಹಕ್ಕು ಸಾಧಿಸಬಹುದಿತ್ತು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ವಕ್ಫ್ ಬೋರ್ಡ್‌ಗೆ ನೋಟಿಫಿಕೇಷನ್ ಮಾಡುವ ಅಧಿಕಾರ ಇಲ್ಲ. ನೋಟಿಫಿಕೇಷನ್ ಮಾಡುವುದು ಬರೀ ಸರ್ಕಾರ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಎಲ್ಲರೂ ನಿಂತುಕೊಂಡು misinformation ಕೊಟ್ಟರೆ ಹೇಗೆ? ಟ್ರಿಬ್ಯುನಲ್‌ನಲ್ಲಿ ಎಲ್ಲವನ್ನೂ ತೀರ್ಮಾನ ಮಾಡುತ್ತಾರೆ ಎಂದು ಹೇಳುತ್ತಾರೆ. The Chief Justice of High Court appoints the Chairman of the Waqf Tribunal, not us, not the government. You are not…*(interruptions)*…

**ಶ್ರೀ ಸಿ.ಟಿ. ರವಿ:-** ನಾನು ಕೊಡುತ್ತಿರುವುದು information ನೀವು ಕೊಡುತ್ತಿರುವುದು… (**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ದಯವಿಟ್ಟು ಸದನವನ್ನು ದಾರಿ ತಪ್ಪಿಸುವ ಕೆಲಸಗಳು ಸದಸ್ಯರಿಂದ ಆಗಬಾರದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಯಾವುದೋ ಪೇಪರ್‌ನಲ್ಲಿ ಬಂದಿರುವುದನ್ನು ನೋಡಿ ಯು.ಪಿ.ಎ. ತಿದ್ದುಪಡಿ ಎಂದು ಹೇಳುತ್ತೀರಿ. ಅದು ಯಾವ ತಿದ್ದುಪಡಿ? Waqf doesn't have any site for notification.

**ಶ್ರೀ ಎನ್.ಎಸ್. ಬೋಸರಾಜು:-** ಯಾವ ಆಕ್ಟ್‌ನಲ್ಲಿ ಯಾವ ಅಮೆಂಡ್‌ಮೆಂಟ್ ಆಗಿದೆ ಎಂದು ಹೇಳಿ. ನಾವು ನೀವು ಸದನವನ್ನು ದಾರಿ ತಪ್ಪಿಸುವ ಕೆಲಸ ಮಾಡಬಾರದು.

**ಶ್ರೀ ಸಿ.ಟಿ. ರವಿ:-** ಒಬ್ಬ ಜವಾಬ್ದಾರಿಯುತ ಸದಸ್ಯನಾಗಿ ನಾನು;

**ಶ್ರೀ ಪ್ರಿಯಾಂಕ್ ಎಂ. ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಅಷ್ಟನ್ನೇ ಕೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಆಯಿತು ನೀವು ಕುಳಿತುಕೊಳ್ಳಿ. ಮಾನ್ಯ ರವಿಯವರೇ, ನೀವು ಹೇಳಿದ್ದಕ್ಕೆ ಒಂದು ಸ್ಪಷ್ಟೀಕರಣ ಕೊಡಿ.

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದ ಆಸ್ತಿ ಅವರು ತೋರಿಸಬೇಕು. ಯಾರೋ ತೆಗೆದುಕೊಂಡು ವಕ್ಫ್ ಆಸ್ತಿ ಎಂದು ತೋರಿಸಿಬಿಟ್ಟರೆ ಅವರು ಹೇಳಿದ್ದನ್ನು ನಾವು ಕೇಳುತ್ತೇವೆ. ಯಾರ ವಿಚಾರಗಳನ್ನೂ ಸುಮ್ಮನೇ ಹೇಳಬಾರದು.

**ಶ್ರೀ ಸಿ.ಟಿ. ರವಿ:-** ನಾವು ಹೇಳಿದಂತೆ ಕೇಳಬೇಡಿ. ನಾವು ನಿಮ್ಮನ್ನು ಹೇಗೆ ನೆಮ್ಮದಿಯಿಂದ ಬದುಕುವಂತೆ ನೋಡಿಕೊಳ್ಳುತ್ತಿದ್ದೇವೆಯೋ ಅದೇ ರೀತಿ ನೀವು ನಿಮ್ಮ ಮೆಜಾರಿಟಿ ಇರುವ ಜಾಗದಲ್ಲೂ ನಮ್ಮನ್ನು ನೆಮ್ಮದಿಯಾಗಿ ಬದುಕುವುದಕ್ಕೆ ಬಿಡಿ ಸಾಕು. ನೀವು ನಮ್ಮನ್ನೇನು ನೋಡಿಕೊಳ್ಳಬೇಡಿ.

(ಮುಂದು)

725/09-12-2024/5-00/bkp-rn

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದೂ-ಮುಸ್ಲೀಂ ಭಾಯಿ-ಭಾಯಿ ಎಂದು ಬದುಕುತ್ತಿದ್ದಾರೆ. ನೀವು ಅವರನ್ನು ಬದುಕಲಿಕ್ಕೆ ಬಿಡುತ್ತಿಲ್ಲ. ಇಡೀ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿಯೇ ಹಿಂದು-ಮುಸ್ಲೀಂ ಜನರು ಒಟ್ಟಾಗಿ ಶಾಂತಿಯಿಂದ ಬದುಕಲಿಕ್ಕೆ ಬಿಡುತ್ತಿಲ್ಲ. ನೀವು ಇಲ್ಲಿ ಅನಾವಶ್ಯಕ ವಿಷಯವನ್ನು ತೆಗೆದುಕೊಂಡು ಪ್ರಚೋದನೆ ಮಾಡುತ್ತಿದ್ದೀರಿ.

**ಶ್ರೀ ಪ್ರಿಯಾಂಕ್ ಖರ್ಗೆ:-**ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರು ಈ ರೀತಿ ಮಾತನಾಡುತ್ತಿರುವುದು ಸರಿಯಲ್ಲ, ಈ ರೀತಿಯಲ್ಲಿ ಅವರು ಮಾತನಾಡಿದಾಗ ನಾವು ಎದ್ದೇಳಲಿಲ್ಲವೆಂದರೆ ಮತ್ತೇನು ಮಾಡಲಿಕ್ಕೆ ಸಾಧ್ಯ? ಇದು ನಿಮ್ಮ ವಿವೇಚನೆಗೆ ಬಿಟ್ಟ ವಿಚಾರ. ತಾವು ಇದನ್ನು ನಿಯಂತ್ರಣ ಮಾಡಬೇಕು.

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 2013ರಲ್ಲಿ ಯುಪಿಎ-2 ಸರ್ಕಾರ ತಿದ್ದುಪಡಿ ತಂದು ಯಾವುದೇ ಆಸ್ತಿಯನ್ನು ಘೋಷಿಸುವಂತಹ ಅಧಿಕಾರವನ್ನು ವಕ್ಫ್ ಬೋರ್ಡ್‌ಗೆ ಕೊಟ್ಟಿದೆ ಎನ್ನುವುದನ್ನು ನಾನು ಹೇಳಿದ್ದೇನೆ. ನಾನು ಏನಾದರೂ ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಪೀಠ ಅಲ್ಲಿ ಇದ್ದು, ಆ ಪೀಠ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಆ ರೀತಿಯಲ್ಲಿ ಹೇಳಿದ್ದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಆ ರೀತಿಯಲ್ಲಿ ಇಲ್ಲದಿದ್ದರೆ ನೀವು ರಾಜೀನಾಮೆಯನ್ನು ಕೊಡುತ್ತೀರಾ?

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಬಹಳ ಸ್ಪಷ್ಟವಾಗಿ ಒಂದು ಸವಾಲು ಇದೆ. ಅವರು ಯಾವ ಕಾಯಿದೆ ಬಗ್ಗೆ ಹೇಳುತ್ತಿದ್ದಾರೆ, ಅದನ್ನು ಇಲ್ಲಿ ಉಲ್ಲೇಖಿಸಬೇಕು. ಆಗ ಇವರಾದರೂ ರಾಜೀನಾಮೆ ಕೊಡಬೇಕು ಅಥವಾ ಅವರಾದರೂ ರಾಜೀನಾಮೆಯನ್ನು ಕೊಡಿಸಬೇಕು. ಮಾನ್ಯ ಸದಸ್ಯರು ಇದಕ್ಕೆ ಸಿದ್ಧರಿದ್ದಾರಾ?

**ಉಪ ಸಭಾಪತಿಯವರು:-** ಇಲ್ಲ ರಾಜೀನಾಮೆಯನ್ನು ಕೊಡುವುದು, ಕೊಡಿಸುವುದು ಈ ಪೀಠದ ಜವಾಬ್ದಾರಿ ಆಗಿರುವುದಿಲ್ಲ. ನಿಮಗೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವಂತಹದ್ದು. ಪ್ರಶ್ನೆಗಳಿಗೆ ಉತ್ತರ ಕೊಡಿಸುವಂತಹ ಜವಾಬ್ದಾರಿ ಈ ಪೀಠಕ್ಕೆ ಇದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ 3 ವಿಷಯಗಳ ಬಗ್ಗೆ ಒಂದು ವಿಷಯಕ್ಕೂ ಅವರಿಂದ ಉತ್ತರ ಸಿಕ್ಕಿರುವುದಿಲ್ಲ.

**(ಗೊಂದಲ)**

ನಾನು ಏತಕ್ಕೆ ಮಾತನಾಡುತ್ತಿದ್ದೇನೆಂದರೆ, ಇದರ ಬಗ್ಗೆ ಇನ್ನೂ ಸಹ ಹೆಚ್ಚು ಬೆಳಕು ಚೆಲ್ಲಲಿ, ಈ ವಿಷಯ ಎಲ್ಲರಿಗೂ ಗೊತ್ತಾಗಲಿ, Tribunal Members ಯಾವ ತಿದ್ದುಪಡಿಯನ್ನು ತಂದಿದ್ದಾರೆನ್ನುವುದು ತಿಳಿಯಬೇಕು.

**ಉಪ ಸಭಾಪತಿಯವರು:-** ಶ್ರೀಯುತ ಪ್ರಿಯಾಂಕ್ ಖರ್ಗೆಯವರೆ, ನೀವು ಮಾತನಾಡಬೇಕಾದರೆ ಅವಕಾಶವನ್ನು ಕೇಳಿ ಮಾತನಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಾನು ಯೀಲ್ಡ್ ಆಗಿರುವುದಿಲ್ಲ. ಮಧ್ಯದಲ್ಲಿ ಎದ್ದುನಿಂತು ಈ ರೀತಿ ಮಾಡಿದರೆ ನಾನು ಹೇಗೆ ಮಾತನಾಡಲಿಕ್ಕೆ ಸಾಧ್ಯ?

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಇದರ ಬಗ್ಗೆ ದಾಖಲೆ ಕೊಟ್ಟು ಹೇಳಬೇಕು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, 2013ರ ತಿದ್ದುಪಡಿ ಬಗ್ಗೆ ನಾನು ಉಲ್ಲೇಖ ಮಾಡಿದ್ದೇನೆ. ನಾನು ಹೇಳಿರುವ ಮಾಹಿತಿಯಲ್ಲಿ ಸತ್ಯಕ್ಕೆ ದೂರವಾದದ್ದು ಆಗಿದ್ದರೆ ಪೀಠದಿಂದ ತಾವು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಬಹುದು.

**ಶ್ರೀ ಕೆ. ಅಬ್ದುಲ್ ಜಬ್ಬರ್(ವಿಧಾನಸಭಾ ಕ್ಷೇತ್ರ):-** ಸತ್ಯಕ್ಕೆ ದೂರವಾದದ್ದು ಹೇಳಿದರೆ ಹೇಗೆ ಆಗುತ್ತದೆ. ಅದರ ದಾಖಲೆಗಳನ್ನು ತರಿಸಿ ಕೊಟ್ಟ ಮೇಲೆ ಅವರು ಮಾತನಾಡಬೇಕು. ಸುಮ್ಮ-ಸುಮ್ಮನೆ ದಾರಿ ತಪ್ಪಿಸುವಂತಹ ಕೆಲಸ ಆಗಬಾರದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಕೆಲವು ಸದಸ್ಯರು ರಾಜೀನಾಮೆಯ ವಿಷಯವನ್ನು ಮುಂದಿಟ್ಟರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, **XXX** ಎನ್ನುವಂತಹ ಪದವನ್ನು ಬಳಕೆ ಮಾಡಬಾರದು ಎಂದು ತಾವು ಹೇಳಿದಿರಿ.

(ಗೊಂದಲ)

**ಉಪ ಸಭಾಪತಿಯವರು:-** ನೋಡಿ, ನಿಮಗೆ ಒಂದು ವಿಷಯ ಗೊತ್ತಿರಲಿ. ಮಾನ್ಯ ಸದಸ್ಯರು ಪ್ರಶ್ನೆ ಮಾಡಿದಾಗ ಆ ಪದಕ್ಕೆ ಅದನ್ನು ಸಂವಿಧಾನಿಕ ಪದ ಅಲ್ಲವೆನ್ನುವುದು ನಿಮಗೆ ಗೊತ್ತಿದೆ. ಈಗ ಆಗಿದೆ, ಮತ್ತೊಮ್ಮೆ ಈ ಪದ ಉಲ್ಲೇಖ ಮಾಡಬೇಡಿ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಎನ್.ಎಸ್. ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸದಸ್ಯರು ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಂದು ಆಕ್ಟ್ ಬಗ್ಗೆ ಇಲ್ಲಿ quote ಮಾಡುತ್ತಿದ್ದಾರೆ. ಯಾವಾಗ ಅದು ಆಗಿದೆ ಎಂದು ಮಾನ್ಯ ಉಪ ಸಭಾಪತಿಯವರಾದ ತಮಗೆ ಗೊತ್ತಿದೆಯೇ?

**ಉಪ ಸಭಾಪತಿಯವರು:- XXX** ಎನ್ನುವ ಪದವನ್ನು ಕಡತದಿಂದ ತೆಗೆಯಿರಿ. ಇದು ದಾಖಲೆಗೆ ಹೋಗಬಾರದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಯುಪಿಎ-2 ಸರ್ಕಾರ ಇದ್ದಾಗ ಒಂದು ಆಕ್ಟ್ ಮಾಡಿದರು ಎಂದು ಹೇಳಿದರು, ಅದನ್ನು ಯಾವಾಗ ಮಾಡಿದರು ಎಂದು ಹೇಳಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಈ ಹಂತದಲ್ಲಿ ಮಾತನಾಡಿರುವ ಯಾವುದನ್ನೂ ಸಹ ದಾಖಲೆಗೆ ತೆಗೆದುಕೊಳ್ಳಬೇಡಿ. ಮಾನ್ಯ ಸದಸ್ಯರು ಯೀಲ್ಡ್ ಆದಾಗ ಉಳಿದವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡೋಣ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಾನು ಏನು ಹೇಳಿದೆ ಎಂದರೆ 1995 ರಲ್ಲಿ ವಕ್ಫ್ ಆಕ್ಟ್‌ಗೆ ತಿದ್ದುಪಡಿಯಾದ ನಂತರ 2013ರಲ್ಲಿ ಮತ್ತೊಷ್ಟು ಪರಮಾಧಿಕಾರವನ್ನು ಕೊಟ್ಟಿದೆ ಎಂದು ಹೇಳಿದೆ. ಈ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರು ರಾಜೀನಾಮೆ ಪ್ರಸ್ತಾಪವನ್ನು ಮುಂದಿಟ್ಟರು. ನಾನು ಒಂದು ಛಾಲೆಂಜ್ ಅನ್ನು ಸ್ವೀಕಾರ ಮಾಡಲಿಕ್ಕೆ ತಯಾರಿದ್ದೇನೆ. ವಿಜಯಪುರ ಜಿಲ್ಲೆಯಲ್ಲಿ ಪೊನ್ನವಾಡವು ಸೇರಿದಂತೆ ಸಾವಿರಾರು ರೈತರ ಪಹಣಿ ಖಾತೆಯ ಕಾಲಂ ನಂ.11 ರಲ್ಲಿ ವಕ್ಫ್ ಎಂದು ಸೇರಿಸಿದ್ದು ಸತ್ಯಕ್ಕೆ ದೂರವಾದದ್ದು ಎನ್ನುವುದಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸದಸ್ಯರು ವಿಷಯವನ್ನು ಬಿಟ್ಟುಬಿಟ್ಟರು. 2013ರಲ್ಲಿ ಯುಪಿಎ-2 ಸರ್ಕಾರದ ಸಮಯದಲ್ಲಿ ಆಗಿರುವ ತಿದ್ದುಪಡಿಯ ಬಗ್ಗೆ ಹೇಳಿರುವ ವಿಚಾರವನ್ನು ಬದಲಾಯಿಸುತ್ತಿದ್ದಾರೆ. ಮಾನ್ಯ ಸದಸ್ಯರು ಬೇರೆ ವಿಷಯಕ್ಕೆ ಹೋಗುತ್ತಿದ್ದಾರೆ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಸಿಂಧಗಿಯ ವಿರಕ್ತ ಮಠ....

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅಳಂದದಲ್ಲಿ ಬೀರಲಿಂಗೇಶ್ವರ ದೇವಸ್ಥಾನದ ಜಾಗವನ್ನು ವಕ್ಫ್‌ಬೋರ್ಡ್‌ಗೆ ಸೇರಿಸಿರುವುದು ನಿಜ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಮತ್ತೊಮ್ಮೆ ಉಲ್ಲೇಖ ಮಾಡುತ್ತಿದ್ದೇನೆ. Column No.11 is not shows ownership.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೆ, ಯಾವ ರೀತಿಯಲ್ಲಿ JPC (Joint Parliamentary Committee) ಬಗ್ಗೆ ಇವರು ಮಾತನಾಡುತ್ತಿದ್ದಾರೆ. ಅದೇ ರೀತಿಯಲ್ಲಿ....

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಾನು ಯೀಲ್ಡ್ ಆಗಿರುವುದಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೆ, 2013 ರಲ್ಲಿ ತಿದ್ದುಪಡಿ ಬಂತು. ಅದರಲ್ಲಿ ಯಾವ ಸೆಕ್ಷನ್‌ನಲ್ಲಿಯೂ ವಕ್ಫ್‌ಬೋರ್ಡ್ ಆಸ್ತಿಯ ಬಗ್ಗೆ ಹೇಳಿರುವುದಿಲ್ಲ. ಅದರ ಬಗ್ಗೆ ತಮ್ಮಲ್ಲಿ ಮಾಹಿತಿ ಇದ್ದರೆ ನನ್ನ ಚಾಲೆಂಜ್ ಅನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು. ನಾನು ರಾಜೀನಾಮೆ ಕೊಡಲಿಕ್ಕೆ ತಯಾರು ಆಗಿದ್ದೇನೆ. ನಾನು ಈ ವಿಚಾರವನ್ನು ಸದನದಲ್ಲಿ ಹೇಳುತ್ತಿದ್ದೇನೆ. ಅದಕ್ಕೆ ವರು ರಾಜೀನಾಮೆಯನ್ನು ಕೊಡುತ್ತಾರಾ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ವಿಜಯಪುರ ಜಿಲ್ಲೆಯಲ್ಲಿ 1500 ವರ್ಷಗಳ ಹಿಂದಿನ ಸೋಮೇಶ್ವರ ದೇವಾಲಯದ ವಿಚಾರವನ್ನು ಹೇಳುತ್ತಿದ್ದೇನೆ. ನನ್ನ ತಿಳುವಳಿಕೆಯ ಪ್ರಕಾರ 1500 ವರ್ಷಗಳ ಹಿಂದೆ ಮಹಮದ್ ಪೈಗಂಬರ್‌ರವರ ಜನನ ಆಗಿರಲಿಲ್ಲ. 1500 ವರ್ಷಗಳ ಹಿಂದೆ ಇಸ್ಲಾಂ ಇತ್ತೋ ಇಲ್ಲವೋ ಎನ್ನುವುದು ಒಂದು ಪ್ರಶ್ನಾರ್ಥಕ ಚಿಹ್ನೆಯಾಗಿದೆ. ಭಾರತದಲ್ಲಂತೂ ಇರಲಿಲ್ಲ. 1500 ವರ್ಷಗಳ ಹಿಂದೆ ಜಗತ್ತಿನಲ್ಲಿ ಇಸ್ಲಾಂ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಭಾರತದಲ್ಲಂತೂ ಇಸ್ಲಾಂ ಇರಲಿಲ್ಲ. ಆದರೆ, ಸೋಮೇಶ್ವರ ದೇವಾಲಯ ಚಾಲುಕ್ಯರ ಕಾಲದ ದೇವಾಲಯ. ಆ ದೇವಾಲಯವನ್ನು ವಕ್ಫ್ ಆಸ್ತಿ ಎಂದು ಹೇಳಿ ಹೇಗೆ ಘೋಷಣೆ ಮಾಡಿದರು?

**ಶ್ರೀ ಅಬ್ದುಲ್ ಜಬ್ಬರ್:-** ಯಾರು ಘೋಷಣೆ ಮಾಡಿದ್ದಾರೆ, ಅವರನ್ನೇ ಕೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಾನು ಈಗ ಯೀಲ್ಡ್ ಆಗಿಲ್ಲ. ಮತ್ತೆ ನಾನು ವಿಚಾರಕ್ಕೆ ಬರುತ್ತೇನೆ. ಅವರು ಇದನ್ನು ಚಿಂತಕರ ಚಾವಡಿಯಾಗಿ ಮಾಡಲಿಕ್ಕೆ ಹೊರಟಿಲ್ಲ.

**(ಗೊಂದಲ)**

ಜಗತ್ತಿನಲ್ಲಿ ಅಶಾಂತಿಯನ್ನು ಯಾರು ಉಂಟು ಮಾಡುತ್ತಿದ್ದಾರೆಂದು ಜಗತ್ತಿಗೆ ಗೊತ್ತಿದೆ.

ಮಾನ್ಯ ಸಭಾಪತಿಯವರೆ, ಸರ್. ಎಂ. ವಿಶ್ವೇಶ್ವರಯ್ಯನವರು ಓದಿದ ಮುದ್ದೇನಹಳ್ಳಿ ಶಾಲೆಯನ್ನು ವಕ್ಫ್ ಆಸ್ತಿಗೆ ಸೇರಿಸಿದ್ದಾರೆ.... as per the records ಇವತ್ತಿಗೆ ಅದು ವಕ್ಫ್ ಆಸ್ತಿಯಾಗಿದೆ. How it is possible? ಇದು ಹೇಗೆ ಸಾಧ್ಯವಾಯಿತು? ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರಲ್ಲಿ ಯಾರು ತಪ್ಪು ಮಾಡಿದ್ದಾರೋ ಗೊತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು 2013 ರ ವಕ್ಫ್ ಆಕ್ಟ್‌ನಲ್ಲಿ ಒಂದು ಸಣ್ಣ ತಿದ್ದುಪಡಿ ತಂದು ಯಾವ ಅಸ್ತಿಯನ್ನು ಬೇಕಾದರೂ ಸೇರಿಸಿಕೊಳ್ಳಬಹುದು ಎಂದು ಹೇಳಿ, ಸಂಪೂರ್ಣವಾಗಿ ಅಧಿಕಾರವನ್ನು ವಕ್ಫ್ ಬೋರ್ಡ್‌ಗೆ ಕೊಟ್ಟಿದ್ದಾರೆಂದು ಹೇಳಿದರು. ಈ ಬಗ್ಗೆ ನಾನು ಬಹಳ ಕ್ಲಿಯರ್ ಆಗಿ ಹೇಳಲಿಕ್ಕೆ ಬಯಸುತ್ತೇನೆ;

*'Provided that no mosque, dargah, khanqah, graveyard, or Imambara shall be leased except any unused graveyards in the States of. Punjab, Haryana and Himachal Pradesh where such graveyard has been leased out before the date of commencement of the Wakf (Amendment)Act, 2013'.*

ಇದು ಒಂದು ಸಣ್ಣ ತಿದ್ದುಪಡಿಯನ್ನು ಮಾಡಿರುವುದಾಗಿದೆ. ವಕ್ಫ್ ಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುವುದಿಲ್ಲ.

**ಉಪ ಸಭಾಪತಿಯವರು:-** ಪಾಯಿಂಟ್ ಆಫ್ ಆರ್ಡರ್ ಎಂದು ತಾವು ಏನು ಹೇಳಿದಿರಿ, ಅದನ್ನು ಯಾವುದರಲ್ಲಿ ಹೇಳಲಾಗಿದೆ?

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಎತ್ತಿರುವುದು misleading the House ಬಗ್ಗೆ.

**ಉಪ ಸಭಾಪತಿಯವರು:-** ಅದರ ಬಗ್ಗೆ ಮಾಹಿತಿಯನ್ನು ತೆಗೆದು ಕೊಡಿ. ಇದರ ಬಗ್ಗೆ ಒಂದು ಪಾಯಿಂಟ್ ಆಫ್ ಆರ್ಡರ್ ಅನ್ನು raise ಮಾಡಿದ್ದಾರೆ, ಅದು ಯಾವುದರಲ್ಲಿ quote ಅಗಿದೆ ನೋಡಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 2013 ರಲ್ಲಿ ತಿದ್ದುಪಡಿ ಮಾಡಿರುವುದನ್ನು ದಯವಿಟ್ಟು ನೋಡಿ.

**ಉಪ ಸಭಾಪತಿಯವರು:-** ನೋಡೋಣ. ಪಾಯಿಂಟ್ ಆಫ್ ಆರ್ಡರ್ ಅದರಲ್ಲಿ ಆಗಿದ್ದರೆ ಅದನ್ನು ಒಪ್ಪಿಕೊಳ್ಳೋಣ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದೇಶದ ಸಂವಿಧಾನಕ್ಕೆ ತಿದ್ದುಪಡಿ ತಂದಿರುವಂತಹದ್ದು, ತಿದ್ದುಪಡಿ ಮಾಡಿದಾಗ ಸಂವಿಧಾನದ ಬಗ್ಗೆ ತಪ್ಪು ಹೇಳಿಕೆಗಳನ್ನು ಈ ಸದನದಲ್ಲಿ

ಕೊಡುವಂತಹದ್ದು ತಪ್ಪು. ಅದರಲ್ಲೂ ಮೇಲ್ಮನೆಯಲ್ಲಿ ಕೊಡುವುದು ತಪ್ಪು. ಮತ್ತೆ, 1954ನೇ ಇಸವಿಯಲ್ಲಿ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರುರವರು ಮಾಡಿದಂತಹ ವಕ್ಫ್ ಆಕ್ಟ್ ಏನಿದೆ, ಅದನ್ನು 1995 ರಲ್ಲಿ repeal ಮಾಡಿ ಹೊಸ ಆಕ್ಟ್ ತಂದಿರುವಂತಹದ್ದಾಗಿದೆ. ಅದನ್ನು ತಿದ್ದುಪಡಿ ಮಾಡಿರುವುದಿಲ್ಲ. ಅ ಆಕ್ಟ್ ಅನ್ನು ಸಂಪೂರ್ಣವಾಗಿ ತೆಗೆದು ಹೊಸ ಆಕ್ಟ್ ಅನ್ನು ಮಾಡಲಾಗಿದೆ. ಆನಂತರ 2013 ರಲ್ಲಿ ಈ ಒಂದು ಸಣ್ಣ ಆಕ್ಟ್ ಅನ್ನು ತೆಗೆದುಕೊಂಡು ಬಂದಿದ್ದಾರೆ. ಹಿಮಾಚಲ ಪ್ರದೇಶ, ಹರಿಯಾಣ, ಪಂಜಾಬ್ ರಾಜ್ಯಗಳನ್ನು ಸೇರಿಸಿ, ಅಲ್ಲಿ ಇರತಕ್ಕಂತಹ ಸ್ಮಶಾನಗಳಾಲಿ, Imambara ಎಂದು ಹೇಳಿ, ಇವರ 4-5 ಸಂಸ್ಥೆಗಳ ಜಮೀನುಗಳ ಬಗ್ಗೆ ಇತ್ತೇ ವಿನಃ ಸಂಪೂರ್ಣವಾಗಿ ಅಧಿಕಾರ ಬೇರೆಯವರಿಗೆ ಇರಲಿಲ್ಲ.

(ಮುಂದು)

(726) 09.12.2024 05.10 ಎಸ್‌ವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:-** ಸರಿ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ತಾವು ಮುಂದುವರೆಸಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಇದೆಲ್ಲಾ ಇವರು ಹೇಳಿದ ಪ್ರಕಾರವೇ ನಡೆದಿದ್ದರೆ, ದಾನ ಕೊಟ್ಟ ಆಸ್ತಿಯೇ ವಕ್ಫ್ ಆಸ್ತಿಯಾಗಿದ್ದರೆ ಮಂದಿರ, ಸ್ಮಶಾನ, ಶಾಲೆ ಇವೆಲ್ಲವೂ ವಕ್ಫ್ ಆಸ್ತಿ ಎಂದು ಹೇಗೆ ಘೋಷಣೆಯಾಯಿತು? ಹಾಗಿದ್ದರೆ ಮಧ್ಯದಲ್ಲಿ ಯಾರೋ ಬಕಾಸುರನಂಥವರು ಸೇರಿಕೊಂಡಿದ್ದಾರೆ ಎಂದಾಯಿತಲ್ಲವೆ? ಒಬ್ಬರು ಸಚಿವರು ಜಿಲ್ಲೆ ಜಿಲ್ಲೆಗೂ ಹೋಗಿ ವಕ್ಫ್ ಅದಾಲತ್ ಮಾಡಿದರು. ವಕ್ಫ್ ಅದಾಲತ್ ಮಾಡಿ ಮುಖ್ಯಮಂತ್ರಿಯವರೇ ನಿರ್ದೇಶನವನ್ನು ನೀಡಿದ್ದಾರೆ, ಯಾವ ಯಾವ ಆಸ್ತಿಗಳು ಗೆಜೆಟ್‌ನಲ್ಲಿ ಬಂದಿದೆಯೋ ಅವುಗಳನ್ನು ಇಂಡೀಕರಣ ಮಾಡಬೇಕೆಂದು ಹೇಳಿದರು. ತಾಕೀತು ಮಾಡಿ ಒಂದು ತಿಂಗಳೊಳಗಾಗಿ ಇಂಡೀಕರಣ ಮಾಡದಿದ್ದರೆ ನಿಮ್ಮನ್ನೆಲ್ಲಾ ಅಮಾನತುಗೊಳಿಸುತ್ತೇವೆಂದು ಹೇಳಿದರು. ಕೆಲವು ಕಡೆಗಳಲ್ಲಿ ಅಮಾನತು ಕೂಡ ಮಾಡಿದರು. ಅದರ ಪರಿಣಾಮ ಭಯಗೊಂಡ ಅಧಿಕಾರಿಗಳು ಮೂಲ ದಾಖಲೆಗಳನ್ನು ಪರಿಶೀಲನೆಯೇ ಮಾಡದೆ...

**ಶ್ರೀ ಸಲೀಂ ಅಹಮದ್:-** ಅಮಾನತು ಮಾಡಿರುವವರು ಯಾರೆಂದು ಹೇಳಬೇಕಲ್ಲವೆ?

**ಶ್ರೀ ಸಿ.ಟಿ.ರವಿ:-** ಒಬ್ಬ ನಗರ ಸಭೆ ಆಯುಕ್ತರನ್ನು on the spot ವಕ್ಫ್ ಅದಾಲತ್‌ನಲ್ಲಿ ಅಮಾನತು ಮಾಡಲಾಯಿತು ಎಂದು ನಾನು ಪೇಪರ್‌ನಲ್ಲಿ ಓದಿದ್ದೇನೆ.

**ಶ್ರೀ ಕೆ.ರಹೀಂ ಖಾನ್ (ಪೌರಾಡಳಿತ ಸಚಿವರು):-** ಅವರಿಗೆ ಆ ಇಲಾಖೆ ಸಂಬಂಧಿಸಿಲ್ಲ. ನಮ್ಮ ಇಲಾಖೆಯ ಸಿಬ್ಬಂದಿಯನ್ನು ಅವರು ಹೇಗೆ ಅಮಾನತು ಮಾಡುತ್ತಾರೆ?

**ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಹೋಗಿ ನಗರಾಭಿವೃದ್ಧಿ ಇಲಾಖೆಯ ಸಿಬ್ಬಂದಿಯನ್ನು, ಕಂದಾಯ ಇಲಾಖೆಯ ಸಿಬ್ಬಂದಿಯನ್ನು, ಒಬ್ಬ ಪಿ.ಎಸ್.ಐ. ಅನ್ನು

ಅಮಾನತು ಮಾಡಬಹುದೇ? ಮಾನ್ಯ ರವಿಯವರು ಈ ಬಾರಿ ಸರಿಯಾಗಿ homework ಮಾಡಿ ಬಂದಿಲ್ಲ. Usually, ಬಹಳ ಚೆನ್ನಾಗಿ ಅಧ್ಯಯನ ಮಾಡಿಕೊಂಡು ಬರುತ್ತಾರೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಕಲಬುರಗಿ ಜಿಲ್ಲೆ ನನ್ನ ಸ್ವಂತ ಜಿಲ್ಲೆಯಲ್ಲ. ಅಲ್ಲಿ ಆಳಂದ ಎನ್ನುವ ಒಂದು ತಾಲ್ಲೂಕಿದೆ. ಅಲ್ಲಿನ ಬೀರಲಿಂಗೇಶ್ವರ ದೇವಸ್ಥಾನವನ್ನು ವಕ್ಫ್ ಆಸ್ತಿಗೆ ಸೇರಿಸಿರುವುದು ಸತ್ಯಕ್ಕೆ ದೂರವಾದುದೇ?

**ಶ್ರೀ ಪ್ರಿಯಾಂಕ್ ಖರ್ಗೆ:-** ಸೇರಿಸಿರುವುದಾದರೆ ownership ಆಗಿದೆಯೇ? He is a former Minister ಅವರು ಕೇಳುತ್ತಿದ್ದಾರೆ. ನಾವು ಹೇಳಬೇಕಲ್ಲವೆ? ಅವರು ಕಬ್ಜ ಮಾಡಿದ್ದಾರೆ, ಅವರು illegal ಮಾಡಿದ್ದಾರೆ, demolition ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಅದು ಎಲ್ಲಿ ಎಂದು ಹೇಳಲಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಪ್ರಿಯಾಂಕ್ ಖರ್ಗೆಯವರೆ, ನಾನು ನೀವು ಸೇರಿಸಿದ್ದೀರೆಂದು ಹೇಳಿಲ್ಲ. ನೋಡಿದರೆ ನೀವೇ ಸೇರಿಸಿದಂತೆ ಕಾಣುತ್ತಿದೆ.

**ಶ್ರೀ ಶಶಿಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಪಹಣಿಯ Column No.11 ರಲ್ಲಿ ಬಂದಿದೆ. ಆ ಕಾರಣಕ್ಕಾಗಿ they are claiming.

**Sri PRIYANK KHARGE:** Sir, what is Column No.11?

**ಶ್ರೀ ಸಿ.ಟಿ.ರವಿ:-** ಬೀರಲಿಂಗೇಶ್ವರನಿಗೂ ಅಲ್ಲಾಹನಿಗೂ ಸಂಬಂಧವೇನು? ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಈ ಸದನಕ್ಕೆ ತಪ್ಪು ಮಾಹಿತಿ ಹೋಗುತ್ತಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ವಕ್ಫ್ ಸಚಿವರು ಹೇಳುತ್ತಾರೆ. ಆ ಆಸ್ತಿಯನ್ನು ಕಬ್ಜ ಮಾಡಿ ಕಾಂಪೌಂಡ್ ಹಾಕಿ ಬಣ್ಣ ಹೊಡೆದರೆ ಅದು ದೇವರ ಆಸ್ತಿ. ಅದನ್ನು ನೋಡಿದ ಜನರಿಗೆ ಹಾಗೆ ಭಯ ಬರಬೇಕು. ಈ ರೀತಿ ಪ್ರಚೋದನಕಾರಿ ಭಾಷಣವನ್ನು ಮಾಡಿದ್ದಾರೆ. ಅದೇ ಟಿ.ವಿ.ಗಳಲ್ಲಿ, ಪತ್ರಿಕೆಗಳಲ್ಲಿ ಬಂದದ್ದು. ಅದರಿಂದಲೇ ಇವೆಲ್ಲವೂ ಪ್ರಾರಂಭವಾಗಿದ್ದು. ಅದನ್ನು ಹೇಳಿದರೆ ಇವರು ಏಕೆ ಹೀಗೆ ಎದ್ದು ನಿಂತು ಮಾತನಾಡುತ್ತಾರೆ? ನಮಗೆ ಹೇಳಲಿಕ್ಕೆ ಬಿಡಿ. ನೀವೆಷ್ಟು ಉತ್ತರ ಕೊಡುತ್ತೀರೋ ಕೊಡಿ, ಯಾರು ನಿಮಗೆ ಬೇಡ ಎಂದವರು?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಏಕೆ ಇವರು ವಿಲವಿಲ ಎಂದು ಒದ್ದಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ:-** ಕಬ್ಜ ಮಾಡಿ ಎಂದರೆ illegal ಆಗಿ possession ತೆಗೆದುಕೊಳ್ಳಿ ಎಂದರ್ಥ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅವರ ಒಂದೊಂದು ಪದಕ್ಕೂ ನೀವು ಎದ್ದೆದ್ದು ನಿಂತರೆ ಮಾತನಾಡುವುದು ಹೇಗೆ?

**ಶ್ರೀ ಪ್ರಿಯಾಂಕ್ ಖರ್ಗೆ:-** ಪದ ಅಲ್ಲ ಸ್ವಾಮಿ. ಅದು ಸತ್ಯಕ್ಕೆ ದೂರವಾದದ್ದು.

**ಶ್ರೀ ಸಿ.ಟಿ.ರವಿ:-** ನಾನು ಇದ್ದದ್ದು ಇದ್ದ ಹಾಗೆ ಹೇಳದರೆ ಎದ್ದು ಬಂದು ಅದೇನೋ ಆದಂತಾಗುತ್ತದೆ ಎನ್ನುತ್ತಾರಲ್ಲ, ಹಾಗೆ ಆಗುತ್ತಿದೆ ಇವರಿಗೆ.

**ಉಪ ಸಭಾಪತಿಯವರು:-** ಮುಂದುವರೆಸಿ, ಸಾಕಷ್ಟು ಸಮಯವಾಗಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಯಾವ ರೈತರದ್ದು ಎಂದು ಇವರು ಕೇಳದರು. ನಾನು ಖಾಸಗಿ ಕಾರ್ಯಕ್ರಮವೊಂದಕ್ಕೆ ಕಲಬುರಗಿಗೆ ಹೋಗಿದ್ದೆನು. ಅಲ್ಲಿ ನೇಗಿಲಯೋಗಿ ಸ್ವಾಭಿಮಾನಿ ವೇದಿಕೆಯವರು ಧರಣಿ ಕುಳತಿದ್ದರು. ಅವರು ಧರಣಿ ಕುಳತಿದ್ದಾರೆ ಎಂದು ಕಾರ್ಯಕರ್ತರಿಂದ ಹಿನ್ನೆಲೆಯಲ್ಲಿ ನಾನು ಅವರ ಬಳಗೆ ಹೋದೆನು. ಅವರು ದಾಖಲೆಗಳ ಜೊತೆಯಲ್ಲಿ ನನಗೆ ಒಂದು ಮನವಿಯನ್ನು ಕೊಟ್ಟರು. ಇದು ನನ್ನದಲ್ಲ. ಅವರು ಕೊಟ್ಟ ಮನವಿಯಲ್ಲಿ ಹೇಳರುವುದನ್ನು ಓದುತ್ತೇನೆ. "ಅಸಂವಿಧಾನಿಕವಾಗಿ ರಚನೆಗೊಂಡು ರೈತರ, ಮಠ-ಮಂದಿರಗಳ ಆಸ್ತಿ ಪಾಸ್ತಿಯನ್ನು ಕಬಳಸುತ್ತಿರುವ ವಕ್ಫ್ ಸಂಬಂಧ ಗೆಜೆಟ್ ಅಧಿಸೂಚನೆಯನ್ನು ರದ್ದುಪಡಿಸಲು ಮನವಿ" ಎಂಬುದು ಇದರ ವಿಷಯ.

"ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಗೆಜೆಟ್ ಅಧಿಸೂಚನೆಯ ನಂತರ ರಾಜ್ಯದಲ್ಲಿ ಸಾವಿರಾರು ಎಕರೆ ಭೂಮಿಯನ್ನು ರೈತರ, ಜನಸಾಮಾನ್ಯರ, ಸರ್ಕಾರಿ ಆಸ್ತಿಯನ್ನು ಮತ್ತು ಮಠ-ಮಂದಿರಗಳ ಆಸ್ತಿಗಳನ್ನು ವಕ್ಫ್ ಹೆಸರಿನ ಪಹಣಿಯಲ್ಲಿ ನಮೂದಿಸಿ ರೈತರ, ಜನಸಾಮಾನ್ಯರ ನಿದ್ದೆಯನ್ನು ಹಾಳು ಮಾಡಿ ಆತಂಕ ಸೃಷ್ಟಿಸಲಾಗುತ್ತಿದೆ. ಅನೇಕ ದಶಕಗಳಂದ ಭೂಮಿಯನ್ನು ಉಳುಮೆ ಮಾಡುತ್ತಿರುವ ರೈತರ ಜಮೀನಿಗೆ ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನಮೂದಿಸಲಾಗಿದೆ. ಕಲಬುರಗಿ ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯು ಭೂಮಿಯನ್ನು ವಕ್ಫ್ ಹೆಸರಿಗೆ ವರ್ಗಾಯಿಸಿ ನೋಟಿಸ್ ಜಾರಿ ಮಾಡುತ್ತಿದೆ. ರೈತರ, ಸಾಮಾನ್ಯ ನಾಗರಿಕರ ಆತಂಕ, ಧರಣಿ, ಆಂದೋಲನ, ವಿರೋಧದ ಕಾವು ಅರಿತ ಮಾನ್ಯ ಮುಖ್ಯಮಂತ್ರಿಗಳು ಪಹಣಿಯಲ್ಲಿರುವ ಸದರಿ ನಮೂದನ್ನು ಹಿಂಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದ್ದರು. ಅಧಿಕಾರಿಗಳು ಕ್ರಮ ಜರುಗಿಸದೆ ಹೊಸದಾಗಿ ನೋಟಿಸ್ ನೀಡುತ್ತಿರುವುದು ಖಂಡನೀಯವಾಗಿದೆ. ಸಾಮಾನ್ಯವಾಗಿ ತಂಟೆ-ತಕರಾರು ಬಂದರೆ ದೇಶದ ಪ್ರತಿಯೊಬ್ಬ ಪ್ರಜೆಯು Trial Court ನಿಂದ Supreme Court ವರೆಗೂ ವಿಚಾರಣೆ ನಡೆಯುತ್ತದೆ. ಆದರೆ ಬೋರ್ಡ್‌ಗೆ ಸಂಬಂಧಿಸಿದ ಯಾವುದೇ ವಿಚಾರಣೆಯು ಏಕಪಕ್ಷೀಯ ಸದಸ್ಯರನ್ನು ಒಳಗೊಂಡಿರುವ Waqf Tribunal Board ನಲ್ಲಿ ನಡೆಯುತ್ತಿದೆ. ಮಂಡಳಯ ವಿರುದ್ಧವೇ ತಕರಾರಿದ್ದರೂ ಅದೇ ಮಂಡಳಯ ಸದಸ್ಯರು ಕೈಗೊಳ್ಳುವ ನಿರ್ಧಾರವೇ ಅಂತಿಮ. ಮಂಡಳಯ ನಿರ್ಧಾರದ ವಿರುದ್ಧ ಬೇರೆಲ್ಲಿಯೂ ಮನವಿ ಹೋಗುವಂತಿಲ್ಲ. ಇದೊಂದು ಅಸಂವಿಧಾನಿಕ

ಕ್ರಮವಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಹೊರಡಿಸಿರುವ ವಕ್ಫ್ ಸಂಬಂಧಿತ ಅಧಿಸೂಚನೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸುತ್ತೇವೆ."

ಈ ಮನವಿಯ ಜೊತೆಗೆ ದಾಖಲೆಗಳನ್ನು ಲಗತ್ತಿಸಿ ನನಗೆ ಕೊಟ್ಟಿದ್ದಾರೆ. ಆ ದಾಖಲೆಗಳಲ್ಲಿ ರೈತರ ಪಹಣಿಯನ್ನು ಕೊಟ್ಟಿದ್ದಾರೆ. ಆ ಪಹಣಿಯಲ್ಲಿ ಬಹಳ ಸ್ಪಷ್ಟವಾಗಿ ಹೆಸರು ಮತ್ತು ಕಾಲಂ 11 ರಲ್ಲಿ ಹಕ್ಕು ಎಂದು ನಮೂದಿಸಿರುವ ಕಡೆ ವಕ್ಫ್ ಆಸ್ತಿ ಎಂದು ಬಂದಿದೆ. ಇದರಲ್ಲಿ ಮುಸ್ಲಿಮರೂ ಇದ್ದಾರೆ, ಹಿಂದೂಗಳು ಇದ್ದಾರೆ. ಹೇಗೆ ಬಂದಿತು? ಕಾಲಂ 11 ರಲ್ಲಿ ಏಕೆ ಬಂದಿತು? ನನ್ನ ಅಪ್ಪನ ಆಸ್ತಿಗೆ ವಕ್ಫ್ ಆಸ್ತಿ ಎಂದು ನಮೂದಿಸಲು ಇವರಿಗೆ ಅಧಿಕಾರ ಕೊಟ್ಟವರು ಯಾರು? ಅದಕ್ಕೆ ಯಾರು ದಾನ ಕೊಟ್ಟಿದ್ದಾರೆಯೋ ಅದರ ಸತ್ಯಾಸತ್ಯತೆಯ ಪರಿಶೀಲನೆಯಾಗಬೇಕು ಎಂದು ನಾವು ಹೇಳಿದ್ದೇವೆ. ದಾನ ಕೊಟ್ಟಿರುವುದು ನಿಜವೇ? ದಾನ ಕೊಟ್ಟಿರುವುದು ಅವರ ಪಿತ್ರಾರ್ಜಿತ ಆಸ್ತಿಯೇ ಅಥವಾ ಸ್ವಯಾರ್ಜಿತ ಆಸ್ತಿಯೇ? ಯಾವಾಗ ದಾನ ಕೊಟ್ಟರು? ಎಷ್ಟು ದಾನ ಕೊಟ್ಟರು? ಅದನ್ನು ಪರಿಶೀಲನೆ ಮಾಡಿ, ಅದನ್ನು ವಕ್ಫ್ ಬೋರ್ಡ್‌ನ ನಿರ್ವಹಣೆಗೆ ಕೊಟ್ಟರೆ ಅದು ತಪ್ಪಲ್ಲ.

ಮಾನ್ಯ ಸಭಾಪತಿಯವರೆ, ನಾವು-ನೀವು ಇಬ್ಬರೂ ಒಂದೇ ಜಿಲ್ಲೆಯವರು. ಇನಾಂ ದತ್ತಾತ್ರೇಯ ಪೀಠ versus ಬಾಬಾಬುಡನ್ ದರ್ಗಾದ ವಿವಾದ ನಿಮಗೆ ಗೊತ್ತಿದೆ. ಅಲ್ಲಿ ದತ್ತಾತ್ರೇಯ ದೇವರು ಇದೆ ಎಂದು ಕಂದಾಯ ದಾಖಲೆಗಳು ಹೇಳುತ್ತವೆ. 1811 ಎಕರೆ ಜಮೀನು ದತ್ತಾತ್ರೇಯ ದೇವರ ಹೆಸರಿನಲ್ಲಿ ಇನಾಂ ರದ್ದಿಯಾತಿ ಕಾಯಿದೆ ಬರುವುದಕ್ಕೂ ಮುಂಚೆ ಇತ್ತು ಎಂಬುದನ್ನು ಕಂದಾಯದ ದಾಖಲೆಗಳು ಹೇಳುತ್ತವೆ. ದತ್ತಾತ್ರೇಯ ದೇವರು ಇದೆ, ಇದಕ್ಕೆ ಮಧ್ಯಂತರ ತಸ್ತೀಕ್ ಅನ್ನು ಬಿಡುಗಡೆ ಮಾಡಿದ್ದು ದತ್ತಾತ್ರೇಯ ದೇವರ ಖಾತೆಯಲ್ಲಿ ಇಟ್ಟಿದ್ದೇವೆ ಎಂದು ಮುಜರಾಯಿ ದಾಖಲೆಗಳು ಹೇಳುತ್ತವೆ. ನಾನು Right to Information Act ಅಡಿಯಲ್ಲಿ ಅರ್ಜಿ ಹಾಕಿ ಕೇಳಿದಾಗ ದತ್ತಾತ್ರೇಯ ದೇವರು ಇದೆ, ದತ್ತಾತ್ರೇಯ ದೇವರ ಹೆಸರಿನಲ್ಲಿ ಮಧ್ಯಂತರ ತಸ್ತೀಕ್ ಬಿಡುಗಡೆಯಾಗಿದ್ದು, ಇನ್ನೂ ಅಂತಿಮ ತಸ್ತೀಕ್ ನಿಗದಿಯಾಗಿಲ್ಲ ಎಂದು ಹೇಳಿದ್ದಾರೆ. 1973-74ರಲ್ಲಿ ಇಡೀ ದತ್ತಾತ್ರೇಯ ಪೀಠವನ್ನು ಬಾಬಾಬುಡನ್ ದರ್ಗಾ ಎಂದು ಗೆಜೆಟ್ ನೋಟಿಫಿಕೇಷನ್ ಮಾಡಿ ಕಬ್ಜ ಮಾಡಿಕೊಳ್ಳಲಿಕ್ಕೆ ಬಂದರು. ದಾಖಲೆ ಪರಿಶೀಲನೆ ಮಾಡದೆ ಗೆಜೆಟ್ ನೋಟಿಫಿಕೇಷನ್ ಮಾಡಿದ್ದರ ಪರಿಣಾಮವಿದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಜಾರ್ಜ್ ಅವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು. ಅವರಿಗೆ ಗೊತ್ತು. ಚಿಕ್ಕಮಗಳೂರು ತಾಲ್ಲೂಕು ಕಛೇರಿಯ ಎದುರಿಗೆ ಒಂದು ಬಡಾ ಮಕಾನ್ ಎಂದು ಇದೆ.

(ಮುಂದು)

(727) 09-12-2024 (5.20) ಕೆಜಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

**Sri C.T.RAVI (contd.):**

As per municipal records it is 18 X 89. Claim ಮಾಡುತ್ತಿರುವುದು ಮೂರುವರೆ ಎಕರೆ. ಕಬ್ಜಾ ಮಾಡಿಕೊಂಡಿರುವುದು ಒಂದು ಮುಕ್ಕಾಲು ಎಕರೆ. 18X 89 ಜಾಗ ಅವರದ್ದೇ. ಆದರೆ, ಮೂರುವರೆ ಎಕರೆ ಜಾಗ ಅವರದ್ದಲ್ಲ. ಅಲ್ಲಿ ಇರುವುದು 18X89. ನಾನು ಚಿಕ್ಕಮಂಗಳೂರಿನದ್ದು ಉದಾಹರಣೆ ಕೊಡುತ್ತಿದ್ದೇನೆ. ಕಬ್ಜಾ ಮಾಡಿಕೊಂಡಿರುವುದು ಒಂದು ಮುಕ್ಕಾಲು ಎಕರೆ. Claim ಮಾಡುತ್ತಿರುವುದು ಮೂರುವರೆ ಎಕರೆ. ಮೂಲ ಮೂರುವರೆ ಎಕರೆ ಜಾಗ ನೆಲ್ಲೂರು ಮಠಕ್ಕೆ ಸೇರಿದ್ದು. ಅದರ ಬಗ್ಗೆ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿದೆ. As per records, ಅದು ನೆಲ್ಲೂರು ಮಠಕ್ಕೆ ಸೇರಿದ್ದು. ಇಲ್ಲಿ ಬಡಾಮಕಾನ್‌ಗೆ ಇರುವುದು 18X89.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು. ಅದನ್ನು ನ್ಯಾಯಾಲಯ ತೀರ್ಮಾನ ಮಾಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅವರು ಮಾತನಾಡಲಿ ಬಿಡಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಇನ್ನೊಂದು ಉದಾಹರಣೆ ಇದೆ. ಚಿಕ್ಕಮಗಳೂರಿನಲ್ಲಿ "ರತ್ನಗಿರಿ ಬೋರ್" ಎಂಬ ಪ್ರವಾಸಿ ಸ್ಥಳವಿದೆ. ಅಲ್ಲಿ ಒಂದು ಸಾವಿರ ವರ್ಷಗಳ ಹಿಂದಿನ 'ನಂದಿ ವಿಗ್ರಹ' ಇದೆ. ಅಲ್ಲಿ ಶ್ರೀ ಕಾಳಿಕಾಂಭ ದೇವಾಲಯ ಇದೆ. ನಾವೀಗ ಅದನ್ನು "ಮಹಾತ್ಮ ಗಾಂಧಿ ಪಾರ್ಕ್" ಎಂದು ಅಭಿವೃದ್ಧಿ ಮಾಡಿದ್ದೇವೆ. ಅಲ್ಲಿ ಮಕ್ಕಳ ರೈಲು ನಡೆಯುತ್ತದೆ. ಅದು highest ಜನ ಬರುವಂತಹ picnic spot ಆಗಿದೆ. ಅಲ್ಲಿ ಯಾವುದೇ ದರ್ಗಾ ಇಲ್ಲ. ಏಕ ಪಕ್ಷೀಯವಾಗಿ ದರ್ಗಾ ಎಂದು gazette notification ನಲ್ಲಿ ಮಾಡಿಕೊಂಡಿದ್ದಾರೆ. ಯಾವ ದರ್ಗಾವು ಇಲ್ಲ. ಅಲ್ಲಿ ಸುತ್ತಮುತ್ತಲಿನ ಅವರಣದಲ್ಲಿ Police Training Centre ಇದೆ. Police Parade Ground ಇದೆ. ಪೋಲೀಸರಿಗೆ ತರಬೇತಿ ಕೊಡುವಂತಹ ಸಂಸ್ಥೆ ಇದೆ. ಅದೆಲ್ಲವನ್ನು ಸೇರಿಸಿಕೊಂಡು gazette notification ನಲ್ಲಿ 'ದರ್ಗಾ' ಎಂದು ಮಾಡಿಕೊಂಡಿದ್ದಾರೆ. ಅಲ್ಲಿ ಯಾವುದೇ ದರ್ಗಾ ಇಲ್ಲ. ನಾನು ಹೇಳುವುದು ಏನೆಂದರೆ, ಈ ತರಹ ಪ್ರತಿಯೊಂದು ದಾಖಲೆಯನ್ನು ಪರಿಶೀಲನೆ ಮಾಡಿ ದಾನ ಕೊಟ್ಟಿರುವಂತಹ ಜಮೀನು ಇದ್ದರೆ,

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಲ್ಯಾಂಡ್‌ಗೆ ಸಂಬಂಧಿಸಿದಂತೆ gazette notification ಅನ್ನು ಮಾಡಬೇಕಾದರೆ, Waqf Board ನವರು ಮಾಡುತ್ತಾರೆಯೇ ಅಥವಾ ಸರ್ಕಾರ ಮಾಡುತ್ತದೆಯೇ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡುತ್ತದೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಅವರ ಪ್ರಕಾರ ಸರ್ಕಾರ ಮಾಡುತ್ತದೆ. ಅದರಲ್ಲಿ ಏನಾದರೂ ತಪ್ಪು ಇದ್ದರೆ, ಯಾರು ಬೇಕಾದರೂ ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡಬಹುದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಅದನ್ನೇ ಹೇಳುತ್ತಿದ್ದೇನೆ. ನಾವು ಪ್ರಶ್ನಿಸುವ ಅಧಿಕಾರವನ್ನು Wafq Tribunal ನಲ್ಲಿ ಮಾತ್ರ ಮಾಡಬೇಕು ಎನ್ನುವುದು ಇದೆ ಅಲ್ಲವೇ; ಅದು unconstitutional. ಅದು ಸಂವಿಧಾನ ಬಾಹಿರ. ಈಗ ಈ ವಿವಾದ...

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಅಬ್ದುಲ್ ಜಬ್ಬರ್‌ರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಅವರು ಸತ್ಯಕ್ಕೆ ದೂರವಾದದ್ದನ್ನು ಹೇಳಿದರೂ ಸಹ ನಾವು ಕೇಳಬೇಕೇ? ಅವರು ಸತ್ಯವನ್ನು ಹೇಳಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಅಬ್ದುಲ್ ಜಬ್ಬರ್‌ರವರೇ, ಶ್ರೀ ಐವನ್ ಡಿ'ಸೋಜಾರವರೇ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಆಗಲೂ ಸತ್ಯಕ್ಕೆ ದೂರವಾದದ್ದನ್ನು ಹೇಳಿದರು. ಇನ್ನೂ ಈಗಲೂ ಹೇಳುತ್ತಿದ್ದಾರೆ.

**ಶ್ರೀ ಐವನ್** ಡಿ'**ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಪ್ರತಿಯೊಂದು ವಿಚಾರಕ್ಕೂ ಸತ್ಯಕ್ಕೆ ದೂರವಾದದ್ದನ್ನು ಹೇಳುತ್ತಾರೆ. ಯಾವುದಕ್ಕೂ ದಾಖಲೆ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರೇ, ತಾವು ಕುಳಿತುಕೊಳ್ಳಿ. ತಮಗೆ ಏನಾದರೂ ರೀತಿ ನೀತಿ ಇದೆಯೋ ಅಥವಾ ಇಲ್ಲವೋ? ನಾನು ಬೇಡವೆಂದು ಹೇಳಿದರೂ ಸಹ, ತಾವು ಮಾತನಾಡುತ್ತೀರಿ? ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಅವರು ಮಾತನಾಡುವಾಗ ನೋಟ್ ಮಾಡಿಕೊಂಡು ಆ ಮೇಲೆ ಮಾತನಾಡಿ. ತಮಗೆ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ, ತಾವು ಮಾತನಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇದೊಂದು sample.

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಒಂದು clarification ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಸದಸ್ಯರು ಪದೇ ಪದೇ Waqf Tribunal ನಲ್ಲಿ ತೀರ್ಮಾನವಾಗಿ ಬಿಟ್ಟರೆ, ಮತ್ತೆ ನ್ಯಾಯಾಲಯಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದು ತಪ್ಪು. Waqf Tribunal ನಲ್ಲಿ ತಪ್ಪಾಗಿ ತೀರ್ಮಾನವಾದರೆ ಮತ್ತೆ ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡಬಹುದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, Waqf Act ಗೆ ತಿದ್ದುಪಡಿ ಮಾಡಿಕೊಟ್ಟಿರುವಂತಹ ಪರಮಾಧಿಕಾರದಲ್ಲಿ Tribunal ನಲ್ಲಿ ಬಗೆಹರಿಸಿಕೊಳ್ಳಬೇಕೆಂದು ಇದೆ. ಒಂದು ಕೇಸ್..

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ನಸೀರ್ ಅಹ್ಮದ್‌ರವರೇ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರು ಮಾಜಿ ಸಚಿವರು ಆಗಿದ್ದಾರೆ. ಅವರು ಮಾಹಿತಿ ಇಲ್ಲದೇ ಮಾತನಾಡಬಾರದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಮಾನ್ಯ ಸದಸ್ಯರು ಏನೇನು ಮಾಡುತ್ತಾರೆಂದು ನನಗೆ ಮಾಹಿತಿ ಇದೆ. ಅದನ್ನು ಬಿಚ್ಚಿಟ್ಟರೆ ಅವರ ಬಂಡವಾಳ ಬಯಲಾಗುತ್ತದೆ. ಅವರು ಸೇರಿಕೊಂಡು ಏನೇನು ಮಾಡಿದ್ದಾರೆಂದು ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರನ್ನು ಹೇಗೆ ದಿಕ್ಕು ತಪ್ಪಿಸಿದರು ಎಂದು ಎಲ್ಲವೂ ನನಗೆ ಗೊತ್ತಿದೆ. ಅವರು ಮಾನ್ಯ ಮುಖ್ಯಮಂತ್ರಿಯವರನ್ನು misguide ಮಾಡಿದ್ದಾರೆ. (ಗೊಂದಲ) ಅವರಂತಹ ಒಂದಷ್ಟು ಜನ ಮತಾಂಧರು ಸೇರಿ misguide ಮಾಡಿದ್ದಾರೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರು ಯಾವ amendment ಇದೆ ಎಂದು ತೋರಿಸಲಿ. ಅವರದ್ದೇ ಸರ್ಕಾರವಿದ್ದಾಗ ಏಕೆ ಮಾಡಲಿಲ್ಲ? ಶ್ರೀ ಅನ್ವರ್ ಮಾನಪ್ಪಾಡಿ ವರದಿ....

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಅದು ಹಿಂದೆ-ಮುಂದೆ ಏಕೆ? ಮಾನ್ಯ ಸದಸ್ಯರು ಅದು ಏನಿದೆ ಎಂದು ಬಿಚ್ಚಿಡಲಿ.

**(ಗೊಂದಲ)**

**ಸಭಾಪತಿಯವರು:-** ನನ್ನ ಅನುಮತಿ ಪಡೆಯದೇ ಯಾವ ಸದಸ್ಯರು ಮಾತನಾಡಿದ್ದು ಕಡತಕ್ಕೆ ಹೋಗಬಾರದು. ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು ಮಾತನಾಡಿದ್ದನ್ನು ನೋಟ್ ಮಾಡಿಕೊಳ್ಳಿ. ತಾವು ಅನಾವಶ್ಯಕವಾಗಿ ಮಧ್ಯ ಮಧ್ಯೆ ಎದ್ದು ಮಾತನಾಡಬಾರದು. ತಮಗೆ clarification ಗೆ ಬೇಕಾದರೆ, ಆ ಮೇಲೆ ಸಮಯ ಕೊಡುತ್ತೇನೆ. ಈಗ ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ., ತಾವು ಮಾತನಾಡಿ.

**(ಈ ಹಂತದಲ್ಲಿ ಪೀಠದ ಅನುಮತಿ ಪಡೆಯದೇ ಮಾತನಾಡಿದ ಯಾವುದೇ ಸದಸ್ಯರ ಹೇಳಿಕೆ ಕಡತಕ್ಕೆ ಹೋಗಬಾರದೆಂದು ಸೂಚಿಸಿದ್ದಾರೆ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ದಾನ ಕೊಟ್ಟ ಆಸ್ತಿಯ ನಿರ್ವಹಣೆಯ ಸಲುವಾಗಿ ಬೋರ್ಡ್ ಹುಟ್ಟಿಕೊಂಡಿದ್ದು, ಅದು ಅಷ್ಟಕ್ಕೆ ಸೀಮಿತವಾಗಿದ್ದರೆ ವಿವಾದ ಸೃಷ್ಟಿಯಾಗುತ್ತಿರಲಿಲ್ಲ ಎಂದು ನಾನು ಹೇಳಿದೆ. ಮುಂದುವರೆದು ಏನೇನು ಆಯಿತು? ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿದೆ ಎಂದಲ್ಲ. ತಮಿಳುನಾಡಿನಲ್ಲಿ ಶ್ರೀ ಸುಂದರೇಶ್‌ಪುರ ದೇವಾಲಯ ಇದೆ. ಅದು ಚೋಳರ ಕಾಲದ್ದು ಅಗ್ರಹಾರ. ಅಗ್ರಹಾರ ಗ್ರಾಮ ಗ್ರಾಮಗಳನ್ನೇ waqf property ಎಂದು notification ಮಾಡಿಕೊಂಡು ಇವತ್ತು ಅದು ವಿವಾದವಾಗಿ ನಿಂತಿದೆ. ಕೇರಳದಲ್ಲಿ ಮುಂದುವರೆದು Church ಗಳು ಸಹ waqf property ಎಂದು protest ಮಾಡಿದ್ದನ್ನು ಸಹ ನಾನು ದಿನಪತ್ರಿಕೆಗಳಲ್ಲಿ ನೋಡಿದ್ದೇನೆ. ಆ ಚರ್ಚ್‌ನ್ನು ಸಹ waqf property ಎಂದು ಘೋಷಣೆ ಮಾಡಿಕೊಂಡಿದ್ದಕ್ಕೆ ಚರ್ಚ್‌ನವರು protest ಮಾಡಿದ್ದು ದಿನಪತ್ರಿಕೆಗಳಲ್ಲಿ ಬಂದಿದೆ. ನಾವು ಹಾವೇರಿ ಜಿಲ್ಲೆಗೆ ಹೋದಂತಹ ಸಂದರ್ಭದಲ್ಲಿ ಶ್ರೀ ಚನ್ನಪ್ಪ ತಂದೆ ಶ್ರೀ ರುದ್ರಪ್ಪ ಬಾಳಿಕಾಯಿ ಎಂಬುವರು ಒಂದು ಮನವಿಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟ ಮನವಿಯನ್ನು ಸಭೆಗೆ ಓದುತ್ತೇನೆ. Waqf Board ನಿಂದ ಅನ್ಯಾಯದ ಕುರಿತು. ಮಾನ್ಯರೇ, ನಾನು ಹಾನಗಲ್ ತಾಲ್ಲೂಕ್, ಹರನಗಿರಿ ಗ್ರಾಮದ ಖಾಯಂ ರವಾಸಿ ಇರುತ್ತೇನೆ. ನಮ್ಮ ತಂದೆಯವರಾದ ಶ್ರೀ ರುದ್ದಪ್ಪ ತಂದೆ ಶ್ರೀ ಮಳಕಪ್ಪ ಬಾಳಿಕಾಯಿರವರು ಹಾನಗಲ್ ತಾಲ್ಲೂಕ್, ಅಲ್ಲಾಪುರದ ಗ್ರಾಮದ ಸರ್ವೆ ನಂಬರ್ 31/1 ರ ಪೈಕಿ 4 ಎಕೆರೆ 36 ಗುಂಟೆ ಜಮೀನನ್ನು 1964 ರಲ್ಲಿ ಖರೀದಿಗೆ ತೆಗೆದುಕೊಂಡಿದ್ದು ಇರುತ್ತದೆ. 1964 ರಿಂದ 2015 ರವರೆಗೆ ಈ ಮೇಲ್ಕಂಡ ಆಸ್ತಿಯನ್ನು ನಾವೇ ಉಳುಮೆ ಮಾಡಿ ಉಪಯೋಗ ಮಾಡಿಕೊಂಡು ಬಂದಿರುತ್ತೇವೆ. ಆದರೆ, ವಕ್ಫ್ ಇಲಾಖೆಯವರು ವಕ್ಫ್ ಆಸ್ತಿ ಎಂದು ನಮಗೆ ಯಾವುದೇ ರೀತಿಯ ನೋಟಿಸ್ ಕೊಡದೇ 2015 ರಲ್ಲಿ ವಶಪಡಿಸಿಕೊಂಡಿದ್ದು ಇರುತ್ತದೆ. ನಮಗೆ ಇದರಿಂದ ಬಹಳ ಮಾನಸಿಕವಾಗಿ ಬಹಳ ಹಿಂಸೆಯಾಗಿರುತ್ತದೆ. ನನ್ನ ಮಗನಾದ ಶ್ರೀ ರುದ್ರಪ್ಪ ಉರುಫ್ ಶ್ರೀ ಚಂದ್ರಪ್ಪ ಇವರು ಈ ಜಮೀನಿನ ಸಲುವಾಗಿ ಮಾನಸಿಕವಾಗಿ ನೊಂದುಕೊಂಡು ದಿನಾಂಕ 06-01-2022 ರಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ನಮಗೆ ವಕ್ಫ್ ಇಲಾಖೆಯಿಂದ ಆಗಿರುವ ತೊಂದರೆಯನ್ನು ಸರಿಪಡಿಸಲು ಆದೇಶಿಸಬೇಕಾಗಿ ಕೋರುತ್ತೇನೆಂದು ಕೊಟ್ಟಿರುವಂತಹ ಮನವಿಯಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಸಿ.ಟಿ.ರವಿಯವರೇ, ತಾವು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಹೋಗಿ ಮಾಡಿಕೊಂಡು ಬಂದಿರುವಂತಹ ವರದಿ ಅದು. ಅವರು ನಮಗೆ ಏಕೆ ಅದನ್ನು ಹೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ, ತಾವು ಒಂದು ನಿಮಿಷ ಕೇಳಿ. ಅವರು ಮಾತನಾಡುವಾಗ ತಾವು ನೋಟ್ ಮಾಡಿ ಇಟ್ಟುಕೊಳ್ಳಿ. ತಾವು ಮಾತನಾಡಬೇಕೆಂದು ಕೈ ಮೇಲೆ ಮಾಡಿದಾಗ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆದರೆ, ಅವರು ಮಾತನಾಡುವಾಗ ತಾವು disturb ಮಾಡಬೇಡಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ, ಒಂದೇ ಒಂದು ನಿಮಿಷ. ನಾನು ಅವರ ಬಳಿ ಅನುಮತಿ ತೆಗೆದುಕೊಂಡಿದ್ದೇನೆ. ಒಂದೇ ಒಂದು ಲೈನ್ ಹೇಳಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರೇ, ಮಾನ್ಯ ಸಭಾನಾಯಕರು ಮಾತನಾಡಲು ನಿಂತಿದ್ದಾರೆ. ಹಾಗಾಗಿ, ಒಂದು ನಿಮಿಷ ಇರಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಕಳಕಳಿ ಏನೆಂದರೆ, ಗುರುತು ಇರುವಂತಹ ವಿಷಯಗಳನ್ನು ಸಹ, ಉದ್ದೇಶ ಪೂರ್ವಕವಾಗಿ ಸದನಕ್ಕೆ ಮತ್ತು ಹೊರಗಿನ ಜನರಿಗೆ ದಾರಿ ತಪ್ಪಿಸುವಂತಹ ಕೆಲವು ವಿಷಯಗಳನ್ನು ಅವರು ಮಾತನಾಡಿದರು. ಅದಕ್ಕಾಗಿ ನಮ್ಮ ಸದಸ್ಯರು ಅದು ಅಲ್ಲ. ಅದನ್ನು clarify ಮಾಡಿ ಎಂದು ಹೇಳಿದರು. ಅದು ಸರಿಯಲ್ಲ ಅಲ್ಲವೇ; ಬಹಳ ಅಶಾಂತಿಗೆ ಅವಕಾಶ ತರುವಂತಹ ಸಂದರ್ಭ ಎಂದು ಅವರು ಹೇಳುತ್ತಿದ್ದಾರೆ. ಅದಕ್ಕಾಗಿ ಇನ್ನೂ ಹೆಚ್ಚಿನ ಅಶಾಂತಿಗೆ ಅವಕಾಶ ಕೊಡಬಾರದು ಎಂಬುದು ನಮ್ಮ ಕಳಕಳಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ. ಇಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ಮಾತನಾಡುವುದಕ್ಕೆ ಅವಕಾಶ ಇದೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, sensitive issue ಎಂದು ನಾವು ಭಾವಿಸುತ್ತೇವೆ. ಆದರೆ, ಅವರು ಈ ರೀತಿ ಮಾತನಾಡಬಾರದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಪೀಠ ಹೇಳಿದ್ದನ್ನು ಕೇಳಲಿಲ್ಲವೆಂದರೆ ಹೇಗೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪೇಪರ್‌ನಲ್ಲಿ ಇದೆ. ಅದನ್ನು ಓದಿದ್ದೇವೆ. ಇಲ್ಲಿ ಬಹಳ ಇದೆ. ಅದೇ ಸುದ್ದಿ ಇದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ. ಅವರು ಮಾತನಾಡಲಿ. ಅದು ಸರಿ ಇಲ್ಲವೆಂದರೆ, ನಾನು ನೋಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಪೀಠಕ್ಕೆ ಮನವಿ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಹೇಳಿದ್ದನ್ನು ನೋಡುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾನಾಯಕರೇ, ಈಗಾಗಲೇ ಇಲ್ಲಿ ಸಾಕಷ್ಟು ವಿಚಾರ ಬಂದಿದೆ. ನಾಳೆ ದಿನಪತ್ರಿಕೆಗಳಲ್ಲಿಯೂ ಬರುತ್ತದೆ. ಅದಕ್ಕೆ ತಪ್ಪು ಮಾಹಿತಿ ಹೋಗಬಾರದು ಎನ್ನುವುದು ಅಷ್ಟೇ ನಮ್ಮ ಕಳಕಳಿ. notification ಯಾವುದು ಇಲ್ಲ. ಅವರು notification ಇದ್ದರೆ ಕೊಡಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ. ಅದನ್ನು ನನಗೆ ಕಳುಹಿಸಿ. ಅದು ಸರಿ ಇಲ್ಲವೆಂದರೆ, ನಾನು ತೆಗೆಯುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾನಾಯಕರೇ, notification ಅನ್ನು ಮಾಡಿದ್ದರೆ, ಅವರು ಅದನ್ನು ಕಳುಹಿಸಿಕೊಡಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು partially correct ಇದೆ. ಅವರದ್ದು 8 ಎಕರೆ ಜಮೀನು ಇತ್ತು.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದರ ಬಗ್ಗೆ ಮಾತನಾಡಬೇಡಿ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿ ಮತ್ತು ಬಿಟಿ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಏಕೆಂದರೆ, ವಕ್ಫ್ ಎಂದು ನಮೂದು ಆಗಿದೆ, ಅದಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅಲ್ಲ. ಅವರು ಸಾಲ ತೆಗೆದುಕೊಂಡಿರುವುದು ನಿಜ. ಆದರೆ, ಅವರ ಸ್ವಂತ ಜಮೀನಿನ ಮೇಲೆ ಯಾವುದೇ ಖಾಸಗಿ ಬ್ಯಾಂಕುಗಳು waqf property ಯ ಸಾಲವನ್ನು ರೈತರಿಗೆ ಕೊಡುವುದಿಲ್ಲ. ಅವರು ಬೇಕಾದರೆ, ಪಂಚನಾಮೆಯನ್ನು ತೆಗೆದು ನೋಡಲಿ. ಆ ಕುಟುಂಬದವರು ಬಹಳ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಈ 4 ಎಕರೆ ಜಮೀನು ನನ್ನ ಹೆಸರಿನಲ್ಲಿ ಇತ್ತು. ಈ ಜಮೀನಿನ ಮೇಲೆ ಐ.ಸಿ.ಐ.ಸಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದೇವೆ. ಆ ಸಾಲ ಬಾಧೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಆ ಕುಟುಂಬದವರು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳುತ್ತಿರುವಂತಹ ಪ್ರಕರಣ ಶುದ್ಧ ಸತ್ಯಕ್ಕೆ ದೂರವಾದದ್ದು. ಇದನ್ನು ಹಾವೇರಿ ಡಿ.ಸಿ.ಯವರು clarify ಮಾಡಿದಾಗ (ಗೊಂದಲ) ಇದನ್ನು ಮೊದಲು ಬೆಂಗಳೂರಿನ ಸಂಸದರು raise ಮಾಡಿದರು. ಬೆಂಗಳೂರಿನ ಸಂಸದರು ಇದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದಾಗ, ಹಾವೇರಿ ಡಿ.ಸಿ.ಯವರು clarification ಕೊಟ್ಟಾಗ, "I am sorry" ಎಂದು delete ಮಾಡಿದ್ದು ಅವರ ಸಂಸದರು. ಅದೇ ಪ್ರಕರಣವನ್ನು ಇಂದು ಮತ್ತೆ ಇಲ್ಲಿ ಸತ್ಯಕ್ಕೆ ದೂರವಾದದ್ದನ್ನಾಗಿ ತರುತ್ತಿದ್ದಾರೆ.

**(ಗೊಂದಲ)**

(ಮುಂದು)

(728) 09.12.2024 5.30 ಎಂವಿ-ಕೆಎಸ್ (ಎಂಡಿ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ರೈತರು ಕೊಟ್ಟಂತಹ ಮನವಿಯನ್ನು ಓದಿದ್ದೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾತಯತ್ ರಾಜ್ ಹಾಗೂ ಐ.ಟಿ., ಬಿ.ಟಿ. ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈಗ ಒಬ್ಬ ರೈತರಿಗೆ ಸಾಲ ಸಿಗಬೇಕಾದರೆ, ವಕ್ಫ್ ಆಸ್ತಿ ಇದೆ ಎಂದರೆ ಸಾಲ ಸಿಗುತ್ತದೆಯೇ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪಹಣಿಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದು ಮಾಡಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ಅವರಷ್ಟು ಬುದ್ಧಿವಂತನಲ್ಲ ಮತ್ತು ವಿತಂಡವಾದವನ್ನು ಸಹ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನನ್ನದು ಒಂದೇ simple question.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನೂ ಕೂಡ ಆ ಜಾಗಕ್ಕೆ visit ಮಾಡಿದ್ದೇನೆ. ನಾನು ಅದಕ್ಕೆ clarification ಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಅವರು ಮಾತನಾಡಿರುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಕ್ಕೆ ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರವಿದೆ. ಆಗ ಸಭಾನಾಯಕರು ಅದನ್ನು ನೋಟ್ ಮಾಡಿಕೊಂಡು, ಅವರು ಏನು ಮಾತನಾಡುತ್ತಾರೆ ಅದು ಸರಿಯೋ ತಪ್ಪೋ ಎಂದು ನೋಡಿ. ಅದು ಸರಿಯಿಲ್ಲವೆಂದರೆ ಆಮೇಲೆ ನಾನು ಅದನ್ನು ತೆಗೆಯುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಈಗ prime time ನಲ್ಲಿ debate ಆಗುತ್ತದೆ. ಎಲ್ಲಾ ತಪ್ಪು ಮಾಹಿತಿ ಎಂದ ಮೇಲೆ ಅದನೆಲ್ಲಾ ಓದುವುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಮಾತ್ರ ಸರಿಯಾದ ಮಾಹಿತಿ ಕೊಡುವಂತಹವರು, ನಾವು ತಪ್ಪು ಮಾಹಿತಿ ಕೊಡುತ್ತೇವೆ. ಅವರು ಮಾತ್ರ ಸತ್ಯ ಹೇಳುವುದು, ನಾವು ಮಾತ್ರ ಸತ್ಯಕ್ಕೆ ದೂರವಾದದ್ದನ್ನು ಹೇಳುವಂತಹವರು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಈಗ ಖಾಸಗಿ ಬ್ಯಾಂಕ್‌ನಿಂದ ಅದಕ್ಕೆ ಸಾಲ ಸಿಗುತ್ತದೆಯೇ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರದು ಕೂಡ ಈಗ ಕಾಲಂ-11ರಲ್ಲಿ ಬಂದಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು clarify ಮಾಡುತ್ತೇನೆ, ಅದನ್ನು ಕೇಳಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರು ಪೂರ್ತಿ ಕಥೆ ಕೇಳಿಲ್ಲ. ನಾನು clarify ಮಾಡುತ್ತೇನೆ. ಅವರು ಏನೋ ಬಂಡವಾಳ ಬಿಚ್ಚಿಡುತ್ತೇನೆಂದು ಹೇಳುತ್ತಾರೆ. ನಾವೇ ಬಿಚ್ಚಿಡುತ್ತೇವೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಏನಾಗುತ್ತದೆಂದು ಹೇಳಲಿ, ನಾನು ತೋರಿಸುತ್ತೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನನ್ನ ಒಂದೇ ಪ್ರಶ್ನೆ ಏನೆಂದರೆ, ತಪ್ಪು ಸಂದೇಶ ಮತ್ತು ತಪ್ಪು ಮಾಹಿತಿ ಹೋಗಬಾರದು ಎಂಬುದು ಅಷ್ಟೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೆ, ನಾನು ಹೇಳುವುದನ್ನು ಕೇಳಿ. ಅವರು ಏನು ಮಾತನಾಡುತ್ತಾರೆ ಎಂಬುದಕ್ಕೆ liberty ಇದೆ. ಅದು ಸರಿಯಿಲ್ಲವೆಂದು ನನಗೆ ನೀಡಿದರೆ, ಅದು ಸರಿಯಿಲ್ಲವೆಂದು ನಾನು ಅದನ್ನು ಕಡತದಿಂದ ತೆಗೆಯುತ್ತೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನೂರಕ್ಕೆ ನೂರು ಸರಿಯಿದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಂಸದರು ಏಕೆ ಸಾಮಾಜಿಕ ಜಾಲ ತಾಣದಲ್ಲಿ ಹಾಕಿದ್ದನ್ನು delete ಮಾಡಿದರು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದು ನೂರಕ್ಕೆ ನೂರು ತಪ್ಪು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ಕೊಡಬೇಕು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಒಬ್ಬ ಮಾನ್ಯ ಸಂಸದರು ಸಾಮಾಜಿಕ ಜಾಲತಾಣ ಮತ್ತು ಸಾರ್ವಜನಿಕವಾಗಿ ಕ್ಷಮೆ ಕೇಳಿದ್ದಾರೆ. ಇದು ತಪ್ಪು ಮಾಹಿತಿ ಇದೆ. ಹಾವೇರಿಯ ಎಸ್.ಪಿ.ಯವರು clarify ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಸಹ ಹೋಗಿದ್ದೇನೆ. ಸತ್ಯ ಏನಿದೆ ಎಂದು ಸದನಕ್ಕೆ ತಿಳಿಸುತ್ತೇನೆ. ಅವರು ಅದನ್ನು ಕೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅದು ಆಗಿರುವುದು ಅವರ ಕಾಲದಲ್ಲಿಯೇ, ಅದು ನಮ್ಮ ಕಾಲದಲ್ಲಿ ಅಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಈ ರೀತಿಯಾದರೆ ನಾನು ಸದನವನ್ನು ನಡೆಸುವುದಿಲ್ಲ. ಮಂತ್ರಿಯಾದಂತಹವರು ಎದ್ದು ನಿಂತರೆ ಇಲ್ಲಿ ನಾನು ಏಕೆ ಕುಳಿತುಕೊಳ್ಳಬೇಕು. ಅವರು ಸತ್ಯಕ್ಕೆ ದೂರವಾದದ್ದನ್ನಾದರೂ ಹೇಳಲಿ, ಸತ್ಯವನ್ನಾದರೂ ಹೇಳಲಿ. ನಿಮಗೆ ಅನಿಸಿದ್ದನ್ನು ನನಗೆ ನೀಡಿ, ಅದು ಸರಿಯಿಲ್ಲವೆಂದರೆ, ಅದು unparliamentary word ಆದರೆ ಅದನ್ನು ಕಡತದಿಂದ ತೆಗೆದುಹಾಕುತ್ತೇನೆ. ಈ ರೀತಿ ಎಲ್ಲರೂ ಎದ್ದು ಮಾತನಾಡಿದರೆ, ಇದನ್ನು ಏನು ಸದನವೆನ್ನುತ್ತಾರೆಯೇ? ತಾವುಗಳು ಪ್ರತಿದಿನ ಪೇಪರ್ ಅನ್ನು ಓದುತ್ತೀರಲ್ಲವೇ? ನಾನು ಪ್ರತಿದಿವಸ ಇದನ್ನೇ ಹೇಳುತ್ತೇನೆ. ಮತ್ತೆ ನಾನು ಶಂಖ ಹೊಡೆಯಬೇಕೆ? ನಾನು ಇದನ್ನು ಒಪ್ಪುವುದಿಲ್ಲ ನೋಡಿ.

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ನಾವು ಕೇಳುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ತಾವುಗಳು ನಡುವೆ ಎದ್ದು ಮಾತನಾಡಿದರೆ, ನಾನು ಇದನ್ನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೆ, ಈಗ ತಾವು ಕುಳಿತುಕೊಳ್ಳಿ. ನೀವು ಏನು ದೊಡ್ಡ ಶ್ಯಾಣೆ ಇದ್ದೀರಾ. ಈಗ ಮಾನ್ಯ ಸಿ.ಟಿ.ರವಿಯವರು ಮಾತನಾಡಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು ರೈತರು ಕೊಟ್ಟಂತಹ ಮನವಿಯನ್ನು ಓದಿದ್ದೇನೆ. ಅವರು ನನಗೆ ಒಂದು ದಾಖಲೆಯನ್ನು ಸಹ ಕೊಟ್ಟಿದ್ದಾರೆ. 1964 ರಲ್ಲಿ ರಿಜಿಸ್ಟರ್ ಆಗಿರುವಂತಹ ಬಾಂಡ್ ಪೇಪರ್ ಅನ್ನು ಸಹ ನನಗೆ ಕೊಟ್ಟಿದ್ದಾರೆ. 2015ರವರೆಗೂ ಸಹ ಪಹಣಿ ಅವರ ಹೆಸರಿನಲ್ಲಿ ಇತ್ತು. 2015ರ ನಂತರ ಅದು ವಕ್ಫ್ ಬೋರ್ಡ್ ಆಗಿ ಬದಲಾಗಿದ್ದನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ದೂರನ್ನು ಓದಿದೆ. ಅವರು ನಮಗೆ ಒಂದು ನೋಟೀಸ್ ಕೊಡದೆ ಅದು ವಕ್ಫ್ ಬೋರ್ಡ್ ಆಗಿ ಬದಲಾಗಿದೆ ಎಂದು ಹೇಳಿದರು. ಹಾಗಾದರೆ, 1964ರಲ್ಲಿ ಖರೀದಿಯಾದ ಜಮೀನು 2015ರಲ್ಲಿ ಏಕಾಏಕಿ ವಕ್ಫ್ ಬೋರ್ಡ್ ಆಸ್ತಿಯಾಗಿ ಬದಲಾಗುವುದಕ್ಕೆ ಯಾವ ಕಾಯಿದೆ ಅವರಿಗೆ ಆ ರೀತಿಯ ಅಧಿಕಾರ ಕೊಟ್ಟಿತು? ಈಗ ಅಣ್ಣ ತಮ್ಮಂದಿರ ನಡುವ civil dispute ಆದರೂ ಕೂಡ ಆ ಆಸ್ತಿ ಯಾರದ್ದು ಎಂದು ನ್ಯಾಯಾಲಯ ತೀರ್ಪು ಕೊಡುತ್ತದೆ. ಹಾಗಾದರೆ, ಇಲ್ಲಿ ರೈತನಾದ ಶ್ರೀ ಚನ್ನಪ್ಪ ಬಾಳೇಕಾಯಿಗೆ ಸೇರಿದಂತಹ ಆಸ್ತಿಯನ್ನು 2015ನೇ ಇಸವಿಯಲ್ಲಿ ಏಕಾಏಕಿ 'ವಕ್ಫ್ ಬೋರ್ಡ್' ಎಂದು ಬದಲಾಯಿಸುವಂತಹ ತೀರ್ಪನ್ನು ಯಾರು ಕೊಟ್ಟರು?

**ಸಭಾಪತಿಯವರು:–** ಅದನ್ನು verify ಮಾಡೋಣ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಈ ಪರಮಾಧಿಕಾರ ಅಪರಾಧ. ಇದರ ಜೊತೆಗೆ ನಾನು ಧಾರವಾಡ ಜಿಲ್ಲೆಯ ಮಿಶ್ರಿಕೋಟಿಗೆ ಹೋಗಿದ್ದೆ. ಅಲ್ಲೂ ಅದೇ ರೀತಿಯ ಕಥೆ. ಅದೇ ರೀತಿ ಮೈಸೂರಿನ ಮುನೇಶ್ವರ ನಗರಕ್ಕೆ ಹೋಗಿದ್ದೆವು. ಅದರ ಹೆಸರು ಮುನೇಶ್ವರನಗರ. ಆ ಮುನೇಶ್ವರ ನಗರದಲ್ಲಿ ಒಂದೇ ಒಂದು ಮುಸಲ್ಮಾನರ ಮನೆಯೂ ಇಲ್ಲ. ಅಲ್ಲಿ ಬಸವಣ್ಣನವರ, ಮಾತೆ ಮಹದೇವಿಯವರ ಒಂದು ಶಾಖಾ ಮಠವಿದೆ. ಚಾಮುಂಡೇಶ್ವರಿಯ ಪಾದುಕೆಗಳಿವೆ. ಶ್ರೀ ರಾಮನ ದೇವಸ್ಥಾನವಿದೆ. ಅಲ್ಲಿ ನೂರಕ್ಕೂ ಹೆಚ್ಚು ಮನೆಗಳಿವೆ. ಅಲ್ಲಿ ಬಹುತೇಕ ಮನೆಗಳು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರ ಸಮುದಾಯಕ್ಕೆ ಸೇರಿದಂತಹ ಮನೆಗಳು. ಅಲ್ಲಿರುವಂತಹ 110 ಮನೆಗಳ ಜನರು ಸುಮಾರು 70-80 ವರ್ಷಗಳಿಂದ ಇದ್ದೇವೆಂದು ಹೇಳುತ್ತಾರೆ. ಅಲ್ಲಿನ ಅಷ್ಟೂ ಜನರಿಗೆ ವಕ್ಫ್ ಬೊರ್ಡ್‌ನಿಂದ ನೋಟಿಸ್ ಬಂದಿದೆ. ಅವರನ್ನು ವಕ್ಫ್ ಟ್ರಿಬ್ಯೂನಲ್‌ನವರು ಕರೆದಿದ್ದಾರೆ. ಅಲ್ಲಿ ಏನು ಹೇಳಿದ್ದಾರೆಂದರೆ, ಈಗ ನಾವು ಒಂದು ಕೆಲಸ ಮಾಡೋಣ. ನೀವುಗಳೆಲ್ಲರೂ 60-70 ವರ್ಷಗಳಿಂದ ಅಲ್ಲಿ ಇದ್ದೀರಿ ಎಂದು ಗೊತ್ತು. ನಾವು ಯಾರನ್ನು ಖಾಲಿ ಮಾಡಿಸುವುದಿಲ್ಲವೆಂದು ಹೇಳಿ. ಈಗ ನೀವು ಒಂದು ಕೆಲಸ ಮಾಡಿ, ನಾವು ಮತ್ತು ನೀವು ಒಂದು ಒಪ್ಪಂದ ಮಾಡಿಕೊಳ್ಳೋಣ. ನೀವುಗಳು ಮೂವತ್ತು ವರ್ಷಕ್ಕೆ ಲೀಸ್ ಹಾಕಿಕೊಂಡುಬಿಡಿ. ನಾವು ನಿಮಗೆ nominal

ಬಾಡಿಗೆಯನ್ನು ಫಿಕ್ಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಸುಮಾರು 70 ವರ್ಷದಿಂದ ಮನೆ ಕಟ್ಟಿಕೊಂಡು ವಾಸವಾಗಿರುವಂತಹವರನ್ನು ವಕ್ಫ್ ಬೋರ್ಡ್ ಎಂದು ಕೊಟ್ಟು, ಖಾಜಿ ನ್ಯಾಯ ಮಾಡುವುದಕ್ಕೆ ಇವರಿಗೆ ಈ ಪರಮಾಧಿಕಾರ ಎಲ್ಲಿಂದ ಬಂತು? ಅವರಿಗೆ ಲೀಸ್ ಹಾಕಿಕೊಳ್ಳಿ ಎಂದ ತಕ್ಷಣವೇ 70 ವರ್ಷದ ಒಪ್ಪಿಗೆ ಸೂಚಿಸಿದಂತೆ ಆಯಿತು. ಈ ಒಂದು ಪರಮಾಧಿಕಾರ ಕೊಟ್ಟಿದ್ದನ್ನು ನಾವು unconstitutional ಎಂದು ಹೇಳುತ್ತಿರುವುದು. ದಾನದ ಆಸ್ತಿಯ ನಿರ್ವಹಣೆ ಅಪರಾಧವಲ್ಲ. ಈಗ ಏನಾಗಿದೆ ಎಂದರೆ, ಒಬ್ಬ ಸನ್ಮಾನ್ಯ ಸಚಿವರು. ನಾನು ಅವರ ಹೆಸರನ್ನು ಹೇಳಬಹುದೋ ಏನೋ ಗೊತ್ತಿಲ್ಲ. ಅವರು ವಕ್ಫ್ ಅದಾಲತ್ ಮಾಡಿದರು. ಅವರು ವಕ್ಫ್ ಅದಾಲತ್ ಅನ್ನು ಸಂವಿಧಾನದ ಯಾವ ವಿಧಿಯ ಅಡಿಯಲ್ಲಿ ಮಾಡಿದರು. ಆ ವಕ್ಫ್ ಅದಲಾತ್ ಅನ್ನು ಮಾಡುವಂತಹ ಅಧಿಕಾರ ಮತ್ತು ನಿರ್ದೇಶನ ಕೊಡುವುದಕ್ಕೆ ಸಂವಿಧಾನದ ಯಾವ ವಿಧಿ ಅವರಿಗೆ ಅನುಮತಿ ಕೊಟ್ಟಿತ್ತು. ಅವರು ಏನು ಅರೆ ನ್ಯಾಯಾಲಯವೇ? ಆದೇಶ ಕೊಡುವುದಕ್ಕೆ ಅವರು ಯಾರು?

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಕ್ಫ್ ಬೋರ್ಡ್‌ಗೆ lease ಕೊಡುವುದಕ್ಕೆ ಅಧಿಕಾರವಿರುವುದು only 11 months. ಸರ್ಕಾರಕ್ಕೆ 30 years lease ಕೊಡುವುದಕ್ಕೆ ಅಧಿಕಾರವಿರುವುದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ಪದೇಪದೇ ಮಧ್ಯದಲ್ಲಿ ಎದ್ದು ಮಾತನಾಡುತ್ತಿದ್ದಾರೆ. ಇಲ್ಲಿಂದ ಮುಂದುವರೆದು ಒಂದು TV channel debate ನಲ್ಲಿ ಒಬ್ಬ ಮಾಜಿ ವಕ್ಫ್ ಬೋರ್ಡ್ ಅಧ್ಯಕ್ಷರ ಹೇಳಿಕೆಯನ್ನು ನಾನು ಗಮನಿಸಿದ್ದೇನೆ. ಅವರು ಏನು ಹೇಳಿದ್ದಾರೆಂದರೆ, "Vidhana Soudha is also Waqf Board's property. We won't claim." ಇದು ಅವರು ಹೇಳಿದ ಮಾತು. ಬೆಂಗಳೂರಿನ ವಿಧಾನಸೌಧ, ಅದು ನಮ್ಮ ವಕ್ಫ್ ಆಸ್ತಿ ಎಂದು, ನಾನು ಇಲ್ಲಿ ಅವರ ಹೆಸರನ್ನು ಹೇಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅದನ್ನು ಅವರ ಕಾಲದಲ್ಲಿಯೇ ಮಾಡಿಕೊಟ್ಟಿದ್ದು. ಅವರೇ appointment ಮಾಡಿರುವುದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಎಲ್ಲರ ಹಣೆಬರಹ ಒಂದೇ. ನಮ್ಮ ಪಕ್ಷದವರ ಕಾಲದಲ್ಲಿ ಮಾಡಿದವರ ಹಣೆಬರಹ ಅದೇ. ಇವರ ಕಾಲದಲ್ಲಿ ಮಾಡಿದವರ ಹಣೆಬರಹ ಸಹ ಅದೇ. ಹುಟ್ಟು ಗುಣ ಸುಟ್ಟರೂ ಸಹ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ ಒಂದು ನಿಮಿಷ. ಅವರು ಈ ರೀತಿ ಮಾತನಾಡಿದರು, ಇವರು ಆ ರೀತಿ ಮಾಡಿದರು ಎನ್ನುವುದು ಬೇಡ. ತಾವು ಏನು ಮಾತನಾಡುತ್ತೀರಿ ಅದನ್ನು ಮಾತನಾಡಿ. ತಾವು ಅದನ್ನು ಹೇಳುವುದು ಬೇಡ. ನೀವು ಏನು ಹೇಳುತ್ತಿದ್ದೀರಿ ಅದನ್ನು ಮಾಡಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಒಬ್ಬ ಮಾನ್ಯ ಸಂಸದರು ನವದೆಹಲಿಯಲ್ಲಿ ಒಂದು ಹೇಳಿಕೆಯನ್ನು ನೀಡಿದರು. ಅಂದರೆ, "Parliament is also wakf property" ಎಂದು ಹೇಳಿಕೆ ನೀಡಿದರು. ಈ ದಾರ್ಷ್ಟ್ಯದ ಮಾತನಾಡುವಂತಹ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾಪತಿಯವರೇ, ಅವರು ಹೇಳಿದರೆ, ಅದು ಅವರ ಆಸ್ತಿಯಾಗುತ್ತದೆಯೇ? ಅವರಿಗೆ ಬೇಕಾದಂತೆ ಹೇಳುತ್ತಾರೆ, ಅದನ್ನು ತೆಗೆದುಕೊಂಡು ಏನು ಮಾಡುವುದು?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ದಾರ್ಷ್ಟ್ಯದ ಮತ್ತು ದಾರ್ಷ್ಟ್ಯದ ಮಾತನಾಡುವಂತಹ ಅಧಿಕಾರ ಬಂದಿದ್ದು, 1995ರ ವಕ್ಫ್ ಕಾಯಿದೆ ಮತ್ತು 2013ರಲ್ಲಿ ಕೊಟ್ಟಂತಹ ಹೆಚ್ಚಿನ ಅಧಿಕಾರದ ಕಾರಣದಿಂದ. ಆ ಕಾರಣದಿಂದಾಗಿ ಇವತ್ತು ರೈತರ ಆಸ್ತಿಯೂ ನಮ್ಮದೇ ಎಂದು ಹೇಳುತ್ತಿದ್ದಾರೆ. ಸ್ಮಶಾನಗಳು ಕೂಡ ನಮ್ಮದೇ ಎಂದು ಹೇಳುತ್ತಿದ್ದಾರೆ. ದೇವಾಲಯಗಳು ನಮ್ಮದೇ ಎಂದು ಹೇಳುತ್ತಿದ್ದಾರೆ. ದಲಿತರು ಕಟ್ಟಿಕೊಂಡಿರುವಂತಹ ಮನೆಯೂ ಸಹ ನಮ್ಮದೇ ಎಂದು ಹೇಳುತ್ತಿದ್ದಾರೆ. ಆಸ್ಪತ್ರೆಯೂ ಸಹ ನಮ್ಮದೇ ಎಂದು ಹೇಳುತ್ತಿದ್ದಾರೆ. ಇಷ್ಟು ಮಾತ್ರವಲ್ಲ ಚರ್ಚ್ ಸಹ ನಮ್ಮದೇ ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಸತ್ಯಕ್ಕೆ ದೂರವಾದದ್ದನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ವಿಧಾನಸೌಧ ಸಹ ನಮ್ಮದೇ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಹೇಳಲಿ ಬಿಡಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಈ ಕಾಯಿದೆ ಇದೆಯಲ್ಲಾ, ಆ ಕಾಯಿದೆ ಪರಮಾಧಿಕಾರ ಕೊಟ್ಟಿರತಕ್ಕಂತಹ ಕಾಯಿದೆ. ಅದು unconstitutional ಎಂಬುದು ನನ್ನ ವಾದ, ಇದನ್ನು ಈ ಕಾರಣಕ್ಕೆ ಹೇಳುತ್ತಿರುವಂಥದ್ದು. ಅದಕ್ಕೆ ಸರ್ಕಾರಕ್ಕೆ ನನ್ನ ಆಗ್ರಹ ಇದೆ. ಅವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ರೈತರು ಯಾವಾಗ ಧಂಗೆ ಏಳುತ್ತಾರೆ ಎಂದು ಮತ್ತು ಮಠಾಧಿಪತಿಗಳು ಬೀದಿಗೆ ಬಂದರು. ಆಗ ಕಾಲಂ-11 ಅನ್ನು ತೆಗೆದು ಮ್ಯುಟೇಷನ್‌ಗಳಲ್ಲಿ ವಕ್ಫ್ ಆಸ್ತಿ ಎಂದು ಸೇರಿಸಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಆದೇಶ ನೀಡಿದರು. ಈಗ ಅವರು ಏನೂ ತಪ್ಪು ಮಾಡದೇ, ಏನೂ ತಪ್ಪು ಆಗದೇ ಇದ್ದರೆ, ವಕ್ಫ್ ಬೋರ್ಡ್ ಮಾಡಿದ್ದೆಲ್ಲಾ ಸರಿಯಿದ್ದರೆ...

**ಶ್ರೀ ಕೆ.ಜೆ.ಜಾರ್ಜ್ (ಇಂದನ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಏನು ಮಾಡಿದ್ದೇವೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ಏನೂ ಮಾಡಿಲ್ಲ. ನಾನು ಎಲ್ಲೂ ಅವರಿಗೆ ಕಂಪ್ಲೇಂಟ್ ಮಾಡುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಕೆಲವೊಂದು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಅವರು ಆ ರೀತಿಯ ಆದೇಶ ಕೊಟ್ಟಿದ್ದಾರೆ. ಅದು ಒಳ್ಳೆಯದು ಅಲ್ಲವೇ? ಮಾನ್ಯ ಸದಸ್ಯರು ಅದನ್ನೇ ಅಲ್ಲವೇ ಮಾತನಾಡುತ್ತಿರುವುದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿರುವುದು. ಅವರು ಪೂರ್ಣ ಕೇಳಿಸಿಕೊಂಡು, ನಾನು ಹೇಳುವವರೆಗೂ ಸಹ ಬಿಡಲೇ ಇಲ್ಲ.

**(ಗೊಂದಲ)**

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೈತರ ಬಗ್ಗೆ ಮಾತನಾಡುತ್ತಿರುವುದಕ್ಕೆ ನನಗೆ ಬಹಳ ಸಂತೋಷವಾಗಿದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು yield ಆಗಿಲ್ಲ.

**(ಗೊಂದಲ)**

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೈತರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಬಹಳ ಕಾಳಜಿ ಇದೆ. ಅದಕ್ಕೆ ನಾನು ಅವರಿಗೆ ಒಂದು ಮಾಹಿತಿ ನೀಡುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಉತ್ತರ ನೀಡಲಿ. ಈಗ ನಾನು yield ಆಗಿಲ್ಲ.

**(ಗೊಂದಲ)**

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರದಲ್ಲಿ ದಿನಾಂಕ: 05.05.2022ರಂದು ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ 11886 ಎಕರೆ ಜಮೀನನ್ನು deemed forest ಎಂದು ಮಾಡಿದ್ದಾರೆ.

(ಮುಂದು)

(729) 09.12.2024 05.40 LL-VK (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):** ಓಟಿನ ಆಸೆಗೆ ಗುಲಾಮರಾಗಿದ್ದಾರೆ. ಓಟಿನ ಆಸೆಗಾಗಿ ಗುಲಾಮರಾಗಿ ರಾಜ್ಯದ ಜನರಿಗೆ ಅನ್ಯಾಯ ಮಾಡುವುದಕ್ಕೆ ಹೊರಟಿದ್ದಾರೆ.

**(ಗೊಂದಲ)**

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ರೈತರ 11,000 ಎಕರೆ ಜಮೀನನ್ನು "Deemed Forest" ಎಂದು ಘೋಷಣೆ ಮಾಡಿ ರೈತರಿಗೆ ಅನ್ಯಾಯ ಮಾಡುವುದಕ್ಕೆ ಹೊರಟಿದ್ದಾರೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಓಟಿನ ಆಸೆಗಾಗಿ ಗುಲಾಮರಾಗಿದ್ದು ಇವರು. ಸಾವರ್ಕರ್ ಅವರು ಬ್ರಿಟಿಷರೊಂದಿಗೆ ಗುಲಾಮರಾಗಿದ್ದರು. ಬ್ರಿಟೀಷರೊಂದಿಗೆ ಗುಲಾಮರಾಗಿದ್ದವರು ಇವರ ಪಕ್ಷದವರು ಮತ್ತು ಸಾವರ್ಕರ್‌ರವರು.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ದೇಶ ಒಡೆದಿದ್ದು ಸಾಕು. **(ಗೊಂದಲ)** ಈಗ ರೈತರ ಪಾಲಿಗೆ ಮರಣ ಶಾಸನ ಬರೆಯುವುದಕ್ಕೆ ಹೊರಟಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಬ್ರಿಟೀಷರಿಗೆ ಗುಲಾಮರಾಗಿದ್ದು ಇವರು. **(ಗೊಂದಲ)** ಸಾವರ್ಕರ್‌ರವರು ಇದನ್ನು ಮಾಡಿರುವುದು. ಇವರು ಗುಲಾಮರಾಗಿದ್ದವರು.

**ಶ್ರೀ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ರೈತರ ಬಗ್ಗೆ ಇಷ್ಟು ಮಾತನಾಡುವವರು ಇದನ್ನು ಹೇಗೆ ಮಾಡಿದ್ದಾರೆ? 11,000 ಎಕರೆ ರೈತರ ಭೂಮಿಯನ್ನು "Deemed Forest" ಎಂದು ಘೋಷಣೆ ಮಾಡಿದ್ದಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಶ್ರೀ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಪರಿಹಾರ ಎಂಬುದನ್ನು ದಯಮಾಡಿ ಹೇಳಬೇಕು. ಇವೊತ್ತಿನ ದಿವಸ ಇವರು ಇಷ್ಟೆಲ್ಲಾ ಮಾತನಾಡುತ್ತಿದ್ದಾರೆ...

**ಸಭಾಪತಿಯವರು:-** ಒಂದು ನಿಮಿಷ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, 500 ಎಕರೆ ಜಮೀನು ಬೀದರ್‌ನಲ್ಲಿ ಮಾಡಿದ್ದಾರೆ.

**(ಗೊಂದಲ)**

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಆಗಲೇ ಈ ಸದನದಲ್ಲಿ ಇರಲಿಲ್ಲ. ಆಗ ನನ್ನ ತಾಲ್ಲೂಕಿನ ಬಗ್ಗೆ ಮಾತನಾಡಿದ್ದಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**(ಗೊಂದಲ)**

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, 1974ರಲ್ಲಿ ಫಕೀರ್ ಇನಾಮ್ತಿ ಜಾಗ ಆಗಿದ್ದು, ಇದು ನ್ಯಾಯಾಲಯದಲ್ಲಿ 2016 ರಿಂದ ವಿಚಾರಣೆ ಬಾಕಿ ಇದೆ. ಅಲ್ಲಿಯೂ ಸಹ ರಾಜಕಾರಣ ಮಾಡುವುದಕ್ಕೆ ಹೊರಟಿದ್ದಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರು ಆಗಿರುವಂತಹ ಮ್ಯುಟೇಷನ್ ಅನ್ನು ರದ್ದು ಮಾಡಿರುತ್ತಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ ಕೇಳಿ. ಈಗ ಮಾನ್ಯ ಸಿ.ಟಿ. ರವಿಯವರು ಯೀಲ್ಡ್ ಆಗಿರುವುದಿಲ್ಲ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಮಾತನಾಡುತ್ತಾ, ನನ್ನ ತಾಲ್ಲೂಕಿನ ಬಗ್ಗೆ ಮಾತನಾಡಿರುತ್ತಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ದಾಖಲೆಗಳನ್ನು ತಿರುಚುವಂತಹ ಕೆಲಸ ಮಾಡಬಾರದು. ಪ್ರಕರಣ ನ್ಯಾಯಾಲಯದಲ್ಲಿ 2016ರಿಂದ ವಿಚಾರಣೆಗೆ ಬಾಕಿ ಇದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ರೀತಿಯಾದರೆ ಸದನ ನಡೆಸುವುದು ಕಷ್ಟವಾಗುತ್ತದೆ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ ಅಂತಿಮ ತೀರ್ಪು ಬರಬೇಕು. ಅದರ ಬಗ್ಗೆ ರಾಜಕಾರಣ ಮಾಡುವುದಕ್ಕೆ ಹೊರಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಏತಕ್ಕೆ ಎದ್ದು ನಿಂತು ಮಾತನಾಡುತ್ತೀರಿ. ತಮಗೆ ಅನುಮತಿ ನೀಡಿದ್ದೇನೆಯೇ?

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, I have a Point of Order.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಸಭಾಪತಿಯವರು:-** ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಪಾಯಿಂಟ್ ಆಫ್ ಆರ್ಡರ್ ಕೇಳುತ್ತಿದ್ದೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸುಧಾಕರ್‌ರವರು ಮಾತನಾಡಿರುವುದಕ್ಕೋ...

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ 2013 ರ ಗೆಜೆಟ್ ನೋಟಿಫಿಕೇಷನ್ ಇದೆ. ಅದರ ಯಾವ ಕಲಂನಲ್ಲಿ ಯಾವ ಸೆಕ್ಷನ್‌ನಡಿಯಲ್ಲಿ ವಕ್ಫ್ ಬೋರ್ಡ್ ಟ್ರಿಬ್ಯೂನಲ್‌ಗೆ ಸಂಪೂರ್ಣ ಅಧಿಕಾರ ಕೊಟ್ಟಿದೆ? ಅದರಿಂದಾಗಿ ಕೋರ್ಟ್‌ಗೆ ಹೋಗುವುದಕ್ಕೆ ಆಗುವುದಿಲ್ಲ ಎಂಬುದನ್ನು ಅವರು ಹೇಳಬೇಕಾಗುತ್ತದೆ. ಇಲ್ಲವಾದರೆ, ಅವರ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. There are no powers given to the Tribunal and that is final ಎನ್ನುವಂಥದ್ದು ನನ್ನ ವಾದವಾಗಿದೆ. ವಕ್ಫ್ ಬೋರ್ಡ್ ಆದೇಶದ ವಿರುದ್ಧ ಮಾನ್ಯ ಸುಪ್ರೀಂ

ಕೋರ್ಟ್‌ನಲ್ಲಿ ಮನವಿ ಮಾಡಲು ಅಧಿಕಾರ ಇದೆಯೆಂಬುದು ನನ್ನ ವಾದವಾಗಿರುತ್ತದೆ. I am giving the Gazette copy and let him prove it.

**ಸಭಾಪತಿಯವರು:–** ಆಯಿತು, ಸದರಿ ಗೆಜೆಟ್ ನೋಟಿಫಿಕೇಷನ್ ಕಾಪಿಯನ್ನು ನನಗೆ ಕಳುಹಿಸಿಕೊಡಿ. ನಾನು ಅದನ್ನು ಪರಿಶೀಲಿಸುತ್ತೇನೆ. ಮಾನ್ಯ ಸಿ.ಟಿ. ರವಿಯವರೇ, ತಾವು 4 ಗಂಟೆ 50 ನಿಮಿಷಕ್ಕೆ ಮಾತನಾಡಲು ಆರಂಭಿಸಿದ್ದೀರಿ. ಹಾಗಾಗಿ, ಇನ್ನು 5 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಹೌದು. ತಾವು ಹೇಳುವುದು ಸರಿಯಾಗಿದೆ. ಆದರೆ, ನಾನು ಮಾತನಾಡುವಾಗ ಮಧ್ಯದಲ್ಲಿ ಅನೇಕ ಮಾನ್ಯ ಸದಸ್ಯರು ಎದ್ದು ನಿಂತು ಅಡ್ಡಿಪಡಿಸುತ್ತಿದ್ದರು.

**(ಗೊಂದಲ)**

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, I have raised a Point of Order…

**(ಗೊಂದಲ)**

**ಸಭಾಪತಿಯವರು:–** ಅದನ್ನು ನನಗೆ ಕಳುಹಿಸಿ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಗೆಜೆಟ್ ನೋಟಿಫಿಕೇಷನ್ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಯಾವ ಪ್ಯಾರಾಗ್ರಾಫ್‌ನಲ್ಲಿ ವಕ್ಫ್ ಬೋರ್ಡ್ ಟ್ರಿಬ್ಯೂನಲ್‌ಗೆ ಆ ರೀತಿ ಸುಪ್ರೀಂ ಪವರ್ ಕೊಟ್ಟಿದೆ ಎಂಬುದನ್ನು ಮಾನ್ಯ ಸದಸ್ಯರು ಪ್ರೂವ್ ಮಾಡಬೇಕಾಗುತ್ತದೆ. ಇಲ್ಲವಾದರೆ, ಅವರು ತಮ್ಮ ಮಾತನ್ನು ಮುಂದುವರೆಸಬಾರದೆಂದು ನಾನು ಹೇಳುತ್ತಿದ್ದೇನೆ. ಈ ರೀತಿ ಸದನದ ದಿಕ್ಕು ತಪ್ಪಿಸುವುದು ಯಾವ ರೀತಿಯ ನ್ಯಾಯ ಎಂಬುದನ್ನು ನಾನು ತಮಗೆ ಕೇಳಬಯಸುತ್ತೇನೆ. ಸದರಿ ಗೆಜೆಟ್ ಕಾಪಿ ನನ್ನ ಬಳಿ ಇದೆ. ನಾನು point to point ಮಾತನಾಡುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರಿಗೆ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ತಾವು ಹೇಳಬೇಕು.

**ಸಭಾಪತಿಯವರು:–** ಅದನ್ನು ನನಗೆ ಕಳುಹಿಸಿ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಮಾನ್ಯ ರವಿಯವರೇ ಇನ್ನು 5 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಪೂರ್ಣಗೊಳಿಸಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಗರಾಜುರವರು Point of Order raise ಮಾಡಿ ಪ್ರಶ್ನೆ ಮಾಡಿರುತ್ತಾರೆ.

**ಸಭಾಪತಿಯವರು:–** ನಾನು ಅದನ್ನು ತೀರ್ಮಾನ ಮಾಡುತ್ತೇನೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, 1995 ಆಕ್ಟ್ ಏನು ತಂದಿದ್ದಾರೆ. ಆ 1995 ಆಕ್ಟ್ ವಕ್ಫ್ ಬೋರ್ಡ್‌ಗೆ ಒಂದಷ್ಟು ಶಕ್ತಿ ಕೊಟ್ಟರೆ, 2013ರ ಆಕ್ಟ್ ಪ್ರಕಾರ ವಕ್ಫ್ ಬೋರ್ಡ್ ಯಾವುದೇ ಆಸ್ತಿಯನ್ನು ತಮ್ಮ ಆಸ್ತಿ ಎಂದು ಘೋಷಣೆ ಮಾಡಿದರೆ, ಅದಕ್ಕೆ ಅವರು ದಾಖಲೆ ಕೊಡಬೇಕಾದ ಅವಶ್ಯಕತೆ ಇರುವುದಿಲ್ಲ. ಆದರೆ, ನಮ್ಮ ಪಿತ್ರಾರ್ಜಿತ ಆಸ್ತಿ ವಕ್ಫ್

ಬೋರ್ಡ್ ಎಂದು ಘೋಷಣೆಯಾದರೆ, ನಾವು ದಾಖಲೆ ಕೊಡಬೇಕೇ ಹೊರತು, ವಕ್ಫ್ ಬೋರ್ಡ್‌ನವರು ದಾಖಲೆ ಕೊಡಬೇಕಾಗಿಲ್ಲ. ಅವರು ಬರಿಗೈ ಫಕೀರನಾಗಿ ಇದು ನನ್ನದು ಎಂದು ಹೇಳಬಹುದು.

**ಸಭಾಪತಿಯವರು:-** ಆಯಿತು, ಸಾಕು. ಇನ್ನು ಮುಂದೆ ಬೇಡ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, **"ಚಿಂತಾಮಣಿಯಲ್ಲಿ ರೈತರ ವಕ್ಫ್ ಸಂಘರ್ಷ. ಜಮೀನು ಉಳುಮೆ ಮಾಡುತ್ತಿದ್ದ ರೈತರ ಟ್ರ್ಯಾಕ್ಟರ್ ಜಪ್ತಿ"**. ಇದು ದಿನಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನಾನು ಸದನದ ಗಮನ ಸೆಳೆದಿದ್ದೇನೆ. ನಾನು ಇದನ್ನು ಹೇಳುವ ಉದ್ದೇಶ ಏನೆಂದರೆ, ಇದು ಕೇವಲ ಒಂದು ಊರಿಗೆ...

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದು ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ. ಹಾಗಾಗಿ, ನಾನು ಇದಕ್ಕೆ ಸ್ಪಷ್ಟೀಕರಣ ನೀಡಬೇಕು. ಇದು 1974ರಲ್ಲಿ ಫಕೀರ ಇನಾಂತಿ ಜಮೀನು.

**ಸಭಾಪತಿಯವರು:-** ಮಾನ್ಯ ಸುಧಾಕರ್‌ರವರೇ, ಒಂದು ನಿಮಿಷ. ನಾನು ಏನು ಹೇಳುತ್ತೇನೆಂದರೆ,..

**(ಗೊಂದಲ)**

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, 2013ರಲ್ಲಿ ಇವರದ್ದೇ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರ್ ಕೋರ್ಟ್‌ನಲ್ಲಿ ಮಾಡಿರುವಂತಹ ಆದೇಶವಾಗಿದೆ. ಈಗ ಇವರು ಅಲ್ಲಿಗೆ ಬಂದು ಕೋಮುಗಲಭೆಗಳನ್ನು ಸೃಷ್ಟಿ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಒಂದು ನಿಮಿಷ ನನ್ನ ಮಾತನ್ನು ಕೇಳಿ. ಈ ರೀತಿ ತಾವು ಮಾತನಾಡಿದರೆ, ನಾನು ಹೇಗೆ ಸದನವನ್ನು ನಡೆಸಲಿ. ಇದ್ಯಾವುದನ್ನು ಕಡತಕ್ಕೆ ಹಾಕಬೇಡಿ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮಾತನಾಡಿರುವುದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ವಿರೋಧ ಪಕ್ಷದವರು ಟೀಕೆ ಮಾಡಿರುವ ಎಲ್ಲಾ ವಿಷಯಗಳಿಗೆ ಉತ್ತರ ನೀಡುವ ಅಧಿಕಾರ ಸರ್ಕಾರಕ್ಕೆ ಇದೆ. ಹಾಗಾಗಿ, ವಿರೋಧ ಪಕ್ಷದವರು ಮಾತನಾಡಿದ ನಂತರ, ಸರ್ಕಾರದ ಉತ್ತರವನ್ನು ಹೇಳಿ. ಈ ರೀತಿ ನಡು ನಡುವೆ ಎದ್ದು ಮಾತನಾಡಬೇಡಿ. ನನ್ನ ಅನುಮತಿ ಇಲ್ಲದೇ ಯಾವುದೇ ಸದಸ್ಯರು ಎದ್ದು ನಿಂತು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮಾತನಾಡಿರುವುದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ರೀತಿ ಅವರು ಸದನಕ್ಕೆ ಸತ್ಯಕ್ಕೆ ದೂರವಾದ ಮಾಹಿತಿ ಕೊಡಬಹುದೇ?

**ಸಭಾಪತಿಯವರು:-** ಕೊಡಲಿ, ನಾನು ಅದನ್ನು ಪರಿಶೀಲಿಸುತ್ತೇನೆ.

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲದೇ ನಮ್ಮ ಮಾನ್ಯ ಸದಸ್ಯರು Point of Order ಕೂಡ ಹೇಳಿದ್ದಾರೆ.

**ಸಭಾಪತಿಯವರು:-** ನಾನು ಅದನ್ನು ನೋಡುತ್ತೇನೆ.

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಕ್ಟ್ ನಲ್ಲಿ ಇಲ್ಲದೇ ಇರುವ ವಿಷಯವನ್ನು ಹೇಳಿ ಸತ್ಯಕ್ಕೆ ದೂರವಾದ ಮಾಹಿತಿ ನೀಡಿ, ಜನರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಈ ಸದನದಲ್ಲಿ ಅವಕಾಶವಿದೆಯೇ?

**ಸಭಾಪತಿಯವರು:-** ನಾನು ಅದನ್ನು ನೋಡುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಸೂಕ್ಷ್ಮವಾದ ವಿಚಾರ ಎಂಬುದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದಾಗ್ಯೂ, ಈ ರೀತಿ ಸತ್ಯಕ್ಕೆ ದೂರವಾದ ಮಾಹಿತಿ ನೀಡಿ, ಜನರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅವರು knowingly and intentionally ಈ ರೀತಿ ಮಾಡುತ್ತಿದ್ದಾರೆ.

**(ಗೊಂದಲ)**

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರೆಸ್ ಗ್ಯಾಲರಿಯಲ್ಲಿ ಪ್ರೆಸ್ ಮೀಡಿಯಾದವರು ಇದ್ದಾರೆ. ಇದೆ. ಅವರಿಗೆ ಈ ವಿಚಾರವನ್ನು ನಾಳೆಯ ದಿವಸ ಪತ್ರಿಕೆಗಳಲ್ಲಿ ಪ್ರಿಂಟ್ ಮಾಡಬಾರದೆಂದು ತಾವು ಅವರಿಗೆ ನಿರ್ದೇಶನ ನೀಡಬೇಕು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಇವರು ಹೇಳುವುದಷ್ಟು ನಿಜವೇ?

**(ಗೊಂದಲ)**

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು ನಾವು ನಿಜ ಹೇಳುತ್ತೇವೆ. ಅದನ್ನು ಕೇಳುವುದಕ್ಕೆ ಇವರು ಯಾರು? ಸತ್ಯಕ್ಕೆ ದೂರವಾದ ಮಾತನ್ನು ಹೇಳಿ, ಇಲ್ಲಿಯೇ ಸಿಕ್ಕಿಹಾಕಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸತ್ಯಕ್ಕೆ ದೂರವಾದದ್ದನ್ನು ಏತಕ್ಕೆ ಹೇಳುತ್ತಿದ್ದಾರೆ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈಗ ಅವರು ಹೇಳಿದ್ದೇ ಸತ್ಯ ಆಗಲಿ. ಏಕೆಂದರೆ, ಯಾವುದೇ ಪರಮಾಧಿಕಾರ...

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ನೀಡಬೇಕು. ನಾನು ಗೆಜೆಟ್ ಕಾಪಿಯನ್ನು ತಮಗೆ ಕಳುಹಿಸುತ್ತೇನೆ.

**ಸಭಾಪತಿಯವರು:-** ಅದನ್ನು ನನಗೆ ಕಳುಹಿಸಿ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಕೆಲವರು ವಿಘ್ನ ಸಂತೋಷಿಗಳಿದ್ದಾರೆ, ಈ ಸದನ ನಡೆಯಬಾರದೆಂಬ ದುರುದ್ದೇಶ ಅವರಿಗಿದೆ. ಅವರಿಗೆ ಸತ್ಯವನ್ನು ಅರಗಿಸಿಕೊಳ್ಳುವುದಕ್ಕೆ ಆಗದೇ ಇರುವಂತಹ ಅಸಹಾಯಕತೆ ಕಾಡುತ್ತಿದೆ. ಅದಕ್ಕಾಗಿ ಅವರು ಸತ್ಯ ಹೇಳುವವರ ಬಾಯಿ ಮುಚ್ಚಿಸಬೇಕೆಂದು, ನಾವು ಮಾತನಾಡುವಾಗ ಪದೇ ಪದೇ ಈ ರೀತಿ ಮಧ್ಯದಲ್ಲಿ ಎದ್ದು ನಿಂತು ನಮ್ಮ ಮಾತಿಗೆ ಅಡ್ಡಿಪಡಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಇವರು ಜನರ ದಾರಿ ತಪ್ಪಿಸುವಂತಹ ಕೆಲಸ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಪಾಕಿಸ್ತಾನದಲ್ಲಿ ಆಗುತ್ತಿರುವುದು ನಮಗೆ ಎಚ್ಚರಿಕೆ ಗಂಟೆಯಾಗಬೇಕು. ಏಕೆಂದರೆ, ನಾಳೆಯ ದಿವಸ ಅವರು ನಮ್ಮನ್ನು ಕಾಂಗ್ರೆಸ್‌ನವರು ಅಥವಾ ಬಿಜೆಪಿಯವರು ಎಂದು ನೋಡುವುದಿಲ್ಲ. ಅವರು ಕಾಫಿರರೋ ಅಥವಾ ಅಲ್ಲವೋ ಎಂಬುದನ್ನು ಮಾತ್ರ ನೋಡುತ್ತಾರೆ.

**(ಗೊಂದಲ)**

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಿಜೆಪಿಯವರದ್ದು ಕೇವಲ ತೋರಿಕೆಯ ಮಾತು. ಏಕೆಂದರೆ, 2013 ರಲ್ಲಿ ವಕ್ಫ್ ಬೋರ್ಡ್ ಆಕ್ಟ್‌ಗೆ ತಿದ್ದುಪಡಿಯಾಯಿತು. **(ಗೊಂದಲ)** ಕಳೆದ 10 ವರ್ಷಗಳಿಂದ ಕೇಂದ್ರದಲ್ಲಿ ಇವರದ್ದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ಏತಕ್ಕೆ ಅವರು ಈ ಆಕ್ಟ್‌ಗೆ ತಿದ್ದುಪಡಿ ತಂದಿರುವುದಿಲ್ಲ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ಅವರು ಕಾಂಗ್ರೆಸ್ ಅಥವಾ ಬಿಜೆಪಿ ಸರ್ಕಾರ ಎಂದು ನೋಡುವುದಿಲ್ಲ. ಇವರು ಕಾಫಿರರೋ ಅಥವಾ ಇಲ್ಲವೋ ಎಂಬುದನ್ನು ಮಾತ್ರ ನೋಡುತ್ತಾರೆ.

**(ಗೊಂದಲ)**

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಮೋದಿಯವರ ಸರ್ಕಾರ ಇದೆಯಲ್ಲಾ?... ಕೇಂದ್ರದಲ್ಲಿ ಇವರದ್ದೇ ಸರ್ಕಾರ ಅಧಿಕಾರದಲ್ಲಿರುವುದು. ಏನ್ರೀ ಕತ್ತೆ ಕಾಯುತ್ತಿದ್ದಾರಾ ಇವರು?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇವರ ದೃಷ್ಟಿಯಲ್ಲಿ ನಾನು ಕಾಫಿರನೇ. ಪಕ್ಕದಲ್ಲಿರುವ ಸುಧಾಕರ್‌ರವರು ಸಹ ಕಾಫಿರರು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ರೀತಿ ಸತ್ಯಕ್ಕೆ ದೂರವಾದದ್ದನ್ನು ಹೇಳಿದ್ದರಿಂದಲೇ ಕಳೆದ ವಿಧಾನಸಭಾ ಮರು ಚುನಾವಣೆಯಲ್ಲಿ 3 ಕ್ಷೇತ್ರದಲ್ಲಿಯೂ ಸಹ ಸೋತಿರುತ್ತಾರೆ. ಜನರು ಸಹ ಇವರಿಗೆ ಸರಿಯಾದ ಉತ್ತರ ಕೊಟ್ಟಿದ್ದಾರೆ. ಆದರೂ ಸಹ ಇವರಿಗೆ ಬುದ್ಧಿ ಬಂದಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು 5 ಗಂಟೆ 47 ನಿಮಿಷಗಳಿಗೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(730) 09.12.2024, 6.00 TCH-BNS

**(ಸಂಜೆ 5 ಗಂಟೆ 47 ನಿಮಿಷದಿಂದ 10 ನಿಮಿಷಗಳ ಕಾಲಾವಧಿಗೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 6 ಗಂಟೆ 09 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

(731)9-12-2024/6.10/ಎಂ.ಎಂ-ಬಿ.ಎನ್.ಎಸ್

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ. ನಾಗರಾಜುರವರು point of order ಎತ್ತಿದ್ದರು. ಅವರು ಈಗಿಲ್ಲ. ಮಾನ್ಯ ಸಿ.ಟಿ. ರವಿಯವರೇ, ಇನ್ನು ಏಳು ನಿಮಿಷದಲ್ಲಿ ಮಾತನಾಡಿ ಮುಗಿಸಿ. 6 ಗಂಟೆ 20 ನಿಮಿಷಕ್ಕೆ ಮುಗಿಸಬೇಕು.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಹೇಳುವುದಕ್ಕೆ ಸಾಕಷ್ಟು ವಿಷಯಗಳಿವೆ.

**ಸಭಾಪತಿಯವರು:-** ಇಲ್ಲ ಒಬ್ಬರಿಗೇ ಅಷ್ಟು ಸಮಯ ನೀಡಲು ಆಗುವುದಿಲ್ಲ, ಇನ್ನೂ ಬಹಳ ಸದಸ್ಯರು ಮಾತನಾಡುವವರಿದ್ದಾರೆ. ಇನ್ನು 10 ನಿಮಿಷ ಕೊಡುತ್ತೇನೆ, ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಖಂಡಿತ ಆಗುವುದಿಲ್ಲ.

**ಸಭಾಪತಿಯವರು:-** ಆಗುವುದಿಲ್ಲ ಎಂದರೆ ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ನನಗೆ ಮಧ್ಯದಲ್ಲಿ disturb ಮಾಡುವವರು ಜಾಸ್ತಿ.

**ಸಭಾಪತಿಯವರು:-** ನಾನು disturb ಮಾಡಬೇಡಿ ಎಂದು ಹೇಳುತ್ತೇನೆ. ನೀವೇ ಹೇಳುತ್ತೀರಿ. ನೀವೇ ಸರಿ ಮಾಡಬೇಕು. ಯಾರಿಗೆ ಹೇಳಬೇಕು ಎಂಬುದನ್ನು ತಿಳಿಸಿ. Disturb ಮಾಡಬಾರದು ಎನ್ನುವ ಕನಿಷ್ಟ ಸೌಜನ್ಯವಾದರೂ ಬೇಕಲ್ಲವೇ? ಯಾರೂ ಮಾತನಾಡಬಾರದೆಂದು ನಾನವರಿಗೆ ಹೇಳಿದ್ದೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಬೇಕಾದರೆ ಕಡತ ತೆಗೆಸಿ ನೋಡಿ. ಎಷ್ಟು ಜನರು ಎಷ್ಟು ಸಲ ಮಧ್ಯಪ್ರವೇಶ ಮಾಡಿದ್ದಾರೆ, disturb ಮಾಡಿದ್ದಾರೆ ಎಂಬುದನ್ನು ಚೆಕ್ ಮಾಡಿ. ಅವರೇನಾದರೂ ನನಗೆ ನಿರಂತರವಾಗಿ ಮಾತನಾಡುವುದಕ್ಕೆ ಬಿಟ್ಟಿದ್ದರೆ ಇಷ್ಟೊತ್ತಿಗೆ ನಾನು ಚರ್ಚೆ ಮಾಡಿ ನನ್ನ ಮಾತನ್ನು ಮುಗಿಸಿರುತ್ತಿದ್ದೆ.

**ಸಭಾಪತಿಯವರು:-** ಹೀಗಾದರೆ ನಾನು ಸದನ ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನನ್ನ point of order ಗೆ ಉತ್ತರ ಕೊಟ್ಟು ನಂತರ ಚರ್ಚೆಯನ್ನು ಮುಂದುವರೆಸಬಹುದು. ನಾವು ಕೇಳುವುದಕ್ಕೆ ರೆಡಿ ಇದ್ದೇವೆ. Point of order ಗೆ ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಕುಳಿತುಕೊಳ್ಳಿ. ನಾನು ಕರೆದಾಗ ಹೊರಗಡೆ ಹೋಗಿದ್ದಿರಿ. ಈಗ ಆವಾಜ್ ಹಾಕುತ್ತಿದ್ದೀರಿ. ಕುಳಿತುಕೊಳ್ಳಿ ನಾನು ಹೇಳುತ್ತೇನೆ. ನಾನು ಕರೆದಾಗ ಇರುವುದಿಲ್ಲ ಮತ್ತು ಈಗ ಇದನ್ನು ದೊಡ್ಡದು ಮಾಡುತ್ತಿದ್ದೀರಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ?

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ವಿರೋಧಪಕ್ಷ wild ಆಗಿರುವುದು ಸ್ವಾಭಾವಿಕ. ಈಗ ಆಡಳಿತ ಪಕ್ಷವೇ wild ಆಗಿರುವುದನ್ನು ನೋಡಿದಾಗ ಸತ್ಯ ಹೊರಗೆ ಬರಬಾರದು ಎನ್ನುವ ಒಂದು hidden agenda ಕಾಣುತ್ತಿದೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಒಂದು ನಿಮಿಷ. ನೀವು ಇಷ್ಟು ಸಮಯ ಮಾತನಾಡಿದ್ದೀರಿ. ನೀವು 04 ಗಂಟೆ 50 ನಿಮಿಷದಲ್ಲಿ ಮಾತನಾಡಲು ಪ್ರಾರಂಭಿಸಿದ್ದೀರಿ. ಈಗ 06 ಗಂಟೆ 10 ನಿಮಿಷವಾಯಿತು. ಎಲ್ಲರೂ ಸೇರಿ ಡಿಸ್ಟರ್ಬ್ ಮಾಡುವುದು ಸರಿಯಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನನಗೆ ಇನ್ನು ಒಂದು ಗಂಟೆ ಸಮಯ ಕೊಡಿ ಸಾಕು.

**(ಸದನದಲ್ಲಿ ನಗು)**

**ಸಭಾಪತಿಯವರು:-** ಹತ್ತು ನಿಮಿಷ ಕೊಡುತ್ತೇನೆ ಅಷ್ಟೇ. 06 ಗಂಟೆ 20 ನಿಮಿಷಕ್ಕೆ ಮುಗಿಸಿ.

**ಶ್ರೀ ಸಿ.ಟಿ. ರವಿ:-** ನಗಬೇಡಿ, ಅವರು ವಕ್ಫ್ ಆಕ್ಟ್ ತರಲು ಹೇಳಿದ್ದರು ಈಗ ತಂದಿದ್ದೇನೆ. ಅವರಿಗೆ ಹೇಳಬೇಕಲ್ಲವೇ? (ಗೊಂದಲ) ಮಂತ್ರಿಗಳಾಗಿದ್ದವರು, ಕಾಯಿದೆ, ಕಾನೂನು ಗೊತ್ತಿರುತ್ತದೆ ಎಂದು ಅಂದುಕೊಂಡಿದ್ದೆ. ನಿಮಗೆ ಗೊತ್ತಿಲ್ಲ ಎಂದು ನನಗೇನು ಗೊತ್ತು? ಇನ್ನೊಂದು ವಿಚಾರವೇನೆಂದರೆ, ಅವರಿಗೂ ಸತ್ಯದ ಅರಿವಿದೆ.

**ಸಭಾಪತಿಯವರು:-** ನೀನು ಸೀದಾ ಮಾತನಾಡಪ್ಪ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮಗೆ ಒಳಗಡೆ ಮಾಹಿತಿ ಕೊಟ್ಟಿರುವುದೆಲ್ಲಾ ಅವರೇ.

**ಸಭಾಪತಿಯವರು:-** ಮಾನ್ಯ ರವಿಯವರೇ, ಒಂದು ನಿಮಿಷ. ಮಾನ್ಯ ನಾಗರಾಜುರವರು ಎತ್ತಿದ point of order ಗೆ ಸಂಬಂಧಪಟ್ಟಂತೆ ವಕ್ಫ್ ಟ್ರಿಬ್ಯುನಲ್ ತೀರ್ಮಾನವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ. ತಾವು ನ್ಯಾಯಾಲಯದಲ್ಲಿ ವಕ್ಫ್ ಟ್ರಿಬ್ಯುನಲ್ ತೀರ್ಮಾನವನ್ನು ಪ್ರಶ್ನಿಸುವ ಅವಕಾಶ

ಇದೆ ಎಂದು Wakf (Amendment) Act, 2013 ರ ಪ್ರತಿಯನ್ನು ನೀಡಿದ್ದೀರಿ. ಇದರಲ್ಲಿ point of order raise ಆಗುವುದಿಲ್ಲ. ಇದರಲ್ಲಿ point of order ಬರುವುದಿಲ್ಲ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಇದು ತಪ್ಪು. ಪಾರ್ಲಿಮೆಂಟ್‌ನಲ್ಲಿ ಪಾಸ್ ಆದಂತಹ ಗೆಜೆಟ್‌ಗೆ ಅವರು ವಿರೋಧ ಮಾಡಿದರೆ ಪಾರ್ಲಿಮೆಂಟ್‌ಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. No sir. I am asking very clearly. He is misleading the entire House. What he is talking is unconstitutional.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ. ನಾಗರಾಜುರವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು. Point of order ಮೇಲೆ ನಾನು ರೂಲಿಂಗ್ ಕೊಟ್ಟಿದ್ದೇನೆ, ನೀವು ಮಾತನಾಡತಕ್ಕದ್ದಲ್ಲ, ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾವು ಮಿಶ್ರಿಕೋಟೆ ಎಂಬ ಒಂದು ಗ್ರಾಮಕ್ಕೆ ಹೋಗಿದ್ದೆವು. ಅದು ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕಿನಲ್ಲಿ ಬರುತ್ತದೆ. ಅಲ್ಲಿ ಮಹಿಪತಿ ಭೀಮವ್ವ ಕೋಂ ರಾಮಪ್ಪ ಎಂಬುವವರು ಒಂದು ಅರ್ಜಿ ಕೊಟ್ಟರು.

**ಸಭಾಪತಿಯವರು:-** ಮಾನ್ಯ ರವಿಯವರೇ, ನಿಮಗೆ ಬಹಳ ಜನರು ಅರ್ಜಿಯನ್ನು ಕೊಟ್ಟಿದ್ದಾರೆ.

**ಶ್ರೀ ಸಿ.ಟಿ. ರವಿ:-** ಅರ್ಜಿಯ ಜೊತೆಗೆ ಪಹಣಿ ದಾಖಲೆ ಕೊಟ್ಟಿದ್ದಾರೆ.

**ಸಭಾಪತಿಯವರು:-** ಸಾಕು ಬೇರೆ ಮಾತನಾಡಿ. ಅವೆಲ್ಲವನ್ನೂ ಹೇಳಿದ್ದೀರಲ್ಲಾ.

**ಶ್ರೀ ಎನ್. ರವಿಕುಮಾರ್:-** Fact ಹೇಳದಿದ್ದರೆ ಅವರೆಲ್ಲಾ ಸತ್ಯಕ್ಕೆ ದೂರವಾದದ್ದನ್ನು ಹೇಳುತ್ತಿದ್ದಾರೆ ಎಂದು ಹೇಳಿಬಿಡುತ್ತಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನಿದನ್ನು ಹೇಳುವ ಉದ್ದೇಶ ಏನೆಂದರೆ, ಇದ್ಯಾವುದೋ ಒಂದು ಗ್ರಾಮಕ್ಕೆ ಒಬ್ಬ ವ್ಯಕ್ತಿಗೆ ಸೀಮಿತವಾಗಿದ್ದರೆ ಇದನ್ನು ಇಷ್ಟು ದೊಡ್ಡ ಚರ್ಚೆ ಮಾಡುವ ಅವಶ್ಯಕತೆ ಇರಲಿಲ್ಲ. ಯಾರೋ ಒಬ್ಬ ಅಧಿಕಾರಿ ತಪ್ಪು ಮಾಡಿದ್ದರೆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತಿತ್ತು. ಆದರೆ ಎಲ್ಲಾ ಗ್ರಾಮಗಳಲ್ಲೂ ಈ ರೀತಿಯ ಆಪಾದನೆಗಳು ಬರುತ್ತಿರುವುದರಿಂದ ಇದರ ಹಿಂದೆ ವ್ಯವಸ್ಥಿತವಾಗಿರುವಂತಹ ಒಂದು ದೊಡ್ಡ ಶಕ್ತಿ ಕೆಲಸ ಮಾಡುತ್ತಿರಬಹುದು, ಆಸ್ತಿ ಕಬಳಿಸುವಂತಹ ಒಂದು force ಕೆಲಸ ಮಾಡುತ್ತಿರಬಹುದು. ಯೋಜನಾಬದ್ಧವಾದ ರೀತಿಯಲ್ಲಿ ಆಟದ ಮೈದಾನವನ್ನು, ಸ್ಮಶಾನವನ್ನು, ಗೋಮಾಳವನ್ನು ಕಬಳಿಸುತ್ತಿರುವಂತಹ ಒಂದು ಸಂಚಿರಬಹುದು ಎಂಬುದು ನನ್ನ ಸಂಶಯ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನಲಂಕರಿಸಿದರು)**

ಏಕೆಂದರೆ, ಯಾವುದೋ ಒಂದು individual incident ಆಗಿದ್ದರೆ individual dispute ಆಗುತ್ತಿತ್ತು. ಸಾವಿರಾರು ಗ್ರಾಮಗಳಲ್ಲಿ ಈ ರೀತಿಯ ಪ್ರಕರಣಗಳು ಬರುತ್ತಿವೆ ಎಂದರೆ, ಆಳುವ ಪಕ್ಷ ಎಚ್ಚರದಿಂದ ಗಮನಿಸಬೇಕು.

ನಮ್ಮನ್ನು ಯಾರೂ ದುರುಪಯೋಗಪಡಿಸಿಕೊಳ್ಳಬಾರದು. ನಮ್ಮನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ನನಗನ್ನಿಸುತ್ತಿದೆ. ಅಥವಾ ಅವರ hidden agenda ವನ್ನು execute ಮಾಡುವುದಕ್ಕೋಸ್ಕರ ಆಡಳಿತ ನಡೆಸುವವರನ್ನು ತಪ್ಪು ದಾರಿಗೆಳೆಯುವ ಕೆಲಸ ಮಾಡುತ್ತಿದ್ದಾರೆ ಎಂದು ನನಗಿರುವ ಅನುಮಾನ. ಯಾವುದೋ ಒಂದು ಗ್ರಾಮದಲ್ಲಿ ಆಗಿದ್ದರೆ ಏನೋ ಆಕಸ್ಮಿಕ ಆಗಿದೆ ಎಂದು ಅಂದುಕೊಳ್ಳಬಹುದಾಗಿತ್ತು. ಇಷ್ಟೆಲ್ಲಾ ಗ್ರಾಮಗಳಲ್ಲಿ ಆಕಸ್ಮಿಕ ಹೇಗಾಗುತ್ತದೆ? ಇದರಿಂದಾಗಿ ಈ ವಿಷಯವನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. ಇನ್ನು ಪೂಜಾ ಕಾಲೋನಿ ಕ್ಷೇಮಾಭಿವೃದ್ಧಿ ಸಂಘ, ಕಲಬುರಗಿ ಜಿಲ್ಲೆ. ಅಲ್ಲಿ 35 ವರ್ಷದ ಹಿಂದೆ alienation ಆಗಿ ಲೇಔಟ್ ಆಗಿ ಮನೆ ಕಟ್ಟಿದ್ದಾರೆ. ಈಗ ಅದು ವಕ್ಫ್ ಬೋರ್ಡ್‌ಗೆ ಸೇರಿದ್ದು ಎಂದು ಎಲ್ಲರಿಗೂ ನೋಟಿಸ್ ನೀಡಿದ್ದಾರೆ. ಇದೆಲ್ಲಾ ಹೇಗೆ ಸಾಧ್ಯ? Land conversion ಆಗಿ, ಲೇಔಟ್ ಪ್ಲ್ಯಾನ್ ಆಗಿ, ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟಿರುವುದನ್ನು wakf property ಎಂದು ಹೇಳುತ್ತಾರೆಂದರೆ, ಇದೆಲ್ಲಾ ಹೇಗೆ ಸಾಧ್ಯ? ಇದನ್ನು ಬರೀ individual incident ಎಂದು ತೆಗೆದುಕೊಳ್ಳುತ್ತೀರಾ? ಅಥವಾ ಇದು ಗಂಭೀರವಾದುದು ಎಂದು ಅನಿಸದಿದ್ದರೆ ಇನ್ಯಾವುದು ನಮಗೆ ಗಂಭೀರವಾಗಿ ಅಂತ ಅನಿಸಬೇಕು ಹೇಳಿ. Column No.11 ಏನಾಗುತ್ತದೆ ಎಂದು ಕೇಳಿದ್ದರು. Column No.11 ಹಕ್ಕುಗಳನ್ನು ಮತ್ತು ಋಣಗಳನ್ನು ತೋರಿಸುತ್ತದೆ. ಹಾಗಾದರೆ Column No.11 ರಲ್ಲಿ ಬಂದರೆ ಅದು ಬಹಳ ಸಿಂಪಲ್ ಆಗಿ ತಳ್ಳಿಹಾಕುವಂತಹ ವಿಷಯವೇ? Simplify ಮಾಡುವಂತಹ ವಿಷಯವೇ? ಒಂದು ಸಲ Column No.11 ರಲ್ಲಿ ಬಂದರೆ ಯೋಚನೆ ಮಾಡಬೇಕಲ್ಲವೇ ಅದು ಏಕಾಏಕಿ ಬಂತೇ? ಏಕಾಏಕಿ ಬಂದಿಲ್ಲವೆಂದರೆ, ಅದನ್ನು ನೀವು ಹೇಗೆ ರದ್ದುಪಡಿಸಿದಿರಿ? ಸರ್ಕಾರ ಮಾಡಿದ್ದೆಲ್ಲಾ ಸರಿಯಿದ್ದರೆ ಏತಕ್ಕೆ ರದ್ದುಪಡಿಸಿದಿರಿ? ನೀವು ರದ್ದುಪಡಿಸಿದಿರಿ ಎಂದರೆ ಇದರಲ್ಲಿ ಏನೋ ಮಸಲತ್ತು ನಡೆದಿದೆ, ನಮ್ಮನ್ನು ತಪ್ಪು ದಾರಿಗೆಳೆದಿದ್ದೀರಿ ಎನ್ನುವ ಅರಿವು ನಿಮಗಾಗಿದೆ. ನಾನದನ್ನು ಸ್ವಾಗತಿಸುತ್ತೇನೆ. ಏಕೆಂದರೆ, ನೀವು rectify ಮಾಡಿಕೊಂಡಿದ್ದೀರಿ ನಮ್ಮ ಕಡೆಯಿಂದ ತಪ್ಪಾಗಿದೆ, ನಮ್ಮನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಪ್ಪುದಾರಿಗೆಳೆದಿದ್ದಾರೆ, ಅವರು ಹೇಳುವುದೆಲ್ಲವನ್ನೂ ನಾವು ನಂಬಬಾರದು ಎನ್ನುವ ಸತ್ಯದ ಅರಿವು ನಿಮಗಾಗಿದೆ. ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ಅವರು ಹೇಳಿದ್ದೆಲ್ಲವನ್ನೂ ನೀವು ಕೇಳಿಕೊಂಡು ಹೋದರೆ ಮುಂದೊಂದು ದಿನ ಬಹಳ ದೊಡ್ಡ ಅಪಾಯ; ನಾವು ಇವತ್ತು ತಾತ್ಕಾಲಿಕವಾಗಿ ಒಂದು ಚುನಾವಣೆಯನ್ನು ಗೆಲ್ಲಬಹುದು. ಹಾಗಾದರೆ ನಮ್ಮ ಉದ್ದೇಶ ಬರೀ ಚುನಾವಣೆಯನ್ನು ಗೆಲ್ಲುವುದೇ? ನಮ್ಮ ಸಂವಿಧಾನ ಉಳಿಯಬೇಕೋ ಬೇಡವೋ? ನಮ್ಮ ಸಂವಿಧಾನ ಉಳಿಯಬೇಕೆಂದರೆ, ಸಂವಿಧಾನವನ್ನು ಹೇಗೆ ಉಳಿಸುವುದು? ಕಂಡ ಆಸ್ತಿಯನ್ನೆಲ್ಲಾ ಘೋಷಣೆ ಮಾಡುವುದಕ್ಕೆ ಬಿಟ್ಟರೆ ಸಂವಿಧಾನ ಉಳಿಯುತ್ತದೆಯೇ, ಸಂವಿಧಾನಕ್ಕೆ ಬೆಲೆ ಇರುತ್ತದೆಯೇ? ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಪೂಜಾ ಕಾಲೋನಿ ಕ್ಷೇಮಾಭಿವೃದ್ಧಿ ಸಂಘದವರು 150 ಪುಟಗಳ ದಾಖಲೆ ಜೊತೆಗೆ ಮನವಿ ಕೊಟ್ಟಿದ್ದಾರೆ. ಈ ರೀತಿ ಎಲ್ಲಾ ಊರುಗಳಲ್ಲಿ, ನಾವು ಎಲ್ಲೆಲ್ಲಿ ಪ್ರವಾಸ ಹೋಗಿದ್ದೆವು ಆ ಎಲ್ಲಾ ಊರುಗಳಲ್ಲಿ ದಾಖಲೆ ಸಮೇತ ನಮಗೆ ಮನವಿಯನ್ನು ಕೊಟ್ಟಿದ್ದಾರೆ. ಈಗ ಯೋಚನೆ ಮಾಡಿ. ಈ ಕಾಯಿದೆ; ಅವರು ಎಲ್ಲಾ ಊರುಗಳಲ್ಲಿ ಇಷ್ಟೆಲ್ಲಾ ಮಾಡುವುದಕ್ಕೆ; ಬರೀ ನಮ್ಮ ಕರ್ನಾಟಕದಲ್ಲಿ ಮಾತ್ರವಲ್ಲ,

ತಮಿಳುನಾಡಿನಲ್ಲಿ ಹೋರಾಟ ನಡೆಯುತ್ತಿದೆ. ಕೇರಳದಲ್ಲಿ, ಆಂದ್ರಪ್ರದೇಶದಲ್ಲಿ ಹೋರಾಟ ನಡೆಯುತ್ತಿದೆ. ಮಹಾರಾಷ್ಟ್ರದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ದೊಡ್ಡ ಮಟ್ಟದ ಸಂಚಲನವನ್ನೇ ಅದು ಸೃಷ್ಟಿ ಮಾಡಿತು. ದೆಹಲಿಯಲ್ಲಿ ಹೋರಾಟ ನಡೆಯುತ್ತಿದೆ. ಇನ್ನು ಕೆಲವು ಕಡೆಗಳಲ್ಲಿ ಬೀದರ್‌ನ ಧರ್ಮಾಪುರ ಎಂಬ ಗ್ರಾಮದಲ್ಲಿ ಇಡೀ ಗ್ರಾಮವನ್ನೇ wakf property ಎಂದು ಘೋಷಣೆ ಮಾಡಿದ್ದಾರೆ. ಎಲ್ಲೋ ದೂರದ ತಮಿಳುನಾಡಿನ ಕಥೆ ಮಾತ್ರವಲ್ಲ. ನಮಗೆ ಮೊದಲೆಲ್ಲಾ ಏನನ್ನಿಸುತ್ತಿತ್ತು ಎಂದರೆ, ವಿಂಡ್ಸರ್ ಮ್ಯಾನರ್ ಹೋಟೆಲ್ ವಕ್ಫ್ ಬೋರ್ಡ್‌ದು ಎಂದಾಗ ನಾವು ಐ.ಟಿ.ಸಿ. ಕಂಪನಿ versus ವಕ್ಫ್ ಬೋರ್ಡ್ ಎಂದು ಅಂದುಕೊಂಡೆವು. ಯಾವಾಗ ವಿಧಾನಸೌಧಕ್ಕೂ ಬಂದುಬಿಟ್ಟರು, ಇದು ಬಹಳ ಡೇಂಜರ್ ಇದೆ ಎಂದು ನಮ್ಮ ಅರಿವಿಗೆ ಬಂತು. ಐ.ಟಿ.ಸಿ. ಕಂಪನಿ ಮತ್ತು ವಕ್ಫ್ ಬೋರ್ಡ್ ನಡುವೆ ಏನೋ ಒಂದು ಹೋರಾಟ ನಡೆಯುತ್ತಿದೆ, ಅವರದ್ದೇ ಅಂತೆ; ಈಗ ನಾವು ಯೋಚನೆ ಮಾಡಬೇಕು. ಇದು ಸಹ ಹೀಗೆ ಎಂದು ಗೆಜೆಟ್ ನೋಟಿಫಿಕೇಷನ್ ಮಾಡಿಕೊಂಡು ಆಮೇಲೆ ಅದು ನಮ್ಮದು ಎಂದು ಕ್ಲೇಮ್ ಮಾಡಿರುವಂತಹ ಸಾಧ್ಯತೆ ಇದೆ. ಹಾಗಾಗಿ ಪ್ರತಿಯೊಂದು ದಾಖಲೆಯೂ ಪರಿಶೀಲನೆಗೊಳಪಡಬೇಕು ಎನ್ನುವುದರಲ್ಲಿ ತಪ್ಪೇನು? ನಾವೇನು ಏಕಾಏಕಿ ರದ್ದುಪಡಿಸಿ ಎಂದು ಹೇಳುತ್ತಿಲ್ಲ. ದಾಖಲೆಯನ್ನು ಪರಿಶೀಲನೆ ಮಾಡಿ. ದಾನ ಕೊಟ್ಟಿದ್ದರೆ ಯಾರು ದಾನ ಕೊಟ್ಟರು, ದಾನ ಕೊಟ್ಟಿರುವುದು ಕ್ರಮಬದ್ಧವಾಗಿದೆಯೇ ಎಂಬುದನ್ನು ಚೆಕ್ ಮಾಡಿ. ದಾನ ಕೊಟ್ಟಿರುವುದು ಇದ್ದರೆ ಅದನ್ನು ವಕ್ಫ್ ಬೋರ್ಡ್‌ಗೆ ಉಳಿಸಿ. ದಾನ ಕೊಡದೇ ಇದ್ದರೆ ಅದು ಅಕ್ರಮ ಎಂದು ಘೋಷಣೆ ಮಾಡಬೇಕು ಮತ್ತು ಸರ್ಕಾರ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಅಥವಾ ಮೂಲ ದಾಖಲೆ ಯಾರು ಮೂಲ ಹಕ್ಕುದಾರರಿರುತ್ತಾರೆ ಅವರಿಗೆ ವಾಪಸ್ಕೊಡಬೇಕು. ಇದರಲ್ಲಿ ಅನ್ಯಾಯ ಏನಿದೆ? ನಾವು ಇದನ್ನೇ ಕೇಳುತ್ತಿರುವುದು. ನಾವು ಯಾರಿಗೂ ಅನ್ಯಾಯ ಮಾಡಿ ಎಂದು ಕೇಳುತ್ತಿಲ್ಲ. ಸಂವಿಧಾನದ ಆಶಯವನ್ನು ಎತ್ತಿ ಹಿಡಿಯಿರಿ ಎಂದು ನಾವು ಮನವಿ ಮಾಡುತ್ತಿದ್ದೇವೆ, ಸದನದ ಮೂಲಕ ಒತ್ತಡವನ್ನು ತರುತ್ತಿದ್ದೇವೆ. ಪ್ರತಿಯೊಂದು ದಾಖಲೆಯನ್ನೂ ಪರಿಶೀಲನೆ ಮಾಡಿ. ದಾನವನ್ನು ಯಾರು ಯಾವಾಗ ಕೊಟ್ಟರು, ಎಷ್ಟು ಕೊಟ್ಟಿದ್ದಾರೆ? ಕೆಲವು ಕಡೆ ಏನಾಗಿದೆ ಎಂದರೆ, ಒಂದು ಸರ್ವೆ ನಂಬರಿನಲ್ಲಿ 10 ಗುಂಟೆ ಜಾಗ ಅವರದ್ದೇ ಇದೆ. ಆ ಸರ್ವೆ ನಂಬರಿನಲ್ಲಿ 35 ಎಕರೆ ಇದೆ. ಆ ಸರ್ವೆ ನಂಬರನ್ನು ಮಾತ್ರ ಗೆಜೆಟ್ ನೋಟಿಫಿಕೇಷನ್ ಮಾಡಿದ್ದಾರೆ. 35 ಎಕರೆ ಜಾಗವೂ ತಮ್ಮದು ಎಂದು ಕ್ಲೇಮ್ ಮಾಡುತ್ತಿದ್ದಾರೆ. ಆ ಸರ್ವೆ ನಂಬರಿನಲ್ಲಿ ಅವರಿಗಿರುವುದು 10 ಗುಂಟೆ ಮಾತ್ರ. 10 ಗುಂಟೆಯನ್ನು ಕ್ಲೇಮ್ ಮಾಡಿದರೆ ಯಾರು ಏನೂ ತಪ್ಪು ತಿಳಿದುಕೊಳ್ಳುವುದಿಲ್ಲ.

(ಮುಂದು)

(732) 9.12.2024 6.20 ಹೆಚ್‌ವಿ. ಕೆಎಸ್

**ಶ್ರೀ ಸಿ.ಟಿ.ರವಿ (ಮುಂದು):**

ಸನ್ಮಾನ್ಯ ಸಭಾಪತಿಯವರೇ, ಯಾವ ಸಂಘರ್ಷವೂ ಆಗುವುದಿಲ್ಲ. ಇಡೀ ಸರ್ವೆ ನಂಬರ್‌ನಲ್ಲಿರುವ 35 ಎಕರೆ ಜಮೀನೂ ನಮ್ಮದೇ ಎಂದು ಅವರು ಕ್ಲೈಮ್ ಮಾಡುತ್ತಿರುವುದರಿಂದ ಸಂಘರ್ಷದ ವಾತಾವರಣ ಸೃಷ್ಟಿಯಾಗಿದೆ. ಈ ದೃಷ್ಟಿಯಿಂದ ನೋಡಿದರೇ, ಇಲ್ಲಿ ಜನರ ನೆಮ್ಮದಿಗೆ ವಕ್ಫ್ ಬೋರ್ಡ್‌ನ ಬಕಾಸುರ ನೀತಿ ಮತ್ತು ಸಂಸ್ಕೃತಿ "ಕೊಳ್ಳಿ" ಇಡುವಂತಹ ಕೆಲಸವನ್ನು ಮಾಡುತ್ತಿದೆ. ಒಂದು ಪಕ್ಷ ಆಡಳಿತ ಪಕ್ಷದಲ್ಲಿ ಇರುವುದಕ್ಕೆ ಜನರು ಆಶೀರ್ವಾದ ಮಾಡಿರುತ್ತಾರೆ. ಅವರುಗಳು ಆಡಳಿತ ಪಕ್ಷದಲ್ಲಿ ಕುಳಿತಿದ್ದಾರೆಂದರೇ ಜನರು ಅವರಿಗೆ ಆಶೀರ್ವಾದ ಮಾಡಿ ಕೂರಿಸಿದ್ದಾರೆ ಎಂದು ಅರ್ಥ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂತಿಮವಾಗಿ ಜನರು ಆಶೀರ್ವಾದ ಮಾಡಿದರೆ ಮಾತ್ರ ಆಡಳಿತ ಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಜನರ ಆಶೀರ್ವಾದ ಪಡೆದವರು ಜನರ ತಲೆಯ ಮೇಲೆ ಕೈ ಇಡುವಂತಹ "ಭಸ್ಮಾಸುರ" ಆಗಬಾರದು. ಈ ರೀತಿಯಾದರೇ "ವರ" ಕೊಟ್ಟವರು ಯೋಚನೆ ಮಾಡುತ್ತಾರೆ. ಭಸ್ಮಾಸುರನ ತಲೆಯ ಮೇಲೆ ಕೈ ಇಡುವುದಕ್ಕೆ ವಿಷ್ಣು ಮೋಹಿನಿ ಅವತಾರವನ್ನು ಎತ್ತಿದ್ದ. ಇವತ್ತು ಜನರು " ಇವರು ನಮ್ಮ ತಲೆಯ ಮೇಲೆ ಕೈ ಇಡಲು ಬರುತ್ತಿದ್ದಾರೆ; ನಮ್ಮ ಆಸ್ತಿಯನ್ನೇ ಕಬಳಿಸಲು ಹೊರಟಿದ್ದಾರೆ; ಇವರಿಗೆ ಪಾಠ ಕಲಿಸಲೇ ಬೇಕು. ನಾವು ಅಧಿಕಾರ ಕೊಟ್ಟ ಹಿನ್ನೆಲೆಯಲ್ಲಿಯೇ ಇವರು ಇಷ್ಟೆಲ್ಲ ಮಾಡುತ್ತಿರುವುದು" ಎಂದು ಯೋಚನೆ ಮಾಡುತ್ತಿರುತ್ತಾರೆ. ಸರ್ಕಾರ ಆ ರೀತಿಯ ಯೋಚನೆಗೆ ಅವಕಾಶ ಕೊಡಬಾರದು ಎನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ಮೊದಲು "ವಕ್ಫ್ ಅದಾಲತ್" ಬಗ್ಗೆ ಮಾತನಾಡುತ್ತಿದ್ದೆ, ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಾಗಿರುವ ಶ್ರೀ ಬಿ.ಝಡ್. ಜಮ್ಮೀರ್ ಅಹಮದ್ ಖಾನ್‌ರವರು ನಮಗೂ ರಾಮ ಎಂದು ಹೇಳುತ್ತಿದ್ದರು. ಈ ರೀತಿ communal ಎಂದು ನಮಗೆ ಅನಿಸಿರಲಿಲ್ಲ. "ಇದೆಲ್ಲ ಏನು ರವಿಯಣ್ಣ, ನೀನು ಎಲ್ಲಿಗೆ ಬೇಕಾದರೂ ಕರಿ; ನಾನು ಎಲ್ಲಿಗೆ ಬೇಕಾದರೂ ಬರುತ್ತೇನೆ. ರಾಮ ಮಂದಿರ ಆಗಲೇಬೇಕು" ಎಂದು ಹೇಳುತ್ತಿದ್ದವರು, ಈ ರೀತಿ ಫಿಟ್ಟಿಂಗ್ ಇಡುತ್ತಾರೆಂದು ನಮಗೇನು ಗೊತ್ತು? ಇವರುಗಳು ಅವರನ್ನು ಕೆಡಿಸಿದ್ದಾರೆಯೋ ಅಥವಾ ಅವರು ಇವರನ್ನು ಕೆಡಿಸಿದ್ದಾರೆಯೋ ಎನ್ನುವುದು ನಮಗೆ ಗೊತ್ತಿಲ್ಲ.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿಯವರು ಮಾನ್ಯ ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾಗ ಈ ಮಾತುಗಳನ್ನಾಡಲಿ.

**ಶ್ರೀ ಸಿ.ಟಿ.ರವಿ;-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಿರುವುದು ಕಡತದಲ್ಲಿ ಇರುತ್ತದೆ. ಮಾನ್ಯ ಸಚಿವರು ನಾಳೆ ಬೆಳಗ್ಗೆ ಬಂದು ಉತ್ತರವನ್ನು ಕೊಡಬಹುದು. ಸಂವಿಧಾನದ ಯಾವ ವಿಧಿಯ ಪ್ರಕಾರ ಶ್ರೀ ಬಿ.ಝಡ್. ಜಮ್ಮೀರ್ ಅಹಮದ್ ಖಾನ್‌ರವರು ವಕ್ಫ್ ಅದಾಲತ್ ಮಾಡಿದ್ದಾರೆ? ಯಾವ ಕಂದಾಯದ ಕಾನೂನು ಅವರಿಗೆ ವಕ್ಫ್ ಅದಾಲತ್ ಮಾಡುವ ಅಧಿಕಾರವನ್ನು ಕೊಟ್ಟಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಂವಿಧಾನದ ಯಾವ ವಿಧಿಯಲ್ಲಿ ಇದಕ್ಕೆ ಅವಕಾಶವಿದೆ ಎನ್ನುವುದನ್ನು ಅವರುಗಳು ಹೇಳಬೇಕಾಗಿದೆ.

**ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಆಹಾರ ಅದಾಲತ್ ಎಂದು ಮಾಡುತ್ತಾರೆ, ಕಂದಾಯ ಅದಾಲತ್ ಅನ್ನು ಮಾಡುತ್ತಾರೆ. ವಕ್ಫ್ ಅದಲಾತ್ ಮಾಡುವುದಕ್ಕೆ ಯಾವ ಹಕ್ಕು ಇದೆ ಎಂದು ಅವರು ಕೇಳುತ್ತಿದ್ದಾರೆ. ಒಂದು ಸರ್ಕಾರಕ್ಕೆ ಕಾನೂನಿನ ಅಡಿಯಲ್ಲಿ ಎಲ್ಲ ರೀತಿಯ ಅದಾಲತ್ ಮಾಡುವುದಕ್ಕೆ ಅಧಿಕಾರವಿರುತ್ತದೆ. ಅದರಲ್ಲಿ ಮುಚ್ಚುಮರೆ ಏನಿಲ್ಲ.

**ಶ್ರೀ ಸಿ.ಟಿ.ರವಿ;-** ಸನ್ಮಾನ್ಯ ಸಭಾಪತಿಯವರೇ, ಅವರು ಇದನ್ನು ಒಪ್ಪಿಕೊಳ್ಳಲಿ ಎನ್ನುವ ದೃಷ್ಟಿಯಿಂದಲೇ ಪ್ರಶ್ನೆ ಮಾಡಿದ್ದೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ವಕ್ಫ್ ಅದಾಲತ್ ಮಾಡಿದ ನಂತರವೇ ಜನರ ನೆಮ್ಮದಿಗೆ ಕೊಳ್ಳಿ ಬಿದ್ದಿರುವುದು; ವಕ್ಫ್ ಅದಾಲತ್ ಮಾಡಿದ ನಂತರವೇ ಜನರಿಗೆ ಮತ್ತು ರೈತರಿಗೆ ನೋಟೀಸ್ ಹೋಗುವುದಕ್ಕೆ ಪ್ರಾರಂಭ ಆಗಿರುವುದು; ವಕ್ಫ್ ಅದಾಲತ್ ಮಾಡಿದ ನಂತರವೇ ದಲಿತರ ಜಮೀನುಗಳಿಗೆ ನೋಟೀಸ್ ಹೋಗಿರುವುದು.

**ಶ್ರೀ ಎಂ. ನಾಗರಾಜು(ವಿಧಾನಸಭಾ ಕ್ಷೇತ್ರ);-** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಾರ್ಟಿ ಅಧಿಕಾರದಲ್ಲಿ ಇದ್ದಾಗ, ನೂರಾರು ಜನರಿಗೆ ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಈ ರೀತಿಯ ಸುಳ್ಳುಗಳನ್ನು ಸದನದಲ್ಲಿ ಹೇಳಬಾರದು. (ಗೊಂದಲ) ವಕ್ಫ್ ಅದಾಲತ್‌ಗೂ ಇದಕ್ಕೂ ಏನು ಸಂಬಂಧವಿದೆ?

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಾರ್ಟಿ ಅಧಿಕಾರದಲ್ಲಿ ಇದ್ದಾಗ, ನೂರಾರು ಜನರಿಗೆ ನೋಟೀಸ್ ಕೊಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾಗಿರುವ ಶ್ರೀ ಬಸವರಾಜ ಬೊಮ್ಮಾಯಿಯವರು "ಯಾವ ಆಸ್ತಿಯನ್ನು ಬಿಡಬಾರದು ಅದನ್ನು ನಾವು ರಕ್ಷಿಸಿಕೊಳ್ಳಬೇಕು" ಎನ್ನುವ ಮಾತನ್ನು ಹೇಳಿದ್ದರು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ದಿನೇಶ್ ಗುಂಡೂರಾವ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಅತೀ ಹೆಚ್ಚು ನೋಟೀಸ್ ನೀಡಿದೆ. ಅವರು ಯಾವ ಕಾನೂನಿನ ಅಡಿಯಲ್ಲಿ ನೋಟೀಸ್ ನೀಡಿದ್ದರು?

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಕಾನೂನು ಅವತ್ತಿಗೂ-ಇವತ್ತಿಗೂ ಒಂದೇ ಆಗಿದೆ. ಕಾನೂನು ಮೀರಿ ಹೋಗುವುದಕ್ಕೆ ಅವರಿಂದಲೂ ಸಾಧ್ಯವಾಗುವುದಿಲ್ಲ; ನಮ್ಮಿಂದಲೂ ಸಾಧ್ಯವಾಗುವುದಿಲ್ಲ. ಕಾನೂನು ಪ್ರಕಾರವೇ ಹೋಗಬೇಕಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ದಯಮಾಡಿ ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಡುವುದಕ್ಕೆ ಅವಕಾಶವಿದೆ. ಆಗ ತಾವು ಮಾತನಾಡಿ. ಅವರು ಮಾತನಾಡುತ್ತಿರುವಾಗ ಮುಖ್ಯವಾಗಿರುವ ಅಂಶಗಳನ್ನು ನೋಟ್ ಮಾಡಿಕೊಳ್ಳಿ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಅದಾಲತ್ ಮಾಡಿರುವುದು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ ತಮಗೆ ಅವಕಾಶವಿದೆ, ಆಗ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರು ಅಧಿಕಾರದಲ್ಲಿದ್ದಾಗ, 4,500 ನೋಟೀಸ್ ಕೊಟ್ಟಿದ್ದಾರೆ, ನಾವು 800 ನೋಟೀಸ್‌ಗಳನ್ನು ಕೊಟ್ಟಿದ್ದೇವೆ.

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಅವರ ಕಾಲದಲ್ಲಿಯೇ ಹೆಚ್ಚು ನೋಟೀಸ್ ಕೊಟ್ಟಿರುವುದು ಅವರೇ ಕಲಂ ನಂಬರ್ 11ರೊಳಗೆ ಸೇರಿಸಿರುವುದು.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆ ಏನೆಂದರೇ, ಯಾವ ಆಧಾರದ ಮೇಲೆ ಅವರು 1974ರ ಗೆಜೆಟ್ ಮಾಡಿದ್ದಾರೆ? ಯಾವ ಆಧಾರದ ಮೇಲೆ ಆ ಆಸ್ತಿ ಯಾರಿಗೆ ಸೇರಿದೆ ಅದು ಸರಿಯಾಗಿದೆಯೇ-ತಪ್ಪಾಗಿದೆಯೇ ಎನ್ನುವುದು ಪ್ರಶ್ನೆಯಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ನೋಟೀಸ್ ಯಾರು ಕೊಟ್ಟಿದ್ದಾರೆ ಎನ್ನುವುದು ಪ್ರಶ್ನೆಯಲ್ಲ; ಆಸ್ತಿ ಯಾರಿಗೆ ಸೇರಿರುವುದು ಎನ್ನುವುದು ಪ್ರಶ್ನೆಯಾಗಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರು ಯಾವ ಆಧಾರದ ಮೇಲೆ ನೋಟೀಸ್ ಕೊಟ್ಟಿದ್ದರು ಎನ್ನುವ ಪ್ರಶ್ನೆ ಬರುತ್ತದೆ. ಅವರು ಯಾವ ಆಧಾರದ ಮೇಲೆ ಕೊಟ್ಟಿದ್ದರು?

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಅವರುಗಳು "ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ನೋಟೀಸ್ ನೀಡಲಾಗಿದೆ" ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಈ ಮೇಲ್ಪಂಕ್ತಿಯನ್ನು ಭಾರತೀಯ ಜನತಾ ಪಕ್ಷದವರು ಹಾಕಿಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಈಗ ನಾವು 1974ರ ಗೆಜೆಟ್ ಅನ್ನು ರದ್ದುಪಡಿಸಿ ಎಂದು ಹೇಳುತ್ತಿದ್ದೇವೆ. ಅದಕ್ಕೆ ಅವರ ಸಹಮತ ಇದೆಯೇ? ಸಹಮತವಿದ್ದರೇ ಅದನ್ನು ರದ್ದುಪಡಿಸಲಿ.

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡಿರುವುದಕ್ಕೆಲ್ಲ ನಾವು ಒಪ್ಪಿಕೊಳ್ಳಬೇಕೆಂದು ಇಲ್ಲ. ನಾವು ಚಾಲೆಂಚ್ ಮಾಡಿದರೇ, ಅವರು ಚಾಲೆಂಜ್‌ಗೆ ಒಪ್ಪಬೇಕಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ನೆಮ್ಮದಿಯನ್ನು ಹಾಳು ಮಾಡುವ ರೀತಿಯಲ್ಲಿ ಇವರು ತುಷ್ಟೀಕರಣದ ರಾಜಕಾರಣ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಅವರು ಅಧಿಕಾರದಲ್ಲಿದ್ದಾಗ ನೋಟೀಸ್ ನೀಡಿ ಈಗ ಅದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದರು? ತಾಕತ್ತಿದ್ದರೇ ಶ್ರೀ ಅನ್ವರ್ ಮಾಣಿಪ್ಪಾಡಿ ಅವರನ್ನು ಕೇಳಲಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು:-** ಸನ್ಮಾನ್ಯ ಸಭಾಪತಿಯವರೇ, ಜನರು ಅವರನ್ನು ಯಾವ ರೀತಿಯಲ್ಲಿ ಪರಾಭವಗೊಳಿಸಿದ್ದಾರೆ ಎನ್ನುವುದು ಅವರಿಗೆ ಗೊತ್ತಿಲ್ಲ. ಉಪ ಚುನಾವಣೆ ನಡೆದಂತಹ ಮೂರೂ ಕ್ಷೇತ್ರಗಳಲ್ಲಿಯೂ ಜನರು ಅವರನ್ನು ಸೋಲಿಸಿದ್ದರೂ ಅವರಿಗೆ ಬುದ್ಧಿ ಬಂದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಅವರ ನಿಜ ಬಣ್ಣ ಬಯಲಾಗಿದೆ. ಇವರ ತುಷ್ಟೀಕರಣದ ರಾಜಕಾರಣ ದೇಶವನ್ನು ಮತ್ತು ಜನರನ್ನು ಹಾಳು ಮಾಡುತ್ತಿದೆ. ಇವರ ಡೊಂಗಿ secular ರೀತಿ, ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಹಚ್ಚುತ್ತಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇವರ ತುಷ್ಟೀಕರಣದ ರಾಜಕಾರಣದಿಂದಾಗಿ ರೈತರ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ. ಹಿಂದೂಗಳಿಗೆ ಅನ್ಯಾಯ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀಮತಿ ಉಮಾಶ್ರೀ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಜನರು ಇವರನ್ನು ತಿರಸ್ಕಾರ ಮಾಡಿದ್ದಾರೆ. ಶಿಗ್ಗಾವಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಜನರು ಉತ್ತರ ಕೊಟ್ಟಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ದೇಶ ಹೊಡೆಯುವಂತಹ ಕೆಲಸ ಮಾಡುವವರು ಇವರೇ, ಇಂತಹ ಕೆಟ್ಟ ಕೆಲಸ ಮಾಡುವವರು ಇವರೇ, ರೈತರನ್ನು ಎತ್ತಿ ಕಟ್ಟುವಂತಹ ಕೆಲಸ ಮಾಡುವವರು ಇವರೇ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ರೈತರಿಗೆ ಮತ್ತು ಹಿಂದುಗಳಿಗೆ ಅನ್ಯಾಯ ಮಾಡಿರುವವರು ಡೊಂಗಿ ವಾದಿಗಳು ….. ಡೊಂಗಿ secular,,,,,, ಡೊಂಗಿ secular …

**(ಗೊಂದಲ)**

**ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮುಸ್ಲಿಂ ಬಾಂಧವರ ಮತ ಬೇಕು ಎನ್ನುವ ಕಾರಣದಿಂದಾಗಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಒಂದು ಸಭೆಯನ್ನು ಮಾಡಿ" ಲೋಕ್ ಅದಾಲತ್ ಮಾಡುತ್ತೇವೆ. ಸುಮ್ಮನೆ ಕೂರಬೇಡಿ,… ಬಹಳ ಎಚ್ಚರಿಕೆಯಿಂದ ಇರಿ" ಎಂದು ಹೇಳಿದ್ದರು. ಅವರೇ ಇದನ್ನು ಪ್ರಾರಂಭ ಮಾಡಿದವರು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಇವರಿಗೆ ಏನಾದರು ಧೈರ್ಯವಿದ್ದರೇ ಮೊದಲು ವಕ್ಫ್‌ಬೋರ್ಡ್ ಅನ್ನು ರದ್ದುಪಡಿಸಲಿ.

**(ಗೊಂದಲ)**

**ಡಾ॥ ಎಂ.ಸಿ.ಸುಧಾಕರ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸುಮಾರು 218 ವಕ್ಫ್ ಬೋರ್ಡ್ ಆಸ್ತಿಯನ್ನು ಖರೀದಿ ಮಾಡಿದಾಗ, ಅವತ್ತು ಯಾಕೆ ಇವರುಗಳು ಮಾತನಾಡಲಿಲ್ಲ. ಅದನ್ನು ರಕ್ಷಣೆ ಮಾಡಬೇಕೆಂದು ಹೇಳಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ನ್ಯಾಯಬೇಕು ಅಂದರೇ, ವಕ್ಫ್ ಬೋರ್ಡ್ ಅನ್ನು ರದ್ದುಪಡಿಸಲಿ. ಹಿಂದುಗಳ ಆಸ್ತಿಯನ್ನು ರದ್ದುಪಡಿಸಬೇಕೆಂದರೆ ಇವರು ವಕ್ಫ್ ಬೋರ್ಡ್ ಅನ್ನು ರದ್ದುಪಡಿಸಲಿ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಮಾನ್ಯ ಎನ್.ಚಂದ್ರಬಾಬು ನಾಯ್ಡುರವರು ವಕ್ಫ್ ಬೋರ್ಡ್ ಅನ್ನು ರದ್ದುಪಡಿಸಿದ್ದಾರೆ, ನಮ್ಮ ರಾಜ್ಯದಲ್ಲಿ ಇವರು ಸಹ ವಕ್ಫ್ ಬೋರ್ಡ್ ಅನ್ನು ರದ್ದು ಮಾಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುವವರಿದ್ದಾರೆ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎನ್. ಚಂದ್ರಬಾಬು ನಾಯ್ಡುರವರು ವಕ್ಫ್ ಬೋರ್ಡ್ ಅನ್ನು ರದ್ದುಪಡಿಸಿಲ್ಲ, ಮಂಡಳಿಯನ್ನು ಪುನರ್ ರಚನೆ ಮಾಡುತ್ತಿದ್ದಾರೆ, ವಕ್ಫ್ ಕಾನೂನು ಇದೆ. ಇವರು ದಾರಿ ತಪ್ಪಿಸುತ್ತಿದ್ದಾರೆ. ಆ ಕೆಲಸವನ್ನು ಮಾಡಬಾರದು.

(ಮುಂದು)

(733) 9.12.2024 6.30 ಪಿಕೆ:ಕೆಎಸ್

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ವಕ್ಫ್ ಬೋರ್ಡನ್ನು ರದ್ದು ಮಾಡಿ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಆ ನೋಟಿಫಿಕೇಷನನ್ನು ರದ್ದು ಮಾಡಿ. **(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ನಮ್ಮ ಕಾಲದಲ್ಲಿ ನೋಟಿಸ್ ಕೊಟ್ಟಿರುವುದು ತಪ್ಪು ಒಪ್ಪಿಕೊಳ್ಳುತ್ತೇವೆ. ಆದರೆ ಈ ಸರ್ಕಾರ ವಕ್ಫ್ ಬೋರ್ಡನ್ನು ರದ್ದು ಮಾಡುತ್ತದೆಯೇ?

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಇದು ಕೇಂದ್ರದ ಕಾನೂನಾಗಿದೆ. ಯಾರೂ ಕೂಡ ರದ್ದು ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಹಿಂದುಗಳಿಗೆ ಈ ಸರ್ಕಾರ ಅನ್ಯಾಯ ಮಾಡುತ್ತಿದೆ. ಇದು ತುಷ್ಟೀಕರಣದ ಪರಮಾವಧಿಯಾಗಿದೆ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್:-** ನಿಮ್ಮದು ಢೋಂಗಿ ರಾಜಕಾರಣವಾಗಿದೆ. ನೀವು ದೇಶ ವಿರೋಧಿಗಳು.

**ಉಪ ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 10ನೇ ಡಿಸೆಂಬರ್ ಮಾಹೆ 2024ರ ಮಂಗಳವಾರ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**><><><**